C

# విశాలాక్షి

నిరంజన



# ವಿ ಶಾ ಲಾ ಕ್ಷಿ

('ವಿಲಾಸಿನಿ' 'ಅಂಜನ' ಗಳಿಗೆ ಪೂರಕ)

Editor 'Prajavani'
For favour of Review Please

KALAMALA PRAKASHANA
194, 8TH CROSS
GANDHINAGAR,
BANGALORE-9

ನಿರಂಜನ

ಕಲಾಮಾಲಾ ಪ್ರಕಾಶನ
ಗಾಂಧಿನಗರ : : ಬೆಂಗಳೂರು-೯.

೧

ಪ್ರಥಮ ಮುದ್ರಣ : ೧೯೫೮

ಗ್ರಂಥಸ್ವಾಮ್ಯ ಲೇಖ

ಬೆಲೆ : ರೂ. ೧-೫೦
(ಒಂದು ರೂಪಾಯಿ ಐವತ್ತು ನಯೆ ಪೈಸೆ)

ಮುದ್ರಕರು :

ಚೇತನಾ ಪ್ರಿಂಟರ್ಸ್
ಗಾಂಧಿನಗರ, ಬೆಂಗಳೂರು-೯.

೨

# ಮೊದಲ ಅಧ್ಯಾಯಕ್ಕೆ ಮುನ್ನ—

ನನ್ನ ಎರಡು ಕಾದಂಬರಿಗಳಾದ 'ವಿಲಾಸಿನಿ' 'ಅಂಜನ'ಗಳ ಓದುಗರು' ವಿಶಾಲಿಯನ್ನು ಚೆನ್ನಾಗಿ ಬಲ್ಲರು. ಆ ಕೃತಿಗಳ ಕಥಾನಾಯಿಕೆಯಾದ ನರ್ಮದೆಯ ಗೆಳತಿ, ವಿಶಾಲಾಕ್ಷಿ, ನರ್ಮದಾ, ಕಲ್ಪನಾ ವಿಲಾಸದಲ್ಲಿ ಮೈಮರೆತ ಬಿನ್ನಾಣಗಿತ್ತಿ. ಅವಳಿಗಿಂತ ತೀರಾ ಭಿನ್ನಪ್ರವೃತ್ತಿಯವಳು ಆಕೆಯ ಸ್ನೇಹಿತೆ. ನರ್ಮದೆಯ ರೀತಿನೀತಿಗಳು ತನಗೆ ಇಷ್ಟವಾಗದೇ ಹೋದಾಗಲೂ ಅವಳ ಆಪ್ತಳಾಗಿ ಉಳಿದ ಒಲವಿನ ಜೀವ ಇವಳು.

ಹುಟ್ಟಿ ಬೆಳೆದ ಮನೆ ಸೆರೆಮನೆಯಾಗಿ ಕಂಡಾಗ, ಮದುವೆಯೇ ವಿಮೋಚನೆಯ ಹಾದಿ–ಎಂದು ನರ್ಮದಾ ಬಗೆದಳು. ಆದರೆ, ಮುಟ್ಟಿದ್ದೆಲ್ಲ ಮಣ್ಣಾಗುವ ಗುಣ ಅವಳಿಗೆ ಅಂಟಿ ಬಂದಿತ್ತು. ನಂದನದ ಅನುಕೂಲಗಳೆಲ್ಲ ಪತಿಗೃಹದಲ್ಲಿದ್ದರೂ ಅವಳ ಕಣ್ಣಿಗೆ ಅದು ನರಕವಾಗಿಯೇ ಕಂಡಿತು. ಗಂಡ ಡಾಕ್ಟರ್ ಶ್ರೀಕಾಂತ, ಪತ್ನಿಯ ರೋಗವೇನೆಂಬುದನ್ನು ಸುಲಭವಾಗಿ ಗೊತ್ತು ಮಾಡಿದ. ಯೋಗ್ಯವೇಳೆಯಲ್ಲಿ ಚಿಕಿತ್ಸೆಯನ್ನೂ ನಡೆಸಿದ. ಅದರ ಪರಿಣಾಮವಾಗಿ ನರ್ಮದೆಯ ಬದುಕು, ಒಂದು ನಿರ್ದಿಷ್ಟ ಘಟ್ಟವನ್ನು ಮುಟ್ಟಿತು.

ವಿಶಾಲಾಕ್ಷಿಯ ಬಾಳ್ವೆಯಲ್ಲೂ ಸ್ಥಿತ್ಯಂತರಗಳಾದುವು–ಸ್ವಲ್ಪ ಮಟ್ಟಿಗೆ. ಆದರೂ ಅಂತಹ ಬದಲಾವಣೆಗೆಲ್ಲ ಒಂದು ಪರಿಮಿತಿ ಇತ್ತು. 'ಇಲ್ಲಿಗಾಯಿತು, ಇದೇ ಕೊನೆಯ ಗೆರೆ.' ಎನ್ನುವಹಾಗೆ. ಅಂತಹ ಸನ್ನಿವೇಶದಲ್ಲಿ ಎಲ್ಲರೂ ಕೇಳಬಹುದಾಗಿದ್ದ ಪ್ರಶ್ನೆ ಒಂದೇ: 'ಆ ಗೆರೆಯನ್ನು ವಿಶಾಲಾಕ್ಷಿ ದಾಟುವುದು ಸಾಧ್ಯವೇ? ಎಂದಾದರೂ ಸಾಧ್ಯವೇ ?'

'ವಿಲಾಸಿನಿ' 'ಅಂಜನ' ಗಳಲ್ಲಿ, ಆ ಪ್ರಶ್ನೆ ಇಲ್ಲ; ಆ ಪ್ರಶ್ನೆಗೆ ಉತ್ತರವಿಲ್ಲ. ನರ್ಮದೆಯೇ ಪ್ರಮುಖಳಾದ ಆ ಕಥನದಲ್ಲಿ ಅದರ ಅಗತ್ಯವಿರಲಿಲ್ಲ.

ಆದರೂ ಅಲ್ಲಿ ನೊಂದು ಉಪಪಾತ್ರವಾದ ವಿಶಾಲಾಕ್ಷಿಯನ್ನು ಓದುಗರು ಮೆಚ್ಚಿಕೊಂಡ ಬಗೆ, ಈ ಹೊಸ ಕಾದಂಬರಿಗೆ ಹಾದಿಮಾಡಿಕೊಟ್ಟಿದೆ.

'ವಿಲಾಸಿನಿ' 'ಅಂಜನ' ಗಳೆರಡನ್ನೂ ಕುರಿತು ಚರ್ಚಿಸಿ, ಇನ್ನೊಂದು ಕಾದಂಬರಿ ಅಗತ್ಯ ಎಂದು ಮನಗಾಣಿಸಿಕೊಟ್ಟವರು, ಕನ್ನಡದ ಹಿರಿಯ ಬರೆಹಗಾರ್ತಿ ಶ್ರೀಮತಿ ವಾಣಿಯವರು. 'ಇನ್ನೂ ಒಂದು ಇದೆಯಲ್ಲವೆ?' ಎಂದು ಕೇಳಿ, ನನ್ನನ್ನು ಕಾರ್ಯೋನ್ಮುಖಗೊಳಿಸಿದವರು, ಹಲವಾರು ಜನ ವಾಚಕ ಮಿತ್ರರು. ಅವರಿಗೆಲ್ಲ ನಾನು ಕೃತಜ್ಞ.

'ವಿಶಾಲಾಕ್ಷಿ' ಕಾದಂಬರಿಯಲ್ಲಿರುವುದು ಭಿನ್ನ ಚಿತ್ರಣ. ಆ ಕಾರಣದಿಂದ, 'ವಿಲಾಸಿನಿ' 'ಅಂಜನ' ಗಳ ಮುಂದಿನ ಭಾಗವೆನಿಸುವುದಿಲ್ಲ ಇದು. ಬೇರೆಯೇ ಕಥಾನಾಯಿಕೆಯುಳ್ಳ ಈ ಕೃತಿಗೆ ಸ್ವತಂತ್ರ ಇರುವಿಕೆಯೂ ಇದೆ. ಇದು ರಚಿತವಾಗಿರುವುದು ಮಾತ್ರ ಹಿಂದಿನ ಎರಡು ಕಾದಂಬರಿಗಳ ಹಿನ್ನೆಲೆಯಲ್ಲಿ, ಆ ಕೃತಿಗಳಿಗೆ ಪೂರಕವಾಗಿ. ಇದಿಷ್ಟೇ ನೆನಪಿನಲ್ಲಿಡಬೇಕಾದ ಅಂಶ....

ನನ್ನ ಕೃತಿಗಳ ಓದುಗರಿಗೆ 'ವಿಶಾಲಾಕ್ಷಿ' ಯೂ ಮೆಚ್ಚುಗೆಯಾಗುವುದೆಂಬ ಭರವಸೆ ನನಗಿದೆ....

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಚೇತನಾ ಪ್ರಿಂಟರ್ಸ್ ಅವರಿಗೂ, ಪ್ರಕಾಶಿಸಿದ ಕಲಾಮಾಲಾ ಪ್ರಕಾಶನದವರಿಗೂ ನನ್ನ ನೆನಕೆಗಳು ಇಲ್ಲಿ ಸಲ್ಲಬೇಕು.

೧೮-೪-೧೯೭೮
ಸಾರಸ್ವತಪುರ, ಧಾರವಾಡ.

ನಿರಂಜನ

‘ ನಿರಂಜನಾನುಪಮೇಯ ’ದ

ಮೂವರು ಪ್ರಮುಖರು

**ಸತ್ಯ**

**ರಘುರಾಮ**

**ವಿಶ್ವನಾಥ**

ಇವರಿಗೆ

# ಪ್ರೇಮಕ್ಕೆ ಕಣ್ಣಿಲ್ಲ

2

ں

## ೧

ವಿಶ್ವವಿದ್ಯಾನಿಲಯದ ಆಳು ವಿಶಾಲಾಕ್ಷಿಯ ಮನೆ ಹುಡುಕಿಕೊಂಡು ಬಂದಿದ್ದ. ಅವನ ಸೈಕಲಿನ ಕೊರಳಿನಲ್ಲಿ ಮಾಸಿದ ಚೀಲ ತೂಗಾಡುತ್ತಿತ್ತು. ವಾಹನವನ್ನು ಹಿತ್ತಿಲಗೋಡೆಗೊರಗಿಸಿ, ಪುಟ್ಟದೊಂದು ಪ್ಯಾಕೆಟನ್ನು ಆ ಚೀಲ ದಿಂದ ಆತ ಹೊರತೆಗೆದ. ಆ ಕಟ್ಟನ್ನು ಹಿಂಬಾಲಿಸಿತು ಆತನ 'ಡೆಲಿವರಿ' ಪುಸ್ತಕ.

ಬಂದುದೇನೆಂಬುದು, ಹೊಸ್ತಿಲಲ್ಲಿ ನಿಂತ ವಿಶಾಲಾಕ್ಷಿಗೆ ಹೊಳೆಯಲೇ ಇಲ್ಲ. ಬರಿಯ ಲಕೋಟೆಯಾಗಿದ್ದರೆ ಊಹೆ ಸುಲಭವಾಗುತ್ತಿತ್ತು. ಆದರೆ ಆಳು ತಂದಿದ್ದುದು ಪ್ಯಾಕೆಟ್ಟು—ಸಾಕಷ್ಟು ಗಾತ್ರದ ಪ್ಯಾಕೆಟ್ಟು.

ಕಾತರ ಬೆರೆತ ಕುತೂಹಲದೊಂದಿಗೆ ಅವಳು ಕೇಳಿದಳು :

"ಏನಪ್ಪಾ ಅದು ?"

ಅದೇನೆಂಬುದನ್ನು ಜವಾನ ತಿಳಿದಿರಬೇಕಾದ ಅಗತ್ಯವೇನೂ ಇರಲಿಲ್ಲ. ಆದರೂ, ವಿಶ್ವವಿದ್ಯಾನಿಲಯದ ಆಗುಹೋಗುಗಳನ್ನೆಲ್ಲ ಚೆನ್ನಾಗಿ ಬಲ್ಲ ಪ್ರಚಂಡ ಆತ.

"ಪ್ರಬುದ್ಧ ಕರ್ಣಾಟಕ."

"ಓ!"

ತುಸು ತಡವಾಗಿ ಬಂದಿದ್ದ ಆಶ್ವಯುಜ ಸಂಚಿಕೆ. ತನ್ನ ಲೇಖನ ಪ್ರಕಟ ವಾಗಿರಬೇಕು ಹಾಗಾದರೆ!

ಹಿಂದೆ ನೌಕರಿ ದೊರೆತು ನೇಮಕಪತ್ರ ಬಂದಿದ್ದಾಗ, ಮುಂದೆ ಉತ್ತರ ಭಾರತದಿಂದ ಅಣ್ಣ ಬರೆದ ಮೊದಲ ಕಾಗದ ಕೈ ಸೇರಿದ್ದಾಗ, ಹೊಡೆದುಕೊಂಡಿದ್ದ ರೀತಿಯಲ್ಲೇ ವಿಶಾಲಾಕ್ಷಿಯ ಎದೆಗುಂಡಿಗೆ ಈಗಲೂ ಡವಡವಿಸಿತು.

ಜವಾನ ಜೇಬಿನಿಂದ ತೆಗೆದುಕೊಟ್ಟ ಪೆನ್ಸಿಲಿನಿಂದಲೇ, 'ಡೆಲಿವರಿ' ಪುಸ್ತಕದಲ್ಲಿ ವಿಶಾಲಾಕ್ಷಿ, ತನ್ನ ಹೆಸರಿನೆದುರು ಸಹಿ ಹಾಕಿದಳು. ಅಲ್ಲಿಯೇ ಕಟ್ಟನ್ನು ಒಡೆದು ನೋಡುವ ಆತುರ ಅವಳಿಗೆ. ಆದರೆ, ಆಳಿನೆದುರು ತನ್ನ ತವಕನನ್ನು ತೋರ್ಪಡಿಸುವುದು ಅನುಚಿತವಾಗಿತ್ತು. ಮನಸ್ಸು ಬಿಗಿಹಿಡಿದು, ಕಟ್ಟನ್ನು ಬಿಗಿಯಾಗಿ ಎದೆಗವಚಿಕೊಂಡು ಅವಳು ಅಲ್ಲಿಯೇ ನಿಂತಳು.

ಸೈಕಲನ್ನು ಸವಾರಿಗೆ ಸಿದ್ಧಗೊಳಿಸುತ್ತ ಜವಾನ ಹೇಳಿದ :

"ನಿಮ್ಮನ್ನು ಹುಡುಕಿಕೊಂಡು ಮಹಾರಾಣೀ ಕಾಲೇಜಿಗೆ ಹೋಗಿದ್ದೆ."

[ಗಂಡಸರಿಗಾದರೆ 'ತಾವು'; ಹೆಂಗಸರಿಗೆ, ಅದರಲ್ಲೂ ಚಿಕ್ಕವಯಸ್ಸಿನವರಿಗೆ, 'ನೀವು' ಸಾಕು—ಎಂದು ಅವನ ಅಭಿಮತ.]

"ಹೌದೆ? ನಾನೀಗ ಕೆಲಸಕ್ಕೆ ಹೋಗ್ತಾ ಇಲ್ಲ."

"ಹಾಗೇಂತ ಗಿರಿಜಾಬಾಯೋರು ಹೇಳಿದ್ರು. ಎಮ್ಮೆಗೆ ಕುಂತವ್ರೆ ಅಂದ್ರು."

[ಎಂ.ಎ. ಗೆ ಕುಳಿತುಕೊಳ್ಳುವ ಹೆಣ್ಣು, ಅವನ ದೃಷ್ಟಿಯಲ್ಲಿ ಯಾವಾಗಲೂ ಅಣಕದ ವಸ್ತು. ಆದರೆ ಈ ವಿಶಾಲಾಕ್ಷಮ್ಮ ಬೆಡಗುಗಾತಿಯಲ್ಲ ಎನ್ನುವುದನ್ನು ಆತ ಬಲ್ಲ.]

"ಗಿರಿಜಾಬಾಯಿ ಹೇಳಿದ್ರೇನು ?"

ಮನಸಿನಲ್ಲೆ, 'ಎಷ್ಟೊಂದು ದಿವಸವಾಯ್ತು ಅವರನ್ನು ನೋಡಿ'—ಎಂದುಕೊಂಡಳು ವಿಶಾಲಾಕ್ಷಿ. ತನ್ನ ಲೇಖನದ ಹಸ್ತಪ್ರತಿಯನ್ನು ಓದಿ ಅವರು ಮೆಚ್ಚಿದ್ದರು. ಈಗ ಅಚ್ಚಿನಲ್ಲಿ ಅದನ್ನು ಕಂಡಾಗ, ಅವರಿಗೆ ಸಂತೋಷವಾಗುವುದು ಖಂಡಿತ.

"ಹೂಂ. ....ಬರ್ತೀನಮ್ಮ."

"ಆಗಲಪ್ಪಾ."

ವಿಶಾಲಾಕ್ಷಿ ಅವಸರ ಅವಸರವಾಗಿ ಒಳಕ್ಕೋಡಿದಳು. ಕಟ್ಟನ್ನು ಮೇಜಿನ ಮೇಲಿರಿಸಿ, ಬಿಗಿದಿದ್ದ ಟ್ವೈನ್ ದಾರವನ್ನು ಎಳೆದು ಕಡಿದಳು. ಸಂಚಿಕೆಯನ್ನು ಕೈಗೆತ್ತಿಕೊಂಡು ಪುಟ ತಿರುವಿದಳು. ಲೇಖನ ಕಣ್ಣಿಗೆ ಬೀಳಲಿಲ್ಲ ಒಮ್ಮೆಲೆ. 'ಅಚ್ಚಾಗಿಲ್ಲವೇನೋ' ಎಂದುಕೊಂಡಳು ನಿರಾಶಳಾಗುತ್ತ. ಬಳಿಕ, ಹೊದಿಕೆಯ ಒಳಮೈಯಲ್ಲಿ 'ವಿಷಯ ಸೂಚಿಕೆ' ಕಂಡಿತು. 'ವಿಷಯ' ಮತ್ತು 'ಲೇಖಕರು'. ಕುವೆಂಪು, ಪು.ತಿ.ನ., ದೇ.ಜ.ಗೌ., ಜಿ. ಎಸ್. ಶಿವರುದ್ರಪ್ಪ—ಆ ಅಲ್ಲಿತ್ತು—

ಎಸ್. ವಿಶಾಲಾಕ್ಷಿ, 'ಆಧುನಿಕ ಆಂಗ್ಲ ಕಾವ್ಯದಲ್ಲಿ ಸೌಂದರ್ಯೋಪಾಸನೆ' ಎಂಬ ತಲೆಕಟ್ಟಿನ ಎದುರು. ಪಟಪಟನೆ ರೆಕ್ಕೆ ಬಡಿದು ಹಾರಾಡತೊಡಗಿತು ಹೃದಯದ ಹಕ್ಕಿ. ಪುಟ ಸಂಖ್ಯೆಯ ಆಧಾರದಿಂದ ಲೇಖನವನ್ನೂ ತೆರೆದುನೋಡಿದಳು. ನಡುಗುತ್ತಿದ್ದ ಬೆರಳುಗಳು ಹಾಳೆಗಳನ್ನು ತಿರುವಿದುವು. ಕೊನೆಯಲ್ಲಿ ಬಲ ಮೂಲೆಯಲ್ಲಿ ತನ್ನ ಹೆಸರು—ಸಣ್ಣ ಅಕ್ಷರದಲ್ಲಿ. ಆ ಪುಟವನ್ನು ಮೂಗಿನ ಬಳಿವರೆಗೂ ಒಯ್ದು, ಪುನಃ ಪುನಃ ನೋಡಿದಳು. ಆನಂದೋದ್ವೇಗದಿಂದ ಅಸ್ಥಿರವಾದುವು ಕಾಲುಗಳು. ಹರ್ಷಪುಲಕಿತಳಾಗಿ ವಿಶಾಲಾಕ್ಷಿ ಕುರ್ಚಿಯ ಮೇಲೆ ಕುಸಿಕುಳಿತಳು.

ಕೊಠಡಿಯ ಬಾಗಿಲ ಬಳಿಗೆ ಬಂದು, ತಾಯಿ ನಾಗಮ್ಮ ಕೇಳಿದರು:

"ಪೋಸ್ಟ್ ಬಂತೆ ವಿಶಾಲಿ?"

"ಇಲ್ಲಮ್ಮ. ಜವಾನ ಬಂದಿದ್ದ—ಕಾಲೇಜ್ನಿಂದ."

[ಯೂನಿವರ್ಸಿಟಿಯಿಂದ ಎಂದರೆ ಅರ್ಥವಾಗದು ತಾಯಿಗೆ. ಹೀಗಾಗಿ, 'ಕಾಲೇಜಿನಿಂದ' ಎಂದಳು ಮಗಳು.]

"ಯಾಕೆ? ಏನು?"

"ಪ್ರಬುದ್ಧ ಕರ್ಣಾಟಕ ತಂದ್ಕೊಟ್ಟ."

ಅದೇನೆಂದು ತಿಳಿಯದ ನಾಗಮ್ಮ ಪಿಳಿಪಿಳಿ ನೋಡಿದರು. ಕೈಯಲ್ಲಿದ್ದುದನ್ನು ತೋರಿಸುತ್ತ ವಿಶಾಲಾಕ್ಷಿ ಅಂದಳು:

"ಇದು—ಇದರಲ್ಲಿ—ನಾನು ಬರೆದಿರೋದು ಅಚ್ಚಾಗಿದೆ."

"ಅಷ್ಟೇನಾ?" ಎಂದು ರಾಗವೆಳೆದರು ನಾಗಮ್ಮ, ಹಾಗೆ ಅಚ್ಚಾಗುವುದರಲ್ಲಿ ವಿಶೇಷವೇನೂ ಇಲ್ಲ ಎನ್ನುವಂತೆ. "ರಾಜೂ ಕಾಗದ ಬಂತೇನೋಂತಿದ್ದೆ", ಎನ್ನುತ್ತ ಅವರು ಅಡುಗೆ ಮನೆಯ ಕಡೆಗೆ ನಡೆದರು.

ತನ್ನ ಸಂತೋಷದಲ್ಲಿ ಭಾಗಿಯಾಗದೇ ಹೋದ ತಾಯಿಯನ್ನು ಕುರಿತು ಯೋಚಿಸುವುದಕ್ಕೂ ಅವಕಾಶ ದೊರೆಯದಂತೆ, ಮೇಜಿನ ಮೇಲಿಂದ ಬಿಳಿಬಿಳಿ ಯಾದುದೇನೋ ವಿಶಾಲಾಕ್ಷಿಯ ಗಮನವನ್ನು ಸೆಳೆಯಿತು. ಅರೇ! ನೋಡಿಯೇ ಇರಲಿಲ್ಲ ತಾನು! ಬಿಳಿಯ ಹಾಳೆ ಹೊದಿಸಿದ್ದ ಪುಟ್ಟ ಪುಸ್ತಕಗಳು. ಏನಿವು? ತನ್ನ ಲೇಖನ. ಪುಸ್ತಕ ರೂಪದಲ್ಲಿ ಅದರ ಪ್ರತಿಗಳು. ಒಂದು, ಎರಡು, ಮೂರು—ಇಪ್ಪತ್ತೈದು ಒಟ್ಟು. ಓ, ಎಷ್ಟು ಚೆನ್ನು! ....ಗಿರಿಜಾಬಾಯಿ

ಗೊಂದು ಪ್ರತಿ, ಅಣ್ಣನಿಗೊಂದು, ಗೆಳತಿಯರಿಗೆಲ್ಲ ಒಂದೊಂದು. ಹೌದು, ಒಂದು ಪ್ರೊಫೆಸರಿಗೆ. 'ಅಲ್ಲಾ, ಇಷ್ಟನ್ನು ಏನು ಮಾಡಲೀಂತ'....

ನಾಗಮ್ಮ ಒಳಗಿನಿಂದ ಕರೆದರು :

"ವಿಶಾಲೀ, ಬರ್ತೀಯೇನೆ ಊಟಕ್ಕೆ ?"

"ಬರ್ತೀನಮ್ಮ."

ಅಷ್ಟು ಬೇಗನೆ ಉಂಡು ಓಡಬೇಕಾದ ಅಗತ್ಯವಿರಲಿಲ್ಲ. ಆದರೂ ಹತ್ತು ಘಂಟೆಗೇ ಊಟ ಮುಗಿಸುವುದು ಹಲವು ವರ್ಷಗಳಿಂದ ಅಭ್ಯಾಸವಾಗಿತ್ತು. ಇವತ್ತಂತೂ ತರಗತಿ ಇದ್ದುದು ಒಂದೇ ಪೀರಿಯಡ್. ಮಧ್ಯಾಹ್ನದ ಅನಂತರ. ಪಠ್ಯ ಪುಸ್ತಕಗಳ ಗೋಜಿಗಂತೂ ಈಗ ಹೋಗಬೇಕಾದುದಿಲ್ಲ ತಾನು. ಪರೀಕ್ಷೆಗೆ ಅಂಜುವವಳಲ್ಲ ವಿಶಾಲಿ ಈಗ. ನರ್ಮದಾ ಹೇಳಿರಲಿಲ್ಲವೆ: 'ಹೇಗಿದ್ದವಳು ಹೇಗಾಗಿಬಿಟ್ಟೆಯಮ್ಮ! ನಂಬೋಕೇ ಆಗೊಲ್ಲ' ಅಂತ? ಮೂರು ವರ್ಷಗಳ ಅಧ್ಯಾಪಕವೃತ್ತಿ, ಅಪಾರ ಆತ್ಮವಿಶ್ವಾಸವನ್ನು ಅವಳಲ್ಲಿ ತುಂಬಿತ್ತು. ಸಹಪಾಠಿನಿಯಾಗಿದ್ದ ಸರಸಿ ಒಮ್ಮೆ ಅಂದಿದ್ದಳು: 'ವಿಶಾಲಿ, ಬಹಳ ಜಂಭ ಬಂದ್ಬಿಟ್ಟದೆ ಕಣೇ ನಿಂಗೆ'. ಅದು ಮಾತ್ರ ಸುಳ್ಳು–ಸುಳ್ಳು....

ಇಷ್ಟಿದ್ದರೂ ಒಮ್ಮೊಮ್ಮೆ, ಇದ್ದಕ್ಕಿದ್ದಂತೆ, ಎಲ್ಲಿಲ್ಲದ ಕಳವಳ ವಿಶಾಲಾಕ್ಷಿಯ ಮನಸ್ಸನ್ನು ಆವರಿಸುತ್ತಿತ್ತು. ತನಗೆ ಏನೂ ತಿಳಿಯದು—ಎಂಬ ಶಂಕೆ. ತಾನಿನ್ನೂ ಪುಟ್ಟಹುಡುಗಿಯೇ—ಎಂಬ ಭಾವನೆ. ಅಣ್ಣ ರಂಗರಾಜನಿಗೆ ತಾನು ಸಾಟಿಯೇ ಅಲ್ಲ. ದಾಮೋದರ ಕಣಿವೆ ಯೋಜನೆಯಿಂದ-ಭಿಲಾಯಿಗೆ ಸ್ಥಾನಾಂತರವಾಗಿ ಉದ್ಯೋಗ ಸ್ವೀಕರಿಸುವುದಕ್ಕೆ ಮುಂಚೆಯೊಮ್ಮೆ ಊರಿಗೆ ಬಂದಿದ್ದನಲ್ಲ—ಎಷ್ಟು ದೊಡ್ಡವನಾಗಿ ಕಂಡ ಆಗ! ಸ್ವರ ಬದಲಿತ್ತು. ಠೀವಿಯಿತ್ತು ನುಡಿಯಲ್ಲಿ, ನಡೆಯಲ್ಲಿ. ವಯಸ್ಸಿನಲ್ಲಿ ಅಂತರವೇನೋ ಸ್ವಲ್ಪ. ಮೊದಲು ಸಂಪಾದಿಸತೊಡಗಿದುದೂ ತಾನೇ. ಆದರೂ ರಂಗರಾಜ ಮನೆಗೆ ದೊಡ್ಡವನು ಈಗ.

ಆಳವಾಗಿ ಯೋಚಿಸಿದಾಗ ವಿಶಾಲಾಕ್ಷಿಗೆ ಹೊಳೆಯುತ್ತಿತ್ತು—ಅಣ್ಣನಲ್ಲೂ ತನ್ನಲ್ಲೂ ವಿಶೇಷ ಬದಲಾವಣೆಯಾದುದು ಒಂದು ಘಟನೆಯ ಬಳಿಕ, ತಮ್ಮ ತಂದೆ ತೀರಿಕೊಂಡ ದುರ್ದಿನದ ಬಳಿಕ.

ರಂಗರಾಜ ಬರುವವರೆಗೂ ಕಾಯಲಾಗದೆ ಅಂತ್ಯಕ್ರಿಯೆಯನ್ನು ಮುಗಿಸಿ

ದ್ದರು. ದುಡಿದು ಬಳಲಿ ಹಣ್ಣಾಗಿಯೇ ಉದುರಿದ್ದ ಜೀವ. ಆದರೆ, ಆ ಅಂತ್ಯ ಅನಿವಾರ್ಯ ಎನ್ನುವುದು ಯಾವ ಸಮಾಧಾನ? ವಿಶಾಲಾಕ್ಷಿಯ ಅಣ್ಣ ಬಹಳ ಗೋಳಾಡಿದ್ದ:

'ನಾನು ಪಾಪಿ! ಅಪ್ಪಯ್ಯನನ್ನು ನೋಡೋ ಭಾಗ್ಯ ನನಗಿಲ್ಲದೇಹೋಯ್ತು!'

ಅಂತಹ ಅನಾಥ ಸಂಸಾರವೇನೂ ಅಲ್ಲ. ತಂದೆ ಇಳಿಸಿದ್ದ ವಿಮೆ—ಐದು ಸಾವಿರದ್ದು—ಬಂದಿತ್ತು. ತಮ್ಮಂದಿರಿಬ್ಬರ ವಿದ್ಯಾಭ್ಯಾಸವಾದರೆ ಆಯಿತಿನ್ನು.

ಆದರೂ ತಾಯಿ ರೋದಿಸಿದ್ದರು:

'ನಾವು ನಿರ್ಗತಿಕರಾದೆವಲ್ಲಾ!'

[ಅವರ ದೃಷ್ಟಿಯಲ್ಲಿ ಘೋರತರವಾಗಿತ್ತು ಸಮಸ್ಯೆ. ಮಕ್ಕಳಿಗೆ ಎಲ್ಲಿಂದ ಬರಬೇಕು ಅದರ ಕಲ್ಪನೆ?]

ತಂಗಿಯೆಂದು ತಾತ್ಸಾರಮಾಡದೆ, ಆಕೆ ತನ್ನ ಅಕ್ಕನೇ ಎನ್ನುವಂತೆ, ರಂಗರಾಜ ಕೇಳಿದ್ದ:

'ಕೆಲಸಕ್ಕೆ ರಾಜಿನಾಮೆ ಕೊಟ್ಟು ಬಂದ್ಬಿಡ್ತೀನಿ. ಆಗದಾ ವಿಶಾಲಿ?'

ಬೆಂಗಳೂರಿನಿಂದ ಬಂದು ಒಂದೆರಡು ಘಂಟೆಹೊತ್ತು ಇದ್ದುಹೋದ ಅವರ ಚಿಕ್ಕಪ್ಪ ಇತ್ತುದೂ ಅಂತಹದೇ ಸಲಹೆಯನ್ನು.

'ರಾಜಿನಾಮೆ ಕೊಟ್ಟು ಬಂದ್ಬಿಡು. ಇಲ್ಲೇ ಏನಾದರೂ ಕೆಲಸ ಸಿಗಬಹುದು. ನಾನೂ ನೋಡ್ತೀನಿ.'

'ಅವರೂ ನೋಡುವ' ವಿಷಯದಲ್ಲಿ, ನಾಗಮ್ಮನಿಗೇನೂ ನಂಬಿಕೆ ಇರಲಿಲ್ಲ. ತನ್ನ ಮೈದುನನನ್ನು ಚೆನ್ನಾಗಿಯೇ ಅರಿತಿದ್ದಳು ಆಕೆ. ಆದರೂ ಹೆಣ್ಣುಜೀವ ಹೇಳಿತ್ತು:

'ಅದೇ ಸರಿ, ರಾಜೂ.'

ಒಪ್ಪದೇ ಇದ್ದವಳು ವಿಶಾಲಿ ಒಬ್ಬಳೇ.

'ಖಂಡಿತ ಕೂಡದು. ಇಲ್ಲಿ ನಾನಿಲ್ವೆ? ಮನೆಯ ಜವಾಬ್ದಾರಿ ನನಗಿರಲಿ.'

'ಹುಚ್ಚುಮಾತು, ಹುಚ್ಚುಮಾತು!' ಎಂದಿದ್ದರು ನಾಗಮ್ಮ.

[ಒಳಗಿನ ದುಗುಡವನ್ನು ಮಕ್ಕಳೆದುರು ತೋಡಿಕೊಳ್ಳಲಾರದೆ ಅವರು ನೀರವವಾಗಿ ಅತ್ತಿದ್ದರು, ವಿಧಿಯನ್ನು ಹಳಿದಿದ್ದರು.]

ರಜಾ ಮುಗಿಯುತ್ತ ಬಂದಂತೆ ವಿಶಾಲಿಗೆ ಜಯವಾಯಿತು. ಆದ ಇತ್ಯರ್ಥ, 'ರಾಜಿನಾಮೆ ಈಗಲೇ ಬೇಡ' ಎಂದು.

ಹೊರಟುನಿಂತಾಗ ರಂಗರಾಜ, ಮುಗುಳುನಗಲು ಯತ್ನಿಸುತ್ತ, ಅಂದಿದ್ದ:

'ನಮ್ಮ ಅಪ್ಪ ಅಮ್ಮನಿಗೆ ಎಲ್ಲೋ ಲೆಕ್ಕ ತಪ್ಪಿರಬೇಕು ವಿಶಾಲಿ. ಈ ಮನೇಲಿ ದೊಡ್ಡೋಳು ನೀನೇ!'.

ಫಳಕ್ಕನೆ ನೀರು ಚಿಮ್ಮಿತ್ತು ವಿಶಾಲಾಕ್ಷಿಯ ಕಣ್ಣುಗಳಲ್ಲಿ....

ಮತ್ತೆ ತಾಯಿಯ ಸ್ವರ ಕೇಳಿಸಿತು:

"ತಟ್ಟೆ ಇಡಲೇನೇ?"

"ಬಂದೆ ಅಮ್ಮಾ."

ಮೇಜಿನ ಮೇಲೆ 'ಪ್ರಬುದ್ಧ ಕರ್ಣಾಟಕ'ದ ಸಂಚಿಕೆಯನ್ನೂ ಲೇಖನದ ಪ್ರತಿಗಳನ್ನೂ ಎದುರಿಗೆ ಇರಿಸಿಕೊಂಡು, ಹಳೆಯ ನೆನಪುಗಳೆಡೆಗೆ ಮನಸ್ಸನ್ನು ಅಲೆಯಲು ಬಿಟ್ಟು, ಕುಳಿತೇ ಇದ್ದಳು ಆಕೆ. ತಾಯಿ ಪುನಃ ಕರೆದೊಡನೆಯೇ ಗಡಬಡಿಸಿ ಎದ್ದು, ಅಡುಗೆಯ ಮನೆಗೆ ನಡೆದಳು.

ಅಡುಗೆಯ ಮನೆಯಲ್ಲೇ ಊಟ. ದೇವರ ಬಿಡಾರವೂ ಅಲ್ಲೇ, ಮೂಲೆಯಲ್ಲಿ. ಇಪ್ಪತ್ತೈದು ವರ್ಷಗಳಿಗೂ ಹಿಂದೆ, ರಂಗರಾಜ ಒಂದು ವರ್ಷದ ಕೂಸಾಗಿದ್ದಾಗ [ವಿಶಾಲಿ ಹೊಟ್ಟೆಯಲ್ಲಿದ್ದಾಗ], ಆ ಮನೆಯನ್ನು ನಾಗಮ್ಮನ ಯಜಮಾನರು ಹಿಡಿದಿದ್ದರು. ಹನ್ನೊಂದು ರೂಪಾಯಿ ಆಗಿನ ಬಾಡಿಗೆ. ಮುಂದೆ ಹದಿಮೂರಾಗಿತ್ತು. ಹತ್ತೊಂಭತ್ತಕ್ಕೇರಿತು. ಇಪ್ಪತ್ತಮೂರಕ್ಕೆ ಬಂದು ನಿಂತಿತ್ತು. ಈಗ ಅಂತಹ ಮನೆ ಮೂವತ್ತೈದಕ್ಕೂ ಸಿಗುತ್ತಿರಲಿಲ್ಲ. [ಬೆಂಗಳೂರಿನಲ್ಲಾದರೆ ಎಪ್ಪತ್ತು ಎಂಭತ್ತು ಹೇಳಿದರೂ ಹೇಳಿದರೇ.] ಹೀಗಾಗಿ, ವಿಶಾಲಾಕ್ಷಿಯ ತಂದೆ ತೀರಿಕೊಂಡ ಬಳಿಕ, ಮನೆ ಬದಲಾಯಿಸಬೇಕೆಂಬ ಮಾತು ಬಂದಿತ್ತಾದರೂ ಅಲ್ಲಿಗೇ ನಿಂತುಹೋಗಿತ್ತು. ತೂಗಿಸಿಕೊಂಡು ಹೋಗಬೇಕಾದ ಸಂಸಾರ. ಬಾಡಿಗೆಗಾಗಿ ಹೆಚ್ಚು ಹಣ ಸುರಿಯುವುದು, ದುಂದು ವೆಚ್ಚವಾಗಿಯೇ ನಾಗಮ್ಮನಿಗೆ ಕಂಡಿತು. ಶೋಕಪೀಡಿತೆಯಾದ ಆರಂಭದ ದಿನಗಳಲ್ಲಿ, ಆ ಮನೆಯಲ್ಲಿ, ಹೆಜ್ಜೆಹೆಜ್ಜೆಗೂ 'ಅವರ' ನೆನಪೇ ಆಯಿತು ನಿಜ. ಆದರೂ ಪ್ರಯತ್ನಪೂರ್ವಕವಾಗಿ, ಇತರ ವಿಷಯಗಳ ಕಡೆಗೇ ಮನಸ್ಸು ಹರಿಸಿ, ನಾಗಮ್ಮ ಚೇತರಿಸಿಕೊಂಡಿದ್ದರು.

"ಉಪ್ಪು ಹೆಚ್ಚಾಗಿದೆಯೇನೆ ಸಾರಿಗೆ?"

"ಇಲ್ಲಮ್ಮ. ಸರಿಯಾಗಿದೆ."

"ಇನ್ನೊಂದು ಸೌಟು ಬಡಿಸ್ಲೇನು?"

"ಬೇಡ. ಸಾಕು."

ಬಹಳ ವರ್ಷಗಳಿಂದ ಬಳಕೆಯಾಗಿದ್ದ ಪದಗಳು—'ಬೇಡ. ಸಾಕು.' ಮನೆಯಲ್ಲಿರುವವಳು ತಾನೊಬ್ಬಳೇ ಎನ್ನುವ ಹಾಗೆ ಎಂದೂ ತಿಂದುಂಡವಳಲ್ಲ ವಿಶಾಲಿ. ಊಟಕ್ಕೆ ಕುಳಿತರೂ ಅಷ್ಟೆ, ತಿಂಡಿ ಕೈಗೆತ್ತಿಕೊಂಡರೂ ಅಷ್ಟೆ, ತಮ್ಮಂದಿರ ನೆನಪಾಗುತ್ತಿತ್ತು ಅವಳಿಗೆ ....ಚಂದ್ರ, 'ಸ್ಪೆಶಲ್ ಕ್ಲಾಸಿ'ದೆಯೆಂದು ಬೇಗನೆ ಮನೆ ಬಿಟ್ಟು ಕಾಲೇಜಿಗೆ ಹೋಗಿದ್ದ. ಸೈಕಲಿನ ಮೇಲೆ ಸರ್ರೆಂದು ಯಾವ ಘಳಿಗೆಯಲ್ಲಾದರೂ ಬಂದನೇ. ಜಯನಿಗಾದರೋ ಹೈಸ್ಕೂಲು ಹತ್ತಿರ. ಮಧ್ಯಂತರದ ಬಿಡುವೇ ಸಾಕಾಗುತ್ತಿತ್ತು ಊಟದ ಶಾಸ್ತ್ರ ಮುಗಿಸಿಹೋಗಲು.

ಉಣ್ಣುತ್ತ ವಿಶಾಲಾಕ್ಷಿ ಯೋಚಿಸಿದಳು: ಇನ್ನೂ ಎರಡು ಮೂರು ಘಂಟೆಗಳ ಕಾಲ ಇಲ್ಲಿಯೇ ಕುಳಿತು ಮಾಡಬೇಕಾದುದೇನು ತಾನು? ವಿಶ್ವವಿದ್ಯಾನಿಲಯದ ಜವಾನ ಸಂತಸದ ಹೇರನ್ನೇ ಇಳಿಸಿಹೋಗಿದ್ದ. ಹತ್ತು ಜನಕ್ಕೆ ತಾನೀಗ ಅದನ್ನು ಹಂಚಬೇಕು. ಗಿರಿಜಾಬಾಯಿ—ಅವರು ಸಿಗುವುದು ಐದು ಘಂಟೆಯ ಅನಂತರವೇ. ನರ್ಮದೆಯನ್ನು ನೋಡಿ ಬಹಳ ದಿನಗಳಾದುವು. ಮೊದಲು ಅಲ್ಲಿಗೆ ಹೋಗಿ, ಬಳಿಕ ತರಗತಿಗೆ ಬರಬಹುದು. ಊಟದ ಹೊತ್ತು ನಿಜ. ಆದರೂ ನರ್ಮದೆಗೇನೂ ತೊಂದರೆಯಾಗದು. ಮಗುವನ್ನು ಆಡಿಸುವುದರ ಹೊರತು ಬೇರೇನು ಕೆಲಸವಿದೆ ಅವಳಿಗೆ? ಡಾಕ್ಟರ್ ಶ್ರೀಕಾಂತ ಮನೆಗೆ ಬಂದೊಡನೆಯೇ ತಾನು ಹೊರಬಿದ್ದರಾಯಿತು. ಮತ್ತೂ ಸಮಯವಿತ್ತೆಂದರೆ ಲೈಬ್ರೆರಿಗೆ ಹೋಗಬಹುದು....

"ಮಜ್ಜಿಗೆಗೆ ಅನ್ನ?"

"ಹ್ಞಾ?"

"ಅನ್ನ ಇಡಲೇನೇ ಸ್ವಲ್ಪ?"

"ಹೂಂ. ಸ್ವಲ್ಪ,—ಸ್ವಲ್ಪ ಸಾಕು."

"ನಿಧಾನವಾಗಿ ಊಟಮಾಡೇ. ಅದೇನು ಅವಸರ—ಅಂತ."

"ಏನಿಲ್ಲವಮ್ಮ."

ಊಟ ಮುಗಿಸಿ ಕೊಠಡಿಗೆ ಮರಳಿದ ವಿಶಾಲಾಕ್ಷಿ, ಮೇಜಿನ ಮೇಲಿದ್ದ 'ಪ್ರಬುದ್ಧ ಕರ್ಣಾಟಕ'ದ ಸಂಚಿಕೆಯನ್ನೂ ಲೇಖನದ ಪ್ರತಿಗಳನ್ನೂ ಮುದ್ದಿಸುವ ನೋಟದಿಂದ ಪುನಃ ಪುನಃ ನೋಡಿದಳು. ಬಿಳಿಯದೊಂದನ್ನು ಕೈಗೆತ್ತಿಕೊಂಡು ಹಾಳೆ ಮಗುಚಿದಳು. 'ತಿದ್ದಿರಬಹುದು, ತಿದ್ದಿರಲೇಬೇಕು' ಎಂಬ ಶಂಕೆ. [ಅಲ್ಲೊಂದು ಇಲ್ಲೊಂದು ಪದದ ಓರೆಕೋರೆಯನ್ನು ಒಪ್ಪಗೊಳಿಸಿದ್ದರು ಸಂಪಾದಕರು. ವಿಶಾಲಿಯ ಗಮನಕ್ಕೆ ಅದು ಬೀಳಲಿಲ್ಲ.] ತಾನು ಬರೆದಿದ್ದ ಹಾಗೆಯೇ ಅಚ್ಚಾಗಿತ್ತು. ಅದನ್ನಾಗಲೇ ಹಲವಾರು ಜನ ಓದಿರಬಹುದು. ಏನು ಹೇಳುವರೊ? —ಏನು ಹೇಳುವರೊ? ಕುವೆಂಪು ಕೃತಿಯೂ ಇತ್ತು ಮೊದಲ ಪುಟದಲ್ಲೇ. ತಾನು ಬರೆದುದು ಅವರ ಕಣ್ಣಿಗೂ ಬೀಳಬಹುದು.....

ಹೊರಡುವ ಸಿದ್ಧತೆಗೆಂದು, ಸಡಿಲವಾಗಿದ್ದ ಹೆರಳನ್ನು ವಿಶಾಲಾಕ್ಷಿ ಬಿಚ್ಚಿದಳು. ಕನ್ನಡಕವನ್ನು ತೆಗೆದು ಮೇಜಿನ ಮೇಲಿರಿಸಿ, ಗೋಡೆಯಲ್ಲಿ ತೂಗಹಾಕಿದ್ದ ಕನ್ನಡಿಗೆ ಸಮೀಪವಾಗಿ ನಿಂತಳು. ತುಟಿಗಳ ಮೇಲೆ ಲಾಸ್ಯವಾಡುತ್ತಿದ್ದ ಮಂದಹಾಸ. ಲೇಖಿಕೆ ವಿಶಾಲಾಕ್ಷಿ ತಾನು. ಯೌವನದ ಒತ್ತಡಕ್ಕೆ ಹಿಂದೇಟು ಹೊಡೆಯುತ್ತಿದ್ದ ಮುಖದ ಮೇಲಿನ ಸಿಡುಬಿನ ಕಲೆಗಳು, ಲಜ್ಜಿತವಾಗಿ ತಮ್ಮ ಒಡತಿಯನ್ನು ಕಂಡುವು. ಬಾಲ್ಯದಿಂದಲೆ ಒಡನಾಡಿಗಳಾಗಿ ಬಂದಿದ್ದುವು, ಆ ಕಲೆಗಳು ಮತ್ತು ಕನ್ನಡಕ. ಮೈಗೂಡಿ ಹೋಗಿ ಈಗ ಅವಿಭಾಜ್ಯವೆನಿಸಿದ್ದ ಅಂಶಗಳು ....ಜಡೆಯೊ? ತುರುಬೊ? ಹೃದಯ ನಲಿಯುತ್ತಿದ್ದ—ಸುಖದ ಹಕ್ಕಿ ಉಲಿಯುತ್ತಿದ್ದ—ಈ ದಿ ನ ಮುಡಿಕಟ್ಟಬೇಕೆನಿಸಿತು. ಚೋಟುದ್ದ ಕೂದಲಲ್ಲ ತನ್ನದು, ಸಾಕಷ್ಟು ನೀಳವಾದದ್ದು. ಚೌರಿಯ ನೆರವಿಲ್ಲದೆಯೇ ಹಿರಿದಾಗಿ ಕಾಣುವ ಗಂಟು ....ಎಣ್ಣೆಗಪ್ಪು ಮೈ. ಇದ್ದಿಲನ್ನೂ ನಾಚಿಸುವ ಮೈಬಣ್ಣದ ಮಹಿಳೆಯರಿರುವಾಗ, ಇದೇ ಬಿಳುಪು. ಯಾವಾಗಲೂ ಹೋಲಿಸಿನೋಡಬೇಕಾದುದು ತ ಮ ಗಿಂ ತ ಉತ್ತಮರೊಡನಲ್ಲ,—ತಮ್ಮಷ್ಟು ಭಾಗ್ಯವಂತರೂ ಅಲ್ಲದವರೊಡನೆ ....ಪೌಡರಿನ ತೆಳು ಲೇಪನ—ಕಂಡೂ ಕಾಣಿಸದಷ್ಟು ....ಸೀರೆಗಳಿದ್ದುವು ಈಗ, ಆರಿಸಿ ಉಟ್ಟುಕೊಳ್ಳುವಷ್ಟು. ಈಗಲೂ ಸರಳವಾಗಿರುವುದೇ ಇಷ್ಟ ವಿಶಾಲಾಕ್ಷಿಗೆ ....'ಬ್ರೇಸರ್ಸ್' ಎಂದೊಡನೆ ಮೂಗುಮುರಿಯಬೇಕೆಂದೇನೂ ಅವಳಿಗೆ ಅನಿಸುತ್ತಿರಲಿಲ್ಲ. ಒಂದು ರೀತಿಯಲ್ಲಿ ಅದು ಇಷ್ಟ ಕೂಡಾ. ಆದರೂ ಬಿಳಿ ಅರಿವೆಯ 'ಬಾಡಿ'ಯೇ ಸಾಕೆನಿಸುತ್ತಿತ್ತು. ಅಭ್ಯಾಸವನ್ನು ಬದಲಿಸುವುದು ಸುಲಭವಾಗಿರಲಿಲ್ಲ....

ವಿಶಾಲಾಕ್ಷಿ, 'ಪ್ರಬುದ್ಧಕರ್ಣಾಟಕ'ದ ಸಂಚಿಕೆಯನ್ನೂ ಲೇಖನದ ಮೂರು ಪ್ರತಿಗಳನ್ನೂ ತೆಗೆದು ಒತ್ತಟ್ಟಿಗೆ ಇರಿಸಿದಳು. ತರಗತಿಯಲ್ಲಿ ಟಿಪ್ಪಣಿ ಬರೆದುಕೊಳ್ಳಲು ಹಾಳೆಗಳು ಕೆಲವು. ಪೆನ್ನು. ಒಯ್ಯುವುದು ಹೇಗೆ? ಶೋಕಿ ಚೀಲವಿತ್ತು. ಬಳಸುತ್ತಿದ್ದುದು ಕಡಮೆ. ಆದರೆ ಅದರೊಳಗೆ ಇವೆಲ್ಲ ಹಿಡಿಸಲಾರವು. ಪೆನ್ನು ಹಾಳೆಗಳನ್ನಷ್ಟೆ ಹೊರಗಿರಿಸಿ, 'ಅವನ್ನು' ಯಾವುದಾದರೂ ಪೇಪರಿನೊಳಗೆ ಭದ್ರವಾಗಿ ಸುತ್ತಿ ದಾರ ಬಿಗಿಯುವುದೇ ಸರಿ. ಅದರೊಳಗೇನಿದೆ ಎಂಬುದು ಸಹಾಧ್ಯಾಯಿಗಳಿಗೆ ಗೊತ್ತಾಗಬಾರದು....

"ಮಾರ್ಕೆಟ್ಟಿನಿಂದ ಏನಾದರೂ ತರಬೇಕೇನಮ್ಮ?"

ಸಾಮಾನು ಯಾವುದಾದರೂ ತೀರಿದೆಯೇ ಎಂದು ನಾಗಮ್ಮ ಒಂದು ಕ್ಷಣ ಯೋಚಿಸಿದರು. ಒಂದೂ ಹೊಳೆಯಲಿಲ್ಲ.

"ನೆನಪಾಗೋಲ್ವಲ್ಲೇ...."

"ಹೋಗಲಿಬಿಡು. ಚಂದ್ರನಿಗೆ ಹೇಳಿ ಭಾನುವಾರ ತರಿಸಿದರಾಯ್ತು."

"ತರಕಾರಿ ಮುಗಿದಿದೆ."

"ಅಲ್ಲಿಂದಲೇ ತರಲೋ? ಅಥವಾ ಬೆಳಗ್ಗೆ ಮಾರ್ಕ್ಕೊಂಡು ಬಂದಾಗ—"

"ಸಾಕು, ಸಾಕು. ಇಲ್ಲೇ ಕೊಂಡರಾಯ್ತು. ಮುಗಿದಿದೆ ಅಂತ ಹೇಳ್ದೆ, ಅಷ್ಟೆ."

ಮಗಳು ಚಿಲ್ಲರೆ ದುಡ್ಡೆಣಿಸಿ, ಹೊರಬೀಳಲು ಅಣಿಯಾಗಿ, ಚಪ್ಪಲಿ ಮೆಟ್ಟಿಕೊಳ್ಳುತ್ತಿದ್ದಂತೆ, ನಾಗಮ್ಮ ಕೇಳಿದರು:

"ಎಷ್ಟುಹೊತ್ತಿಗೆ ಬರ್ತೀಯಾ?"

"ಗಿರಿಜಾಬಾಯಿಯನ್ನು ನೋಡಿ, ಹಾಗೇ ಮಾತಾಡಿಸ್ಕೊಂಡು—"

"ಆದಷ್ಟು ಬೇಗ್ನೆ ಬಂದ್ಬಿಡು."

"ಹೂನಮ್ಮ."

ಎಲ್ಲ ವಿವರಗಳೂ ಯಾಕೆ ಎಂದು, ನರ್ಮದೆಯನ್ನು ಕಾಣಹೋಗುವ ವಿಷಯ ವಿಶಾಲಾಕ್ಷಿ ತಾಯಿಗೆ ಹೇಳಲಿಲ್ಲ. ಹೊಸ್ತಿಲು ದಾಟಿ ಹೊರಬೀಳುತ್ತ ಅವಳೆಂದಳು:

"ಬರ್ತೀನಿ."

ಸ್ಲೇಟು ಪುಸ್ತಕಗಳನ್ನು ಚೀಲದಲ್ಲಿ ತುಂಬಿ, ಎಳೆಯರ ಶಾಲೆಗೆ ಲಂಗತೊಟ್ಟ

ವಿಶಾಲಿ ಹೋಗತೊಡಗಿದಾಗಿನಿಂದಲೂ ಹಾಗೆಯೇ, ಬಾಗಿಲಲ್ಲಿ ನಿಂತು ಕೂಗಿ ಹೇಳಬೇಕು ತಾಯಿಗೆ—'ಬರ್‍ತೀನಿ' ಎಂದು.

ಅಭ್ಯಾಸಬಲದಿಂದ ನಾಗಮ್ಮ ಅಂದರು :

"ಹೂಂ."

ಹಿಂದೆಯಾಗಿದ್ದರೆ ಎಚ್ಚರಿಕೆಯ ಮಾತುಗಳೂ ಇರುತ್ತಿದ್ದುವು: 'ಬೀದಿ ಬದೀಲೇ ಹೋಗು. ಮೋಟಾರು ಬಂದೀತು, ಹುಷಾರಿ!' ಈಗ ಹಾಗೆ ಹೇಳುವ ಆಗತ್ಯವಿರಲಿಲ್ಲ; ಎಳೆಯ ಮಗುವೇನೂ ಅಲ್ಲ ಅವರ ಮಗಳು.

ತರಗತಿಗಳಿಗೆಂದು ಹೊರಟಿದ್ದ ವಿದ್ಯಾರ್ಥಿಗಳ ಹಿಂಡು ರಸ್ತೆಯಲ್ಲಿತ್ತು. ಕಾಲ್ನಡಿಗೆಯವರು, ಸೈಕಲ್ ಸವಾರರು ....ಹಿಂದೆ ಅಂತಹ ವಿದ್ಯಾರ್ಥಿಗಳು ತನ್ನೆಡೆಗೆ ನೋಡಿದಾಗ ಭಯಗೊಳ್ಳುತ್ತಿದ್ದಳು ವಿಶಾಲಿ. ಈಗ ಆ ಬಗೆಯ ಅನುಭವವಾಗುತ್ತಿರಲಿಲ್ಲ. ಅವರೆಲ್ಲರಿಗಿಂತ ಹಿರಿಯಳು ಆಕೆ—ಹಿರಿಯಳು. ವಯಸ್ಸಲ್ಲ, ತಾನು ಅಧ್ಯಾಪಿಕೆಯಾಗಿದ್ದುದಲ್ಲ, ಕೈಯಲ್ಲಿದ್ದ ಕಟ್ಟು ಸಾರುತ್ತಿತ್ತು ತನ್ನ 'ಹಿರಿತನ'ವನ್ನು.

ಗಂಭೀರವಾದ ಮೆಲುನಡೆಯಿಂದ ಬೀದಿಯ ಅಂಚಿನಲ್ಲೆ ವಿಶಾಲಾಕ್ಷಿ ನಡೆದಳು.

ನಡೆದುಹೋಗುತ್ತಿದ್ದ ಮ ಗ ಳ ನ್ನು ತುಂಬುನೋಟದಿಂದ ನಾಗಮ್ಮ ನೋಡಿದರು.

೨

ತುಂಬುನೋಟದಿಂದ ನೋಡಿದರು ನಾಗಮ್ಮ, ನಡೆದುಹೋಗುತ್ತಿದ್ದ ಮಗಳನ್ನು. ಆ ನೋಟದಲ್ಲಿ ಒಲವಿತ್ತು, ವ್ಯಥೆಯೂ ಇತ್ತು.

ಯಜಮಾನರು ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲವೆಂದಲ್ಲ. ಹೊರಗೆ ತೋರಿಸಿ ಕೊಳ್ಳದೇ ಇದ್ದರೂ ಬೆಳೆದು ವಿಷವಾಗಿ ಹಬ್ಬಿತ್ತು ಅಂತರಂಗದ ಕೊರಗು. ತಾವಿಬ್ಬರೇ ಇದ್ದಾಗಲೂ ಆ ಪ್ರಶ್ನೆಯ ಪ್ರಸ್ತಾಪವನ್ನು ಅವರು ಮಾಡುತ್ತಿದ್ದುದು ಕಡಮೆ. ಎಲ್ಲ ಸಂಕಟಗಳೂ ಒಳಗೇ ಇರುತ್ತಿದ್ದುವು—ಉಕ್ಕಿನ ತಿಜೋರಿಯಲ್ಲಿದ್ದಂತೆ, ಭದ್ರವಾಗಿ.

ವಿಶಾಲಾಕ್ಷಿ ಹದಿನೈದು ಹದಿನಾರರ ಹರೆಯದವಳಿದ್ದಾಗಲೇ ವರಾನ್ವೇಷಣೆ ಆರಂಭವಾಗಿತ್ತು. ಸಂಬಂಧಿಕರ ವೃತ್ತಗಳಲ್ಲೇ ಮೊದಲು. ಅದು ನಿರರ್ಥಕವಾದಾಗ, ಹೊರಗಿನ ಕ್ಷೇತ್ರಗಳಲ್ಲಿ. ಹುಡುಗಿ ಸ್ಫುರದ್ರೂಪಿಣಿಯಾಗಿರಲಿಲ್ಲ. ಬಾಲ್ಯದಲ್ಲಿ ಬಡಿದ ಸಿಡುಬು, ಎಳೆಯ ಜೀವ ತನಗೆ ಬಲಿಯಾಗದೇ ಇದ್ದಾಗ, ಮುಖವನ್ನು ಮತ್ತಷ್ಟು ಅಂದಗೆಡಿಸಿ ಸೇಡು ತೀರಿಸಿಕೊಂಡಿತ್ತು. ದೃಷ್ಟಿ ದುರ್ಬಲವಾದುದೂ ಅದರ ಫಲಶ್ರುತಿಯಾಗಿಯೇ. ಹೆಣ್ಣು ಹೆತ್ತವರ ಕಷ್ಟವನ್ನು ಆತ್ಮೀಯರೇ ತಿಳಿಯಲೊಲ್ಲರೆಂದಮೇಲೆ, ಅಪರಿಚಿತರಿಂದ ಸಹಾನುಭೂತಿ ನಿರೀಕ್ಷಿಸುವುದಾದರೂ ಹೇಗೆ ಸಾಧ್ಯ?

ಆ ತರುಣದಲ್ಲಿ ನಾಗಮ್ಮ ಪದೇ ಪದೇ ಕೇಳಿದ್ದರು:

'ಏನಾದರೂ ಮಾಡೋಕೆ ಆಗೋಲ್ವೇಂದ್ರೆ....'

ನಿಜಸ್ಥಿತಿಯನ್ನು ನಿಷ್ಠುರ ಮಾತುಗಳಲ್ಲಿ ಅವರು ಬಣ್ಣಿಸಿದ್ದರು:

'ಮೂರು ನಾಲ್ಕು ಸಾವಿರ ರೂಪಾಯಿ ವರದಕ್ಷಿಣೆ ಕೊಡೋಹಾಗಿದ್ರೆ—'

'ಮೂರು ನಾಲ್ಕು ಸಾವಿರ!'

'ಹೂಂ. ಆಗಲೂ ಒಳ್ಳೇ ಅಳಿಯ ಸಿಕ್ತಾನೆ ಅಂದ್ಕೋಬೇಡ.'

'ಮತ್ತೆ?'

'ಅಷ್ಟುಕೊಟ್ಟರೆ ಯಾವನಾದರೂ ಕಮಂಗಿಯ ಕೊರಳಿಗೆ ವಿಶಾಲೀನ ಕಟ್ಟಬಹುದು.....'

ಪರಿಸ್ಥಿತಿಯ ಪರಿಣಾಮವಾಗಿಯೇ ವಿಶಾಲಾಕ್ಷಿ ಓದು ಮುಂದುವರಿಸಿದ್ದು. ಇಂಟರಾಗಲಿ ಎಂದುಕೊಂಡರು ಆಕೆಯ ತಂದೆ. ಆದರೆ, ಬರಿಯ ವಿದ್ಯೆ ನೋಡಿ ಮೆಚ್ಚಿಕೊಳ್ಳಲು ಈಗಿನ ಯುವಕರೇನು ಮೂರ್ಖರೆ? ಶ್ರೀಮಂತ ಮಾವಂದಿರೇ ಬೇಕು ಎಲ್ಲ ಅವಿವಾಹಿತರಿಗೂ. ಇನ್ನಷ್ಟು ದೊಡ್ಡವಳಾಗಲಿ, ಮೈಕೈ ತುಂಬಿಕೊಂಡು ಒಂದಿಷ್ಟು 'ನೋಡುವ ಹಾಗಾದರೂ' ಆಗಬಹುದು— ಎಂದು ಅವಳ ತಂದೆ ಆಸೆ ಕಟ್ಟಿಕೊಂಡರು. ಆ ವಿಷಯದಲ್ಲೂ ಅವರಿಗೆ ನಿರಾಸೆ ಯಾಯಿತು.

ಈ ಕೊರತೆಯನ್ನೆಲ್ಲ ತುಂಬಿಕೊಡಲು ವಿಶಾಲಾಕ್ಷಿಯಲ್ಲಿದ್ದುದು—ಒಳ್ಳೆಯ ಗುಣ. ಅಧ್ಯಯನದಲ್ಲಿ ಆಸಕ್ತಿ ಇತ್ತು ಅವಳಿಗೆ. ಪ್ರಥಮ ಶ್ರೇಣಿ ಯಾವಾಗಲೂ ಮೀಸಲಾಗಿರುತ್ತಿತ್ತು ಆ ವಿನಯ ಸಂಪನ್ನೆಗೆ.

ಯೋಚನೆಯಿಂದ ಬಹಳ ಹಣ್ಣಾದ ಒಂದು ಘಳಿಗೆಯಲ್ಲಿ ನಾಗಮ್ಮನವರ ಯಜಮಾನರು ಅಂದಿದ್ದರು:

'ನಮ್ಮ ವಿಶಾಲಿ ಸಾಕ್ಷಾತ್ ಸರಸ್ವತಿಯೇ ಸರಿ. ಅದೇ ನಮ್ಮ ಪಾಲಿನ ಸೌಭಾಗ್ಯ.'

[ಆದರೆ ಆ 'ಸರಸೋತಮ್ಮ'ನಿಗೆ ಗಂಡನಿದ್ದ. ಈ ವಿಶಾಲಿಗೆ ಮಾತ್ರ—]

ಇಂಜಿನಿಯರಾಗಲು ಹೊರಟಿದ್ದ ರಂಗರಾಜನಿಗಿಂತಲೂ ಸ್ವಲ್ಪ ಮೊದಲೇ, ಅವನ ತಂಗಿ ಪದವೀಧರೆಯಾದಳು. ಸಂಕಟದ ಮಧ್ಯೆಯೂ ಸಂಭ್ರಮ. ಪದವೀ ಪ್ರದಾನ ಸಮಾರಂಭಕ್ಕೆ ಹೋಗಲು ವಿಶಾಲಿಯ ತಂದೆಗೆ ಬಿಡುವು ದೊರೆಯಲಿಲ್ಲ. ಆದರೆ ಸಂಜೆ ಮನೆಗೆ ಮರಳಿದ ಮೇಲೆ, ಮಗಳು ಸುರುಳಿ ಸುತ್ತಿ ತಂದಿದ್ದ ಡಿಗ್ರಿ ಹಾಳೆಯನ್ನು, ಪ್ರೀತಿಯಿಂದ ಮುಟ್ಟಿ ನೋಡಿದರು. ಬಿಡಿಸಿ ಓದಿದರು. ಪುನಃ ಸುರುಳಿಸುತ್ತಿ ಮಗಳ ಕೈಗಿತ್ತರು.

'ಜೋಪಾನವಾಗಿಟ್ಟುಕೋ ವಿಶಾಲಿ.'

ಮೃದುವಾದ ಧ್ವನಿಯಲ್ಲಿ ಆಡಿದ್ದ ಮಾತು. ತುಸು ಕಂಪಿಸಿತ್ತು. ನಾಗಮ್ಮ ನಿಗೆ ತಿಳಿದಿತ್ತು ಆ ಕಂಪನದ ಅರ್ಥ....

ವಿಶಾಲಾಕ್ಷಿಯ ತಂದೆ ಮತ್ತೊಮ್ಮೆ ಯತ್ನಿಸಿ ನೋಡಿದರು—ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣಳಾದ, ಬಿ.ಎ. ಆನರ್ಸ್ ಪದವೀಧರೆಯಾದ, ಬುದ್ಧಿಮತಿ ಯಾದ, ಸಕಲಗುಣಸಂಪನ್ನೆಯಾದ ತನ್ನ ಮಗಳಿಗೆ ಒಬ್ಬ ಗಂಡು ದೊರೆಯುವನೇ ಎಂದು. 'ಮರಳಿಯತ್ನವ ಮಾಡು, ಮರಳಿಯತ್ನವ ಮಾಡು.' ಉಪದೇಶ ವೀಯುವುದು ಸುಲಭ. ಸ್ವತಃ ಆಚರಿಸುವುದು ಕಷ್ಟ....

ಮಹಾರಾಣೀ ಕಾಲೇಜಿನಲ್ಲಿ ಅಧ್ಯಾಪಿಕೆಯಾಗುವ ಅವಕಾಶ ದೊರೆತಾಗ, ವಿಶಾಲಾಕ್ಷಿ ಆ ಪ್ರಸ್ತಾಪವನ್ನು ಮೊದಲು ಮಾಡಿದುದು ತಾಯಿಯೊಡನೆ.

ನಾಗಮ್ಮ ಅಂದಿದ್ದರು :

'ನಿಮ್ಮ ತಂದೇನ ಕೇಳಿನೋಡು.'

ವಿದ್ಯಾರ್ಥಿನಿಯಾಗಿದ್ದವರೆಗೂ ಒಂದು ಬಗೆ. ಹೇಗೂ ಕಾಲ ಕಳೆಯು ತ್ತಿತ್ತು. ಕೆಲಸವಿಲ್ಲದೆ ಮನೆಯಲ್ಲಿ ಕುಳಿತಿರುವುದೆಂದರೆ, ಮಾನಸಿಕ ಯಾತನೆಗೆ ಆಹ್ವಾನ ನೀಡಿದಂತೆ. ಅಧ್ಯಾಪಿಕೆಯಾಗುವುದರಿಂದ, ಸರಾಗವಾಗಿ ಉಸಿರಾಡಲು ಮತ್ತೂ ಒಂದಿಷ್ಟು ಅವಕಾಶ. ಆ ವೃತ್ತಿ ಮಗಳಿಗೆ ಇಷ್ಟವೆಂಬುದನ್ನು ಅವಳ ಸ್ವರದಲ್ಲಿ ಗುರುತಿಸಿದ್ದ ತಂದೆ, ತಾವೂ ಸಂತೋಷ ವ್ಯಕ್ತಪಡಿಸುತ್ತ, ನಗೆಯ ಮುಖವಾಡ ಧರಿಸುತ್ತ, ಹೇಳಿದ್ದರು :

'ಆಗಲಿ, ಅದಕ್ಕೇನು ?'

ಏಕಾಂತದಲ್ಲಿ ಸಹಧರ್ಮಿಣಿಯೊಡನೆ ಅವರು ನುಡಿದಿದ್ದರು :

'ಸ್ವಲ್ಪ ಸಮಯದವರೆಗೆ ಹೋಗ್ತಾ ಇರಲಿ. ಮನೆಯಲ್ಲಿ ಇರೋದಕ್ಕಿಂತ ಅದು ವಾಸಿ. ಆಮೇಲೆ ಬಿಟ್ಟುಬಿಟ್ಟರಾಯ್ತು ....ಮುಂದೆ ನೋಡೋಣ.'

ಅವರಿಗೆ ಪ್ರಿಯವಾಗಿದ್ದ ಪದಪ್ರಯೋಗ—'ಮುಂದೆ ನೋಡೋಣ.' ಸಮಸ್ಯೆ ಸಿಕ್ಕುಗಟ್ಟಿ ಗಡುತರವಾದಾಗಲೆಲ್ಲ ಆ ಮಾತು.

ಆ ಆಸೆಯಲ್ಲೇ ದೀರ್ಘಕಾಲ ಕಳೆಯಿತು.

ಆಮೇಲೆ ಒಮ್ಮೆಲೆ ಯಾವ ಆಸೆಗೂ ಆಸ್ಪದವಿಲ್ಲದ ಹಾಗೆ—

ಅಲ್ಲ, ಇಷ್ಟೊಂದು ಕ್ರೂರವಾಗಬಹುದೆ ವಿಧಿ ? ....

ಏಕಮಾತ್ರ ಆಸರೆಯಾಗಿದ್ದ ಹೆಮ್ಮರ ಇನ್ನಿಲ್ಲ ತನ್ನ ಪಾಲಿಗೆ.

ಪೂರ್ವಜನ್ಮದಲ್ಲಿ ಯಾವ ಬಗೆಯ ಪಾಪಿಯಾಗಿದ್ದೆನೊ? ಮುತ್ತೈದೆಯ ಸಾವು, ಪಡೆದುಬಂದಿರಬೇಕಾದ ಭಾಗ್ಯ. ತನಗೆಲ್ಲಿಂದ ಬರಬೇಕು ಅದು?

ಸಮಯಕ್ಕೆ ಮುನ್ನವೇ ಮುಪ್ಪು ಅಡರಿತ್ತು ತನ್ನನ್ನು. ರಾತ್ರೆ ಎಷ್ಟು ಹೊತ್ತಾದರೂ ಈಗ ನಿದ್ದೆ ಬರುತ್ತಿರಲಿಲ್ಲ. ಯೋಚನೆಗಳು—ಆದಿ ಅಂತ್ಯ ಒಂದೂ ಇಲ್ಲದ ಯೋಚನೆಗಳು. ಎಲ್ಲಿಂದಲೋ ಆರಂಭಿಸಿ ಎಲ್ಲೆಲ್ಲಿಗೋ ಮನಸ್ಸು. ತಾನು ಮಾತ್ರ ಅಜ್ಜಿಯಾಗಿರಲಿಲ್ಲ, ಅತ್ತೆಯೂ ಆಗಿರಲಿಲ್ಲ.

ಮುಂದೇನಿನ್ನು? ಮುಂದೇನು? ಗಂಡು ಹುಡುಕುವವರು ಯಾರು? ಗಂಡು ಮಾತ್ರವಲ್ಲ. ವಿಶಾಲಿಗೆ ಮದುವೆಯಾದೊಡನೆ ಸೊಸೆಯೂ ಒಬ್ಬಳು ಈ ಮನೆಗೆ ಬರಬೇಕು....

ತನ್ನ ಅಣ್ಣ ಈಗ ಇದ್ದಿದ್ದರೆ ನೆರವಾಗುತ್ತಿದ್ದ. ಆ ವಿಷಯದಲ್ಲೂ ತಾನು ದುರ್ಭಾಗ್ಯವಂತೆ. ಮೈದುನನಿಂದಂತೂ ಯಾವ ಸಹಾಯವನ್ನೂ ನಿರೀಕ್ಷಿಸ ಬೇಕಾದುದಿಲ್ಲ. ಒಡಹುಟ್ಟಿದ ತಂಗಿಯನ್ನಾದರೂ ತಾನೊಮ್ಮೆ ಕಾಣಬೇಕು. ಆಕೆಯ ಗಂಡ ಒಳ್ಳೆಯವನು. ಬಡವನಾದರೇನಂತೆ? ಎಲ್ಲಾದರೂ ಒಳ್ಳೆಯ ಕಡೆ— ....ಈಸಲದ ದಸರೆಗೆ ಅವರನ್ನು ಕರೆಯಬೇಕು. ಅಥವಾ, ತಾನೇ ವಿಶಾಲಿಯ ಜತೆ ತುಮಕೂರಿಗೆ ಹೋದರೆ? ಬೇಡ. ವಿಶಾಲಿಯ ಜತೆಯಲ್ಲಲ್ಲ. ಒಟ್ಟಿಗೆ ಜಯರಾಮುವನ್ನು ಕರೆದೊಯ್ದರಾಯಿತು. ಯಾವುದಕ್ಕೂ ಮೊದಲು ಕಾಗದ ಬರೆಯಬೇಕು ತಂಗಿಗೆ.

'ಕಾಗದ ಬರೆಯಬೇಕು.' ವಾರಕ್ಕೊಂದು ತಪ್ಪದೆ ಬರುತ್ತಿತ್ತು ರಂಗ ರಾಜನಿಂದ. ಅಲ್ಲ, ಅಷ್ಟು ದೂರ ಆತ ಮರಳಿ ಹೋಗಲು ತಾನು ಯಾಕೆ ಒಪ್ಪಿದೆ ಅಂತ? ಪ್ರತಿ ತಿಂಗಳೂ ಅವನು ಕಳುಹಿಕೊಡುತ್ತಿದ್ದ ನೂರೈವತ್ತು ರೂಪಾಯಿ ಕಡಮೆ ಹಣವಲ್ಲ. ಆದರೂ, ಇಲ್ಲಿಯೇ ಕೆಲಸಕ್ಕೆ ಯತ್ನಿಸಿದ್ದರೆ? ಹಿರಿಯ ಹುಡುಗ ಬಳಿಯಲ್ಲಿದ್ದನೆಂದರೆ ತನಗೆ ಅದೇ ಒಂದು ಸಮಾಧಾನ. ಇನ್ನಾದರೂ—ಇನ್ನಾದರೂ—'ಬಾ' ಅಂತ ಅವನಿಗೆ ಬರೆಸಬೇಕು. ಬರೆಯು ವವಳು ವಿಶಾಲಿ. ಈಕೆ ಒಪ್ಪಬೇಕಲ್ಲ ಅದಕ್ಕೆ?

ಈ ಮನೆಯಲ್ಲಿ ಒಂಟಿಯಾಗಿ ಕಾಲ ಕಳೆಯುವುದಂತೂ ಎಷ್ಟು ಬೇಸರ! ಹುಲ್ಲು ಕಮರಿದ ಬಟ್ಟಬಯಲಿನಲ್ಲಿ ಏಕಾಕಿಯಾಗಿ ತನ್ನನ್ನು ಬಿಟ್ಟ ಹಾಗೆ....

....ಅಲ್ಲಿಯೇ ಅವರು ಕೂತಿರುತ್ತಿದ್ದುದು.

—'ನಾಗೂ, ನನ್ನ ಕೋಟೆಲ್ಲಿ ?'

—'ನಾಗೂ, ನನ್ನ ಕರ್ಚೀಫ್ ನೋಡಿದಿಯಾ ?'

—'ನಾಗೂ, ಸಾಮಾನು ಏನಾದರೂ ತರಬೇಕೇನು ?'

ಸಾಮಾನು ಏನಾದರೂ ತರಬೇಕೆ? —ಎಂದು ಈಗ ಕೇಳುವವಳು ವಿಶಾಲಿ. ಹೆಣ್ಣಾದರೇನು ? ಎಲ್ಲವೂ ಅಪ್ಪನಂತೆಯೇ....

ಕಾಹಿಲೆ ಉಲ್ಬಣವಾದಾಗಲೇ ಅವರಿಗೆ ಅನಿಸಿರಬೇಕು, ಕೊನೆ ನಿಶ್ಚಿತ ಅಂತ. ಮಕ್ಕಳು ಹೊರಗಿದ್ದಾಗ ತನ್ನನ್ನು ಸಮೀಪಕ್ಕೆ ಕರೆದು, ಅಂದಿದ್ದರು :

'ನೀನು ಧೈರ್ಯವಾಗಿರ್ಬೇಕು, ನಾಗೂ.'

ಸಂದರ್ಭ ಅರ್ಥವಾಗಿದ್ದರೂ ಒಪ್ಪಿಕೊಳ್ಳಲು ಇಷ್ಟಪಡದೆ ತಾನು ಅಂದಿದ್ದೆ :

'ಧೈರ್ಯವಾಗೇ ಇದೀನಿ.'

'ಈಗಿನದಲ್ಲ, ಮುಂದೆ. ಯಾವಾಗಲೂ.'

ತನಗೆ ದುಃಖ ಉಮ್ಮಳಿಸಿ ಬಂದಿತ್ತು.

'ಸುಮ್ಮನಿರಬಾರದೇ ನೀವು ?'

'ನನ್ನ ಚಿನ್ನ!'

ಸೂಕ್ಷ್ಮತರ ಮಧುರ ಭಾವವನ್ನು ಸೂಚಿಸುವ ಸಂಬೋಧನೆ. ಇನ್ನು ಆ ಧ್ವನಿ ಇಲ್ಲವೇನೋ ಎಂಬಂತೆ ಗಳಗಳನೆ ಅತ್ತಿದ್ದೆ. ಅಥವಾ, ತಾನು ನಿರ್ಗತಿಕಳಾದೆನೆಂದು ಆಗಲೇ ತನಗೆ ಅನಿಸಿರಬೇಕು. ತನ್ನ ಪಾಲಿಗೆ ಕೊನೆಯದೇ ಆಗಿತ್ತು ಆ ಕರೆ—ಕೊನೆಯದೇ ಆಗಿತ್ತು....

* * * *

ಬಹಳ ಹೊತ್ತು ಬಾಗಿಲ ಬಳಿಯಲ್ಲೇ, ಬಳಿಕ ಗೋಡೆಗೊರಗಿ, ನಿಂತೇ ಇದ್ದ ನಾಗಮ್ಮ, ಬವಳಿ ಬಂದಂತಾಗಿ ನೆಲದ ಮೇಲೆ ಕುಸಿಕುಳಿತರು. ಮುಂಡಿಗಳಿಗೆ ಹಣೆಯೂನಿಸಿ ಒಂದೇಸಮನೆ ಅತ್ತರು. ಮೂಗಿನಿಂದ ಸುರಿದುಬಂದ ನೀರು ಸಿಂಬಳವನ್ನು ಬೆರಳುಗಳಿಂದ ನೆಲಕ್ಕೊರಸಿದರು. [ರಂಗರಾಜ ಅನ್ನುತ್ತಿದ್ದ : 'ನಿನ್ನದೊಂದು ಕೆಟ್ಟ ಅಭ್ಯಾಸವಮ್ಮ ಇದು.'] ಸೆರಗಿನಿಂದ ಕಣ್ಣುಗಳನ್ನು ಮೆಲ್ಲನೆ ಒತ್ತಿಕೊಂಡರು.

ಹೃದಯದ ಭಾರ ತುಸು ಕಡಮೆಯಾದಂತೆನಿಸಿತು.

'ಅಲ್ಲ, ಚಂದ್ರ—ಜಯ ಬರಲೇ ಇಲ್ವಲ್ಲಾ....ಮಧ್ಯಾಹ್ನವಾಗಿಬಿಟ್ಟಿದೆ ಆಗಲೇ. ಎಷ್ಟಾಯಿತೊ ಗಂಟೆ?'

ನಾಗಮ್ಮ ಮೆಲ್ಲನೆದ್ದು, ಮಕ್ಕಳ ಕೊಠಡಿಗೆ ನಡೆದರು. ಕಿಟಕಿಯ ದಂಡೆಯ ಮೇಲೆ ಹಳೆಯ ಟೈಂಪೀಸು ಬೋರಲು ಮಲಗಿತ್ತು. ಅದು ಕೆಟ್ಟುಹೋಗಿ ಆಗಲೇ ನಾಲ್ಕು ತಿಂಗಳಾಗಿದ್ದುವು. ಸರಿಯಾದ ವೇಳೆ ಸೂಚಿಸುತ್ತಿದ್ದುದು ವಿಶಾಲಿಯ ಕೈಗಡಿಯಾರವೊಂದೇ. ಅದಿಲ್ಲದಾಗ, ಟೈಂಪೀಸನ್ನೆ ಎತ್ತಿನೋಡಿ, ಅಲ್ಲಿದ್ದುದಕ್ಕೆ ಅದೆಷ್ಟನ್ನೋ ಕೂಡಿಸಿಯೋ ಕಳೆದೊ, ವೇಳೆಯನ್ನು ಹುಡುಗರು ಗೊತ್ತುಹಚ್ಚುತ್ತಿದ್ದರು. ನಾಗಮ್ಮನೂ ಬಲು ಜಾಗರೂಕತೆಯಿಂದ ಅದನ್ನು ಎತ್ತಿದರು. ಸಣ್ಣ ಮುಳ್ಳು ಹನ್ನೆರಡನ್ನು ಸಮೀಪಿಸುತ್ತಿತ್ತು. ಅಧರ ಬೆನ್ನಲ್ಲೆ ಇತ್ತು ದೊಡ್ಡ ಮುಳ್ಳು. ಆದರೆ, ಅದಕ್ಕೆ ಎಷ್ಟನ್ನು ಕೂಡಿಸಬೇಕು, ಅಥವಾ ಎಷ್ಟನ್ನು ಅದರಿಂದ ಕಳೆಯಬೇಕು—ಎಂಬುದು ಅವರಿಗೆ ಗೊತ್ತಿರಲಿಲ್ಲ. ತಾನು ಮುಟ್ಟಿದುದರಿಂದ ಆ ಟೈಂಪೀಸೆಲ್ಲಿ ನಿಂತುಹೋಗುವುದೋ ಎಂದು ಅಂಜಿ ಮೊದಲಿದ್ದಂತೆಯೇ ಅದನ್ನು ಬೋರಲು ಮಲಗಿಸಿದರು.

ಗೋಡೆಯಲ್ಲಿ ಬೆಂಗಳೂರು ಪ್ರೆಸ್ಸಿನ ಕ್ಯಾಲೆಂಡರಿತ್ತು. ಇವತ್ತೆಷ್ಟು ತಾರೀಕು? ಹಾಲಿನವನು ದುಡ್ಡು ಇಸಕೊಂಡುದು ಆರು ದಿನಗಳಿಗೆ ಹಿಂದೆ. ಆ ದಿನ ತಾರೀಕು ಐದು. ಅಂದರೆ ಹನ್ನೊಂದಿರಬೇಕು ಇವತ್ತು....ಮಗನಿಂದ ಮನಿಯಾರ್ಡರು ಬರುವುದು ನಾಡದು, ಇಲ್ಲವೆ ಆಚೆನಾಡದು. ಈಗ ಈ ಎಂ.ಎ. ಮುಗಿಯುವತನಕ ವಿಶಾಲಾಕ್ಷಿಗೆ ಸಂಪಾದನೆ ಇಲ್ಲ....ಅಲ್ಲ, ಪುನಃ ಓದುವ ಅಗತ್ಯ ನಿಜವಾಗಿಯೂ ಇತ್ತೆ ಅಂತ? ಅವರಿದ್ದಾಗಲೇ ಒಪ್ಪಿಗೆ ಇತ್ತಿದ್ದರು: 'ಮುಂದಿನ ವರ್ಷ ಎಂ.ಎ. ಮಾಡ್ಕೊ ವಿಶಾಲಿ'—ಅದೇನೆಂಬುದು ನಾಗಮ್ಮನಿಗೆ ತಿಳಿಯದು. ಓದು ಕಲಿತು ಉದ್ಯೋಗ ದೊರೆತಮೇಲೆ ಪುನಃ ಓದುವುದು ಅಂದರೇನು? 'ಅದೇನು ಹೆಚ್ಚುಗಾರಿಕೆ ಅಂತ?' ತಂದೆ ಹಿಂದೆ ಹೇಳಿದ್ದುದನ್ನೇ ರಾಜುವೂ ಒತ್ತಿ ನುಡಿದಿದ್ದ. ನಮ್ಮ ವಿಶಾಲಿಗೆ 'ಎಂಥ ಪರೀಕ್ಷೆ ಇದ್ದರೂ ನೀರು ಕುಡಿದಹಾಗೆ.' ಮಗಳಿಗೂ ಇಷ್ಟ ಓದುವುದೆಂದರೆ.

ತಾರೀಕು ಪಟ್ಟಿಯ ಬಲಕ್ಕೆ ಎರಡು ಭಾವಚಿತ್ರಗಳಿದ್ದುವು—ರಾಜುವಿನದೊಂದು, ವಿಶಾಲಿಯದೊಂದು. ಕಪ್ಪುಕೋಟುಗಳನ್ನು ಧರಿಸಿ, ಕೈಯಲ್ಲಿ ಬಿಳಿಯ ಸುರುಳಿ ['ಡಿಕ್ರಿ'] ಹಿಡಿದು, ತೆಗೆಸಿದ ಚಿತ್ರಗಳು. ನೋಡಲು ತಮಾಷೆಯಾಗಿದ್ದುವು.

ಎದುರು ಬದಿಯಲ್ಲಿ ಬಲು ಹಳೆಯದಾದೊಂದು ಸಂಸಾರ–ಭಾವಚಿತ್ರವಿತ್ತು. ನಾಗಮ್ಮ ಮತ್ತು ಅವರ ಯಜಮಾನರು, ಚಡ್ಡಿ ಧರಿಸಿದ್ದ ರಾಜು, ಲಂಗ ತೊಟ್ಟಿದ್ದ ವಿಶಾಲಿ, ತಾಯಿಯ ತೊಡೆಯ ಮೇಲಿದ್ದ ಕೂಸು ಚಂದ್ರ. ಆಗ ಇನ್ನೂ ಜಯನ ಆಗಮನವಾಗಿರಲಿಲ್ಲ.

ವಿಶಾಲಿ ಅಂದಿದ್ದಳು :

'ಈ ಚಿತ್ರ ಚೆನ್ನಾಗಿದೆಯಮ್ಮ. ನಮ್ಮ ತಂದೇದನ್ನು ಅಷ್ಟೇ ಬೇರೆ ತೆಗೆದು, ದೊಡ್ಡದಾಗಿ ಮಾಡಿಸ್ಬೇಕು. ಕಮಲ್ ಸ್ಟುಡಿಯೋನವರು ಚೆನ್ನಾಗಿ ಮಾಡ್ಕೊಡ್ತಾರೆ.'

ಎಷ್ಟು ಖರ್ಚಾಗಬಹುದು ?–ಎಂದು ನಾಗಮ್ಮ ಕೇಳಿರಲಿಲ್ಲ. ಒಳ್ಳೆಯ ಕೆಲಸಕ್ಕೆ ಖರ್ಚು ಎಷ್ಟಾದರೇನಂತೆ ? ಯೋಚಿಸಲೇಬಾರದು ಆ ವಿಷಯ. ತನ್ನ ದೇವರ ಚಿತ್ರ. ದೊಡ್ಡದಾಗಿ. ಮನೆಗೇ ಶೋಭೆಯಾಗಿ........

"ಅಮ್ಮಾ, ಏನ್ಮಾಡ್ತಿದೀಯಾ ? ಬಡಿಸು ನಂಗೆ."

ಅವಸರವಾಗಿ ಒಳಕ್ಕೆ ಬಂದು, ತಾಯಿಯ ಬಳಿಸಾರಿ, ಜಯರಾಮು ಹಾಗೆ ನುಡಿದ.

ಸರಿಯಾಗಿ ಕೈಕಾಲು ತೊಳೆಯುವ ವ್ಯವಧಾನವೂ ಇಲ್ಲ ಅವನಿಗೆ.

ತಮ್ಮ ಸುತ್ತಲೂ ನೇಯತೊಡಗಿದ್ದ ಯೋಚನೆಗಳ–ನೆನಪುಗಳ–ಬಲೆಗಳನ್ನೆಲ್ಲ ಬದಿಗೆ ಸರಿಸಿ, ಲಗುಬಗೆಯಿಂದ ನಾಗಮ್ಮ ಅಡುಗೆ ಮನೆಯತ್ತ ನಡೆದರು.

ಮಗನ ಒದ್ದೆ ಪಾದಗಳನ್ನು ನೋಡಿ ಅವರೆಂದರು :

"ಸರಿಯಾಗಿ ಒರಸ್ಕೋಬಾರದೇನೋ ?"

"ಇರಲಿ, ಬಿಡಮ್ಮ."

ತಾಯಿಯಬಳಿ ಹೆಚ್ಚು ಸಲಿಗೆ ಕಿರಿಯವನಿಗೆ. ಅವರಿಗೂ ಆತ ಮುದ್ದಿನಮಗ.

....ಉಣ್ಣುತ್ತ ಜಯರಾಮು ಕೇಳಿದ :

"ಅಕ್ಕ ಕಾಲೇಜಿಗೆ ಹೋದಳಾ ?"

"ಹೂಂ."

"ನಿನ್ನ ಊಟ ಆಯ್ತಾ ?"

"ಇನ್ನೂ ಇಲ್ಲವಪ್ಪ."

ಚಂದ್ರ ಉಂಡುಹೋದನೆ ?–ಎಂದು ಜಯರಾಮು ಇನ್ನು ಕೇಳಬೇಕು. ಅಷ್ಟರಲ್ಲೆ, ಆತ ಬಂದನೆಂಬುದಕ್ಕೆ ಸಾಕ್ಷಿಯಾಗಿ, ಹೊರಗೆ ಸೈಕಲ್ಲಿನ ಸದ್ದಾಯಿತು.

# ೨೬

೩

"ಬಾರೇ, ಬಾರೇ! ಒಂದು ಯುಗವಾಯ್ತಲ್ಲೇ ನಿನ್ನನ್ನು ನೋಡಿ! ಈಗಲೇ ಪರೀಕ್ಷೆಗೆ ಓದೋಕೆ ಶುರುಮಾಡ್ಬಿಟ್ಟಿದೀಯೋ ಹೇಗೆ? ಹೂಂ. ಅಂತೂ ಬಂದೆಯಲ್ಲ!"

ಸೊಸೆ ಸ್ವಾಗತ ಬಯಸುತ್ತಿದ್ದುದು ಯಾರಿಗೆ? ಆ ಮಟಮಟ ಮಧ್ಯಾಹ್ನದಲ್ಲಿ ಮನೆಗೆ ಬಂದವರು ಯಾರು? – ಎಂದು ತಿಳಿಯಲು, ಭಾಗೀರಥಮ್ಮ ಅಡುಗೆ ಮನೆಯಿಂದ ಹೊರಬಂದರು, ಒಗ್ಗರಣೆ ಕೊಡಲೆಂದು ಕೈಯಲ್ಲಿತ್ತಿದ್ದ ಸೌಟನ್ನು ಹಾಗೆಯೇ ಕೆಳಕ್ಕಿರಿಸಿ.

ಬಂದಿದ್ದವಳು ವಿಶಾಲಾಕ್ಷಿ.

ಅವಳನ್ನು, 'ನೀನಾ?' ಎಂಬರ್ಥದಲ್ಲಿ ನಸುನಗುತ್ತ ನೋಡಿ ಅವರು ಒಳಹೋದರು.

ಬಿಸಿಲಿನ ಬಳಲಿಕೆಯನ್ನು ನಿವಾಳಿಸಿ ತೆಗೆದು ಒಗೆಯುವವಳಂತೆ, ವಿಶಾಲಾಕ್ಷಿ "ಉಶ್!" ಎಂದಳು.

ನಡುಮನೆಗೆ ಸೋಫಾಗಳು ಬಂದಿದ್ದುವು. ಗೆಳತಿಯನ್ನು ಕುಳಿತಿರಹೇಳಿ ನರ್ಮದಾ ಅಂದಳು :

"ತಾಳು, ಫ್ಯಾನ್ ಹಾಕ್ತೀನಿ."

ಮೂಲೆಯಲ್ಲಿದ್ದ ವಿದ್ಯುತ್ ಬೀಸಣಿಗೆ ತನ್ನ ಪಂಜರದೊಳಗೆ ಗಿರಗಿರ ಎಂದು ತಿರುಗಿತು.

[ಹಿಂದೆ ಆಗಿದ್ದರೆ ಸೋಫಾಗಳಿಗೆ ಸಂಬಂಧಿಸಿಯೇ ಮಾತು ಆರಂಭವಾಗುತ್ತಿತ್ತು. ನರ್ಮದೆಯೇ ಅನ್ನುತ್ತಿದ್ದಳು: 'ಹೊಸದು ಕಣೇ. ಒಂದು ಸೆಟ್ ಕೊಂಡುಕೊಂಡ್ವಿ. ಇಷ್ಟು ಬಿತ್ತು–ಅಷ್ಟು ಬಿತ್ತು' ಅಂತ.]

ಸೋಫಾದ ಮೇಲೆ ಕುಳಿತುಕೊಳ್ಳುವುದು ವಿಶಾಲಾಕ್ಷಿಗೆ ಹೊಸ ಅನುಭವ ವೇನೂ ಅಲ್ಲ. ಆದರೂ, ತನ್ನ ಭಾಗಕ್ಕೆ ಆ ಮೆತ್ತನೆಯ ಆಸನ ಕೆಳಕ್ಕೆ ಕುಸಿದಂತಾಗಿ ಸಂಕೋಚವೆನಿಸುತ್ತಿತ್ತು.

ಫ್ಯಾನ್ ಕೂಡಾ ಹೊಸದಾಗಿ ಬಂದಿತ್ತು.

ಕಿಟಕಿ ಬಾಗಿಲುಗಳಿಗೆ ದಪ್ಪನೆಯ ಸೊಗಸಾದ ಹೊಸ ಅರಿವೆಗಳಿದ್ದುವು.

ಇಷ್ಟನ್ನೆಲ್ಲ ನೋಡಿಯೂ ವಿಶಾಲಿ ಸುಮ್ಮನೆಯೇ ಇರುವಳಲ್ಲ – ಎಂದು ನರ್ಮದೆಗೆ ತುಸು ಕಸಿವಿಸಿ ಎನಿಸಿತು.

ಮೌನ ನೆಲೆಸಿಬಿಟ್ಟಿತ್ತು ಅವರಿಬ್ಬರೂ ಕುಳಿತ ಮೇಲೆ. ಇದು ಗಮನಕ್ಕೆ ಬಿದ್ದಾಗ, ಚಕಿತಳಾಗಿ, ವಿಶಾಲಾಕ್ಷಿ ಅಂದಳು :

"ಬಹಳ ಬದಲಾಯಿಸ್ಬಿಟ್ಟಿದೆ. ಎಲ್ಲಿಂದ ಕೊಂಡುಕೊಂಡೆಯೋ ಅದನ್ನ?"

ಸೋಫಾಗಳನ್ನಲ್ಲ, ಫ್ಯಾನನ್ನಲ್ಲ, ಕಿಟಕಿ ಬಾಗಿಲುಗಳಿಗೆ ಹಾಕಿದ್ದ ಪರದೆಯನ್ನು.

"ಮೊನ್ನೆ ಕೈಮಗ್ಗ ಸಪ್ತಾಹ ಆಯ್ತು ನೋಡು. ಆಗ ಏನೋ ಪ್ರದರ್ಶನ ಏರ್ಪಡಿಸಿದ್ದರಲ್ಲಾ–ಅಲ್ಲಿಂದ. ಡಾಕ್ಟರೂ [ಅಂದರೆ, ಕೈಹಿಡಿದ ಶ್ರೀಕಾಂತ] ನಾನೂ ಹೋಗಿದ್ವಿ."

ಪರದೆಗಳನ್ನು ನೋಡುತ್ತ, [ದೊರೆತರೆ ತಾನೂ ಕೊಳ್ಳಬಹುದೆಂದು ಯೋಚಿಸುತ್ತ] ಸುಮ್ಮನಿದ್ದಳು ವಿಶಾಲಿ.

ಇಷ್ಟೊಂದು ಸಂಯಮ ಅರ್ಥವಿಲ್ಲವೆಂದು ನರ್ಮದಾ ಕೇಳಿದಳು :

"ಚೆನ್ನಾಗಿದೆಯಾ ?"

"ತುಂಬಾ ಚೆನ್ನಾಗಿವೆ."

ಮುಂದಿನ ಮಾಹಿತಿ ಒದಗಿಸುವುದು ಅನಿವಾರ್ಯವಾಯಿತು ನರ್ಮದೆಗೆ.

"ಆದರೆ ಬೆಲೆ ಜಾಸ್ತಿ ಕಣೇ."

"ಎಷ್ಟು ಬಿತ್ತು ?"

[ಹೆಚ್ಚಿರಲಾರದು–ಎಂಬ ಆಸೆ.]

"ಗಜಕ್ಕೆ ಮೂರೂಮುಕ್ಕಾಲೋ ಏನೋ. ಇಷ್ಟಕ್ಕೇ ಮೂವತ್ತು ಚಿಲ್ಲರೆ ಬಿತ್ತು. ಮಹಡಿ ಮೇಲ್ಗಡೆ ಬೇಡ ಅಂದ್ಬಿಟ್ಟೆ."

ತನ್ನ ಕೊಠಡಿಗಳಿಗೆ ಬೇಡ ಅಂದುದು, ನರ್ಮದೆಯ ಪಾಲಿನ ತ್ಯಾಗ.

ಆದರೆ, ವಿಶಾಲಾಕ್ಷಿ ಯೋಚಿಸುತ್ತಿದ್ದುದು ಬೇರೆಯೇ : 'ದುಬಾರಿ ಬೆಲೆ. ತನ್ನ ಮನೆಗೆ ಹೇಳಿಸಿದ್ದಲ್ಲ ಇದೆಲ್ಲ.'

ಆ ವಿಚಾರ ಅಲ್ಲಿಗೇ ಮುಗಿಯಿತೆಂದು, ಅವಳ ದೃಷ್ಟಿ ಮಗ್ಗುಲಲ್ಲಿದ್ದ ಕೊಠಡಿಯ ಕಡೆಗೆ ಹರಿಯಿತು.

"ಮುರಲಿ ಎಲ್ಲೀ ?"

ತಾಯ್ತನದ ಸೊಬಗು ಬೀರಿತು ನರ್ಮದಾ ಸೂಸಿದ ಮುಗುಳುನಗೆ.

"ಹಿತ್ತಿಲಲ್ಲಿರಬೇಕು."

"ಹಿತ್ತಿಲಲ್ಲಿ? ಒಬ್ಬನೇ ?"

"ಮುರಲೀನ ನೋಡ್ಕೊಳ್ಳೋದಕ್ಕೋಸ್ಕರವೇ ಅಂತ ಒಬ್ಬಳು ಹುಡುಗೀನ ಗೊತ್ಮಾಡಿದೀವಿ."

'ಗೊತ್ಮಾಡಿದೀನಿ' ಅಲ್ಲ–'ಗೊತ್ಮಾಡಿದೀವಿ.' ಸಂಸಾರವೆಲ್ಲ ಒಂದು ಘಟಕ ಎನ್ನುವ ಹಾಗೆ ಬಹುವಚನ ಪ್ರಯೋಗ.

ಸೋಫಾ, ಫ್ಯಾನ್, ಪರದೆಗಳಲ್ಲ; [ತನ್ನ ಸೀರೆಗಳೂ ಅಲ್ಲ;] ಎಲ್ಲರೂ ನೋಡಬೇಕಾದ – ನೋಡಿ ಮೆಚ್ಚಬೇಕಾದ – ಏಕಮಾತ್ರ ಅಮೂಲ್ಯ ಒಡವೆ: ಆ ಮುರಲಿ.

"ಸೀತಾ, ಮಗೂನ ಕರಕೊಂಡ್ಬಾ....ಏ ಸೀತಾ, ಕೇಳಿಸ್ತೇನೇ ?"

ಹೊರಗಿನಿಂದೊಂದು ಎಳೆಯ ಧ್ವನಿ ಬಂತು :

"ಬಂದೆ ಅಮ್ಮಾವ್ರೇ...."

ಚುರುಕಾಗಿದ್ದ ಹತ್ತರ ಹುಡುಗಿಯೊಬ್ಬಳು, ಕೆಂವಗಿನ ದುಂಡಗಿನ ಕೂಸನ್ನು ಹೊತ್ತು ತಂದಳು. ಬಾಹ್ಯ ಪ್ರಪಂಚದಿಂದ ಮನೆಯೊಳಕ್ಕೆ ಬಂದ ಪೋರ, ತಾಯಿಗೆ ಸುದ್ದಿ ಮುಟ್ಟಿಸಿದ :

"ಮ್ಮಾ–ಬಚ್ಚು–ಪೊಂಪೊಂ–ಭುರ್...."

ಕಚಗುಳಿ ಇಟ್ಟಂತಾಗಿ ವಿಶಾಲಾಕ್ಷಿ ಸಂತಸದಿಂದ ಉದ್ಗರಿಸಿದಳು :

"ಅಯ್ಯೋ, ಎಷ್ಟು ಮುದ್ದಾಗಿ ಮಾತಾಡ್ತಾನೆ!"

'ನೀನು ಉಟ್ಟಿರೋ ಸೀರೆ ನಿನಗೆ ಬಹಳ ಒಪ್ಪುತ್ತೆ' ಎಂದು ಹೇಳಿದ್ದರೂ ನರ್ಮದೆಗೆ ಅಷ್ಟು ಸಂತೋಷ ಖಂಡಿತವಾಗಿಯೂ ಆಗುತ್ತಿರಲಿಲ್ಲ.

ಎಡಗೈಯಲ್ಲಿದ್ದ ಕಟ್ಟನ್ನು ಸೋಫಾದ ಮೇಲಿರಿಸಿ [ನರ್ಮದೆಯಾಗಲೆ

ಅದನ್ನು ನೋಡಿದ್ದಳು ; 'ಅದೇನೇ ?' ಎಂದು ಕೇಳಿರಲಿಲ್ಲ, ಅಷ್ಟೆ], ವಿಶಾಲಾಕ್ಷಿ ಎದ್ದು ಮಗುವಿನ ಬಳಿಸಾರಿ, ಕೈಗಳನ್ನು ಮುಂದಕ್ಕೆ ಚಾಚಿದಳು. ಅನಿರ್ಧಾರದ ನೋಟದಿಂದ, ಕನ್ನಡಕವಿದ್ದ ಆ ಮುಖವನ್ನು, ಒಂದು ಕ್ಷಣ ಮಗು ನೋಡಿತು.

"ಅತ್ತೆಕಣೋ, ಹೋಗೋ" ಎಂದು ಉತ್ತೇಜನವಿತ್ತಳು ನರ್ಮದಾ.

ಮುರಲಿ 'ಗುರುತು ಸಿಕ್ಕಿತೆ'ನ್ನುವಂತೆ ನಕ್ಕ.

ಅವನನ್ನೆತ್ತಿಕೊಂಡು ವಿಶಾಲಾಕ್ಷಿ ಮುದ್ದಾಡಿದಳು. ತಾನು ಇರುವುದೇ ಅಂತಹ ಮುದ್ದಾಟಕ್ಕೆನ್ನುವಂತೆ, ಮುರಲೀಧರ ಆ ಒಲವನ್ನೆಲ್ಲ ಸ್ವೀಕರಿಸಿದ.

ಮನಸ್ಸಿನಲ್ಲೇ ಲೆಕ್ಕಹಾಕಿ ವಿಶಾಲಾಕ್ಷಿ ಅಂದಳು :

"ಒಂದೂವರೆ ವರ್ಷ ಆಗಿಹೋಯ್ತು, ಅಲ್ವೇನೇ ?"

"ಗಣಿತದಲ್ಲಿ ಯಾವತ್ತು ನಿನಗೆ ಪೂರ್ತಿ ಮಾರ್ಕು ಬಂದಿರಲಿಲ್ಲ, ಹೇಳು."

ಮುರಲಿ ಆಗಲೇ ಅತ್ತೆಯ ಕನ್ನಡಕಕ್ಕೆ ಕೈ ಹಾಕಿದ್ದ. ಅಜ್ಜನಲ್ಲಿಯೂ ಒಂದಿತ್ತು. ಇದು ಅದೇ ಇದ್ದರೂ ಇರಬಹುದು ಎಂಬ ಶಂಕೆ ಅವನಿಗೆ.

"ಮುಟ್ಟಬಾರದಪ್ಪಾ ಅದನ್ನ" ಎಂದು ತಾಯಿ ಮಗುವಿಗೆ ಆದೇಶವಿತ್ತಳು.

"ಹುಂ ?" ಎಂದು ಮುರಲಿ ಹುಬ್ಬೇರಿಸಿ ಅಬ್ಬರಿಸಿದ, ಅಂತಹ ಆಜ್ಞೆ ತನಗೆ ಅಪ್ರಿಯವೆನ್ನುವಂತೆ.

"ಕೆಟ್ಟ ಹುಡುಗ ! ಕನ್ನಡಕ ಕೊಡಲೇನೋ ನಿಂಗೆ ?" ಎಂದು, ತನ್ನ ಮುಖದಿಂದ ಕನ್ನಡಕವನ್ನು ತೆಗೆದು, ವಿಶಾಲಾಕ್ಷಿ ಅದನ್ನು ಕೈಯಲ್ಲಿ ಹಿಡಿದಳು.

ಬಾಲ್ಯದಿಂದಲೂ ತನ್ನ ಗೆಳತಿಯಾಗಿದ್ದ ವಿಶಾಲಿಯ ಮುಖವನ್ನು ಒಂದು ಕ್ಷಣ ನರ್ಮದಾ ದಿಟ್ಟಿಸಿ ನೋಡಿದಳು. ಕನ್ನಡಕ ತೆಗೆದಾಗ, ಬೆಳಕನ್ನು ಇದಿರಿಸುವುದು ತಮಗೆ ಅಭ್ಯಾಸವೇ ಇಲ್ಲವೇನೋ ಎನ್ನುವಂತೆ ಎಷ್ಟೊಂದು ಕಿರಿದಾಗಿ ಕಣ್ಣುಗಳು ಕಂಡುವು ! ಮುರಲಿಯ ಗಲ್ಲವನ್ನು ಚುಂಬಿಸಿದ್ದ ತುಟಿಗಳು ಮಾತ್ರ, ಹಿಂದಿನಂತೆ ಒಣಗಿರಲಿಲ್ಲ. ಸಾಕಷ್ಟು ಮೋಹಕವೂ ಆಗಿತ್ತು ಮುಗುಳುನಗೆ. ವಕ್ಷಸ್ಥಲವೂ ತುಂಬಿಕೊಂಡಿತ್ತು ಸ್ವಲ್ಪಮಟ್ಟಿಗೆ.

"ಅತ್ತೆಗೊಂದು ಉಮ್ಮ ಕೊಡು ಮರೀ."

ಮುರಲಿ ಬಲು ಉದಾರಿ. ಕಣ್ಣುಮುಚ್ಚಿ ವಿಶಾಲಿಯ ಮೂಗಿಗೇ ಆತ ಮುತ್ತಿಟ್ಟ. ಕಣ್ಣು ತೆರೆದು, 'ಸಾಕೇ ?' ಎನ್ನುವಂತೆ ನಕ್ಕ. ಬಾಯಲ್ಲಿ ಬೆಳ್ಳಗಿನ

ಪುಟ್ಟ ಹಲ್ಲುಗಳಿದ್ದವು ಹಲವು. ಮುರಲಿ ಹಾಗೆ ನಕ್ಕಾಗ ಲೋಕವೆಲ್ಲ ಸುಂದರವಾಗಿ ವಿಶಾಲಾಕ್ಷಿಗೆ ಕಂಡಿತು.

ಮುರಲಿಯ ಲಾಲನೆ ಪಾಲನೆಯ ಸಮಸ್ಯೆಗಳ ನೆನಪಾಗುತ್ತ ಆಕೆ ಕೇಳಿದಳು:

"ತೊಟ್ಟಿಲು ಮೇಲೆಯೇ ಇದೆ, ಅಲ್ವಾ?"

"ತೊಟ್ಟಿಲು? ಇನ್ಯಾತಕ್ಕೇ ಅದು? ಪುಟ್ಟ ಹಾಸಿಗೆ ಮೇಲೆ ಮಲಕೋ ತಾನೆ ಈಗ."

"ಹೌದೇ?....ಮಹಡಿಗೆ ಹತ್ತಿ ಸೋದು ಇಳಿಸೋದು ತೊಂದರೆ ಯಾಗೊಲ್ವಾ?"

"ಮೇಲ್ಗಡೆ ಬಾಗಿಲು ಇಡಿಸ್ಬಿಟ್ಟಿದಾರೆ ಮಾವ. ಅಲ್ಲಿ ನೋಡು, ಕೆಳಗೂ ಒಂದು ಗೇಟು."

"ಒಳ್ಳೇದಾಯ್ತು."

ಸಂವಾದಕ್ಕೆ ಕಿವಿಗೊಡುತ್ತಿದ್ದ ಮುರಲಿ, ಮಹಡಿ ಮೆಟ್ಟಿಲ ಕಡೆಗೆ ಬೊಟ್ಟು ಮಾಡುತ್ತ ಅಂದ:

"ಗೇತು, ಗೇತು."

ಮಕ್ಕಳ ಭಾಷೆಯಲ್ಲಿ ಮಾತನಾಡಲು ಯತ್ನಿಸುತ್ತ ವಿಶಾಲಿ ನುಡಿದಳು:

"ಬಬ್ಬ! ಅಂ? ಹೋಗ್ಬಾರ್ದು!"

"ಎಷ್ಟೊಂದು ಭಾರವೇ ಗುಂಡ!" ಎನ್ನುತ್ತ ಮಗುವನ್ನು ಆಕೆ ಕೆಳಕ್ಕಿಳಿಸಿದಳು.

ಮಗನ ಭಾರದ ಲೆಕ್ಕವನ್ನೂ ಒಪ್ಪಿಸಿದಳು ನರ್ಮದಾ.

"ಇಪ್ಪತ್ತಾರು ಪೌಂಡು. ಅವರಪ್ಪನ ಡಿಸ್ಪೆನ್ಸರಿ ತೋರಿಸೋಣಾಂತ ಮೊನ್ನೆ ಕರಕೊಂಡು ಹೋಗಿದ್ದೆ. ಅಲ್ಲೇ ತೂಗಿ ನೋಡಿದ್ವು. ಇನ್ನು ಮನೆಗೆ ಹೋಗೋಣ ಅಂದರೆ ಕೇಳಲೇವಲ್ಲ. 'ಮತ್ತೆ ಮಾಡು', 'ಮತ್ತೆ ಮಾಡು'–ಅಂತ. ಮತ್ತೊಮ್ಮೆ ತೂಕ ನೋಡುವ ಯಂತ್ರದ ಮೇಲಿರಿಸೋದಕ್ಕೆ. ಯಂತ್ರದ ಮುಳ್ಳು ತಿರುಗ್ತಾ ಇದ್ದರೆ, 'ಆಯ್!' ಅಂತ ಕೈತಟ್ಟಿ ಕುಣಿಯೋದು....ಡಾಕ್ಟರು ಮಾಡೋ ಕೆಲಸ ಏನು ಅನ್ನೋದೂ ಅವನಿಗೆ ಗೊತ್ತಾಗಿದೆ....ನೋಡು, ಹೇಳ್ತಾನೆ. ಅಪ್ಪಯ್ಯ ಏನ್ಮಾಡ್ತಾರೆ ಮರೀ?"

ಮಗು ಅಂದಿತು :

"ಚುಚ್ಚು!"

ವಿಶಾಲಿಯ ಜತೆ ನರ್ಮದೆಯೂ ನಕ್ಕಳು ಮಗುವಿನ ಮಾತು ಕೇಳಿ.

ಅವರನ್ನು ಮತ್ತೊಮ್ಮೆ ನಗಿಸೋಣವೆಂದು ಮಗು ಹೇಳಿತು :

"ಉಮ್ಮ! ಅಮ್ಮಸಿಗೆ ಉಮ್ಮ!"

ವಿಶಾಲಿ ಗಟ್ಟಿಯಾಗಿ ನಕ್ಕಳು. ನರ್ಮದೆಯ ಕೆನ್ನೆಗಳು ರಂಗೇರಿದುವು. "ಥೂ ನಿನ್ನ!" ಎಂದಳಾಕೆ.

ಇವರನ್ನೆಲ್ಲ ನೋಡುತ್ತ ನಿಂತಿದ್ದ ಕೆಲಸದ ಹುಡುಗಿಯೂ ಮುಸಿಮುಸಿ ನಕ್ಕಳು.

ಆಕೆಯ ಕಡೆ ನೋಡಿ, ಸ್ವರವೇರಿಸಿ, ನರ್ಮದಾ ಅಂದಳು :

"ಮಗೂನ ಎತ್ಕೊಂಡು ಹೊರಗೆ ಆಡಿಸು. ಬೀದಿ ಕಡೆ ಹೋಗ್ಬೇಡ."

ಹಿರಿಯರ ಸಹವಾಸಕ್ಕಿಂತ ಸೀತೆಯೇ ಮೇಲೆಂದು, ಆ ಹುಡುಗಿಯ ಜತೆ ಮುರಲಿ ಓಡಿದ.

ಮತ್ತೆ ಸೋಫಾದ ಮೇಲೆ ವಿಶಾಲಿ ಕುಳಿತುದು ಶ್ರೋತೃವಾಗಿ. ಹೆಚ್ಚಿನ ಮಾತೆಲ್ಲ ನರ್ಮದೆಯದೇ. ಮಗನ ಗುಣಗಾನ. ದಿನಚರಿಯ ಬಣ್ಣನೆ. 'ಅಳೋದೇ ಇಲ್ಲ ನೋಡು....' 'ಅಪ್ಪಯ್ಯ ಅಂದರಂತೂ ಬಹಳ ಇಷ್ಟ ಅವನಿಗೆ....' ['ಇವಳಿಗೂ ಶ್ರೀಕಾಂತ ಈಗ ಬಹಳ ಇಷ್ಟವೇನೋ!'] 'ತುಂಟ ಅಂದರೆ ತುಂಟ.'

ಮುರಲಿಯೇ ಸರ್ವಸ್ವ ನರ್ಮದೆಗೆ ಈಗ. ಕ್ರಮಕ್ರಮವಾಗಿ, ನಿರ್ದಿಷ್ಟವಾಗಿ, ತರ್ಕಬದ್ಧವಾಗಿ, ಅವಳು ಬದಲಾಗಿದ್ದಳು. ಎಲ್ಲಿಂದ ಎಲ್ಲಿಗೆ! ಹಿಂದಿನ ತನ್ನ ಗೆಳತಿ ಈಕೆ ಅಲ್ಲವೇ ಅಲ್ಲ. ಪುಟಕ್ಕಿಟ್ಟ ಬಂಗಾರ. ಆಗ ಒಡ್ಡುಒಡ್ಡಾಗಿತ್ತು. ಕಲ್ಮಶವಿತ್ತು. ಈಗ ಪುತ್ಥಳಿ. ಬಲು ಚಂದ!

ಭಾಗೀರಥಮ್ಮ ಇಣಿಕಿನೋಡಿ ಅಂದರು :

"ಇಬ್ಬರೂ ಊಟಕ್ಕೇಳಿ."

"ನನ್ನದು ಆಗಿದೆ ಕಣ್ರೀ, ಕಾಲೇಜಿಗೆ ಹೊರಟವಳು ಹೀಗೆಯೇ ಬಂದೆ" ಎಂದಳು ವಿಶಾಲಾಕ್ಷಿ.

"ಅರಗಿಹೋಗಿರುತ್ತೆ. ಒಂದು ತುತ್ತು ಉಣ್ಣೋದಕ್ಕೇನು?"

"ಇಲ್ಲರೀ. ಖಂಡಿತ ಬೇಡಿ."

ಗೆಳತಿಯ ಕಡೆ ತಿರುಗಿ ವಿಶಾಲಾಕ್ಷಿ ಅಂದಳು :

"ನೀನು ಊಟಮಾಡೇ."

ಭಾಗೀರಥಮ್ಮನೂ ಅಂದರು :

"ನೀನಾದರೂ ಬಾ. ಅವನು ಬರೋದು ಇನ್ನೆಷ್ಟು ತಡವಾಗುತ್ತೋ ?"

ದೃಢ ಧ್ವನಿಯಲ್ಲಿ ನರ್ಮದೆ ಅಂದಳು :

"ನನಗೆ ಹಸಿವಿಲ್ಲ ಅತ್ತೆ. ಅವರ ಜತೇಲಿ ಊಟಮಾಡ್ತೀನಿ."

ಭಾಗೀರಥಮ್ಮ ಒಳಹೋದೊಡನೆ ವಿಶಾಲಾಕ್ಷಿ ಕೇಳಿದಳು :

"ಮುರಲೀದು ಊಟ ಆಯ್ತಾ ?"

"ಹತ್ತು ಗಂಟೆಗೇ ಆಯ್ತು. ಇನ್ನು ಅಪ್ಪಯ್ಯನ ಜತೆ ಪುನಃ ಕೂತ್ಕೋ ತಾನೆ. ಆಮೇಲೆ ನಿದ್ದೆ."

ಆಪ್ತರು ಪರಿಚಿತರಿಗೆ ಸಂಬಂಧಿಸಿಯೂ ಒಂದೆರಡು ಮಾತುಗಳಾದುವು.

....'ನಿಮ್ಮಣ್ಣನಿಂದ ಕಾಗದ ಬಂತೆ ?' 'ಮೈನಾವತಿ ಬರೆದಿದ್ದಳು ಕಣೇ. ಪುನಃ ಬಸುರಿಯಂತೆ. ಈ ಸಲ ಹೆಣ್ಣು ಹುಟ್ಟಲಿ ; ನನ್ನ ಮಗನಿಗೆ ತಂದ್ಕೋತೀನಿ– ಅಂತ ಉತ್ತರ ಹಾಕಿದೀನಿ. ಒಳ್ಳೇ ಹೆಸರಿಡು ; ಇಲ್ಲದೇ ಹೋದರೆ ಇಲ್ಲಿ ಬದಲಾಯಿಸ್ಬಿಡ್ತೀನಿ ! ಅಂತಲೂ ಹೆದರಿಸಿದ್ದೀನಿ' 'ಗಿರಿಜಾಬಾಯಿ ಚೆನ್ನಾಗಿ ದಾರಾ ?' 'ಈ ಸಲ ಮೈನಾ ಹೆರಿಗೆಗೆ ತವರಿಗೆ ಬರಲಾರಳು'....

ಭಾಗೀರಥಮ್ಮ ನಿಂಬೆಹಣ್ಣಿನ ಪಾನಕವನ್ನೂ ಎರಡು ಕಿತ್ತಳೆಹಣ್ಣುಗಳನ್ನೂ ತಂದುಕೊಟ್ಟರು–ವಿಶಾಲಿಗೋಸ್ಕರ. ಆಕೆ ಪಾನಕ ಕುಡಿದಳು. ಹಣ್ಣು ತಿನ್ನಲು ನರ್ಮದೆಯೂ ನೆರವಾದಳು.

ತಂದಿದ್ದ ಕಟ್ಟನ್ನು ವಿಶಾಲಿ ಮರೆತಿದ್ದಳು ಎಂದಲ್ಲ. ಆದರೆ, ಹೇಗೆ ಆ ವಿಷಯವೆತ್ತಬೇಕು ? ಒಂದು ಬಗೆಯ ಸಂಕೋಚ, 'ಇನ್ನೊಮ್ಮೆ ತೋರಿಸಿದ ರಾಯ್ತು' ಎನ್ನುವವರೆಗೂ.

ನರ್ಮದೆಯಾದರೂ ಎಷ್ಟುರತನಕ ಕುತೂಹಲವನ್ನು ತಡೆ ಹಿಡಿಯಬಲ್ಲಳು ? ಆಕೆ ಕೇಳಿಯೇಬಿಟ್ಟಳು :

ಗಾಂಭೀರ್ಯವನ್ನು ಉಳಿಸಿಕೊಳ್ಳಲು ವ್ಯರ್ಥಯತ್ನಮಾಡುತ್ತಾ ವಿಶಾಲಿ ಅಂದಳು :

"ಅದೇನೇ ಕಟ್ಟು? ಯಾರಾದಾದರೂ ಮದುವೆ ಇದೆಯಾ? ಉಡುಗೊರೆ ಇದ್ದ ಹಾಗಿದೆ."

"ಇಲ್ಲವೇ! ಯಾವುದೋ ಒಂದು ಲೇಖನ. ನನ್ನದು ಕಣೇ."

"ನಿನ್ನದು? ಅದೇನೇ? ನೋಟ್ಸಾ?"

"ಅಲ್ಲವಮ್ಮ. ಲೇಖನ."

ವಿಶಾಲಿ ಕಟ್ಟು ಬಿಚ್ಚಿದಳು.

"ಪ್ರಬುದ್ಧ ಕರ್ಣಾಟಕ. ನನ್ನದೊಂದು ಲೇಖನ ಇದರಲ್ಲಿ ಅಚ್ಚಾಗಿದೆ."

ಗವಿಯ ಆಳದಲ್ಲೆಲ್ಲೋ ಹುದುಗಿದ್ದ ಅಸೂಯೆಯ ಕಿಡಿಯೊಂದು ಮೇಲಕ್ಕೆ ಹಾರಲು ಯತ್ನಿಸಿತು. ಆದರೆ, ಹೊರಬರಲಾರದೆ, ಕಳೆಗುಂದಿ, ಬೂದಿಯಾಯಿತು.

"ಭೇಷ್! ಗ್ರಂಥಕರ್ತೆಯಾದೆಯಲ್ಲೇ!"

"ಗ್ರಂಥ ಎಲ್ಬಂತು? ಏನೋ ನಾಲ್ಕು ಸಾಲು ಗೀಚಿದೆ, ಅಷ್ಟೆ."

ಲೇಖನದೊಂದು ಪ್ರತಿಯ ಬಿಳಿಯ ಹಾಳೆಯ ಮೇಲೆ, 'ಗೆಳತಿ ನರ್ಮದೆಗೆ–ಪ್ರೀತಿಪೂರ್ವಕ' ಎಂದು ಬರೆದು, ತನ್ನ ಸಹಿಹಾಕಿ, ಆಕೆಗೆ ಅದನ್ನು ವಿಶಾಲಾಕ್ಷಿ ಕೊಟ್ಟಳು.

"ಇಂಥಾದ್ದು ಇಪ್ಪತ್ತೈದು ಕಳಿಸಿದಾರೆ. ಮೊದಲನೇ ಪ್ರತಿ ನಿನಗೆ–ತಗೊಳೇ."

ಹೃತ್ಪೂರ್ವಕವಾಗಿಯೇ ನರ್ಮದೆ ನುಡಿದಳು:

"ಥ್ಯಾಂಕ್ಸ್!"

ಮುದ್ರಿತ ಸಂಚಿಕೆಯನ್ನೂ ತಿರುವಿ ನೋಡಿ ಅವಳು ಕೇಳಿದಳು:

"ಇದು ಒಂದೇನಾ ಇರೋದು?"

"ಒಂದೇ."

"ಕನ್ನಡದಲ್ಲಿ ನೀನೇ ಪ್ರಥಮ ಸ್ತ್ರೀ ಲೇಖಿಕೆ ಅನ್ನು."

"ಇಲ್ಲವಮ್ಮ! ಬೇಕಾದಷ್ಟು ಜನ ಇದಾರೆ. ಕೆಲವರಂತೂ ಬಹಳ ಚೆನ್ನಾಗಿ ಬರೀತಾರೆ."

"ಹೌದೆ? ನಾನೂ ಓದಿ ನೋಡ್ಬೇಕು. ಇಂಗ್ಲಿಷ್ ಆನರ್ಸ್ ತಗೊಂಡದ್ದ ರಿಂದ ಕನ್ನಡದ ಸಂಪರ್ಕವೇ ನನಗಿಲ್ಲ."

"ನನಗೂ ಹಾಗೆಯೇ ಆಗಿತ್ತು ಕಣೇ. ಕನ್ನಡದಲ್ಲೂ ಒಳ್ಳೊಳ್ಳೇ ಪುಸ್ತಕ

ಇದೆ ಅಂತ ತೋರಿಸಿಕೊಟ್ಟೋರು ಗಿರಿಜಾಬಾಯಿ. ಈ ಲೇಖನ ನಾನು ಬರೆಯೋಕೆ ಸ್ಫೂರ್ತಿಯೂ ಅವರೇ."

ಗಿರಿಜಾಬಾಯಿ – ವಿಶಾಲಾಕ್ಷಿಯರ ಗೆಳೆತನಕ್ಕೆ ಬೌದ್ಧಿಕ ತಳಹದಿಯೂ ಒಂದಿತ್ತು. ಅದನ್ನು ಅರಿಯಲಾರದೆ, ಮೊದಲು, ಅವರಿಬ್ಬರನ್ನೂ ಬರಿದೆ ಟೀಕಿಸಿದ್ದಳು ನರ್ಮದಾ. ಆ ಇಬ್ಬರ ಗೆಳೆತನ ಅರ್ಥಪೂರ್ಣವಾಗಿ ಅವಳಿಗೆ ಕಂಡುದು ಈಗ.

"ನಿಮ್ಮ ಗಿರಿಜಾಬಾಯಿ ಬಹಳ ಒಳ್ಳೆಯವರಮ್ಮ. [ಅವರ ಒಬ್ಬನೇ ಹುಡುಗ ತೀರಿಕೊಂಡ ದುರ್ಘಟನೆ ಎಷ್ಟೊಂದು ಕರುಣಾಜನಕವಾಗಿತ್ತು!] ಅವರನ್ನೂ ಒಮ್ಮೆ ಕರಕೊಂಡು ಬಾರೇ ನಮ್ಮ ಮನೆಗೆ."

"ಆಗಲಿ, ಹೇಳ್ತೀನಿ. ಅವರಿಗೆ ಕೈತುಂಬ ಕೆಲಸ. ಬೆಳಗ್ಗೆ ಎದ್ದು ಅಡುಗೆ. ಹುಡುಗೀರು ಮೂವರನ್ನೂ ಕಾನ್ವೆಂಟಿಗೆ ಕಳಿಸಿದ್ಮೇಲೆ ಕಾಲೇಜಿಗೆ ಬರ್ತಾರೆ. ಸಾಯಂಕಾಲ ಬೇಗನೆ ಮನೆಗೆ ಹೊರಟುಹೋಗ್ತಾರೆ. ರಾತ್ರೆಯ ಅಡುಗೆ ಇದೆಯಲ್ಲ...."

"ಹೌದು, ಪಾಪ. ಅವರ ಯಜಮಾನರು [ಈ ಪದಪ್ರಯೋಗ ಖಂಡಿತ ಅನುಚಿತವಾಗಿರಲಿಲ್ಲ] ಈಗಲೂ ಬೆಂಗಳೂರಲ್ಲೇ ಇದಾರೆ, ಅಲ್ವಾ?"

"ಹೂಂ. ಇಲ್ಲಿಗೇ ವರ್ಗಮಾಡಿಸ್ಕೋಬೇಕೂಂತ ಪ್ರಯತ್ನವನ್ನೇನೋ ನಡಸಿದಾರೆ."

"ಈ ವರ್ಗದ್ದು ಬಹಳ ಕಷ್ಟವಮ್ಮ. ನಿನಗೆ ಗೊತ್ತಿಲ್ಲ? ನಮ್ಮವರಂತೂ ಕೊನೇಲಿ ರಾಜಿನಾಮೆಯನ್ನೇ ಕೊಟ್ರು."

"ಸರಕಾರಿ ಚಾಕರಿ ಅಂದರೇ ಹೀಗೆ. ಮೇಲಧಿಕಾರಿಗಳು ಹೃದಯವಿಲ್ಲದ ಕೊರಡುಗಳಾಗಿರುತ್ತಾರೆ."

ನರ್ಮದೆಗೆ ಅನಿಸಿತು: ಸಂಕೋಚಪಡುತ್ತಿದ್ದ ಪುಕ್ಕಲು ವಿಶಾಲಿಯಲ್ಲ ಈಕೆ, – ನಿರ್ದಿಷ್ಟ ಅಭಿಪ್ರಾಯಗಳಿದ್ದ ಪ್ರಬುದ್ಧೆ.

—ತನ್ನಲ್ಲಾಗಿದ್ದ ಪರಿವರ್ತನೆಯನ್ನೂ ತಾನು ಗುರುತಿಸಿರಲಿಲ್ಲವೆಂದೆ?

ಅದರ ನೆನಪಾಗಿ ನಗುಬಂತು ನರ್ಮದೆಗೆ.

ವಿಶಾಲಾಕ್ಷಿ ಕೇಳಿದಳು:

"ಯಾಕೆ ನಗ್ತಿದೀಯಾ?"

"ಹೇಗಿದ್ದವರು ಹೇಗಾದೆವ್ರೂಂತ. ಹುಡುಗಿಯರಾಗಿದ್ದಾಗ ಅದೇ ಒಂದು ತರಹೆ. ವಯಸ್ಸು ಚಿಕ್ಕದು. ಮನಸ್ಸೂ ಸ್ವಲ್ಪ ಚಿಕ್ಕದೇ!...."

ಸಣ್ಣತನದ ಈ ಆರೋಪ ತನ್ನ ಬಗೆಗಲ್ಲ ಎಂದು ವಿಶಾಲಿ ಬಲ್ಲಳು. ಗೆಳತಿಯ ಸ್ವಯಂ ವಿಮರ್ಶೆ ಸ್ವಾರಸ್ಯಕರವಾಗಿ ಅವಳಿಗೆ ಕಂಡಿತು.

ಇದ್ದಕ್ಕಿದ್ದಂತೆ ತರಗತಿಗೆ ತಡವಾಯಿತೇನೋ ಎಂದು ಗಾಬರಿಗೊಂಡು, ವಿಶಾಲಾಕ್ಷಿ ತನ್ನ ಕೈಗಡಿಯಾರವನ್ನು ನೋಡಿದಳು.

"ಬಸ್ಸು ಎಷ್ಟಕ್ಕಿದೆಯೋ ಈಗ?"

"ಹೊತ್ತಾಯ್ತೊ? ಹೊರಡ್ತೀಯಾ?"

"ಹೂಂ. ಹೂಂ."

"ಒಂದೂವರೆಗೆ 'ಒನ್–ಏ'ನೋ 'ಸಿಕ್ಸ್–ಏ'ನೋ ಸ್ಯಾನಟೋರಿಯಂ ಬಿಡುತ್ತೆ."

"ಸರಿ ಹಾಗಾದರೆ. ಬರ್‍ತೀನಿ. ಇನ್ನು ಐದು ನಿಮಿಷ ಇದೆ."

"ಪುನಃ ಯಾವತ್ತು ಭೇಟಿ?"

"ಬಿಡುವಾದಾಗ. ನೀನೂ ಒಮ್ಮೆ ಬಾರೇ ನಮ್ಮ ಮನೆ ಕಡೆಗೆ."

"ಎಲ್ಲಮ್ಮ–ಡಾಕ್ಟರಿಗಂತೂ ಪುರುಸೊತ್ತೇ ಇರೋದಿಲ್ಲ."

"ಅದು ಗೊತ್ತಿಲ್ವಾ ನಂಗೆ? ಟಾಂಗಾ ಮಾಡ್ಕೊಂಡು ಮುರಲೀ ಜತೆ ನೀನೇ ಬಂದ್ಬಿಡಂತೆ, ನಮ್ಮಲ್ಲಿಂದ ನಿಮ್ಮ ತಾಯಿ ಮನೆಗೂ ಹೋಗ್ಬಹುದು."

"ಆಗಲಿ...." ಎಂದಳು ನರ್ಮದಾ.

ಬಳಿಕ, "ತಾಳು ಒಂದ್ನಿಮಿಷ" ಎನ್ನುತ್ತ ಒಳಹೋಗಿ, ಕುಂಕುಮ ತಂದಳು. [ಅತ್ತೆ ಜ್ಞಾಪಿಸಿಕೊಡಬೇಕಾದ ಅಗತ್ಯವೇ ಇರಲಿಲ್ಲ.] ಇದ್ದುದರ ಕೆಳಗೆ ಮತ್ತೊಂದು ಬೊಟ್ಟು–ಹುಬ್ಬುಗಳ ಮಧ್ಯೆ.

"ಹೇಳ್ಬಿಡು ನಿಮ್ಮತ್ತೆಗೆ."

"ಹೂಂ."

"ನಿಮ್ಮ ಯಜಮಾನರಿಗೂ ನಮಸ್ಕಾರ ತಿಳಿಸಮ್ಮ."

"ಹೂಂ. ಹೂಂ."

ವಿಶಾಲಾಕ್ಷಿ ಹೊರಬಂದು ಕಾಲಿಗೆ ಚಪ್ಪಲಿ ಸಿಕ್ಕಿಸಿಕೊಳ್ಳುತ್ತಿದ್ದಂತೆ, ಅವಳನ್ನು ಹಿಂಬಾಲಿಸಿದ ನರ್ಮದಾ ಕರೆದಳು;

"ಸೀತಾ, ಏ ಸೀತಾ...."

ಉತ್ತರ ಬರಲಿಲ್ಲ.

"ಈ ಬಿಸಿಲಿಗೆ ಎಲ್ಹೋಗ್ಬಿಟ್ಟಿದಾಳೊ ಪಾಪನ್ನ ಕರಕೊಂಡು...."

ಅಂಗಳದ ಅಂಚಿನಲ್ಲಿ ಗುಲಾಬಿ ಗಿಡಗಳ ಸಾಲಿತ್ತು. ಗೊಂಚಲು ಗೊಂಚಲಾಗಿದ್ದುವು–ಮೊಗ್ಗುಗಳೂ ಹೂಗಳೂ. ಚೆನ್ನಾಗಿ ಅರಳಿದ್ದ ಒಂದನ್ನು ದಿಟ್ಟಿಸಿ, ಕೀಳಲೆಂದು ನರ್ಮದಾ ಕೈಚಾಚಿದಳು.

"ಬೇಡವೇ, ಯಾಕೆ ಕೀಳ್ತೀಯಾ?"

"ನಿನಗೋಸ್ಕರ ಕಣೇ, ಒಂದೇ ಒಂದು."

ಹಸುರೆಲೆಯೂ ಇದ್ದ ಉದ್ದನೆಯ ತೊಟ್ಟು. ನಾಲ್ಕೆಳೆ ಕೂದಲೆತ್ತಿ ತುರುಬಿಗೆ ಕಿರೀಟವಾಗಿ ನರ್ಮದೆಯೇ ಮುಡಿಸಿದಳು.

"ಗಂಟು ಸೊಗಸಾಗಿದೆ ವಿಶಾಲಿ. ಇಷ್ಟು ಚೆನ್ನಾಗಿ ಹಾಕ್ಕೊಳ್ಳೋಕೆ ನನಗೆ ಬರೋದೇ ಇಲ್ಲ."

"ಸರಿ, ಸರಿ! ಹೊಗಳೋದೆಲ್ಲಾ ಯಾವತ್ತು ಕಲಿತ್ಕೊಂಡೆಯೋ?"

[ಸೊಗಳಿಕೆಗೆ ಮಾರು ಹೋಗಬಾರದು. ಆದರೂ, ನರ್ಮದೆಯ ಮೆಚ್ಚುಗೆಯ ನುಡಿ ಹಿತಕರವಾಗಿತ್ತು.]

ಅಷ್ಟರಲ್ಲೆ ಮುರಲಿಯೊಡನೆ ಸೀತೆ ಬಂದಳು.

"ಕೂಗಿದಿರಾ ಅಮ್ಮಾವರೆ?"

ಹುಡುಗಿಗೆ ಉತ್ತರ ಕೊಡದೆ ನರ್ಮದಾ ಅಂದಳು:

"ಅತ್ತೆಗೆ ಟಾಟಾ ಮಾಡು ಮರೀ."

ಬಿಸಿಲಲ್ಲಿ ಬಳಲಿ ಬಂದವನಿಗೆ ಅದೊಂದು ಕೆಲಸ–ಎಂದು ಮಗು ಸುಮ್ಮನಿತ್ತು.

"ಮಾಡೋ."

ಮಗು ಗಂಭೀರವಾಗಿ "ತಾ ತಾ" ಎಂದಿತು.

ವಿಶಾಲಾಕ್ಷಿ ಮುರಲಿಯ ಕೆನ್ನೆ ಚಿವುಟಿ, ಪ್ರತಿಯಾಗಿ ತಾನೂ "ತಾ ತಾ" ಎಂದಳು.

ಕನ್ನಡಕದ ಆ ಅತ್ತೆ ಇಷ್ಟವೆನಿಸಿ, ಮಗು ಮುಗುಳುನಕ್ಕಿತು.

## ೪

ತರಗತಿಯೊಳಕ್ಕೆ ಕಾಲಿರಿಸಿದಾಗ, ಸಹಾಧ್ಯಾಯಿಗಳೆಲ್ಲ ತನ್ನನ್ನೇ ನೋಡುತ್ತಿದ್ದಂತೆ ವಿಶಾಲಾಕ್ಷಿಗೆ ಭಾಸವಾಯಿತು. ತನ್ನ ಲೇಖನವನ್ನು ಇವರೆಲ್ಲ ಆಗಲೇ ಓದಿರಬೇಕು, ಇನ್ನು ಕೀಟಲೆ ಶುರುಮಾಡಬಹುದು–ಎಂದುಕೊಂಡಳು. ಆದರೆ ವಾಸ್ತವವಾಗಿ ಹಾಗೇನೂ ಇರಲಿಲ್ಲ. ಎಂದಿನಂತೆಯೇ ಇತ್ತು ತರಗತಿ. ಕನ್ನಡ ಲೇಖನಗಳನ್ನೆಲ್ಲ ಅಷ್ಟೊಂದು ಬೇಗನೆ ಓದುವ ಆಸಕ್ತಿ ಅವರಿಗೆ ಇದ್ದರೆ ತಾನೆ?

ನರ್ಮದೆಯ ಮನೆಯಲ್ಲಿ ಅವಸರವಾಗಿ ಪುನಃ ಬಿಗಿದಿದ್ದ ಕಟ್ಟನ್ನು ಮಾತ್ರ, ವಿಶಾಲಾಕ್ಷಿ ಡೆಸ್ಕಿನ ಮೇಲಿರಿಸಲಿಲ್ಲ. 'ಏನದು?' ಎಂಬ ಪ್ರಶ್ನೆಗೆ ತುತ್ತಾಗಲು ಅವಳು ಸಿದ್ಧಳಿರಲಿಲ್ಲ.

ಪ್ರವಚನ ನಡೆಯಿತು. ನಿತ್ಯದಂತೆಯೆ ಸರಸ ಸರಣಿಯಲ್ಲಿ ಪ್ರಾಧ್ಯಾಪಕರ ವಾಗ್ಝರಿ ಹರಿಯಿತು.

['ಅವರಿಗೊಂದು ಪ್ರತಿಯನ್ನು ತಲಪಿಸುವುದು ಹೇಗೆ? ತರಗತಿಯಿಂದ ಅವರು ಹೊರಬೀಳುವಾಗ ಕೊಡಲೆ? ಈ ಪ್ರವಚನದ ಬಳಿಕ ಅವರಿಗೆ ಬಿಡುವು. ಟೆನ್ನಿಸ್ ಆಟಕ್ಕೆ ಹೋಗುವುದಕ್ಕೆ ಮುನ್ನ ತುಸು ಹೊತ್ತು ವಿರಮಿಸುವುದು ಅವರ ಅಭ್ಯಾಸ. ಇತರ ಪ್ರಾಧ್ಯಾಪಕರೂ ಹಲವಾರು ಜನರಿರುವಾಗ ಅಲ್ಲಿಗೆ ಹೋಗುವುದು ಸರಿಯಲ್ಲ. ಅಂಚೆಯ ಮೂಲಕ ಕಳುಹಿಬಿಡುವುದೇ ಮೇಲು. ಆದರೆ, 'ಕೈಯಾರೆ ಯಾಕೆ ಕೊಡಲಿಲ್ಲ?' ಎಂದು ಅವರು ಕೇಳುವುದು ಮಾತ್ರ ಖಂಡಿತ. ಏನಪ್ಪಾ ಮಾಡಲಿ? ಏನಪ್ಪಾ ಮಾಡಲಿ?....ಇವತ್ತಲ್ಲದಿದ್ದರೆ ನಾಳೆ. ನಾಳೆಕೊಟ್ಟರಾಯ್ತು. ಅವಸರವೇನೀಗ? ಕೈಸೇರಿದೊಡನೆಯೇ ಪ್ರತಿಯನ್ನೆತ್ತಿಕೊಂಡು ಬಂದ ತಾನೊಬ್ಬಳು ಹುಚ್ಚಿಯೇ ಸರಿ.']

ತರಗತಿ ಮುಗಿದು ಪ್ರಾಧ್ಯಾಪಕರೆದ್ದರು. ಅವರನ್ನು ಹಿಂಬಾಲಿಸಿದರು

ವಿದ್ಯಾರ್ಥಿಗಳು. 'ಮಹಾರಾಣೀ ಕಾಲೇಜಿಗೆ ಹೋಗಿ ಗಿರಿಜಾಬಾಯಿಗೆ ಚೀಟಿ ಕಳುಹೋಣ ಇನ್ನು' ಎಂದುಕೊಳ್ಳುತ್ತ ವಿಶಾಲಾಕ್ಷಿ ಎದ್ದಳು.

ಹೊರಬಂದು ಅಂಗಳಕ್ಕಿಳಿದರೆ, ದೂರದಲ್ಲಿ ಮರದ ಕೆಳಗೆ ನೆರಳಲ್ಲಿ ಒಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತ ನಿಂತಿದ್ದರು ಪ್ರಾಧ್ಯಾಪಕರು. ['ಸ್ವಂತದ ವೈಯಕ್ತಿಕ ಸಮಸ್ಯೆಯನ್ನು ಕುರಿತು ವಿದ್ಯಾರ್ಥಿ ಅವರೆದುರು ತೋಡಿಕೊಳ್ಳುತ್ತಿರ ಬೇಕು.'] ಆ ದಾರಿಯಾಗಿಯೇ, ಅವರನ್ನು ಹಾದೇ, ವಿಶಾಲಿ ಸಾಗಬೇಕಾಗಿತ್ತು. ಹಾಗೆ ಕಣ್ಣಿಗೆ ಬಿದ್ದಾಗ ಬರಿಯ ಮುಗುಳುನಗೆಗಳ ವಿನಿಮಯ. ಆದರೆ, ಈಗ ವಿಶಾಲಾಕ್ಷಿ ಅವರನ್ನು ಸಮೀಪಿಸುವಷ್ಟರಲ್ಲೇ, ಆ ವಿದ್ಯಾರ್ಥಿ ವಂದಿಸಿ ಹೊರಟು ಬಿಟ್ಟ. ಪ್ರಾಧ್ಯಾಪಕರು ನಡೆಯಲು ತೊಡಗಿದಂತೆಯೇ ಅವರ ಮಗ್ಗುಲಿಗೆ ಬಂದು ಬಿಟ್ಟಳು ವಿಶಾಲಾಕ್ಷಿ."

"ಹಲೋ."

ವಿಶಾಲಾಕ್ಷಿ ಮಂದಹಾಸಬೀರುತ್ತ, ಕತ್ತನ್ನು ತುಸು ಬಾಗಿಸಿ ನಮಿಸುವ ಶಾಸ್ತ್ರ ಮುಗಿಸಿದಳು.

ಪ್ರಾಧ್ಯಾಪಕರು ಇಂಗ್ಲಿಷಿನಲ್ಲಿ ಕೇಳಿದರು :

"ಮನೆಗೆ ಹೊರಟಿಯೇನು ?"

"ಹೂಂ ಸರ್."

"ಹೇಗಿದೀಯ ? ಯಾವುದೂ ಕಷ್ಟ ಅನಿಸೋದಿಲ್ಲ, ಅಲ್ವೆ ?"

"ಇಲ್ಲ ಸರ್."

"ಅಂದ ಹಾಗೆ ಮೈನಾವತಿಯಿಂದೇನಾದರೂ ಕಾಗದ ಬಂದಿದೆಯೆ ?"

"ನರ್ಮದಾಗೆ ಮೊನ್ನೆಯಷ್ಟೇ ಬರೆದಿದ್ಲು ಸರ್."

"ನರ್ಮದಾ? ಆಂ–ಆ ಮಗು....ಹುಂ....ಚೆನ್ನಾಗಿದಾಳಂತಾ ಮೈನಾವತಿ?"

[ಗೃಹರಂಗದಲ್ಲಿ ಮೈನಾ ಸಾಧಿಸಿದ್ದ ಪ್ರಗತಿಯನ್ನು ಕುರಿತು ಪ್ರಾಧ್ಯಾಪಕರಿಗೆ ಹೇಳುವಂತಿರಲಿಲ್ಲ!]

"ಹೂಂ. ಚೆನ್ನಾಗಿದಾಳೆ."

"ಒಳ್ಳೇ ಹುಡುಗಿ. ನೀನು ಕಾಗದ ಬರೆದಾಗ ನನ್ನ ಶುಭಾಶಯ ತಿಳಿಸು."

"ತಿಳಿಸ್ತೀನಿ."

ಎರಡೇ ಹೆಜ್ಜೆಗಳ ಬಳಿಕ ಅವರು ಎಡಕ್ಕೆ ಹೊರಳಬೇಕು. ಅಷ್ಟರಲ್ಲಿ, ಪೂರ್ವಾಲೋಚನೆ ಇಲ್ಲದೆಯೇ, ಕನ್ನಡದಲ್ಲಿ ವಿಶಾಲಾಕ್ಷಿ ಅಂದಳು :

"ನಾನೊಂದು ಲೇಖನ ಬರೆದಿದೀನಿ ಸರ್. ಅದನ್ನು ತೋರಿಸಬೇಕೂಂತ...."

"Yes? ಎಲ್ಲಿದೆ? ಯಾವುದು?"

ಅವಸರವಾಗಿ ಕಟ್ಟು ಬಿಚ್ಚಿ ಲೇಖನದ ಒಂದು ಪ್ರತಿಯನ್ನು ಪ್ರಾಧ್ಯಾಪಕರಿಗೆ ವಿಶಾಲಾಕ್ಷಿ ಕೊಟ್ಟಳು.

ಅವರೆಂದರು :

"ಆಗಲೇ ಅಚ್ಚಾಗಿಬಿಟ್ಟಿದೆಯೇನು? [ತನಗೆ ತಂದು ತೋರಿಸಿಯೇ ಇರಲಿಲ್ಲ.] ಅರೇ, ಇದು ಕನ್ನಡ!"

"ಹೌದು ಸರ್. ಪ್ರಬುದ್ಧ ಕರ್ಣಾಟಕದಲ್ಲಿ ಬಂದಿದೆ."

"Oh, that! ಹುಂ! [ಶೀರ್ಷಿಕೆಯ ಕಡೆಗೆ ದೃಷ್ಟಿ ಹರಿಸಿ, ರೂಢಿ ತಪ್ಪಿದ್ದ ಕನ್ನಡ ಪದಗಳನ್ನು ನಿಧಾನವಾಗಿ ಓದಿ] ಆರಿಸಿಕೊಂಡಿರೋ ವಿಷಯ ಚೆನ್ನಾಗಿದೆ. ಆದರೆ ನನಗೆ ಬೇಗ ಬೇಗನೆ ಓದೋಕೆ ಬರೋದಿಲ್ವಲ್ಲಾ! Thanks! ನೋಡ್ತೀನಿ."

ತಾವು ಎಡಕ್ಕೆ ತಿರುಗಬೇಕಾಗಿದ್ದ ಕಡೆ ಆಗಲೇ ಅವರು ನಿಂತುಬಿಟ್ಟಿದ್ದರು. ಏನೋ ಹೇಳಬೇಕೆನಿಸಿ ಅವರ ಹಣೆ ನೆರಿಗೆ ಕಟ್ಟಿತು. ಆ ನೆರಿಗೆ ಕಂಡೊಡನೆ. ಬೇಸರದ ವಿಷಯವೇ ಇರಬೇಕೆಂಬುದು ವಿಶಾಲಾಕ್ಷಿಗೆ ಸ್ಪಷ್ಟವಾಯಿತು.

ವಿದ್ಯಾರ್ಥಿನಿಯ ಮುಖವನ್ನು ದಿಟ್ಟಿಸದೆ, ಲೇಖನದ ಹಾಳೆಗಳನ್ನಷ್ಟೇ ತಿರುವುತ್ತ, ಪ್ರಾಧ್ಯಾಪಕರೆಂದರು :

"ಇಂಗ್ಲಿಷಿನಲ್ಲಿ ಯಾಕೆ ಬರೆಯಲಿಲ್ಲ ಇದನ್ನು? ಸಾಕಷ್ಟು ಅಭಿವ್ಯಕ್ತಿ–ಸಾಮರ್ಥ್ಯ ಇಲ್ಲ ಎಂತಲೆ? ಈ ಮಾತೃಭಾಷಾ ವ್ಯಾಮೋಹ ನನಗೆ ಅರ್ಥವೇ ಆಗೋದಿಲ್ಲವಪ್ಪ. ನಿನ್ನನ್ನು ಟೀಕಿಸ್ತಿದೀನಿ ಅಂತ ತಿಳ್ಕೋಬೇಡ. ಇದು ಸಾರ್ವತ್ರಿಕವಾಗಿ ಕಾಣಿಸೋ ಲಕ್ಷಣ. ನಮ್ಮ ವಿಶ್ವವಿದ್ಯಾನಿಲಯದ ಇತಿಹಾಸವನ್ನೇ ನೋಡು. ಇಂಗ್ಲಿಷ್ ಭಾಷೆಯ ಪ್ರಾಧ್ಯಾಪಕರೂಂತ ವಿಶ್ವಮಾನ್ಯರಾಗಬೇಕಾಗಿದ್ದವರು, ಉದ್ದಾನು ಕನ್ನಡ ಪಂಡಿತರೂಂತ ಹೊಗಳಿಸಿಕೊಂಡು ನಿವೃತ್ತರಾದರು, ಹೌದೇ ಅಲ್ಲವೇ ಯೋಚಿಸಿನೋಡು. ಕನ್ನಡದಲ್ಲಿ ನಾವು ಬರೀಬಾರದೂಂತ

ನಾನು ಹೇಳೋದಿಲ್ಲ. ಆದರೆ, ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿಗಳು ಇಂಗ್ಲಿಷಿನಲ್ಲಿ ಬರೆಯಲೇಬೇಕು."

ತಕ್ಷಣವೆ 'ಏನಂತೀಯಾ?' ಎಂದು ಕೇಳಿ, ಒಪ್ಪಿಗೆ ನಿರೀಕ್ಷಿಸುವವರಲ್ಲ ಆ ಪ್ರಾಧ್ಯಾಪಕರು. ಮತ್ತೂ ಅಂದರು, ಮುಗುಳುನಕ್ಕು:

"ಯೋಚಿಸಿನೋಡಿ."

ಅವರ ಕಳವಳ ವಿಶಾಲಾಕ್ಷಿಗೆ ಅರ್ಥವಾಗಲಿಲ್ಲ. ತಾನು ಮಾಡಿದುದು ತಪ್ಪೆಂದು ಒಪ್ಪುವುದಕ್ಕೂ ಅವಳು ಸಿದ್ಧಳಾಗಿರಲಿಲ್ಲ. ಆದರೆ, ಪ್ರಾಧ್ಯಾಪಕರಿಗೆ ಇದಿರಾಡುವಂತೆಯೂ ಇರಲಿಲ್ಲ.

ತಮ್ಮ ಕಟುಮಾತುಗಳಿಂದ ಆಗಿರಬಹುದಾದ ನೋವಿಗೆ ಔಷಧ ಲೇಪನ ವೆಂದು ಪ್ರಾಧ್ಯಾಪಕರೆಂದರು:

"ನೀನು ಬರೆಯೋ ಪ್ರಯತ್ನ ಮಾಡಿದೀಯಾ ಅನ್ನೋದಂತೂ ಬಹಳ ಸಂತೋಷದ ವಿಷಯ. Keep it up!"

ಮತ್ತೊಮ್ಮೆ ಮಂದಹಾಸ ಬೀರಿ, "ಗುಡ್‌ನೈಟ್" ಎಂದು, ಅವರು ಹೊರಟೇಬಿಟ್ಟರು.

ಅವರ ಕೊನೆಯಮಾತು ಆಪ್ಯಾಯಮಾನವಾಗಿತ್ತು. ವಿಶಾಲಾಕ್ಷಿಯೂ ಅಂದಳು:

"ಗುಡ್‌ನೈಟ್."

[ಬಿಸಿಲಿನ ಝಳ ಇನ್ನೂ ಇದ್ದರೇನಂತೆ? ಮಾರನೆಯ ದಿನದವರೆಗೂ ಮತ್ತೆ ಭೇಟಿ ಇಲ್ಲವೆಂದಾದರೆ, ಬೀಳ್ಕೊಡುಗೆಯ ವಂದನೆ 'ಗುಡ್‌ನೈಟ್' ಎಂದೇ.]

ಪ್ರಾಧ್ಯಾಪಕರ ಮಾತಿನ ಭರಕ್ಕೆ ವಿಶಾಲಾಕ್ಷಿಯ ಪಾದಗಳು ಬೇರುಬಿಟ್ಟಿದ್ದುವು. ಅವುಗಳನ್ನು ಕೀಳುತ್ತ ಆಕೆ ತನ್ನ ಹಾದಿ ಹಿಡಿದಳು.

....ಮಹಾರಾಣೀ ಕಾಲೇಜಿನಲ್ಲಿ ತರಗತಿಗಳು ನಡೆಯುತ್ತಿದ್ದುವು. ಆದರೂ ಅಧ್ಯಾಪಕ ವರ್ಗದ ಕೊಠಡಿಯಲ್ಲಿ, ವಿರಾಮದ ಹರಟೆಯಲ್ಲಿ ನಿರತರಾಗಿದ್ದ ಹಲವ ರಿದ್ದರು. ಹೊಸದಾಗಿ ಬಂದಿದ್ದ ಇಬ್ಬರ ಹೊರತಾಗಿ ಉಳಿದವರೆಲ್ಲ ಹಳೆಯ ಪರಿಚಿತರು—ಸ್ನೇಹಿತರು.

—"ಹಾದಿ ತಪ್ಪಿ ಬಂದ್ಬಿಟ್ಟರೇನ್ರಿ ಈಕಡೆ?"

—"ಚಟ. ಬೇಡವೆಂದರೂ ಕಾಲುಗಳು ಈ ದಿಕ್ಕಿಗೇ ತಿರುಗಿರಬೇಕು."

—"ಬೇಜಾರು ಬಂತೇನ್ರಿ ಎಂ.ಎ. ಕ್ಲಾಸು?"

—"ಅವರಿಗೇನಪ್ಪಾ–ರ್ಯಾಂಕ್‌ಬರೋರು!"

ಮೊದಲಮಾತು ಉದ್ಗಾರಗಳೆಲ್ಲ ಮುಗಿದ ಬಳಿಕ, ಶಾಂತಾದೇವಿ–ಗಣಿತ ವಿಶಾರದೆ–ವಿಶಾಲಾಕ್ಷಿಯ ಬಳಿ ಸಾರಿ, ಮುಗುಳುನಗೆಯ ಪೀಠಿಕೆಯೊಡನೆ ಅಂದರು:

"ಗಿರಿಜಾಬಾಯಿ ಬಂದಿಲ್ಲ ಕಣ್ರೀ. ಸೋಮವಾರದಿಂದಲೂ ರಜೆಯ ಮೇಲಿದಾರೆ. ಗೊತ್ತೇ ಇಲ್ವೆ ನಿಮಗೆ?"

ನೀನು ಬಂದುದು ಗಿರಿಜಾಬಾಯಿಗೋಸ್ಕರವೇ ಎನ್ನುವುದನ್ನು ಬಲ್ಲೆ–ಎಂಬ ಸೂಚ್ಯಾರ್ಥವೂ ಇತ್ತು ಆ ಧ್ವನಿಯಲ್ಲಿ.

"ಇಲ್ಲವಲ್ರೀ....ಯಾಕೆ? ಬೆಂಗಳೂರಿಗೆ ಹೋಗಿದಾರೇನು?"

"ಜ್ವರ ಅಂತ ಕಾಣುತ್ತೆ. ಲೀವ್‌ಲೆಟರಿನಲ್ಲಿ ಹಾಗಿದೆಯಪ್ಪ. ಇನ್ನು—"

ಅದನ್ನು ಕೇಳುತ್ತ ವಿಶಾಲಾಕ್ಷಿಯ ಮನಸಿನೊಳಗಾದ ಕಸಿವಿಸಿ, ಮಾತಿನ ರೂಪ ತಳೆಯಲಿಲ್ಲ. ಆ ಅಸ್ವಾಸ್ಥ್ಯಕ್ಕೆ ತಾನೇನೂ ಪ್ರಾಧಾನ್ಯ ಕೊಡುತ್ತಿಲ್ಲ ವೆನ್ನುವಂತೆ ಸುಮ್ಮನಿದ್ದು, ದುಗುಡವನ್ನು ಶಾಂತಾದೇವಿಯಿಂದ ಮರೆಮಾಚಿ; ಅವಳೆಂದಳು:

"ಇನ್ನೇನ್ರಿ ಸಮಾಚಾರ?"

"ಏನಿರುತ್ತೆ ಹೇಳಿ? ಗಡಿಯಾರದ ಮುಳ್ಳಿನ ಹಾಗೆ ಜೀವನ ಇಲ್ಲಿ ನಡೀತಿರ್‍ತದೆ."

ಮತ್ತೂ ಹೆಚ್ಚುಹೊತ್ತು ಅಲ್ಲಿರಲು ಇಷ್ಟಪಡದೆ, "ಬರ್‍ತೀನ್ರಿ" ಎಂದು, ವಿಶಾಲಾಕ್ಷಿ ಹೊರಟಳು.

ಗಿರಿಜಾಬಾಯಿಗೆ ಜ್ವರ. ವಿಶಾಲಾಕ್ಷಿಯ ಮನಸ್ಸನ್ನು ಆ ಸುದ್ದಿ ಅಲ್ಲೋಲಕಲ್ಲೋಲಗೊಳಿಸಿಬಿಟ್ಟಿತ್ತು. ಎಷ್ಟು ತೊಂದರೆಯೊ–ಪಾಪ, ಎಷ್ಟು ಕಷ್ಟವೊ....ಶಾಂತಾದೇವಿ ಹೇಳಿದಾಗಲೇ, ನೋಡಲು ತಾನು ಹೋಗಬೇಕೆಂದು ವಿಶಾಲಾಕ್ಷಿ ನಿರ್ಧರಿಸಿದ್ದಳು....

ಶಿವರಾಮಪೇಟೆಯ ಮೂಲಕ ಬೇಗಬೇಗನೆ ಆಕೆ ದೇವರಾಜ ಮಾರ್ಕೆಟಿಗೆ ನಡೆದಳು. ಮತ್ತೆ ಹತ್ತು ನಿಮಿಷಗಳಲ್ಲಿ ಕೆಸರೆಗೆ ಹೋಗುವ ಬಸ್ಸು ಬರಬೇಕು. ಬರಿಗೈಯಲ್ಲಿ ಹೋಗಬಾರದು; ನಾಲ್ಕಾರು ಕಿತ್ತಳೆಹಣ್ಣುಗಳನ್ನಾದರೂ

ಒಯ್ಯಬೇಕು–ಎನಿಸಿತು. ಆದರೆ, ಆಕೆಯಲ್ಲಿದ್ದುದು ಕೆಲವೇ ಚಿಲ್ಲರೆ ಆಣೆಗಳು. ಅಷ್ಟನ್ನೂ ಖರ್ಚುಮಾಡಿದರೆ, ಹಿಂತಿರುಗಿ ಬರುವ–ಮನೆ ತಲಪುವ–ಬಸ್ ವೆಚ್ಚಕ್ಕಾಗಿ ಗಿರಿಜಾಬಾಯಿಯನ್ನು ಕೇಳಿ ಇಸಕೊಳ್ಳಬೇಕು. ಅವರೊಳಗಿನ ಸ್ನೇಹ ಅಷ್ಟೊಂದು ಗಾಢವಾಗಿದ್ದರೂ, ಕೈಗಡ ಕೇಳುವುದು ಮಾತ್ರ ವಿಶಾಲಿಯಿಂದ ಆಗದಮಾತು. [ಗಿರಿಜಾಬಾಯಿಯನ್ನಂತೂ ಎಂದೂ ಕೇಳಿದವರಲ್ಲ.] 'ಹಾಗೆಯೇ ಹೋದರಾಯಿತು; ಹಣ್ಣು ತರಿಸಿರ್ತಾರೆ,' ಎಂದುಕೊಂಡಳು. ಸ್ವಾಭಿಮಾನವೇ ಗೆದ್ದಿತು.

ವಿಶಾಲಾಕ್ಷಿ ಬಸ್ಸಿನಲ್ಲಿ ಕುಳಿತಾಗ, ಅವಳ ಎಡಗೈಯಲ್ಲಿದ್ದ ಪ್ಯಾಕೆಟ್ಟು ಒಡತಿಯನ್ನು ನೋಡಿ ನಕ್ಕಿತು. ತನ್ನ ಹಿಂದಿನ ಸಹೋದ್ಯೋಗಿಗಳನ್ನು ಕಂಡಾಗ ಅವಳಿಗೆ ಅದರ ನೆನಪಿತ್ತು. ಆದರೆ, ಗಿರಿಜಾಬಾಯಿಯ ಅನಾರೋಗ್ಯದ ಸುದ್ದಿ ಕೇಳಿದೊಡನೆ, ಉಳಿದುದೆಲ್ಲ ಮರೆತುಹೋಗಿತ್ತು.

ಲವಲವಿಕೆಯಿಂದ ಉತ್ಸಾಹದಿಂದ ವಿಶಾಲಾಕ್ಷಿ ಮನೆ ಬಿಟ್ಟಿದ್ದಳು. ಪ್ರಾಧ್ಯಾಪಕರನ್ನು ಕಾಣುವವರೆಗೂ ಬಲಗೊಳ್ಳುತ್ತ ಹರಿದಿತ್ತು ಸಂತಸದಹೊನಲು.

ಮೊದಲು ಅವರಿಂದ ಬಂದ ಟೀಕೆ. ಅನಂತರ ಸ್ನೇಹಿತೆಯನ್ನು ಕುರಿತ ಅಶುಭವಾರ್ತೆ.

ನಿರ್ಮಲವಾಗಿದೆ ಆಕಾಶ–ಎಂದು ಅಂದಾಗಲೇ, ಮೂತಿ ತೋರುವ ಕರಿ ಮೋಡ....

ತಾನು ಇಳಿಯಬೇಕಾದ ಬಸ್‌ಸ್ಟಾಪನ್ನೆ ಇದಿರುನೋಡುತ್ತ, ವಿಷಣ್ಣವದನಳಾಗಿ ವಿಶಾಲಾಕ್ಷಿ ಕುಳಿತಳು.

೫

ಸ್ವಲ್ಪ ಸೊರಗಿದ್ದ ಗಿರಿಜಾಬಾಯಿ, ತಮ್ಮ ಮನೆ ಬಾಗಿಲಲ್ಲಿ ಗೆಳತಿಯನ್ನು ಸ್ವಾಗತಿಸಿದರು.

ಹಾಸಿಗೆಯ ಮೇಲೆ ಸ್ನೇಹಿತೆ ಮಲಗಿಯೇ ಇರಬಹುದೆಂದು ಚಿತ್ರಿಸಿ ಕೊಂಡಿದ್ದ ವಿಶಾಲಾಕ್ಷಿಗೆ, ಅವರು ಎದ್ದು ಓಡಾಡುತ್ತಿದ್ದುದನ್ನು ಕಂಡು ಆನಂದವಾಯಿತು.

"ಜ್ವರ ಬಂದಿತ್ತಂತೆ," ಎಂದು ಅವಳೆಂದಳು.

"ಬಂತು, ಹೋಯ್ತು," ಎಂದರು ಗಿರಿಜಾಬಾಯಿ, ಬಿಳುಪೇರಿದ್ದ ತುಟಿಗಳನ್ನು ತೆರೆದು ಸಣ್ಣನೆ ನಕ್ಕು.

"ಹೇಳಿ ಕಳಿಸ್ಬಾರದಾಗಿತ್ತೆ ನನಗೆ?"

"ಇವತ್ತು ನಾಳೇಲಿ ಒಂದು ಲೋಕಲ್ ಕಾರ್ಡು ಹಾಕೋಣಾಂತಿದ್ದೆ. ಅಷ್ಟರಲ್ಲೇ, ಜ್ವರವೇ ಓಡಿಹೊಯ್ತು!"

ಕಿರಿಯ ಮಗಳಾಗಲೇ ಬಂದಿದ್ದಳು. ಗಿರಿಜಾಬಾಯಿ–ವಿಶಾಲಾಕ್ಷಿಯರು ಕುಳಿತು ಆ ಮಾತು ಆಡುವುದರೊಳಗೇ, ಹಿರಿಯ ಹುಡುಗಿಯರೂ ಬಂದರು.

ದೊಡ್ಡವಳು ವಿಶಾಲಾಕ್ಷಿಗೆ ವಂದಿಸಿ ತಾಯಿಯ ಕಡೆ ನೋಡಿ ಅಂದಳು:

"ಎದ್ದು ಓಡಾಡ್ತಿದೀಯಲ್ಲಮ್ಮ! ಮಲಕೊಂಡೇ ಇದ್ದಿದ್ದರೆ ಏನಾಗ್ತಿತ್ತು?"

ಆಗಲೇ ಹಿರಿತನ ವಹಿಸಿದ್ದಳು ಮಗಳು. ಗಿರಿಜಾಬಾಯಿಯ ಮಾತೃ ಹೃದಯ ಆನಂದದಿಂದ ಅರಳಿತು. ವಿಶಾಲಾಕ್ಷಿಯ ಕಡೆಗೊಮ್ಮೆ ಮುಗುಳು ನಗೆಯ ನೋಟ ಬೀರಿ, ಅವರೆಂದರು:

"ಬೆಳಗಿಂದ ಜ್ವರ ಬಂದೇ ಇಲ್ಲ, ರಮಾ....ಓವಲ್ಟಿನ್ ಮಾಡ್ತೀಯೇನು ಒಂದಿಷ್ಟು?"

"ಹೂಂ."

ವಿಶಾಲಾಕ್ಷಿ ಕೇಳಿದಳು :

"ಒಲೆ ಹಚ್ಚಿಕೊಡ್ಲಾ, ರಮಾ ?"

ಅಮ್ಮನಿಗೆ ಜ್ವರ ಬಿಟ್ಟಿದೆಯೆಂದು ಹರ್ಷಿತಳಾದ ರಮಾ ಅಂದಳು :

"ಬೇಡ್ರೀ. ನನಗೆ ಒಲೆ ಹಚ್ಚೋಕೆ ಬರುತ್ತೆ!"

ನಾಲ್ಕು ಮಕ್ಕಳನ್ನು ಹೆತ್ತಿದ್ದ ಗಿರಿಜಾಬಾಯಿಗಿನ್ನೂ ನಾಲ್ವತ್ತು ದಾಟಿರಲಿಲ್ಲ. ನೋಡಲು ಮಾತ್ರ, ಹೆಚ್ಚು ವಯಸ್ಸಾದವರಂತೆ ಕಾಣುತ್ತಿದ್ದರು. ಆ ಭಾವನೆಗೆ ಕಾರಣವಾಗಿದ್ದುದು ಬಿಳಿಯ ತಲೆಗೂದಲು, ರಾಧಾಕೃಷ್ಣನ ಸಾವಿಗೆ ಮುನ್ನ ಒಂದು ಕೂದಲೂ ಬಿಳುಪಾಗಿರಲಿಲ್ಲ. ಆ ಬಳಿಕ, ಬಲು ಬೇಗನೆ, ಅರ್ಧಕ್ಕರ್ಧ ನರೆತಿತು.

'ಟೀಪಾಯ್'ಯ ಮೇಲೆ ವಿಶಾಲಾಕ್ಷಿ ಇರಿಸಿದ್ದ ಪ್ಯಾಕೆಟನ್ನು ಗಿರಿಜಾಬಾಯಿ ಎತ್ತಿಕೊಂಡರು. ಹಿಂದುಮುಂದು ನೋಡದೆ, ಗೆಳತಿಯ ಸಮ್ಮತಿಯನ್ನೂ ಕೇಳದೆ, ಅದನ್ನು ಬಿಚ್ಚಿದರು. ಒಳಗಿದ್ದುದನ್ನು ನೋಡಿ ಉದ್ಗರಿಸಿದರು :

"ಓ! ಬಂತೇನ್ರೀ ಲೇಖನ ?"

ವಿಶಾಲಾಕ್ಷಿಗೆ ಆದಷ್ಟೇ ಸಂತೋಷವಾಯಿತು ಅವರಿಗೂ.

ಮತ್ತೂ ಉಳಿದಿದ್ದ ಲೇಖನದ ಪ್ರತಿಯ ಮೇಲೆ, ವಿಶಾಲಿ ಬರೆದಳು:

'ಆತ್ಮೀಯರಾದ ಗಿರಿಜಾಬಾಯಿ–ಗೆ
ಪ್ರೀತಿಪೂರ್ವಕ ಕಾಣಿಕೆ.'

ಅದರ ಕೆಳಗೆ 'ವಿ' ಎಂಬ ಅಂಕಿತವಷ್ಟೇ ಸಾಕೆನಿಸಿತು.

"ಇಪ್ಪತ್ತೈದು ಕೊಟ್ಟಿದ್ದಾರೆ, ಅಲ್ವಾ? ಹಂಚಿಬಿಡಿ. ಹತ್ತಾರು ಜನ ಓದಲಿ,–" ಎಂದರು ಗಿರಿಜಾಬಾಯಿ.

"ಸರಿ, ಸರಿ! ಏನು ಮಹಾ ಅಂತ ಹಂಚೋದು ?"

"ಏನು ಮಹಾ ಅಂದರೆ? ಇಷ್ಟೊಳ್ಳೇ ಲೇಖನ ಬೇರೆ ಯಾರಾದರೂ ಬರೀಲಿ, ನೋಡೋಣ!"

"ಸುಮ್ಮನೆ ಮುಖಸ್ತುತಿ ಮಾಡ್ತೀರಾ ...."

"ಯಾರು ನಾನೇ? ಈ ಮಿತಿಮೀರಿದ ಸೌಜನ್ಯ ಬಿಟ್ಟುಬಿಡಿ ವಿಶಾಲಿ ...."

ಸ್ವಲ್ಪಹೊತ್ತಿಗೆ ಮುಂಚೆಯಷ್ಟೇ ನುಂಗಿದ್ದ ತುತ್ತು ಖಾರದ ಬಳಿಕ, ಈ ಸಿಹಿ.

"ನಮ್ಮ ಪ್ರೊಫೆಸರು ಏನಂದರು ಗೊತ್ತೆ ?"

"ಹ್ಞಾ, ಏನಂದರು ? ಅವರಿಗೆ ತೋರಿಸಿದಿರಾ ?"

"ಹೂಂ. ಇಂಗ್ಲಿಷಿನಲ್ಲಿ ಯಾಕೆ ಬರೀಲಿಲ್ಲ–ಅಂದರು. ನಮ್ಮಲ್ಲಿನ ಇಂಗ್ಲಿಷ್ ಪ್ರಾಧ್ಯಾಪಕರೆಷ್ಟೋ ಜನ...."

ವಿಶಾಲಾಕ್ಷಿ ಒಪ್ಪಿಸಿದ ವರದಿಯನ್ನು ಆಸಕ್ತಿಯಿಂದ ಗಿರಿಜಾಬಾಯಿ ಲಾಲಿಸಿದರು. ಮುಗುಳುನಗುತ್ತ ಅಸಮ್ಮತಿ ಸೂಚಕವಾಗಿ ತಲೆಯಲ್ಲಾಡಿಸಿದರು.

"ಅವರು ಬಾಣ ಎಸೆದದ್ದು ಯಾರ ಮೇಲೆ ತಿಳೀತೆ ?"

ಪ್ರಾಧ್ಯಾಪಕರು ಆ ಮಾತು ಆಡಿದಾಗ ತಿಳಿದಿರಲಿಲ್ಲ. ಆದರೆ ಈಗ, ಅದನ್ನು ಕುರಿತು ಯೋಚಿಸತೊಡಗಿದಾಗ, ಹೊಳೆಯಿತು.

"ಅವರಂದದ್ದು ದಿವಂಗತ ಬಿ. ಎಂ. ಶ್ರೀ.ಯವರ ವಿಷಯವಾಗಿ ಅಲ್ಲವೆ ?"

"ಹೌದು. ಆಮೇಲೂ ಅಷ್ಟೆ: ರಂಗಣ್ಣನವರು, ಮೂರ್ತಿರಾಯರು, ಉತ್ತರದ ಕಡೆ ಗೋಕಾಕರು–ಎಲ್ಲಾ ಇಂಗ್ಲಿಷ್ ಪ್ರಾಧ್ಯಾಪಕರು ; ಜತೆಯಲ್ಲೇ ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖರು. ಈ ಜನರ ಹಾಗೆ ನಿಮ್ಮ ಪ್ರೊಫೆಸರು ಹೆಸರಾಂತವರಲ್ಲ. ಸ್ವಲ್ಪ ಕಟುವಾಗಿ ಹೇಳೋದಾದರೆ, ಇವರ ಕೈಗೆ ಎಟಕದ ದ್ರಾಕ್ಷೆ, ಸ್ವಲ್ಪ ಹುಳಿ."

"ನೀವು ಹೇಳ್ತಿರೋದು ನಿಜ. ಮಾತೃಭಾಷೆಯ ವಿಷಯದಲ್ಲಿ ತಾತ್ಸಾರ ಸರಿಯಲ್ಲ ಅಂತ ನನಗೂ ಅನಿಸುತ್ತಪ್ಪ."

ಗಿರಿಜಾಬಾಯಿ ಸಂಚಿಕೆಯಲ್ಲಿದ್ದ ಇತರ ಲೇಖನಗಳನ್ನೂ ನೋಡಿದರು. ವಿಶಾಲಾಕ್ಷಿ ಬರೆದಿದ್ದ ಲೇಖನದ ಪುಟಗಳ ಮೇಲೆ ಒಲವಿನ ನೋಟ ಬೀರಿದರು, ಬಳಿಕ ಸಂಚಿಕೆಯನ್ನು ವಿಶಾಲಾಕ್ಷಿಯ ಕಡೆಗೆ ಸರಿಸಿದರು :

"ತಗೊಳ್ಳಿ."

"ಇಲ್ಲೇ ಇರಲಿ. ಎಲ್ಲಾ ಓದಿದ ಮೇಲೆ ಕೊಡುವಿರಂತೆ."

"ಬೇಡ. ಕಾಲೇಜಿಗೆ ಬಂದಿರುತ್ತೆ. ಸಂಚಿಕೆಯ ಒಂದು ಪ್ರತಿಯಾದರೂ ನಿಮ್ಮಲ್ಲಿ ಇರಬೇಕು."

'ಟೀಪಾಯ್'ಯ ಮೇಲಿದ್ದ ಪೇಪರಿನ ತುಂಡನ್ನು ನೋಡಿ, ಅವರು ಮುಂದುವರಿಸಿದರು :

"ಯಾರೂ ನೋಡಬಾರದೂಂತ ಮುಚ್ಚಿಕೊಂಡು ಬಂದಿರಿ, ಅಲ್ವಾ? ಅವಮಾನವಾಗುತ್ತೇನು ಹಿಡ್ಕೊಂಡು ಹೋಗೋಕೆ? ಎಲ್ಲಿ, ಕೊಡಿ–ಒಂದು ರಟ್ಟು ಹಾಕ್ಕೊಡ್ತೀನಿ."

ವಿಶಾಲಾಕ್ಷಿ ನಗುತ್ತ ಅಂದಳು :

"ಬೇಡ. ನಾನೇ ಹಾಕ್ಕೊಳ್ತೀನಿ."

ಕಟ್ಟಿ ತಂದಿದ್ದ ಕಾಗದವೇ ಅಚ್ಚುಕಟ್ಟಾದ ಹೊದಿಕೆಯಾಯಿತು ಪುಸ್ತಕಕ್ಕೆ.

ರಮಾ ಹೊರಗಿಣಿಕಿ ನೋಡಿ ಅಂದಳು :

"ನಿನಗೂ ತರಲಾ ಅಮ್ಮ?"

"ಹೂ. ಸ್ವಲ್ಪ ಸಾಕು."

ರುಚಿಕರವಾದ ಓವಲ್ಟಿನ್ನು. ಜತೆಗೆ ಬಿಸ್ಕತ್ತು.

"ಹಸಿವಾಗಿದೆ ಅಲ್ವಾ? ತಿಂಡಿ ಮಾಡೋ ಸ್ಥಿತೀಲಿಲ್ಲ ನಾನು. ಬಿಸ್ಕತ್ತು ಯಾವ ಮೂಲೆಗೆ? ಆದರೂ ತಿನ್ನಿ."

ತನ್ನನ್ನು ಕುರಿತು ಹಾಗೆ ಗಿರಿಜಾಬಾಯಿ ಅಂದಾಗ, ವಿಶಾಲಾಕ್ಷಿ ಪ್ರತಿಭಟಿಸಿದಳು :

"ಇಲ್ರೀ. ನನಗೆ ಹಸಿವಿಲ್ಲ."

"ಶಾಂತಾದೇವಿ ಕಾಫಿ ಕುಡಿಸಿದ್ರಾ?"

"ಇಲ್ಲ. ಕ್ಲಾಸಿಗೆ ಮುಂಚೆ ನರ್ಮದೆಯ ಮನೆಗೆ ಹೋಗಿದ್ದೆ. ಅಲ್ಲಿ ತಿಂಡಿಯಾಯ್ತು."

ಭಾಗೀರಥಮ್ಮ ಕೊಟ್ಟಿದ್ದ ಹಣ್ಣು ಕೂಡಾ 'ಯಾವ ಮೂಲೆಗೆ?' ಆದರೂ, ಗಿರಿಜಾಬಾಯಿಯನ್ನು ಸಮಾಧಾನಪಡಿಸಲು ಆ ಸುಳ್ಳು ಅಗತ್ಯವಾಗಿತ್ತು.

ನರ್ಮದೆಯ ಮನೆಗೆ ವಿಶಾಲಾಕ್ಷಿ ಹೋಗಿದ್ದಳೆಂಬುದಕ್ಕೆ ಹಣೆಯ ಕಿರಿಬೊಟ್ಟು ಸಾಕ್ಷಿಯಾಗಿತ್ತು. ಅದನ್ನು ಒಮ್ಮೆ ನೋಡಿ ಗಿರಿಜಾಬಾಯಿ ಅಂದರು :

"ತಾಯಿ–ಮಗು ಚೆನ್ನಾಗಿದಾರಾ?"

ಓಹೋ! ಮುರಲಿ ಮುದ್ದಾಗಿದಾನೆ."

ನರ್ಮದೆ ಹಿಂದೆ ಎಂತಹ ಹೆಣ್ಣಾಗಿದ್ದಳೆಂಬುದನ್ನು ವಿಶಾಲಾಕ್ಷಿಯ ಬಣ್ಣನೆಯಿಂದ ತಿಳಿದಿದ್ದ ಗಿರಿಜಾಬಾಯಿ ತಮ್ಮಷ್ಟಕ್ಕೇ ಮುಗುಳು ನಕ್ಕರು. ಬಣ್ಣದ ಚಿಟ್ಟೆಯಂತೆ ಕಂಡ ನರ್ಮದೆಯನ್ನು ಹಿಂದೆಯೊಮ್ಮೆ ದಸರಾ ವಸ್ತುಪ್ರದರ್ಶನದಲ್ಲಿ ಕಂಡಿದ್ದುದಿನ್ನೂ ಅವರಿಗೆ ನೆನಪಿತ್ತು. ತಾಯ್ತನದ ಫಲವಾಗಿ ಅವಳಲ್ಲಾದ ಅಪೂರ್ವ ಬದಲಾವಣೆಯ ವಿಷಯವನ್ನೂ ಅವರು ತಿಳಿದಿದ್ದರು. ಮುಗ್ಧ ಹೃದಯದಿಂದ ತನ್ನೆಲ್ಲ ಒಲವನ್ನೂ ಬಾಲ್ಯದ ಗೆಳತಿಗಾಗಿ ಕೊಟ್ಟಿದ್ದವಳು ವಿಶಾಲಾಕ್ಷಿ. ಪ್ರತಿಯಾಗಿ ಏನನ್ನೂ ಅಪೇಕ್ಷಿಸಿರಲಿಲ್ಲ ಎಂದೂ. ಗೆಳತಿಯ ವರ್ತನೆಯಿಂದ ಒಮ್ಮೊಮ್ಮೆ ಮನಸ್ಸು ನೊಂದಾಗಲೂ ಬೇರೊಬ್ಬರೊಡನೆ ದೂರಿಕೊಂಡಿರಲಿಲ್ಲ. ಹೀಗಿದ್ದರೂ, ಲೋಕಾನುಭವಿಯಾದ ಗಿರಿಜಾಬಾಯಿ ನರ್ಮದೆಯನ್ನು ಸರಿಯಾಗಿ ತಿಳಿದುಕೊಳ್ಳಲು ಶಕ್ತರಾಗಿದ್ದರು.

['ಈ ವಿಶಾಲಾಕ್ಷಿ ಇನ್ನೂ ಎಳೇ ಮಗುವೇ. ವಯಸ್ಸು-ಮಾತ್ರ.... ಮುರಲಿ ತನ್ನದೇ ಶಿಶುವೇನೋ ಎನ್ನುವಷ್ಟು ಇವಳಿಗೆ ಉತ್ಸಾಹ. ಒಳಗೆ ಬಯಕೆಗಳೇ ಇಲ್ಲವೆಂದೆ? ಇದ್ದರೂ ಈ ಸನ್ನಿವೇಶ? ಪರಿಹಾರ? ಪ್ರೀತಿಯ ಈ ಖಣಿಯ ಒಡೆಯನಾಗುವವನು, ಇವಳ ಕೈಹಿಡಿಯುವವನು, ನಿಜವಾಗಿಯೂ ಅದೃಷ್ಟಶಾಲಿಯೇ ಸರಿ. ಆದರೆ ಅಂಥವನು ಎಂದು ಬರುವ ? ಎಂದು ?']

"ನಿಮ್ಮನ್ನೊಮ್ಮೆ ಕರಕೊಂಡು ಬರಬೇಕೂಂತ ನರ್ಮದಾ ಹೇಳಿದಾಳೆ, ಕಣ್ರೀ.

"ಅ್ಞ ?"

[ಯಾವ ಯೋಚನೆಯಲ್ಲಿದ್ದರೊ ?]

"ಗಿರಿಜಾಬಾಯಿಯನ್ನೂ ಒಮ್ಮೆ ಕರಕೊಂಡುಬಾ ಅಂದ್ಲು ನರ್ಮದಾ."

"ಆಗಲಿ. ಅದಕ್ಕೇನಂತೆ ? ಒಂದು ದಿವಸ ಹೋಗೋಣ."

ಮನೆಯೊಳಗೆ ಮಸಕಾಯಿತು. ಕತ್ತಲು ಕವಿಯುತ್ತ ಬಂದಿತ್ತು ಹೊರಗೆ.

"ರಮಾ, ಸ್ವಿಚ್ ಹಾಕೇ."

ವಿಶಾಲಾಕ್ಷಿ ಗಡಬಡಿಸಿ ಎದ್ದಳು.

"ಹೊತ್ತಾಗ್ಹೋಯ್ತು! ಅಮ್ಮ ಹಾದಿನೋಡ್ತಾ ಇರ್ತಾರೆ."

ಗಿರಿಜಾಬಾಯಿಯೂ ಎದ್ದು, ಕ್ಯಾಲೆಂಡರಿನ ಮೊಳೆಗೆ ತೂಗಹಾಕಿದ್ದ ತಮ್ಮ ಕೈಗಡಿಯಾರದ ಕಡೆ ನೋಡಿ, ಅಂದರು:

"ಇನ್ನೂ ಹತ್ತು ನಿಮಿಷ ಇದೆ, ಬಸ್ಸು ಬರೋಕೆ. ಬಸ್‌ಸ್ಟಾಪ್‌ವರೆಗೂ ಬರ್‍ತೀನಿ."

"ಬೇಡ್ರೀ, ನಿಮಗೆ ಆಯಾಸವಾಗುತ್ತೆ."

"ಕಾಲು ಗಟ್ಟಿಯಾಗದೇ ಇದ್ರೆ ನಾಳೆ ಕಾಲೇಜಿಗೆ ಹೋದಹಾಗೆಯೇ! ನಡೆಯೋದು ಅಭ್ಯಾಸವಾಗಲಿ. ಬನ್ನಿ."

ಚಿಕ್ಕ ಹುಡುಗಿಯರಾಗಲೇ ಹಿಂದಿನ ಬಾಗಿಲಿಂದ ಹೊರಬಿದ್ದು ಪಕ್ಕದ ಮನೆ ಸೇರಿದ್ದರು, ಓರಗೆಯವರೊಡನೆ ಆಡಲೆಂದು. ರಮೆಯೊಬ್ಬಳೇ, ಮನೆಯ ಹೊರ ದೀಪವನ್ನು ಹತ್ತಿಸಿ, ವಿಶಾಲಾಕ್ಷಿಯನ್ನು ಬೀಳ್ಕೊಡಲು ಬಾಗಿಲವರೆಗೆ ಬಂದಳು.

ಬಸ್‌ಸ್ಟಾಪಿನ ಕೆಳಗೆ ಬೇರೆ ಯಾರೂ ಇರಲಿಲ್ಲ. ಬೀದಿಯೂ ಪ್ರಶಾಂತ ವಾಗಿತ್ತು. ವಿದ್ಯುದ್ದೀಪಗಳು ಆಗಲೇ ಹತ್ತಿಕೊಂಡಿದ್ದವು. ದೂರದ ಮನೆಗಳ ಸಂಜೆಯ ಕಲವರ ಕಡಮೆಯಾಗುತ್ತ ನಡೆದಿತ್ತು.

"ನಾಳೆ ಕಾಲೇಜಿಗೆ ಹೊರಟೇಬಿಡ್ತೀರಿ ಹಾಗಾದರೆ," ಎಂದಳು ವಿಶಾಲಾಕ್ಷಿ.

"ಮನೆಯಲ್ಲಿ ಕೂತೇನು ಮಾಡಲಿ? ಹಾಸಿಗೆ ಮೇಲೆ ಮಲಗಿರೋದು ಅಂದರೆ ಭಯ ನನಗೆ–ಕಾಹಿಲೆ ಎಲ್ಲಿ ಜಾಸ್ತಿಯಾಗಿಬಿಡುತ್ತೋ ಅಂತ!" ಎಂದು ನಕ್ಕರು ಗಿರಿಜಾಬಾಯಿ.

ಸಂಜೆಯ ಗಾಳಿ ತಣ್ಣನೆ ಬೀಸಿತು. ಮೋಟಾರು ಬಂದ ಸದ್ದಾಯಿತು. ಲಾರಿ ರೊಯೋಂ ಎಂದು ಬಿರುಗಾಳಿಯ ವೇಗದಿಂದ ಅದು ಹೊರಟುಹೋಯಿತು.

ಗಿರಿಜಾಬಾಯಿ ಕೇಳಿದರು :

"ನಿಮ್ಮ ತಾಯಿ ಆರೋಗ್ಯವಾಗಿದಾರೆ, ಅಲ್ವಾ ?"

"ಹೊಂ."

"ನಿಮ್ಮಣ್ಣ ಈ ವರ್ಷ ಬರ್‍ತಾರೇನು ?"

"ಆ ವಿಷಯ ಅಣ್ಣ ಬರೆದೇ ಇಲ್ಲ ನೋಡ್ರಿ....ರಜಾ ಸಿಗುತ್ತೋ ಇಲ್ವೋ........"

ಕ್ಷಣಕಾಲ ಸುಮ್ಮನಿದ್ದು ಗಿರಿಜಾಬಾಯಿ ಕೇಳಿದರು :

"ಇನ್ನೊಂದು ಯಾವತ್ತು ಬರೀತೀರಾ ?"

ಪ್ರಶ್ನೆ ಅರ್ಥವಾಗದೆ ವಿಶಾಲಾಕ್ಷಿ ಕೇಳಿದಳು ;

"ಏನು ?"

"ಇನ್ನೊಂದು ಲೇಖನ."

"ಓ ! ನೀವೂ ಸರಿ!"

"ಛೆ! ತಮಾಷೆಗೆ ಹೇಳ್ದೆ ಅಂದ್ಕೊಂಡಿರಾ? ಬೇಗನೆ ಬೇರೊಂದು ನೀವು ಬರೆಯಲೇಬೇಕು."

"ಸದ್ಯಃ ನನ್ನ ಪರೀಕ್ಷೆಯೊಮ್ಮೆ ಮುಗೀಲಿ. ಆಮೇಲೆ–ಮಾತು ಪೂರ್ಣ ವಾಗುವುದರೊಳಗೇ ಬಸ್ಸು ಬಂತು.

ಗಿರಿಜಾಯಿ ಕೇಳಿದರು:

"ಚಿಲ್ಲರೆ ಇದೆ ತಾನೆ ?"

[ಹಾಗೆ ಕೇಳುವುದಂತೂ ಅವರ ಅಭ್ಯಾಸ.]

"ಇದೆರೀ."

"ಹತ್ತಿಹಾಗಾದರೆ."

ನಿಂತ ಬಸ್ಸನ್ನು ಏರಿ ಕುಳಿತಳು ವಿಶಾಲಾಕ್ಷಿ. ವಾಹನ ಹೊರಟಿತು. ಮಂದಹಾಸ ಸೂಸುತ್ತ ಗಿರಿಜಾಬಾಯಿ ಕೈಬೀಸಿದರು.

ಕಡ್ಡಿಯಂತಹ ಕೈ. ಸೊರಗಿದ ದೇಹ. 'ಎಷ್ಟೊಂದು ಇಳಿದುಹೋಗಿ ದಾರೆ!' ಎಂದುಕೊಂಡಳು ವಿಶಾಲಿ.

"ಮಾರ್ಕೆಟಿಗೆ ಕೊಡಲಾ ?"

ಟಿಕೆಟ್ ಹರಿಯಲು ಸಿದ್ಧನಾಗಿದ್ದ ಕಂಡಕ್ಟರ್ ಸಾಹೇಬ. ಹೌದು, ಅಲ್ಲಿಗೇ. ಅಲ್ಲಿಂದ ಮನೆಯ ಕಡೆಗೆ.

.... ಕರಿಮೂತಿ ತೋರಿದ ಮೋಡ ಬೇರೆಲ್ಲಿಗೋ ತೇಲಿಹೋಗಿತ್ತು. ಮತ್ತೆ ನಿರ್ಮಲವಾಗಿತ್ತು ಆಕಾಶ.

ಈ ರಾತ್ರೆ ಇನ್ನು ಉಳಿದಿರುವ ಕೆಲಸವೇನು ?

ಊಟ–ನಿದ್ದೆ.

ಊಹೂಂ. ನಿದ್ದೆಗೆ ಮುಂಚೆ ಮಾಡಬೇಕಾದುದೊಂದಿದೆ. ಅಣ್ಣನಿಗೆ ಕಾಗದ ಬರೆವುದು. ಅದಾದಮೇಲೆಯೇ ಶಯನ.

# ೬

ಮನೆಯಲ್ಲಿ ಅಣ್ಣನ ಕಾಗದ ವಿಶಾಲಾಕ್ಷಿಗಾಗಿ ಕಾದಿತ್ತು.

"ಬೇಗನೆ ಬರಬಾರದಾಗಿತ್ತೇನೇ ಸ್ವಲ್ಪ? ಎಷ್ಟೊಂದು ತಡಮಾಡಿದೆಯೇ," ಎಂದು ನಾಗಮ್ಮ ಗೊಣಗಿದರು.

"ಗಿರಿಜಾಬಾಯೀನ ನೋಡೋಕೆ ಹೋಗಿದ್ದೆ. ಅವರಿಗೆ ಜ್ವರ ಬಂದಿತ್ತು," ಎಂದಳು ವಿಶಾಲಾಕ್ಷಿ.

"ಹಾಗೇನು?"

"ಈಗ ಸ್ವಲ್ಪ ವಾಸಿ."

"ನೋಡು. ರಾಜೂ ಕಾಗದ ಬಂದಿದೆ. ಪೋಸ್ಟಿನೋನು ಸಾಯಂಕಾಲ ತಂದ್ಕೊಟ್ಟ. ಅದೇನೇನೋ ಬರೆದಿದಾನೆ. ಸರಿಯಾಗಿ ಓದಿ ಕೂಡಾ ಹೇಳವಲ್ಲ ಚಂದ್ರು."

ಕಳವಳ, ದುಗುಡ, ಅವಸರ—ಎಲ್ಲವೂ ತುಂಬಿದ್ದ ಧ್ವನಿ. ವಿಶಾಲಾಕ್ಷಿಗೂ ತುಸು ಗಾಬರಿಯಾಯಿತು.

"ಚಂದ್ರ ಎಲ್ಲಿ?"

"ಇದೇ ಈಗ ಇಬ್ಬರೂ ಹೋದರು. ಕತ್ತಲಾಯ್ತು, ಹೋಗಬೇಡ್ರೋ— ಅಂದೆ. ನನ್ನ ಮಾತು ಯಾರು ಕೇಳ್ತಾರೆ?"

ಉಟ್ಟಿದ್ದ ಸೀರೆಯಲ್ಲೇ ಕುಳಿತು, ಕಾಗದವನ್ನು ವಿಶಾಲಾಕ್ಷಿ ಕೈಗೆತ್ತಿಕೊಂಡಳು.

ಮೊದಲು ಮನಸಿನಲ್ಲೇ ಪಠನ. ಬೇಗಬೇಗನೆ.

[ನಾಗಮ್ಮನೂ ಒಳಕ್ಕೆ ಬಂದು, ಗೋಡೆಗೊರಗಿ ಕುಳಿತೇಬಿಟ್ಟರು, ಮಗಳನ್ನೇ ದಿಟ್ಟಿಸುತ್ತ.]

ಭಿಲಾಯಿ
೬-೮-೧೯೫೬

ಪ್ರೀತಿಯ ತಂಗಿಗೆ,

ನಿನ್ನ ಕಾಗದ ಸಕಾಲದಲ್ಲೇ ಬಂತು. ಮನೆಯಲ್ಲಿ ನೀವೆಲ್ಲ ಆರೋಗ್ಯವಾಗಿದೀರೆಂದು ತಿಳಿದು ಸಂತೋಷವಾಯಿತು.

ಡ್ರಾಫ್ಟಿನ ಜತೆ ಬರೆಯಬೇಕಾಗಿದ್ದವನು ಸ್ವಲ್ಪ ಮುಂಚೆಯೇ ಆ ಕೆಲಸಕ್ಕೆ ಕುಳಿತಿದ್ದೇನೆ. ಯಾಕಿರಬಹುದು, ಹೇಳು? ಊಹೂಂ. ಊಹಿಸುವುದು ಖಂಡಿತ ನಿನ್ನಿಂದ ಸಾಧ್ಯವಾಗದು.

['ಮಹತ್ವದ್ದೇನೋ ಇದೆ. ಅಮ್ಮ ಕಕ್ಕಾವಿಕ್ಕಿಯಾಗಿರುವುದು ಇದಕ್ಕೋಸ್ಕರವೇ ಇರಬೇಕು,' ಎಂದುಕೊಂಡಳು ವಿಶಾಲಾಕ್ಷಿ.]

ನಿರ್ಮಾಣವಾಗುತ್ತಿರುವ ಈ ಬೃಹತ್ ಕಾರಖಾನೆಯ ವಿಷಯ ಹಿಂದೆಯೇ ನಿನಗೆ ಎಷ್ಟೋ ಸಾರೆ ಹೇಳಿದೇನೆ....

[ರಷ್ಯಾದೇಶದ ನೆರವು ಪಡೆದು ರಚಿತವಾಗುತ್ತಿರುವ ಉಕ್ಕಿನ ಕಾರ್ಖಾನೆ. ಪ್ರತಿಸಾರೆಯೂ ತನ್ನ ಉದ್ಯೋಗಕ್ಕೆ ಸಂಬಂಧಿಸಿ ಸ್ವಾರಸ್ಯಕರವೆನಿಸುವಂತಹದೇನನ್ನಾದರೂ ಅಣ್ಣ ತಪ್ಪದೆ ಬರೆಯುತ್ತಿದ್ದ.]

....ಈಗ, ತಾಂತ್ರಿಕ ಶಿಕ್ಷಣಕ್ಕಾಗಿ ನಮ್ಮಲ್ಲಿಂದ ಇಪ್ಪತ್ತು ಜನ ಎಂಜಿನಿಯರುಗಳನ್ನು ರಷ್ಯಾದೇಶಕ್ಕೆ ಕಳಿಸಲಿದ್ದಾರೆ. ಇವತ್ತು ಜನರಲ್ ಮ್ಯಾನೇಜರಿಂದ ನನಗೆ ಕರೆ ಬಂತು. 'ಈ ತಂಡದಲ್ಲಿ ನೀವೂ ಇರಬೇಕೂಂತ ನನ್ನ ಅಪೇಕ್ಷೆ. ಉತ್ತರಕ್ಕೆ ಒಂದು ವಾರದ ಅವಧಿಕೊಡ್ತೀನಿ. ಈ ಅವಕಾಶ ಕಳೆದುಕೊಳ್ಳಬೇಡಿ,' ಎಂದರು. ಹೊರಗೆ ಬಂದವನಿಗೆ, ಚೇತರಿಸಿಕೊಳ್ಳುವುದಕ್ಕೇ ಸ್ವಲ್ಪ ಸಮಯಬೇಕಾಯಿತು. ಈ ಶಿಕ್ಷಣದ ಅವಧಿ ಒಟ್ಟು ಆರು ತಿಂಗಳು. ಅಷ್ಟುಕಾಲ ಸಂಬಳವೂ ಇದೆ. ಪ್ರವಾಸಕ್ಕಾಗಿ ನಾವೇನೂ ವೆಚ್ಚಮಾಡಬೇಕಾಗಿಲ್ಲ. 'ಈ ಅವಕಾಶ ಕಳೆದುಕೊಳ್ಳಬೇಡಿ' ಅಂತ ಜಿ.ಎಂ. ಹೇಳಿದ್ದರಲ್ಲಿ ಅರ್ಥವಿದೆ. ಔದ್ಯೋಗೀಕರಣದ ವಿಷಯದಲ್ಲಿ ರಷ್ಯಾ ಮುಂದುವರಿದ ರಾಷ್ಟ್ರ. ಶಿಕ್ಷಣದ ದೃಷ್ಟಿಯಿಂದ ಲಾಭವಿದ್ದೇ ಇದೆ. ಮುಂದೆ

ಉದ್ಯೋಗ ಖಾಯಂ ಆಗುವುದೂ ಸುಲಭವಾಗ್ತದೆ. ಕಳೆದಸಾರೆ ನೀನು ಊರಿಗೆ ಬಂದಿದ್ದಾಗ, ವಿದೇಶ ವ್ಯಾಸಂಗದ ವಿಷಯ ಮಾತನಾಡಿದ್ದು ನೆನಪಿದೆಯೊ? ನಮ್ಮಂಥವರಿಗೆ ಅದೆಲ್ಲ ಹೇಳಿಸಿದ್ದಲ್ಲ,' ಎಂದಿದ್ದೆ ನೀನು. ಈಗ ಅನಿರೀಕ್ಷಿತವಾಗಿ ಸಂದರ್ಭ ಹೀಗೆ ರೂಪುಗೊಂಡಿದೆ. ರಷ್ಯಾದೇಶವೇನೂ ದೂರವಲ್ಲ. ಅಮ್ಮನಿಗೆ ಹೇಳು. ಇಲ್ಲಿಯೇ ಸಮೀಪ....

[ಮೊದಲು ಅರ್ಥವಾಗಲಿಲ್ಲ ವಿಶಾಲಿಗೆ. 'ಇಲ್ಲಿಯೇ ಸಮೀಪ' ಎಂದ ರೇನು? ಬಳಿಕ ಹೊಳೆಯಿತು: 'ಅಮ್ಮನಿಗೆ ಹೇಳು.']

....ಹಾ, ಹಾ–ಅನ್ನುವುದರೊಳಗೇ ಆರು ತಿಂಗಳು ಕಳೆದುಹೋಗಿರ್ತದೆ. ಅಭ್ಯಾಸಿಗಳ ತಂಡ ಹೊರಡುವುದು ಡಿಸೆಂಬರ್ ತಿಂಗಳಲ್ಲಿ. ಅದಕ್ಕೂ ಮುಂಚಿತವಾಗಿಯೊಮ್ಮೆ ಊರಿಗೆ ಬರಬಲ್ಲೆ.

ನಿನ್ನ ಅಭಿಪ್ರಾಯವೇನು? ಆ ದಿನವೇ ನಾನು ಹೇಳಿದ್ದೆ–ಮನೆಗೆ ನೀನೇ ದೊಡ್ಡವಳೂಂತ. ನೀನು ಒಪ್ಪಿಯೇ ಒಪ್ಪುತ್ತೀಯಾ ಎನ್ನುವ ಭರವಸೆ ಇದೆ. ಅಷ್ಟೇ ಅಲ್ಲ, ತಾಯಿಯನ್ನೂ ಒಪ್ಪಿಸುತ್ತೀಯಾ ಅಂತ ನಂಬಿಕೆಯೂ ಇದೆ.

ನಿನ್ನ ಅಧ್ಯಯನ ಚೆನ್ನಾಗಿಯೇ ನಡೆದಿದೆ, ಅಲ್ಲವೆ? ಚಂದ್ರ–ಜಯ ರಾಮುಗೆ ಒಲವು ತಿಳಿಸು. ಅಮ್ಮನಿಗೆ ಪ್ರಣಾಮಗಳು.

ಎಂದು ನಿನ್ನ ಪ್ರೀತಿಯ
ರಾಜು

ಮರೆತುದು:

ಜಿ. ಎಂ. ಒಂದು ವಾರದೊಳಗೆ ಉತ್ತರ ಅಪೇಕ್ಷಿಸಿದ್ದಾರೆ. ಇದು ನಿನ್ನ ಕೈಸೇರಲು ಎಂದಿನಂತೆ ನಾಲ್ಕೈದು ದಿನಗಳಾಗಬಹುದು. ನಿನಗೆ ಒಪ್ಪಿಗೆ ಎಂದು ತಿಳಿಸಿ ಒಂದು ತಂತಿ ಕೊಡುತ್ತೀಯಾ? ಅದು ಬಂದಾಗ ಮಾತ್ರ ನನ್ನ ಮನಸ್ಸಿಗೆ ನೆಮ್ಮದಿ.... —ರಾ.

ಓದಿ ಮುಗಿಸಿದ ವಿಶಾಲಾಕ್ಷಿ ಒಂದು ಕ್ಷಣ ಮೂಕಿಯಾಗಿ ಕುಳಿತಳು. ಸಮಾಜಶಾಸ್ತ್ರದಲ್ಲಿ ಹೆಚ್ಚಿನ ಅಧ್ಯಯನಕ್ಕಾಗಿ ಪರಿಚಿತೆಯೊಬ್ಬಳು ಅಮೆರಿಕಕ್ಕೆ ಹೋದಾಗ, ಆಗಾಗ್ಗೆ ಪತ್ರಿಕೆಗಳಲ್ಲಿ ಭಾವಚಿತ್ರಗಳೊಡನೆ ವಿದೇಶ ವ್ಯಾಸಂಗಗಳ ಪ್ರವಾಸದ ಸುದ್ದಿಗಳನ್ನು ಓದಿದಾಗ, ಯಾವ ಬಗೆಯಿಂದಲೂ ವಿಶಾಲಾಕ್ಷಿಗೆ ಅಚ್ಚರಿ

ಎನಿಸುತ್ತಿರಲಿಲ್ಲ. 'ದುಡ್ಡಿದೆ, ಹೋಗ್ತಾರೆ,' ಎಂದುಕೊಳ್ಳುತ್ತಿದ್ದಳು. ಅಲ್ಲವೆ, 'ವಿದ್ಯಾರ್ಥಿವೇತನ ದೊರೆತಿದೆ, ಭಾಗ್ಯವಂತರು,' ಎಂದು. ಆದರೆ ಈಗ, ಸ್ವತಃ ತನ್ನ ಅಣ್ಣನೇ ವಿದೇಶಯಾತ್ರೆ ಕೈಗೊಳ್ಳುವನೆಂದಾಗ, ವಿಶಾಲಾಕ್ಷಿ ಅಧೀರಳಾದಳು. ತನ್ನೆಲ್ಲರನ್ನು ಬಿಟ್ಟು–ಅಷ್ಟು ದೂರಕ್ಕೆ....

ಮಗಳು ಕಾಗದವನ್ನಿನ್ನೂ ಓದುತ್ತಲೇ ಇರುವಳೇನೋ ಎಂದು, ನಾಗಮ್ಮ ಮತ್ತೂ ಒಂದೆರಡು ನಿಮಿಷ ಕಾದರು. ಓದು ಆಗಲೇ ಮುಗಿಯಿತೆಂಬ ಶಂಕೆ ಮೂಡಿದಾಗ, ಕೇಳಿದರು:

"ಏನಂತೆ?"

"ಆರೋಗ್ಯವಾಗಿದಾನಂತೆ."

"ಅದ್ಸರಿ. ಕಾಗದದಲ್ಲಿ ಬೇರೆಯೂ ಏನೋ ಇದೆಯಂತಲ್ಲ."

"ರಷ್ಯಾದೇಶಕ್ಕೆ ಆರು ತಿಂಗಳಕಾಲ ಹೋಗಿಬರ್ತೀನಿ–ಅಂತ ಬರದಿದಾನೆ."

"ಅದೇ ನಾನು ಕೇಳಿದ್ದು. ಹಾಗೆಂದರೇನು? ಅದು ಯಾವ ದೇಶ? ಸಾಗರ ದಾಟಿ ಹೋಗ್ಬೇಕೆ?"

[ತಾಯಿಯ ವಿರೋಧ ಸ್ಪಷ್ಟ. ಆ ವಿರೋಧಕ್ಕೆ ತಾನೂ ಧ್ವನಿ ಕೂಡಿಸ ಬೇಕೇನು? ಅಶಿಕ್ಷಿತೆಯಾದ ತಾಯಿಯಂತೆ ತಾನೂ ಕೂಡಾ? ಆಕೆಯ ಪ್ರಪಂಚ ಚಿಕ್ಕದು. ಅವಳ ದೃಷ್ಟಿಯಲ್ಲಿ ಭಿಲಾಯಿಯೇ ಸಾವಿರ ಹರದಾರಿ ದೂರ ವಿದ್ದಂತೆ....]

ಸಾಗರ ದಾಟಿ ಹೋಗಬೇಕೆ? –ಎನ್ನುವ ಪ್ರಶ್ನೆ....

"ಇಲ್ಲವಮ್ಮ! ಸಾಗರ ದಾಟಿ ಹೋಗಬೇಕಾದ್ದಿಲ್ಲ. [ಸುಳ್ಳಲ್ಲ, ನಿಜ.] 'ರಷ್ಯಾದೇಶವೇನೂ ದೂರವಿಲ್ಲ....ಇಲ್ಲಿಯೇ ಸಮೀಪ' ಅಂತ ಬರೆದಿದಾನೆ."

"ಒಂದೂ ಬೇಡ. ಮೊದಲು ಕೆಲಸ ಬಿಟ್ಬಿಟ್ಟು ತಕ್ಷಣ ಊರಿಗೆ ವಾಪಸು ಬರಬೇಕೂಂತ ಬರಿ."

"ಡಿಸೆಂಬರ್‌ನಲ್ಲಂತೆ ರಷ್ಯಾಕ್ಕೆ ಹೋಗೋದು. ಅದಕ್ಮುಂಚೆ ಊರಿಗೆ ಬರ್ತೀನೀಂತ ಅವನೇ ಬರೆದಿದಾನೆ. ಓದಿ ಹೇಳ್ಲಾ?"

ಚಂದ್ರು ಒಮ್ಮೆ ಆತುರ ಆತುರವಾಗಿ ಓದಿ ಹೇಳಿದ್ದ. ತಾಯಿ ಆಪೇಕ್ಷೆ ಪಟ್ಟಳೆಂದು ವಿಶಾಲಾಕ್ಷಿಯೂ ಗಟ್ಟಿಯಾಗಿ ಓದತೊಡಗಿದಳು. ಓದಿದಳು– ಮುಕ್ತಾಯಕ್ಕೆ ಮುಂಚೆ ಇದ್ದ ಒಂದು ವಾಕ್ಯವೃಂದವನ್ನು ಬಿಟ್ಟು.

'ರಷ್ಯಾದೇಶವೇನೂ ದೂರವಲ್ಲ'–'ಇಲ್ಲಿಯೇ ಸಮೀಪ'....ಆ ಪದಗಳನ್ನು ವಿಶಾಲಾಕ್ಷಿ ತುಸು ಗಟ್ಟಿಯಾಗಿ ಉಚ್ಚರಿಸಿದಳು.

ಸುಳ್ಳು, ಕಾರ್ಯ ಸಾಧಿಸಿತ್ತು. ಹೆತ್ತವಳ ವಿರೋಧ ಕರಗತೊಡಗಿತ್ತು. ಆ ಮನೋಸ್ಥಿತಿಗೆ ಸಂಕೇತವಾಗಿ ನಾಗಮ್ಮ ಅಳತೊಡಗಿದರು.

ಅಳುತ್ತ, ಸೆರಗಿನ ಅಂಚಿನಿಂದ ಕಣ್ಣುಗಳನ್ನು ಒತ್ತುತ್ತ, ಪುನಃ ಅಳುತ್ತ, ಅವರೆಂದರು :

"ಆರು ತಿಂಗಳಂತೆ. ಹೆತ್ತವರ ಹೊಟ್ಟೆ ಉರಿಸೋದಕ್ಕೇ ಮಕ್ಕಳು ಇರೋದು....ರಾಜೂಗೆ ಏನೂ ಬುದ್ಧಿ ಇಲ್ಲ....ಮನೆಯ ಯೋಚನೆ ಸ್ವಲ್ಪವಾದರೂ ಬೇಡವೆ? ....ನಮಗೆ ಯಾರು ದಿಕ್ಕಿದಾರೆ ಇಲ್ಲಿ? ಊರಿಗೆ ಬರೋದರ ಬದಲು ಪ್ರವಾಸ ಹೋಗ್ತಾನಂತೆ....ಅಯ್ಯೋ!"

ತಾಯಿಯ ಸಂಕಟ ಕಂಡು ವಿಶಾಲಾಕ್ಷಿಯೂ ಒಂದು ಕ್ಷಣ ವಿವಂಚನೆಗೆ ಒಳಗಾದಳು. ಅಣ್ಣ, ತಮ್ಮೆಲ್ಲರ ಜತೆಯಲ್ಲೇ–ಇಲ್ಲೇ–ಇದ್ದರೆ ಎಷ್ಟು ಚೆನ್ನ!

ಆದರೆ ಮರುಕ್ಷಣವೇ, ಒಡಹುಟ್ಟಿದವನು ಪ್ರಖ್ಯಾತ ಎಂಜಿನಿಯರಾಗುವ ಚಿತ್ರ ತಂಗಿಯ ಕಣ್ಣೆದುರು ಕಟ್ಟಿತು. ಪತ್ರಿಕೆಯಲ್ಲಿ ಫೋಟೋ. ಬೀಳ್ಕೊಡುಗೆಯ ಸಮಾರಂಭ. ವಿಮಾನ ಮಾರ್ಗವಾಗಿ ರಷ್ಯಾದೇಶಕ್ಕೆ. ಮುಂದೆ ಖಾಯಂ ಉದ್ಯೋಗ. ಭಡ್ತಿ. ದೊಡ್ಡ ಹುದ್ದೆ. ಕೈತುಂಬ ಸಂಬಳ. ಯಾರ ಹಂಗೂ ಇಲ್ಲದ ಬದುಕು. ಬಡವರು ಎಂದು ತಮ್ಮನ್ನು ದೂರವಿಟ್ಟವರೆಲ್ಲ, ಆಗ ಹೊಟ್ಟೆಯುರಿಯಿಂದ ಕರುಬುವರು. ತಮ್ಮ ಪಾಲಿಗೆ ವಿದೇಶ ವ್ಯಾಸಂಗ ಮರೀಚಿಕೆಯೇ ಸರಿ–ಎಂದು ಹಿಂದೆ ನಂಬಿದ್ದುದು ಸುಳ್ಳಾಗುತ್ತದೆನ್ನುವ ಸಂತೋಷ....

"ಇಷ್ಟಕ್ಕೆಲ್ಲಾ ಅಳಬೇಕೆ ಅಮ್ಮ?"

"ಸುಮ್ಮನಿರೇ. ನಿನಗೆ ಒಂದೂ ಗೊತ್ತಾಗೋದಿಲ್ಲ."

ತಾಯಿಯ ದೃಷ್ಟಿಯಲ್ಲಿ ತಾನು ಯಾವಾಗಲೂ ಎಳೆಯ ಹುಡುಗಿಯೇ. ಬಯಕೆಯ ಕಲ್ಪನೆಯನ್ನು ನಿಜವೆಂದು ಸಾರುವುದೇ ಪರಿಣಾಮಕಾರಿ.

"ಆಮೇಲೆ ಅಣ್ಣನಿಗೆ ಹೆಚ್ಚು ಸಂಬಳ ಸಿಗುತ್ತಮ್ಮ."

"ಹೆಚ್ಚು ಸಂಬಳವಂತೆ. ಒಪ್ಪೊತ್ತಿನ ಊಟ ಸಿಕ್ಕರೆ ಸಾಲದೇನೊ ?"

"ದೊಡ್ಡ ಕೆಲಸ...."

"ಈ ಊರಲ್ಲಿ ಕೊಡ್ತಾರೇನು ?"

"ಭದ್ರಾವತಿಯಲ್ಲೂ ಉಕ್ಕಿನ ಕಾರ್ಖಾನೆ ಇದೆ. ಅಲ್ಲಿಗೆ ವರ್ಗಮಾಡಿಸ್ಕೋಬಹುದು. ಅದು ಬೇಡವೆಂದಾದರೆ, ಈ ಊರಲ್ಲೆ...."

"ಇಲ್ಲದ ಆಸೆ ತೋರಿಸ್ತೀಯಾ ನೀನು."

"ಸುಳ್ಳಲ್ಲವಮ್ಮ...."

ನಾಗಮ್ಮ ಕಣ್ಣೊರಸಿಕೊಂಡು, ಬೇಸರದ ಮುಖಮುದ್ರೆಯೊಡನೆ ಸುಮ್ಮನೆ ಕುಳಿತರು.

ವಿಶಾಲಾಕ್ಷಿ ಎದ್ದು ಸೀರೆ ಬದಲಾಯಿಸಿ ಬಂದಳು. ಸೋದರರ ಆಗಮನವಾಯಿತು.

ರಾತ್ರಿಯ ಅಡುಗೆಯ ನೆನಪಾಗಿ, ನಿಟ್ಟುಸಿರು ಬಿಟ್ಟು, ನಾಗಮ್ಮ ಎದ್ದರು. ಗಂಡ ತೀರಿಕೊಂಡ ಬಳಿಕ ಒಂದೇ ಹೊತ್ತು ಉಣ್ಣತೊಡಗಿದ್ದ ಅವರು ಕೇಳಿದರು:

"ಅಕ್ಕಿ ಎಷ್ಟು ಹಾಕ್ಲಿ ?"

"ಯಾವಾಗಲೂ ಎಷ್ಟು ಹಾಕ್ತೀಯೋ ಅಷ್ಟೇ ಹಾಕು."

"ಸಂಜೆ ಹುಡುಗರಿಗೆ ಉಪ್ಪಿಟ್ಟು ಮಾಡ್ಕೊಟ್ಟೆ. ನಿನ್ನ ಪಾಲು ಇರಿಸಿದೀನಿ ಬಾ."

"ನೀನು ತಗೊಂಡೆಯಾ, ಅಮ್ಮ?"

"ಹೂಂ."

....ಒಲೆಯ ಮೇಲೆ ಅನ್ನದ ತಪ್ಪಲೆ ಇತ್ತು. ನೀರು ಕಾದಿದೆಯೇ ಎಂದು ನೋಡಿ, ಬೆಂಕಿಯನ್ನು ಸರಿಪಡಿಸಿ, ನಾಗಮ್ಮ ಡಬ್ಬದ ಮುಚ್ಚಳ ತೆಗೆದು ಅಕ್ಕಿ ಅಳೆದರು. ವಿಶಾಲಾಕ್ಷಿ ತಿಂಡಿಯ ತಟ್ಟೆಯನ್ನೆತ್ತಿಕೊಂಡಳು.

ಉಪ್ಪಿಟ್ಟು ಮೆಲ್ಲುತ್ತ, ಒಲಿಸಿಕೊಳ್ಳುವ ಧ್ವನಿಯಲ್ಲಿ ವಿಶಾಲಾಕ್ಷಿ ಕೇಳಿದಳು:

"ರಾಜೂಗೆ ಏನೂಂತ ತಾರು ಕೊಡಲೇ ?"

"ತಾರು ಯಾತಕ್ಕೆ ?"

"ಹೌದು ಮತ್ತೆ. ಒಂದು ವಾರದೊಳಗೆ ಉತ್ತರ ಕೊಡಬೇಕೂಂತ ಹೇಳಿದಾರಂತಲ್ಲಾ."

"ಉತ್ತರ ?"

"ಹೂನಮ್ಮಾ. ಅದೇ–ಆರು ತಿಂಗಳು ಹೋಗಿಬರೋ ವಿಷಯ."

"ತಾರು ಬೇಡ. ಕಾಗದ ಬರಿ. ಮೊದಲು ಇಲ್ಲಿಗೆ ಬಂದುಹೋಗಲಿ."

ತಾಯಿಯ ಮನಸ್ಸನ್ನು ವ್ಯರ್ಥವಾದಿಸಿ ನೋಯಿಸುವುದು ಸರಿಯಲ್ಲವೆಂದು, ಮಗಳು ಸುಮ್ಮನಾದಳು........

ವಿಶಾಲಾಕ್ಷಿಯನ್ನು ನೋಡಿ ಲೇಖನದ ಪ್ರತಿಗಳು, 'ನಾವಿನ್ನೂ ಇಲ್ಲೇ ಇದೇವೆ' ಎಂದು ಮೇಜಿನ ಮೇಲಿಂದ ದೂರುಕೊಟ್ಟುವು. ಅವುಗಳನ್ನು ಆಕೆ ಬಿಟ್ಟುಹೋಗಿದ್ದುದೇ ಚೆಲ್ಲಾಪಿಲ್ಲಿಯಾಗಿ ಈಗ ನಾವು, ಹುಡುಗರ ಕೈತಗಲಿ, ಮತ್ತಷ್ಟು ಅಸ್ತವ್ಯಸ್ತವಾಗಿದ್ದುವು. ವಿಶಾಲಾಕ್ಷಿ ಅವನ್ನೆಲ್ಲ ಎತ್ತಿ ಒತ್ತಟ್ಟಿಗೆ ಇರಿಸುತ್ತಿದ್ದಂತೆ, ಇನ್ನೊಂದು ಮೂಲೆಯಲ್ಲಿ ಓದಿನಲ್ಲಿ ಮಗ್ನನಾಗಿದ್ದ ಜಯ, ಪುಸ್ತಕದಿಂದ ತಲೆಯೆತ್ತಿ ಕೇಳಿದ:

"ಅಕ್ಕಾ, ನೀನು ಬರೆದದ್ದಾ ಅದು ?"

"ಹೂಂ" ಎಂದಳು ಅಕ್ಕ, ಕಿರಿಯ ತಮ್ಮನ ಪ್ರಶ್ನೆಗೆ ಉತ್ತರವಾಗಿ.

"ಅದು ಕಥೆ ಅಲ್ಲ,-ಅಲ್ವಾ ?"

"ಅಲ್ಲವಪ್ಪ."

ಅದಕ್ಕೇ ಅರ್ಥವಾಗೋದಿಲ್ಲ....ಕಥೆ ಬರೆಯೋಕೆ ನಿನಗೆ ಬರೋದಿಲ್ಲ, ಅಲ್ವಾ ಅಕ್ಕಾ ?"

"ಊ ಹೂಂ."

ಹಿರಿಯವನು ಬೇರೆ ಪ್ರಶ್ನೆ ಕೇಳಿದ:

"ಅಕ್ಕಾ, ಅಣ್ಣ ರಷ್ಯಾಕ್ಕೆ ಹೋಗೋದು ನಿಜವಾ !"

"ಹೂಂ."

"ಅಮ್ಮ ಒಪ್ಪಿದಳಾ ?"

"ಒಪ್ಪದೇನುಮಾಡ್ತಾಳೆ? ನೀನೇನು ಹೇಳ್ತೀಯಾ-ಹೋಗಲಿ ಅಂತಲೊ ? ಬೇಡ ಅಂತಲೊ ?"

"ಹೋಗಲಿ-ಧಾರಾಳವಾಗಿ ಹೋಗಲಿ."

[ತುಂಬು ಒಲವಲ್ಲ. ಏಕೋದರರೊಳಗಿನ ಭ್ರಾತೃಮತ್ಸರ.]

ಜಯ ಕೇಳಿದ:

"ವಿಮಾನದಲ್ಲೇನಕ್ಕ ಪ್ರಯಾಣ ?"

ಆ ದೇಶಕ್ಕೆ ಜನ ಹೋಗುವುದು ವಿಮಾನ ಮಾರ್ಗವಾಗಿಯೇ. ಹಾಗೆಂದು ಕಿವಿಗೆ ಬಿದ್ದರೆ ತಾಯಿ ಗಾಬರಿಯಾಗಬಹುದು. ಹೀಗಾಗಿ ವಿಶಾಲಾಕ್ಷಿ ಅಂದಳು:

"ಊ ಹೂಂ. ರೈಲುಮಾರ್ಗವಾಗಿ."

ಅದು ಕಿವಿಗೆ ಬಿದ್ದ ಚಂದ್ರ ಮಾತ್ರ, ಅಪನಂಬಿಕೆಯ ನೋಟದಿಂದ ಅಕ್ಕನನ್ನು ನೋಡಿದ.

ರಷ್ಯಾ ಸಮೀಪದ ದೇಶ ಎನ್ನುವ ಸುಳ್ಳಿನ ಬುರುಡೆಗಳೆಲ್ಲ ಅಲ್ಪಾಯುಃವಾಗುವುದು ಖಂಡಿತವೆಂದು ವಿಶಾಲಾಕ್ಷಿಗೆ ಅನಿಸಿತು. ಆದರೂ, ಹೊರಡುವ ಕಾರ್ಯಕ್ರಮ ನಿಶ್ಚಯವಾಗುವವರೆಗಾದರೂ, ಆ ನಟನೆಯೇ ಸರಿ–ಎಂದು ಅವಳು ನಿರ್ಧರಿಸಿದಳು.

ಊಟಕ್ಕಿನ್ನೂ ಹೊತ್ತಿದೆಯೆಂದು, ಅಣ್ಣನಿಗೆ ಕಾಗದ ಬರೆಯಲು ವಿಶಾಲಾಕ್ಷಿ ಕುಳಿತಳು. ತಾಯ್ನುಡಿಯ ಮೇಲಿನ ಪ್ರೇಮದಿಂದಲ್ಲ–ಅಭ್ಯಾಸ ಬಲದಿಂದ, ಅಣ್ಣ ತಂಗಿಯರ ನಡುವೆ ಕನ್ನಡದಲ್ಲೇ ಪರಸ್ಪರ ಪತ್ರವ್ಯವಹಾರ ನಡೆಯುತ್ತಿತ್ತು. [ಇಂಗ್ಲಿಷಿನಲ್ಲಿ ಬರೆಯುವುದು ಇದಕ್ಕಿಂತ ಹೆಚ್ಚು ಸುಲಭ–ಎಂದು ವಿಶಾಲಾಕ್ಷಿಗೇನೂ ಅನಿಸಿರಲಿಲ್ಲ. ಅಲ್ಲದೆ, ಕನ್ನಡದಲ್ಲಿ ಬಂದುದನ್ನು–ಅಗತ್ಯವಿದ್ದಷ್ಟು ಭಾಗ–ಓದಿ ಹೇಳಿದಾಗ, ತಾಯಿಗೂ ಸಮಾಧಾನವಾಗುತ್ತಿತ್ತು.]....ಈ ದಿನ ಬಲು ದೀರ್ಘವಾಗಿ ಬರೆಯಬೇಕೆಂದುಕೊಂಡಳು. ಆದರೆ, ಪೆನ್ ಎತ್ತಿ, 'ಪ್ರೀತಿಯ ಅಣ್ಣನಿಗೆ,– ನಿನ್ನ ಕಾಗದ ತಲಪಿತು, ಎಂದು ಬರೆದ ಬಳಿಕ, ಮುಂದಿನ ವಾಕ್ಯ ಹೊಳೆಯಲೇ ಇಲ್ಲ....ಬರವಣಿಗೆ ನಿಧಾನವಾಯಿತು.

ನಾಗಮ್ಮ ಮಕ್ಕಳನ್ನು ಊಟಕ್ಕೆ ಕರೆದರು.

ಊಟ ಮುಗಿದ ಬಳಿಕ ತಮ್ಮಂದಿರ ಜತೆ ಮಾತು–ಯಾವುದೋ ಬರಿ ಹರಟೆ.

ಜಯರಾಮು, ಬೋರಲು ಮುಗಿಸಿದ್ದ ಗಡಿಯಾರವನ್ನು ಎತ್ತಿ ನೋಡಿ, ಲೆಕ್ಕಹಾಕಿ, ಅಂದ:

"ಒಂಭತ್ತೂ ನಾಲ್ವತ್ತು!"

ಚಂದ್ರ ಆಕಳಿಸಿದ. ಸೋದರರು ತಮ್ಮ ತೆಳು ಹಾಸಿಗೆಗಳನ್ನು ಸುರುಳಿ ಬಿಚ್ಚಿದರು. ಅವರಿಗೋಸ್ಕರವಾಗಿಯೇ ಅಕ್ಕ ಕೊಂಡುತಂದಿದ್ದ ಪುಟ್ಟ ಮೇಜಿನ ಮೇಲಿದ್ದ ದೀಪವನ್ನು, ಆರಿಸಿದ್ದಾಯಿತು. [ಹಿಂದೆ, ಚಂದ್ರ–ಜಯ ಚಿಕ್ಕವರಿದ್ದಾಗ, ರಂಗರಾಜ–ವಿಶಾಲಿಯರಿಗಾಗಿ ಒಂದೇ ಮೇಜಿತ್ತು, ಒಂದೇ ದೀಪ.]....

ಈ ಕಾಗದ ಬರೆದು ಮುಗಿಸಿದ ಮೇಲೆ ನಿದ್ದೆ–ಎಂದು ವಿಶಾಲಾಕ್ಷಿ ಪುನಃ ಪೆನ್ ಎತ್ತಿಕೊಂಡಳು.

ಸ್ವಲ್ಪ ಹೊತ್ತಾದ ಬಳಿಕ, ನಾಗಮ್ಮ ಇಣಿಕಿ ನೋಡಿ ಕೇಳಿದರು:

"ರಾಜೂಗೆ ಬರೀತಿದೀಯಾ?"

"ಹೂಂ."

"ಆದಷ್ಟು ಬೇಗನೆ ಬರೋದಕ್ಕೆ ಹೇಳು."

"ಹೂಂ."

"ನಾನು ಮಲಕ್ಕೋತೀನಿ ಹಾಗಾದರೆ."

ಅದಕ್ಕೂ, "ಹೂಂ."

ಯಜಮಾನರು ತೀರಿಕೊಂಡ ಬಳಿಕ, ಅವರಿಬ್ಬರ ಮಲಗುವ ಕೊಠಡಿ– ನಾಗಮ್ಮನ ಬಾಣಂತಿತನದ ಕೊಠಡಿಯೂ ಅದೇ– ಖಾಲಿ ಬಿದ್ದಿತ್ತು. ಅದೀಗ ಸಾಮಾನು ತುಂಬುವ ಕೋಣೆ. ನಡುಮನೆಯಲ್ಲಿ ನಾಗಮ್ಮ ಈಗ ಮಲಗುತ್ತಿದ್ದರು.

ದೀಪ ಆರಿಸಿ, ಬೇಗನೆ ನಿದ್ದೆ ಬರಲಪ್ಪಾ ಎಂದು ದೇವರನ್ನು ಪ್ರಾರ್ಥಿಸಿ, ತಮ್ಮ ತೆಳುಹಾಸಿಗೆಯ ಮೇಲೆ ಅವರು ಪವಡಿಸಿದರು.

ಕೊನೆಗೊಮ್ಮೆ ಪತ್ರ ಲೇಖನ ಮುಕ್ತಾಯವಾಗಿ, ಬರೆದುದನ್ನು ವಿಶಾಲಾಕ್ಷಿ ಓದಿ ನೋಡಿದಳು:

> ವಿಷಯ ತಿಳಿದು ಸಂತೋಷವಾಯಿತು. ನಾನು ಓದಿ ಮುಗಿಸಿದ ಮೇಲೆ, ತಿಳಿಸಬೇಕಾದ ಅಂಶಗಳನ್ನು ಅಮ್ಮನಿಗೂ ಓದಿ ಹೇಳಿದೆ.
>
> ಏನೆಂದು ಶುರುಮಾಡಲಿ? ಏನು ಬರೆಯಲಿ?
>
> ಮೊದಲಲ್ಲಿ ಅಭಿನಂದನೆ ಸಲ್ಲಿಸುವೆ. ಒಂದು ನಿಮಿಷವೇನೋ ದಿಗಿಲಾಯಿತು. ಆಮೇಲೆ, ನಾನೂ ನಮ್ಮಮ್ಮನ ಮಟ್ಟಕ್ಕೇ ಇಳಿದೆನಲ್ಲಾ ಎಂದು ನಾಚಿಕೆಯಾಯಿತು. ಅಂತೂ ನನ್ನಣ್ಣ ವಿದೇಶಕ್ಕೆ ಹೋಗಿ ಬರುತ್ತಾನೆ! ನನಗೆ ಎಷ್ಟೊಂದು ಹೆಮ್ಮೆ ಅನಿಸ್ತಿದೆ, ಗೊತ್ತೆ?
>
> ಅಮ್ಮ ಏನೆಂದರು ಅಂತ ಕೇಳಲೇಬೇಡ. ಅದನ್ನು ಊಹಿಸುವುದು ನಿನಗೇನೂ ಕಷ್ಟವಾಗಲಾರದು. ಹುಂ! 'ರಷ್ಯಾ ದೇಶ ದೂರವಿಲ್ಲ....ಇಲ್ಲಿಯೇ ಸಮೀಪ' ಅಂತ ಒತ್ತಿ ಹೇಳಿದೇನೆ ಎಂದಿಟ್ಟುಕೊ. ಮೈಸೂರಿನಿಂದ ಕನ್ನಂಬಾಡಿಗೆ ಹೋದಷ್ಟೆ ಸಮೀಪ–ಅಲ್ಲವೆ? ಘಾಟಿ ನೀನು! ಮುಂದೆ ನಿಜ ಸಂಗತಿ ಗೊತ್ತಾದಾಗ ನನ್ನನ್ನು ಗೋಳುಹುಯ್ತಾರೆ.

ಇವರ ಜತೆ ತಂತಿಯನ್ನೂ ಕೊಡುತ್ತೇನೆ. ಡಿಸೆಂಬರ್‌ನಲ್ಲಿ ಪ್ರಯಾಣ ಎಂದಾದರೆ, ಇಲ್ಲಿಗೆ ಯಾವತ್ತು ಬರ್‍ತೀಯಾ? ದಸರೆಗೆ? ಅಥವಾ ಆ ಗದ್ದಲ ಬೇಡವೆಂದಾದರೆ, ಆಮೇಲೆ ಬಾ. ತಕ್ಷಣ ಬರುವ ಹಾಗೆ ತಂತಿಕೊಡು ಅಂತ ಅಮ್ಮ ಹೇಳಿದಾಳೆ. ನೀನು ಮನೆಗೆ ಬಂದು ಯಜಮಾನಿಕೆ ವಹಿಸಿ ಕೊಳ್ಳಬೇಕು ಎನ್ನುವುದೊಂದೇ ಅವರ ಹಂಬಲ. ಮುಂದೆ ಅದು ಸಾಧ್ಯ ವಾಗುತ್ತದೆ ಅಂತಲೇ ಹೇಳಿಕೊಂಡು ಬಂದಿದೇನೆ.

ಅಮ್ಮನ ಆರೋಗ್ಯ ಅಷ್ಟೇನೂ ಚೆನ್ನಾಗಿಲ್ಲ. ಆದರೂ ಗಾಬರಿಯಾಗು ವಂಥದೇನೂ ಇಲ್ಲ. ನಾವು ಮೂವರೂ ವ್ಯಾಸಂಗ ನಡೆಸಿದೇವೆ. ಅಣ್ಣ ರಷ್ಯಕ್ಕೆ ಹೋಗುವುದು ವಿಮಾನದಲ್ಲಾ? – ಎಂದು ಜಯರಾಮು ಕೇಳಿದಾನೆ. ವಾಪಸು ಬರುತ್ತ ಮೈಸೂರಿಗೂ ಅದೇ ವಿಮಾನದಲ್ಲಿ ಬರಬಹುದು, ಅಲ್ಲವೆ ?!

ನೀನು ಆರೋಗ್ಯವಾಗಿದ್ದೀಯಾ ಎಂದು ನಂಬಿಕೆ. ಉತ್ತರ ಬೇಗನೆ ಬರೆ.

ಎಂದು, ಪ್ರೀತಿಯೊಂದಿಗೆ,
ವಿಶಾಲಿ.

ಸಮರ್ಪಕವಾಗಿ ಕಂಡಿತು ಕಾಗದ....

ಆದರೆ ಒಂದು ವಿಷಯ ಮರೆತೇಹೋಗಿತ್ತು!

ವಿಶಾಲಾಕ್ಷಿ ಪುನಃ ಬರೆಯತೊಡಗಿದಳು :

ಈ ಕಾಗದದ ಜತೆಯಲ್ಲೇ, ಪ್ರತ್ಯೇಕವಾಗಿ, ಬುಕ್‌ಪೋಸ್ಟ್ ಮೂಲಕ, ಒಂದು ಲೇಖನ ಕಳುಹಿಸುತ್ತೇನೆ. ಓದಿ ನೋಡಲು ಮರೆಯಬೇಡ. ಈಸಲದ 'ಪ್ರಬುದ್ಧಕರ್ಣಾಟಕ'ದಲ್ಲಿ ಅದು ಬಂದಿದೆ. ನನ್ನ ಹೆಸರಿನವರೇ ಯಾರೋ ಬರೆದಿದಾರೆ!

—ವಿ.

ಬರೆದುದನ್ನು ಕವರಿನೊಳಗೆ ಸೇರಿಸುವುದು ನಾಳೆ–ಎಂದು ವಿಶಾಲಾಕ್ಷಿ ಎದ್ದು, ಮಲಗಲು ಹಾಸಿಗೆ ಸಿದ್ಧಗೊಳಿಸಿದಳು. ಅದನ್ನು ಹಾಸುತ್ತ, ಅಣ್ಣನಿಗೆ ಕೊಡಬೇಕಾದ ತಂತಿಯ ಪದಗಳನ್ನು ಮನಸಿನಲ್ಲೆ ರೂಪಿಸಿದಳು :

'ಅಮ್ಮ–ಒಪ್ಪಿದಾಳೆ.'

ಅಷ್ಟೇಸಾಕು; ಹಾಗೆ ಬರೆಯುವುದೇ ಸರಿ....

....ದೀಪ ಆರಿಸುವುದಕ್ಕೆ ಮುನ್ನ ಅವಳು ಬಚ್ಚಲು ಮನೆಗೆ ನಡೆದಳು....

ಇನ್ನೂ ಎಚ್ಚರವಾಗಿಯೇ ಇದ್ದ ನಾಗಮ್ಮ, ಜಡವಾದ ಸ್ವರದಲ್ಲಿ ಕೇಳಿದರು:
"ಕಾಗದ ಬರೆದಾಯ್ತೇನೇ ?"
"ಹೂಂ" ಎಂದಳು ವಿಶಾಲಾಕ್ಷಿ.
"ಇನ್ನು ಹೋಗಿಮಲಕೋ."
"ಹೂಂ."

## ೭

ಅನಂತರ ಒಂದು ಭಾನುವಾರ ಬೆಳಗ್ಗೆ, ಉಪಾಹಾರದ ಬಳಿಕ, ವಿಶಾಲಾಕ್ಷಿ ಅಂಗಳಕ್ಕಿಳಿದಳು. ಆ ಕಿರುಜಾಗದಲ್ಲಿ ಕಾಸ್ಮೊಸ್ ಗಿಡಗಳು, ಮಳೆಯ ನೀರುಂಡು ಎತ್ತರಕ್ಕೆ ಬೆಳೆದು, ಸೊಗಸಾಗಿ ಹೂಬಿಟ್ಟಿದ್ದುವು. ಹಿಂದಿನ ದಿನ ಬಲವಾಗಿಯೇ ಮಳೆ ಸುರಿದಿದ್ದುದರಿಂದ, ಕೆಲ ಗಿಡಗಳು ನಡುಮುರಿದು ಕೆಳಕ್ಕೆ ಬಾಗಿದ್ದುವು; ಅಸಹಾಯವಾಗಿ ಬಿದ್ದಿದ್ದುವು. ಗೇಟಿನ ಎರಡೂ ಬದಿಗಳಲ್ಲಿ ನೆಟ್ಟಿದ್ದ ಮಲ್ಲಿಗೆ ಬಳ್ಳಿಗಳು ಮೇಲಕ್ಕೆ ಅಡರಲೆಂದು, ವಿಶಾಲಾಕ್ಷಿ ಕೋಲುಗಳನ್ನು ಹೂತಿದ್ದಳು. ಗಾಳಿಯ ರಭಸಕ್ಕೆ ಅವು ಕೂಡಾ ನೆಲಕ್ಕೆ ಒರಗಿದ್ದುವು. ಸಾಲದುದಕ್ಕೆ, ಹೂವಿನ ಗಿಡಗಳ ಕೆಳಗೆಲ್ಲಾ ಕಳೆ ಮೊಳೆತಿತ್ತು. ಸ್ನಾನಕ್ಕೆ ಮುಂಚೆ ಈ ದುಡಿಮೆಯಿಷ್ಟು ಆಗಲೆಂದು ತನ್ನ ಕಾರ್ಯಕ್ಷೇತ್ರವನ್ನು ವಿಶಾಲಾಕ್ಷಿ ಪರಾಂಬರಿಸಿದಳು.

"ಜಯ, ಟ್ವೈನ್‌ದಾರ ತಗೊಂಡು ಬಾರೋ."

"ಎಲ್ಲಿದೆ ಅಕ್ಕ? ....ಹ್ಞಾ ಹ್ಞಾ....ಗೊತ್ತು, ತರ್‍ತೀನಿ."

ಕಬ್ಬಿಣದ ಉಪಕರಣಗಳಿರಲಿಲ್ಲ. ಬರಿ ಕೈಯೇ ಮುಖ್ಯ ಸಾಧನ.

"ಒಳಗೆ ಮೊಂಡುಕತ್ತಿ ಇದೆ ನೋಡು. ಅದನ್ನೂ ತಗೊಂಡ್ಬಾ."

"ಅದೆಲ್ಲಿದೆಯೊ ?"

"ಅಮ್ಮನನ್ನು ಕೇಳು. ಕೊಡ್ತಾಳೆ."

ಅಕ್ಕ ಕೇಳಿದುದೆರಡನ್ನೂ ಜಯ ತಂದ.

"ಚಂದ್ರು ಮಾರ್ನಿಂಗ್ ಶೋಗೆ ಹೊರಟಿದಾನೆ, ನೋಡಕ್ಕ."

"ಚಾಡಿ ಹೇಳ್ತಿದೀಯೇನೊ ?" ಎನ್ನುತ್ತ ಚಂದ್ರು ಬಾಗಿಲಿಗೆ ಬಂದ. ಇಸ್ತ್ರಿ ಮಾಡಿಸಿದ್ದ ಪ್ಯಾಂಟು, ಮೇಲೆ ಬುಶ್‌ಕೋಟು. ಕಾಲುಗಳಲ್ಲಿ ಚಪ್ಪಲಿ. ತೀಡಿ

ಬಾಚಿದ್ದ ಕ್ರಾಪು ಅಂದವಾಗಿತ್ತು. ಸಾಕಷ್ಟು ಸೊಗಸುಗಾರನಾಗಿಯೇ ಕಂಡ ತಮ್ಮನನ್ನು ನೋಡಿ ವಿಶಾಲಾಕ್ಷಿ ಮುಗುಳು ನಕ್ಕಳು.

"ಯಾವುದೋ ಪಿಕ್ಚರು ?"

"ಬೆನಿಫಿಟ್ ಷೋ ಅಕ್ಕಾ. ; ಸುಬ್ಬಣ್ಣ–ನಿಮ್ಮ ನರ್ಮದೆಯ ತಮ್ಮ–ಇಲ್ವೆ ? ಅವನ ಸ್ನೇಹಿತರು ಏರ್ಪಾಟು ಮಾಡಿದಾರೆ. 'ಬ್ಲಡ್ ಅಂಡ್ ಸ್ಯಾಂಡ್' ಅಂತ."

"ನೀನೂ ಹೋಗ್ತೀಯೇನೋ ಜಯ ?"

"ಊಹೂ. ಅವರ ಬೆನಿಫಿಟ್ಟು ಅವರಿಗೇ ಇರಲಿ. ನನಗೆ ಬ್ಲಡೂ ಬೇಡ ಸ್ಯಾಂಡೂ ಬೇಡ. ಯಾರಿಗೆ ಗೊತ್ತಾಗುತ್ತಕ್ಕ ಆ ಇಂಗ್ಲೀಸು ?"

ಚಂದ್ರ ಬಾಣವೆಸೆದ:

"ಹಾಗಾದರೆ ತೆಪ್ಪಗಿರಬೇಕು. ಗೊಣಗೋದು ಯಾತಕ್ಕೆ ?"

"ಯಾರ್ರೋ ಗೊಣಗ್ದೋರು ? ಒಹೊಹೊಹೋ....! ಇವನೊಬ್ಬ ದೊಡ್ಮನುಷ್ಯ" ಎಂದು ಜಯರಾಮು ಸಿಡಿನುಡಿದ.

"ಅದೇನ್ರೋ ಗಲಾಟೆ ?" ಎಂದು ನಾಗಮ್ಮ ಒಳಗಿನಿಂದಲೇ ಕೇಳಿದರು:

ಅಕ್ಕನ ಸಾನ್ನಿಧ್ಯದಲ್ಲಿದ್ದ ಜಯರಾಮು ತಾಯಿಯ ಬಳಿಗೆ ದೂರು ಒಯ್ಯಲಿಲ್ಲ. ಚಂದ್ರ ತನ್ನ ಸೈಕಲನ್ನು ಹೊರಕ್ಕೆ ತಂದ.

"ಬರೋದು ತಡವಾಗುತ್ತೆ, ಅಕ್ಕಾ. ಊಟಕ್ಕೆ ಕಾಯ್ಬೇಡಿ" ಎಂದ.

ಅಕ್ಕನೇ ಹಿರಿಯವಳು. ಆವಳು ಮನೆಯಲ್ಲೇ ಇದ್ದ ದಿನ ತಾಯಿಗೆ ಹೇಳುವ ಅಗತ್ಯವಿರಲಿಲ್ಲ.

"ಆದಷ್ಟು ಬೇಗ್ನೆ ಬಂದ್ಬಿಡು" ಎಂದಳು ವಿಶಾಲಾಕ್ಷಿ.

ಚಂದ್ರನನ್ನು ಹೊತ್ತು ಹೊರಟ ಸೈಕಲು, ಸ್ವಲ್ಪ ಲಟಲಟ ಎಂದಿತು. ತಂದೆ ಚಿಕ್ಕವರಿದ್ದಾಗ ಕೊಂಡುದಂತೆ. ರಂಗರಾಜ ಎಂಜಿನಿಯರಿಂಗ್ ವಿದ್ಯಾರ್ಥಿಯಾದಾಗ ಅವನಿಗೆ ಕೊಟ್ಟಿದ್ದರು. ಈಗ ಅದು ಚಂದ್ರನಿಗೆ. 'ಜಯ ಕಾಲೇಜಿಗೆ ಹೋಗುವ ಹೊತ್ತಿಗೆ ಹೊಸದೇ ಕೊಳ್ಳಬೇಕಾದೀತು' ಎಂದುಕೊಂಡಳು ವಿಶಾಲಾಕ್ಷಿ.

ಕತ್ತಿಯ ಮೊನೆಯಿಂದ ನೆಲ ಅಗೆದರು. ಬಿದ್ದಿದ್ದ ಕೋಲುಗಳನ್ನು ಎತ್ತಿ ನೆಟ್ಟರು. ಆಸರೆ ತಪ್ಪಿ ಸುರುಳಿಯಾಗಿದ್ದ ಬಳ್ಳಿಗಳನ್ನು ಮೇಲಕ್ಕೆ ಹತ್ತಿಸಿ, ನೂಲಿ

ನಿಂದ ಒಂದೆರಡು ಕಡೆ ಕಟ್ಟಿದ್ದರು. ಬಿದ್ದಿದ್ದ ಕಾಸ್ಮೊಸ್ ಗಿಡಗಳನ್ನೆತ್ತಿ ನಿಲ್ಲಿಸಿ, ಸುತ್ತಲೂ ದಾರ ಬಿಗಿದರು. ಬೇರುಕಿತ್ತು ಬಂದಿದ್ದ ಕೆಲ ಗಿಡಗಳನ್ನು ಮತ್ತೆ ಮಣ್ಣಲ್ಲಿ ನೆಟ್ಟರು. ಕಳೆ ಕೀಳತೊಡಗಿದರು ಬಳಿಕ.

ವಿಶಾಲಾಕ್ಷಿಗಾಗಲೇ ಬೆವರೊಡೆಯಿತು. ಹುಬ್ಬುಗಳ ಮೇಲ್ಗಡೆ, ತುಟಿಗಳ ಮೇಲಕ್ಕೆ, ಎರಡು ಗೆರೆಗಳಾಗಿ, ಬೆವರಿನ ಹನಿಗಳು ಹವಳದ ಸರ ಕೋದುವು. ಮಣ್ಣು ಮೆತ್ತಿದ್ದ ಕೈಯಿಂದ–ಹಿಂಗೈಯಿಂದ–ಕೆದರಿದ್ದ ಮುಂಗುರುಳನ್ನು ಅವಳು ಹಿಂದಕ್ಕೆ ಸರಿಸಿದಳು. ಮಳೆ ಉಳಿಸಿಹೋಗಿದ್ದ ನೀರಿನ ತೇವವನ್ನೆಲ್ಲ ಆತುರ ದಿಂದ ಹೀರುತ್ತಿದ್ದ ಸೂರ್ಯರಶ್ಮಿ ತಗಲಿ, ಅವಳ ಕೆನ್ನೆಗಳು ಕೆಂಪಗಾದುವು.

"ನಾನೂ ಸ್ನಾನ ಮಾಡದೇನೇ ಇರಬೇಕಾಗಿತ್ತು, ಅಲ್ವಾ ಅಕ್ಕಾ ?"

—ಕೊಳೆಯಾಗಿದ್ದ ತನ್ನ ಕೈಕಾಲುಗಳನ್ನು ದಿಟ್ಟಿಸಿ ಜಯರಾಮು ಹೇಳಿದ.

"ಆಮೇಲೆ ಚೆನ್ನಾಗಿ ತೊಳಕೊಂಡರಾಯ್ತು."

ನಾಗಮ್ಮ ಅಡುಗೆ ಮನೆಯ ಕಿಟಕಿಯಿಂದ ಹೊರಗಣಿಕಿ ಅಂದರು :

"ಹಂಡೇಲಿ ನೀರು ತಣ್ಣಗಾಯ್ತಲ್ಲೇ....ಸ್ನಾನ ಮಾಡಬಾರ್ದಾ ?"

"ಆಗ್ಹೋಯ್ತಮ್ಮ, ಬಂದ್ಬಿಟ್ಟೆ."

ಎರಡು ಮೂಲೆಗಳಲ್ಲಷ್ಟೇ ಕಳೆ ಉಳಿದಿತ್ತು. ಅಷ್ಟನ್ನೂ ಕಿತ್ತು, ರಾಶಿ ಮಾಡಿ, ಹಿಂಬದಿಯ ಹಿತ್ತಿಲ ಗೋಡೆಯಾಚೆಗೆ ಎಸೆಯಬೇಕು. ಕಸಬರಿಕೆ ತಂದು ಸ್ವಚ್ಛಗೊಳಿಸಬೇಕು. ಅಷ್ಟು ಮಾಡಿದರೆ ಮುಗಿಯಿತು ಉದ್ಯಾನದ ಕೆಲಸ.

ಪ್ರತಿಯೊಂದನ್ನೂ ಕ್ರಮಬದ್ಧವಾಗಿ ಮಾಡಿ ಮುಗಿಸುವ ಯೋಚನೆ ಯೇನೋ ಪ್ರಶಂಸನೀಯವೇ. ಆದರೆ, ಕ್ರಮಬದ್ಧತೆಗೂ ಇದೆ ಒಂದು ಮಿತಿ ಮೇರೆ. ಪ್ರತಿಯೊಂದರಲ್ಲೂ ಆಕಸ್ಮಿಕದ ಅಂಶ ಎನ್ನುವುದೊಂದಿದೆ. ಅದನ್ನು ವಿಶಾಲಾಕ್ಷಿ ಪರಿಗಣಿಸಿಯೇ ಇರಲಿಲ್ಲ.

ಹನಿಗಳೊಂದುಗೂಡಿ ನೀರಧಾರೆಯಾಗಿ ಕೆನ್ನೆಗಳ ಮೇಲೆ ಹರಿಯತೊಡಗಿ ದಂತೆ, ಕಳೆಯ ರಾಶಿಯನ್ನೆತ್ತಲೆಂದು ವಿಶಾಲಾಕ್ಷಿ ಕೆಳಕ್ಕೆ ಬಾಗಿದಳು.

ಅಷ್ಟರಲ್ಲೇ ಗೇಟು ಮಿಸುಕಿದ ಸದ್ದಾಯಿತು.

ತಲೆ ಎತ್ತಿದ ವಿಶಾಲಾಕ್ಷಿಗೆ ವ್ಯಕ್ತಿಯೊಂದು ಕಣ್ಣಿಗೆ ಬಿದ್ದಂತಾಗಿ, ಕಳೆಯ ನ್ನಲ್ಲೇ ಕೆಳಕ್ಕೆ ಬಿಟ್ಟು, ಆಕೆ ಎದ್ದು ನಿಂತಳು.

ಮನೆಯ ಮುಂದೆ ನಿಂತಿದ್ದ ಯುವಕ, ಶಾಂತನಾಗಿ ಆ ದೃಶ್ಯವನು

ನೋಡಿದ. ಉದ್ಯಾನದ ಕೆಲಸದಲ್ಲಿ ತೊಡಗಿದ್ದವಳು, ಹಣೆಯ ಮೇಲಕ್ಕೆ ಬಿದ್ದಿದ್ದ ತಲೆಗೂದಲನ್ನು ಹಿಂಗೈಯಿಂದ ಹಿಂದಕ್ಕೆ ಸರಿಸಿದಳು. ಸೆರಗು ಜಾರಿತ್ತು. ಕೊಳೆಯಾಗಿದ್ದ ಕೈಯಿಂದಲೆ ಅದನ್ನು ಸರಿಪಡಿಸಿದಳು. ಮುಖವೆಲ್ಲ ಬೆವರೊಡೆದು ಕೆಂಪಡರಿತ್ತು. ಮೂಗಿನ ಮೇಲಿದ್ದ ಕನ್ನಡಕ ತುಸು ಕೆಳಕ್ಕೆ ಬಂದಿತ್ತು.

ಆಗಂತುಕ ನಗು ತಡೆಯಲಾರದೇ ಹೋದ. ಗಾಂಭೀರ್ಯದ ತೆರೆ ಸರಿದು ತುಟಿಗಳ ಮೇಲೆ ಮಂದಹಾಸ ಮೂಡಿತು.

ಒಂದು ಕ್ಷಣ ಮಾತ್ರ.

ಆ ಮುಗುಳು ನಗೆಯನ್ನು ಕಂಡಂತಾಗಿ ವಿಶಾಲಾಕ್ಷಿಯ ಕಣ್ಣಲ್ಲಿ ಕಿಡಿ ಹಾರಿತು.

ಒಂದು ಕ್ಷಣ ಮಾತ್ರ.

ಆಗಿನ ತನ್ನ ಇರುವಿಕೆಯ ಅರಿವಾಗಿ, ಅವಳೂ ನಸುನಕ್ಕಳು.

ಆದರೆ, ಯುವಕ ಅಷ್ಟರಲ್ಲೆ ಮತ್ತೆ ಗಂಭೀರನಾಗಿದ್ದ.

ಯಾರುಬೇಕು ? – ಎಂದು ಕೇಳಲು ವಿಶಾಲಾಕ್ಷಿ ಬಾಯಿ ತೆರೆಯುತ್ತಿದ್ದಂತೆಯೇ, ಪ್ರಶ್ನೆ ಅವನಿಂದ ಬಂತು :

"ಎಸ್. ವಿಶಾಲಾಕ್ಷಿಯವರ ಮನೆ ಇದೇನಾ ?"

"ಹೌದು, ಇದೇ."

ಕಕ್ಕಾವಿಕ್ಕಿಯಾಗಿದ್ದ ಆ ಸ್ಥಿತಿಯಲ್ಲಿ, ಈತ ಯಾರಿರಬಹುದೆಂದು ಊಹಿಸುವ ಗೊಡವೆಗೂ ಅವಳು ಹೋಗಲಿಲ್ಲ.

ಈಕೆಯೇ ವಿಶಾಲಾಕ್ಷಿಯಲ್ಲವಷ್ಟೆ ? –ಎಂದು ಗೊಂದಲದಲ್ಲಿ ಬಿದ್ದ ಯುವಕ, ಹೇಗೆ ಮುಂದುವರಿಯಬೇಕೆಂದು ಯೋಚಿಸುತ್ತಿದ್ದಂತೆಯೇ, ಅವಳು ಕೇಳಿದಳು :

"ಏನು ಬೇಕಾಗಿತ್ತು ?"

"ವಿಶಾಲಾಕ್ಷಿಯವರ ಜತೆ ಸ್ವಲ್ಪ ಮಾತಾಡಬೇಕು. ಇದಾರೇನು ?"

ಹೊರಗೆ ಬೀದಿಯಲ್ಲೇ ನಿಲ್ಲಿಸಿ, 'ಯಾವ ವಿಷಯ ? ನೀವು ಯಾರು ?' ಎಂದು ಕೇಳುವುದು ಶಿಷ್ಟಾಚಾರವಾಗಿರಲಿಲ್ಲ. ಗಟ್ಟಿಮುಟ್ಟಾದ ಎತ್ತರದ ಆಕೃತಿ. ಬಿನ್ನಿ ಬಟ್ಟೆಯ ಕಂದು ಬಣ್ಣದ ಪ್ಯಾಂಟು. ಅದರೊಳಕ್ಕೆ ಇಳಿಬಿಟ್ಟಿದ್ದ ಬಿಳಿಯ ಶರಟು. ಗದಗು ಚಪ್ಪಲಿ ಕಾಲಲ್ಲಿ. ತುಸು ಕಿರಿದಾಗಿ ಕತ್ತರಿಸಿದ್ದ ಕ್ರಾಪು. ಎಣ್ಣೆಗಪ್ಪು ಮೈ. ಸುಸಂಸ್ಕೃತನಂತೆ ಮುಖಭಾವ.

ಅವನ ಪ್ರಶ್ನೆಗೆ ನೇರವಾಗಿ ಉತ್ತರವೀಯದೆ ವಿಶಾಲಾಕ್ಷಿ ತಮ್ಮನಿಗೆ ಅಂದಳು :

"ಗೇಟು ತೆರಿಯೋ ಜಯ. ಅವರನ್ನು ಒಳಗೆ ಕೂಡಿಸು."

ಜಯ ನೇರವಾದ ಮುಗ್ಧನೋಟದಿಂದ ಅವನನ್ನೆ ನೋಡುತ್ತ, ಗೇಟು ತೆರೆಯುತ್ತ, ಅಂದ :

"ಬನ್ನಿ."

ವಿಶಾಲಾಕ್ಷಿ ಅವಸರವಾಗಿ ಮನೆಯನ್ನು ಒಳಸಿ, ಹಿತ್ತಿಲ ಬಾಗಿಲಿಂದ ಒಳ ಬಂದಳು. ಕೈಕಾಲುಗಳನ್ನು ತೊಳೆದುಕೊಂಡಳು. ಕನ್ನಡಕವನ್ನು ತೆಗೆದು ಚೌಕದಿಂದ ಮುಖವೊರೆಸಿ, ಮತ್ತೆ ಸುಲೋಚನೆಯಾದಳು. ಕನ್ನಡಿಯಲ್ಲೊಮ್ಮೆ ಇಣಿಕಿ ನೋಡಿ [ಎಂಥ ಸ್ಥಿತಿಯಲ್ಲಿ ಆತನ ಕಣ್ಣಿಗೆ ಬಿದ್ದೆ ತಾನು!] ನಡುಮನೆಗೆ ಹೊರಟಳು.

ಆ ಯುವಕ ಆಗಲೇ ಬಂದು, ಕೊಠಡಿಯಿಂದ ಜಯ ತಂದಿರಿಸಿದ್ದ ಕುರ್ಚಿಯ ಮೇಲೆ ಕುಳಿತಿದ್ದ.

ಒಳಬಾಗಲ ಬಳಿ ಯಾರೋ ಸುಳಿದಂತಾಯಿತೆಂದು ಆತ ಅತ್ತ ನೋಡಿದ. ವಯಸ್ಸಾದ ಮಹಿಳೆ. [ಬಂದು ನಿಂತವರು ನಾಗಮ್ಮ.] ಆತ ಎದ್ದು ಎರಡೂ ಕೈಜೋಡಿಸಿ ವಿನಯಪೂರ್ವಕವಾಗಿ ಅಂದ :

"ನಮಸ್ಕಾರ."

ನಾಗಮ್ಮ ಬೆಚ್ಚಿಬಿದ್ದರು. ಆರೀತಿ ವಂದನೆ ಸ್ವೀಕರಿಸಿ ಅವರಿಗೆ ಅಭ್ಯಾಸ ವಿರಲಿಲ್ಲ. ಆದರೆ ಆ ಯುವಕನ ಸೌಜನ್ಯ ಅವರಿಗೆ ಇಷ್ಟವಾಯಿತು. ಆತನ ಮುಗುಳುನಗೆಗೆ ಪ್ರತಿಯಾಗಿ ತಾವೂ ಮುಗುಳುನಕ್ಕು, ಕೈಜೋಡಿಸದೆಯೇ, ಅಂದರು :

"ಹ್ಞಾ, ಹ್ಞಾ, ನಮಸ್ಕಾರ."

ಕುಳಿತುಕೊಳ್ಳಿ ಎಂದು ಹೇಳುವ ಶಿಷ್ಟಾಚಾರವನ್ನು ನಾಗಮ್ಮ ಅರಿತಿರಲಿಲ್ಲ ವೆಂದಲ್ಲ. ಆದರೆ, ಆ ಸಂದರ್ಭದಲ್ಲಿ ತಕ್ಷಣ ಹಾಗೆ ಹೇಳಬೇಕೆಂಬುದು, ಅವರಿಗೆ ತೋಚಲಿಲ್ಲ.

ಒಂದು ಕ್ಷಣ ನಿಂತಿದ್ದು, ಯುವಕ ಪುನಃ ಆಸೀನನಾದ.

ನಾಗಮ್ಮ ಕೇಳಿದರು ;

"ಯಾವೂರಾಯಿತು ?"

[ಹಿಂದೆಂದೂ ಈತನನ್ನು ತಾನು ನೋಡಿದ ನೆನಪಿಲ್ಲ.]

ನಸುನಕ್ಕು ಯುವಕನೆಂದ:

"ಇದೇ ಊರು."

ಮಗಳು ಬಂದ ಸಪ್ಪಳವಾಯಿತೆಂದು, ಒಳಕ್ಕೆ ತಿರುಗಿ ಅತ್ತಸಾಗಿ, ಪಿಸು ಧ್ವನಿಯಲ್ಲಿ ನಾಗಮ್ಮನೆಂದರು:

"ಯಾರೇ ಬಂದಿರೋದು ?"

ಉತ್ತರ ಸ್ವತಃ ವಿಶಾಲಾಕ್ಷಿಗೆ ತಿಳಿದಿದ್ದರೆ?

ಮಗಳು ಬಾಯಿ ತೆರೆಯುವುದಕ್ಕೆ ಮುನ್ನ ನಾಗಮ್ಮನೇ ಮುಂದುವರಿದು ಅಂದರು :

"ಕಾಲೇಜಿನೋರಾ ?"

ಗೊತ್ತಿಲ್ಲ–ಎನ್ನಬಹುದಾಗಿತ್ತು. ಆದರೂ "ಹೂಂ" ಎಂದಳು ವಿಶಾಲಾಕ್ಷಿ. [ಯಾಕೋ ಏನೋ.]

ಸರಿಹೋಗಾದರೆ–ಎಂದು ಮನಸಿನಲ್ಲೇ ಅಂದುಕೊಂಡು, ನಾಗಮ್ಮ ಒಳ ಹೋದರು.

ಮತ್ತೊಮ್ಮೆ ಬಾಗಿಲಿನ ಬಳಿ ಸದ್ದಾಯಿತೆಂದು ಯುವಕ ಆ ಕಡೆಗೆ ದೃಷ್ಟಿ ಹೊರಳಿಸಿದ. ಈಗ ಅಲ್ಲಿದ್ದವಳು ಯುವತಿ. ಬಾಗಿಲನ್ನೂ ದಾಟಿ ಅವಳು ನಡು ಮನೆಗೆ ಬಂದಳು. ಹೊರಗೆ ಕಂಡಿದ್ದ ಹೆಣ್ಣು ಎಸ್. ವಿಶಾಲಾಕ್ಷಿಯೇ ಇರಬೇಕು. ಆಗ ವಂದಿಸಿರಲಿಲ್ಲ. ಈಗ, ಮೊದಲಬಾರಿ ಕಂಡವನಂತೆ ನಟಿಸಿ ನಮಿಸುವುದರಲ್ಲಿ ಔಚಿತ್ಯವಿರಲಿಲ್ಲ. ಆದರೂ, ಆಕೆ ನಿಂತಿರುವಾಗ ತಾನು ಕುಳಿತಿರುವುದು ಸರಿಯಲ್ಲವೆಂದು, ಅವನು ಏಳತೊಡಗಿದ.

"ಏಳಬೇಡಿ. ಕೂತಿರಿ."

ಎಲ್ಲವೂ ವಿಚಿತ್ರವಾಗಿ ವಿಶಾಲಾಕ್ಷಿಗೆ ಕಂಡಿತು. ಯಾವುದೋ ಪರೀಕ್ಷೆಗೆ ಒಳಗಾದವಳಂತೆ, ಅವಳ ಎದೆ ಬಡಿತ ತೀವ್ರಗೊಂಡಿತು.

ಇನ್ನು ಮಾತಿನ ಸರದಿ ತನ್ನದೆಂದು, ಯುವಕನಿಗೂ ತಡವರಿಸಿತು.

"ನಾನು ನಿಮಗೆ ಅಪರಿಚಿತ....'ಪ್ರಬುದ್ಧ ಕರ್ಣಾಟಕ'ದ ಈಸಲದ ಸಂಚಿಕೆಯಲ್ಲಿ ನಿಮ್ಮ ಲೇಖನ ಬಂದಿದೆ–ಅಲ್ವೆ ?"

ಎಂತಹ ಪ್ರಶ್ನೆ! ಅದೂ, ಆ ಲೇಖನದ ಬಗೆಗೆ ಯಾವ ಪ್ರತಿಕ್ರಿಯೆಯೂ ಎಲ್ಲಿಂದಲೂ ಬರದೆ ಕೆಲ ದಿನಗಳೇ ಕಳೆದ ಬಳಿಕ....

ತಂಗಾಳಿಯ ಸ್ಪರ್ಶವಾಗಿ ಎಲ್ಲ ಬಳಲಿಕೆಯೂ ನೀಗಿದಂತೆ ವಿಶಾಲಾಕ್ಷಿಗೆ ಅನಿಸಿತು.

"ಹೌದು" ಎಂದಳಾಕೆ ತುಸು ನಾಚಿ.

ಆ ಉತ್ತರದಿಂದ ಒಂದು ಅಂಶ ಯುವಕನಿಗೆ ಖಚಿತವಾಯಿತು. ಸ್ವತಃ ವಿಶಾಲಾಕ್ಷಿಯೇ ಆಗಿದ್ದಳು ಆ ನಾರೀಮಣಿ.

"ನನಗೆ ಆ ಲೇಖನ ಬಹಳ ಮೆಚ್ಚುಗೆಯಾಯ್ತು. ಓದಿದ ಮೇಲೆ, ಬರೆದವರ ಪರಿಚಯ ಮಾಡಿಕೊಳ್ಳಬೇಕೂಂತ ಅನಿಸಿ...."

"ಓ!" ಎಂದು ವಿಶಾಲಾಕ್ಷಿ ಉದ್ಗರಿಸಿದಳು.

ಹಾಗೆ ಆಡಿದುದು ಅನುಚಿತವಾಯಿತೇನೋ ಎಂದು, ಯುವಕ ಅರೆಕ್ಷಣ ಸುಮ್ಮನಾದ. ಆದರೆ ಆಕೆಯ ಮುಖದ ಮೇಲೆ ಸಂತಸದ ಛಾಯೆ ಇದ್ದುದನ್ನು ಗಮನಿಸಿ, ಅವನೆಂದ:

ಈರೀತಿ ಹೇಳದೆ ಕೇಳದೆ ಮನೆಗೆ ಬರಬಾರದಿತ್ತು–ಅಲ್ಲವೆ ?"

ಸುಮ್ಮನಿದ್ದರೆ 'ಹೌದು' ಎಂಬರ್ಥ. ಯಾವ ಉತ್ತರ ಯೋಗ್ಯವೆಂದು ಯೋಚಿಸುವುದಕ್ಕೂ ಅವಕಾಶವಿಲ್ಲದೆ, ಅವಳೆಂದಳು :

"ಪರವಾಗಿಲ್ಲ. ಅದರಲ್ಲೇನೀಗ ?"

ಆತ, ನೆಟ್ಟ ನೋಟದಿಂದ ವಿಶಾಲಾಕ್ಷಿಯನ್ನೇ ಒಮ್ಮೆ ನೋಡಿದ. [ಆ ನೋಟವನ್ನು ಇದಿರಿಸುವುದು ಕಷ್ಟವಾಗಿ ('ಯಾಕೆ ನೋಡ್ತಿದಾನೆ ಹೀಗೆ?') ಅವಳಿಗೆ ಕಸಿವಿಸಿ ಎನಿಸಿತು.] ಬಳಿಕ ಅವನೆಂದ :

"ಮಹಾರಾಣೀ ಕಾಲೇಜಿನಲ್ಲಿ ನೀವು ಲೆಕ್ಚರರಾಗಿದೀರಿ ಅಂತ ಯಾರೋ ಅಂದರು."

"ಇಲ್ಲ. ಈಗ ನಾನು...."

"ಹೌದು. ಗೊತ್ತಾಯ್ತು. ಕಾಲೇಜಿಗೆ ಹೋಗಿದ್ದೆ. ಅಲ್ಲಿ ಗಿರಿಜಾ ಬಾಯಿಯವರು ಹೇಳಿದ್ರು."

"ಗಿರಿಜಾಬಾಯಿ! ಅವರು ಗೊತ್ತೆ ನಿಮಗೆ?"

"ಅವರನ್ನು ನೋಡಿದ್ದೂ ಮೊನ್ನೆಯೇ ಮೊದಲು. ಜವಾನನನ್ನು ವಿಚಾರಿಸಿದೆ. ಆತ ಅವರನ್ನು ಕರಕೊಂಡು ಬಂದ."

['ಏನು ತಿಳಕೊಂಡರೊ ಗಿರಿಜಾಬಾಯಿ?']

ವಿಶಾಲಾಕ್ಷಿ ಸುಮ್ಮನಿದ್ದುದನ್ನು ಕಂಡು, ಆತನೇ ಮುಂದುವರಿದ:

"ಯಾಕೆ? ನಾನು ಯಾರು? –ಅಂತೆಲ್ಲ ಕೇಳಿದರು. [ಸಣ್ಣನೆ ನಗೆ] ಆಮೇಲೆ ಮನೆಯ ವಿಳಾಸ ಕೊಟ್ಟು, ತರಗತಿಗೆ ನೀವು ಬರ್ತ್ತಿರ್ತೀರಿ. ಅಲ್ಲೇ ಕಾದಿದ್ದು ನೋಡ್ಕೋದು ಸಾಧ್ಯವಿತ್ತು. ಆದರೂ, ಭಾನುವಾರ ಹೇಗೂ ರಜಾ ಮನೇಲೇ ಭೇಟಿಯಾಗೋಣ–ಅಂದ್ಕೊಂಡೆ. ಅಲ್ಲದೆ, ನಾನು ಇರೋದೂ ಇಲ್ಲೇ ಸಮೀಪದಲ್ಲಿ."

"ನೀವು–ಇಲ್ಲೀ...."

"ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ."

"ಓ! ಓದ್ತಿದೀರೇನು ಹಾಗಾದರೆ?"

[–'ತೀರಾ ಹುಡುಗು ಅಲ್ಲ. ಆದರೂ ಯಾರಿಗೆ ಗೊತ್ತು?']

"ಹೌದು, ಎಂ.ಎ. ಗೆ ಕಟ್ಟಿದೀನಿ–ಕನ್ನಡ ಎಂ.ಎ. ಗೆ."

"ಪರಿಚಯವಾದದ್ದು ಸಂತೋಷ."

[–'ಅದನ್ನು ತಾನು ಹೇಳುವ ಅಗತ್ಯವಿತ್ತೋ ಇಲ್ಲವೋ.']

"'ಪ್ರಬುದ್ಧಕರ್ಣಾಟಕ'ದ ಕಳೆದ ಸಂಚಿಕೆಯಲ್ಲಿ ನನ್ನದೊಂದು ಕವಿತೆ ಅಚ್ಚಾಗಿತ್ತು."

"ಹೌದೆ? ಆ ಸಂಚಿಕೆ ನನಗೆ ಸಿಕ್ಕಿಲ್ಲ."

"ಏನೂ ನಷ್ಟವಾಗಿಲ್ಲಾಂತಿಟ್ಕೊಳ್ಳಿ!"

ಆದರೂ ಒಂದು ಬಗೆಯ ಮುಖಭಂಗ ಕವಿಗೆ. ಅದನ್ನು ಮರೆಸಲು ಮುಗುಳುನಗೆಯ ಮುಖವಾಡ.

"ತರಿಸ್ಕೊಂಡು ಓದ್ತೀನಿ."

"ಉಪಕೃತ....ನೀವು ನಿಂತೇ ಇದ್ದೀರಿ."

"ಚಿಂತಿಲ್ಲ."

ವಿಶಾಲಾಕ್ಷಿಯ ಪಾಲಿಗೆ ಈ ಬಗೆಯ ಸಂದರ್ಶನ ಅಪೂರ್ವವಾದುದು. ಅತಿಥಿಗೆ ತಿನ್ನಲು ಕುಡಿಯಲು ಏನಾದರೂ ಕೊಡಬೇಕೆ ಬೇಡವೆ? ಬೆಳಗಿನ ಉಪಾಹಾರದ ಹೊತ್ತು ದಾಟಿತ್ತು. ಮನೆಯಲ್ಲಿ ಏನೂ ಇರಲಿಲ್ಲ. ಓವಲ್ಟಿನಿನ

ಸಣ್ಣದೊಂದು ಡಬ್ಬ ತರಬೇಕೆಂದು ನೂರುಸಾರೆ ಯೋಚಿಸಿದ್ದಳು. ಆದರೆ ತಂದಿರಲಿಲ್ಲ. ಕಾಫಿ ಮಾಡಲು ಈಗ ಹೊರಟರೆ ಹೊತ್ತಾಗುವುದು. ಅಲ್ಲದೆ—

"ವಿಶಾಲಿ, ಸ್ನಾನ ಮಾಡೋಲ್ವೇನೇ ? ನೀರು ಪೂರ್ತಿ ತಣ್ಣಗಾಯ್ತು."

ಎಷ್ಟುಹೊತ್ತು ಈ ಸಂವಾದ–ಎಂದು ನಾಗಮ್ಮ, ಮಚ್ಚುಕತ್ತಿಯ ಮುಂದೆ ಕುಳಿತು ಬದನೇಕಾಯಿ ಹೆಚ್ಚುತ್ತಿದ್ದವರು, ಹಾಗೆ ಅಂದರು.

"ಬಂದೆ ಅಮ್ಮಾ."

ಆ ಯುವಕ ಎದ್ದು ನಿಂತ,

"ಏನೋ ಕೆಲಸದಲ್ಲಿದ್ದಿರಿ. ಬಂದು ತೊಂದರೆ ಕೊಟ್ಟೆ. ಕ್ಷಮಿಸಿ."

"ತೊಂದರೆ ಏನೂ ಇಲ್ಲ....ಏನಾದರೂ–ಮಾಡಿಕೊಡಲೆ ?"

ವಿನಾಕಾರಣವಾಗಿ ತೊದಲು.

"ಛೆ! ಛೆ! ಏನೂ ಬೇಡಿ. ಅವರು [ಒಳಗಿರುವವರು] ನಿಮ್ಮ ತಾಯಿ ಅಲ್ವೆ ?"

"ಹೌದು. [ಕಳೆ ಎತ್ತಿಕೊಂಡು ಹೊರ ಬಾಗಿಲನ್ನು ಹಾದುಹೋದ ಜಯನ ಕಡೆ ನೋಡಿ–] ಅವನು ನನ್ನ ತಮ್ಮ."

"ಸಂತೋಷ."

ಒಮ್ಮೆಲೆ ವಿಶಾಲಾಕ್ಷಿಗೆ ನೆನಪಾಯಿತು :

"ಅಂದಹಾಗೆ, ನನ್ನ ಲೇಖನದ ಒಂದು ಪ್ರತಿ ನಿಮಗೆ ಕೊಡಲೇನು ?"

"ಇದ್ದರೆ ಕೊಡಿ. ಬೇಡ–ಅನ್ನೋದಿಲ್ಲ."

ಆತ ನಿಂತೇ ಇದ್ದ, ಗೋಡೆಗಳನ್ನೂ ಛಾವಣಿಯನ್ನೂ ನೋಡುತ್ತ. ವಿಶಾಲಾಕ್ಷಿ ನಡುಮನೆಯನ್ನು ಹಾದು, ತನ್ನ ಕೊಠಡಿಗೆ ಹೋಗಿ, ಲೇಖನದ ಒಂದು ಪ್ರತಿಯನ್ನು ತಂದಳು. ಬರೆಯಬೇಕೆ ಮೇಲೆ ? ಯಾರಿಗೆ–ಎಂದು ? [ಹೊಸ ಪರಿಚಯ–ಹಾಗೆ ಬರೆದುಕೊಡುವುದು ಸರಿಯಲ್ಲ.]

"ತಗೊಳ್ಳಿ."

"ಥ್ಯಾಂಕ್ಸ್. ಬರ್ತೀನಿ."

ಆತ ಹೊರಕ್ಕಿಳಿದಾಗ, ವಿಶಾಲಾಕ್ಷಿ ಕೇಳಿದಳು :

"ನಿಮ್ಮ ಹೆಸರು ನೀವು ಹೇಳ್ಲಿಲ್ಲ."

"ಗಂಗಾಧರ–ಅಂತ."

ಜಯ ಅತ್ತ ಬಂದು, "ನಾನು ಹಾಕ್ಕೊಳ್ತೀನಿ, ಬಿಡಿ" ಎಂದರೂ, ಸ್ವತಃ ಆತನೇ ಗೇಟು ಮುಚ್ಚಿದ.

ವಿಶಾಲಾಕ್ಷಿ ಅಂದಳು :

"ನಮಸ್ಕಾರ."

"ನಮಸ್ಕಾರ" ಎಂದ ಆತನೂ, ಹಸನ್ಮುಖಿಯಾಗಿ.

ಯುವಕ ಹೋದ ಬಳಿಕ, ಉದ್ಯಾನದ ಕೆಲಸವನ್ನು ಆಗಲೇ ಮುಗಿಸಿದ್ದ ಜಯರಾಮು ಕೇಳಿದ :

"ಅವರು ಸ್ಪೋರ್ಟ್ಸ್‌ನ ಛಾಂಪಿಯನೇನಕ್ಕ ?"

ವಿಶಾಲಾಕ್ಷಿಗೆ ನಗು ಬಂತು.

"ಯಾಕೊ ಹಾಗೆ ಕೇಳ್ತೀಯಾ ?"

"ಹಾಗನಿಸ್ತು. ಫೈಲ್ವಾನ್ ಥರ ಇದಾರೆ ನೋಡೋಕೆ."

"ಅವರು ಕವಿ ಕಣೋ!"

ಓಹ್ಹೋ !"

....ಬಚ್ಚಲು ಮನೆಗೆ ಹೊರಟಿದ್ದ ಮಗಳನ್ನು ತಾಯಿ ಕೇಳಿದರು :

"ಹೋದನೆ ಆತ ?"

"ಹೂಂ."

"ಯಾಕೆ ಬಂದಿದ್ದ ?"

"ಯಾವುದೋ ಪುಸ್ತಕ ಇಸಕೊಂಡು ಹೋಗೋದಕ್ಕೆ."

[ತನ್ನ ಬಾಯಿಂದ ಸುಳ್ಳು ಮಾತು!]

"ಅವನ ಹೆಸರೇನು ?"

"ಗಂಗಾಧರ."

## ೮

"ಅಕ್ಕಾ, ಅನಂತು ಬಂದಿದ್ದಾನೇ!"

ನರ್ಮದೆಯಿಂದ ಸಂದೇಶಹೊತ್ತು ಅನಂತ ಬರುವುದಿತ್ತು ಹಿಂದೆ. ಈಗ ಬರಲು ಕಾರಣ?

"ಬಂದ್ಬಿಟ್ಟ," ಎಂದು, ಕೊಠಡಿಯೊಳಗೆ ಅಧ್ಯಯನದಲ್ಲಿ ನಿರತಳಾಗಿದ್ದ ವಿಶಾಲಾಕ್ಷಿ, ಅಂದಳು.

ಅನಂತರ ಸೈಕಲನ್ನು ನೋಡುತ್ತ ಜಯ ಕೇಳಿದ :

"ಬಾಡಿಗೇದೇನೋ ?"

"ಅಲ್ಲ. ಸ್ವಂತದ್ದು."

"ಹಳೇದೂಂತ ಕಾಣುತ್ತೆ."

"ಸೆಕೆಂಡ್‌ಹ್ಯಾಂಡ್ ಕೊಂಡ್ಕೊಂಡೆ."

ಎಸ್. ಎಸ್. ಎಲ್. ಸಿ. ಯಲ್ಲಿ ಅನಂತ ಉತ್ತೀರ್ಣನಾಗಿದ್ದ,–ಆದರೆ ಪ್ರಥಮ ಶ್ರೇಣಿಯಲ್ಲಲ್ಲ. ಎಲ್ಲ ಪಂದ್ಯಾಟದ ಪಟುಗಳೂ ಪಾಠಪ್ರವಚನಗಳಲ್ಲಿ ನಿಷ್ಣಾತರಾಗಿರಬೇಕೆಂಬ ನಿಯಮ ಎಲ್ಲಿದೆ? ಮೊದಲಿಗನಾಗಲಿಲ್ಲ ಎಂದಲ್ಲ, ನರಸಿಂಗರಾಯರ ಆರ್ಥಿಕ ಪರಿಸ್ಥಿತಿ ಕೆಟ್ಟಿತ್ತೆಂದು, ಕಿರಿಯ ಮಗನಿಗೆ ಸೆಕೆಂಡ್ ಹ್ಯಾಂಡ್ ಸೈಕಲು ಬಂದಿತ್ತು. ಹೀಗಾಯಿತೆಂದು ಅನಂತ ಬೇಸರಗೊಂಡವನಲ್ಲ. ಕಾಲೇಜಿಗೆ ಹೋಗಿಬರಲು, ಯಾದವಗಿರಿ–ಈದ್ಗಾಗಳಿಗೆ ಪ್ರವಾಸ ಕೈಗೊಳ್ಳಲು, ಆ ಸೈಕಲು ಆತನಿಗೆ ಧಾರಾಳವಾಗಿ ಸಾಕಾಗಿತ್ತು.

"ಹೊಸದು ಕೊಡಿಸ್ತಾರೆ, ಅಂದಿದ್ದೆ ನೀನು."

"ಸುಮ್ಮನೆ ದುಡ್ಡು ದಂಡ. ಇದೇನು ಚೆನ್ನಾಗಿಲ್ವೆ ಈಗ?"

"ಇದೇಂತಿಟ್ಕೊ. ನಮ್ಮಣ್ಣನದಕ್ಕಿಂತ ವಾಸಿ."

ವಿಶಾಲಾಕ್ಷಿ ಹೊರಬಂದು, ಸೈಕಲು ಹಿಡಿದು ಗೇಟಿನಾಚೆಗೇ ನಿಂತಿದ್ದ ಅನಂತನನ್ನು ಕಂಡಳು.

"ಏನೋ ಇದು ಅಲ್ಲಿಯೇ ನಿಂತ್ಬಿಟ್ಟಿ ?"

ಅನಂತ ಸುಮ್ಮನೆ ನಕ್ಕ. ವಿಶಾಲಾಕ್ಷಿಯೇ ಮತ್ತೂ ಅಂದಳು :

"ಎಷ್ಟು ಎತ್ತರ ಬೆಳೆದ್ಬಿಟ್ಟಿದೀಯಾ :"

[ನೋಡಿ ಕೆಲ ಮಾಸಗಳಾಗಿದ್ದುವು.]

ಆ ಮಾತು ಅನಂತನಿಗೆ ಅಪ್ರಿಯವೆನಿಸಲಿಲ್ಲ. ಅಕ್ಕನ ಈ ಗೆಳತಿಯನ್ನು ಕಂಡರೆ ಯಾವಾಗಲೂ ಗೌರವವೇ ಅವನಿಗೆ.

ಅನಂತ ಒಳಗೆ ಬರುವ ಲಕ್ಷಣ ಕಾಣಿಸಲಿಲ್ಲವೆಂದು ವಿಶಾಲಾಕ್ಷಿಯೇ ಅಂದಳು :

"ಬಾರೋ ಒಳಗೆ."

ಈಗ ಅನಂತ ನುಡಿದ :

"ಮಾರ್ಕೆಟಿಗೆ ಹೊರಟಿದೀನಿ ಕಣ್ರೀ. ಅದೇನೇನೋ ತಂದ್ಕೊಡಬೇಕಂತೆ ಅಮ್ಮನಿಗೆ...."

"ಏನೋ ವಿಶೇಷ ಇವತ್ತು ?" ಎಂದು ಕೇಳಿದಳು ವಿಶಾಲಾಕ್ಷಿ, 'ಹುಡುಗನ ಸ್ವರವೂ ಬದಲಾಗಿದೆ–ಧ್ವನಿ ಒಡೆದಿದೆ–ಹದಿನಾರು ಹದಿನೇಳನೆಯ ವಯಸ್ಸಿನಲ್ಲಿ ಹೀಗೆಯೇ' ಎಂದು ಮನಸಿನಲ್ಲೇ ಅಂದುಕೊಳ್ಳುತ್ತ.

"ಅಕ್ಕ ಬಂದಿದಾಳೆ."

"ಹಾಗೋ !"

[ಅಂದಮೇಲೆ ಹೆಚ್ಚಿನ ಸಾಮಾನು ತರಿಸಿಯೇ ತರಿಸುವವರು ರುಕ್ಮಿಣಮ್ಮ.]

"ನಮ್ಮ ಮನೆಗೊಮ್ಮೆ ಬರಬೇಕಂತೆ ಕಣ್ರೀ. ಯಾವಾಗ ಪುರಸೊತ್ತಾಗುತ್ತೆ ಅಂತ ಕೇಳ್ಕೊಂಡು ಬಾ ಅಂದ್ಲು ಅಕ್ಕ."

ಏನು ತೊಂದರೆಯೊ ? ಅತ್ತೆ ಮನೆಯಲ್ಲಿ ಜಗಳಾಡಿ ಬಂದಳೋ ಹೇಗೆ ?– ಎಂದೆಲ್ಲ ವಿಚಾರಗಳು ವಿಶಾಲಾಕ್ಷಿಯನ್ನು ಕ್ಷಣಕಾಲ ಕಾಡಿದುವು. ಕ್ಷಣಕಾಲ ಮಾತ್ರ. ಉಂಟೆ ಎಲ್ಲಾದರೂ ? ಹಿಂದಿನ ನರ್ಮದೆ ಗತಕಾಲದ ನೆನಪಷ್ಟೇ ಹೊರತು....

"ಇರ್ತ್ತಾಳಂತಾ ಒಂದೆರಡು ದಿವಸ ?"

"ಇಲ್ಲ. ಇವತ್ತು ಸಂಜೇನೆ ವಾಪ್ಸು–ಅಂದು."

"ಸಾಯಂಕಾಲ ಕ್ಲಾಸು ಮುಗಿಸ್ಕೊಂಡು ನಾಲ್ಕರ ಸುಮಾರಿಗೆ ಬರ್ತೀನಿ, ಆಗದಾ ?"

"ಹೂಂ....ನಾನೂ ಮಾರ್ಕೆಟಿಂದ ಬಂದು ಕ್ಲಾಸಿಗೆ ಹೊರಡ್ಬೇಕು."

"ಮುರಲೀನ್ನೂ ಕರಕೊಂಡು ಬಂದಿದಾಳೇನೊ ?"

"ಓಹೋ ! ಇಬ್ಬರೂ ಬಂದಿದಾರೆ."

ಅಪರಿಚಿತಧ್ವನಿ ಕೇಳಿಸಿತೆಂದು ಹೊರಗೆ ಬಂದ ನಾಗಮ್ಮ, ಆತ ಅನಂತ ನೆಂದು ತಿಳಿದು, ಮಗಳ ಹಿಂದೆ ನಿಂತು ಸಂಭಾಷಣೆಗೂ ಕಿವಿಗೊಟ್ಟು ಬಳಿಕ, ಅಂದಳು :

"ಬಾರಪ್ಪ ಒಳಗೆ. ತಿಂಡಿ ತಿಂದ್ಕೊಂಡು ಹೋಗಪ್ಪ."

"ಇರ್ಲಿ. ಈಗ್ತಾನೇ ಮನೇಲಿ ಆಯ್ತು," ಎಂದ ಅನಂತ.

ವಿಶಾಲಾಕ್ಷಿಯ ಕಡೆ ನೋಡಿ, "ಬರ್ತೀನಿ" ಎಂದು, ಆತ ಸೈಕಲು ಹತ್ತಿ ಹೊರಟೇಬಿಟ್ಟ.

ತನ್ನ ಅಕ್ಕನತ್ತ ದೃಷ್ಟಿ ಹೊರಳಿಸಿ, ಜಯರಾಮು ಅಂದ :

"ಅನಂತುಗೆ ಸೈಕಲ್ ಕೊಡಿಸಿದಾರೆ ಅಕ್ಕ. ಸೆಕೆಂಡ್‌ಹ್ಯಾಂಡು."

"ಹೂಂ," ಎಂದಷ್ಟೇ ಉತ್ತರಿಸಿ, ಕೊಠಡಿಯೊಳಕ್ಕೆ ತೆರೆದು ಇರಿಸಿದ್ದ ಪುಸ್ತಕದ ಬಳಿಗೆ, ವಿಶಾಲಾಕ್ಷಿ ಹಿಂತಿರುಗಿದಳು.

* * * * *

ನರ್ಮದೆಯ ಮನೆಗೆ ವಿಶಾಲಾಕ್ಷಿ ಬಂದಾಗ, ಆಗ ತಾನೇ ನಿದ್ದೆಯಿಂದ ಎದ್ದಿದ್ದ ಮುರಲಿಗೆ ಸಿಂಗಾರವಾಗುತ್ತಿತ್ತು. ತಲೆಗೂದಲನ್ನು ಗುಂಗುರುಗುಂಗು ರಾಗಿ ಸುರುಳಿ ಸುತ್ತಲು ನರ್ಮದಾ ಯತ್ನಿಸುತ್ತಿದ್ದಳು.

"ಬಾರೇ, ಬಾ," ಎಂದರು ರುಕ್ಮಿಣಮ್ಮ.

ನಿತ್ಯದ ವಿಹಾರಕ್ಕೆ ಹೊರಟಿದ್ದ ನರಸಿಂಗರಾಯರು ಕೇಳಿದರು :

"ಚೆನ್ನಾಗಿದೀಯೇನಮ್ಮ ?"

"ಇಷ್ಟರಮಟ್ಟಿಗಿದೀನಿ," ಎಂದಳು ವಿಶಾಲಾಕ್ಷಿ.

ವಿನಯದ ಜತೆಗೆ ಗುಣವೂ ಸೇರಿ ಹೇಗೆ ಶೋಭಿಸುತ್ತಿದ್ದಳು ಈಕೆ! ತಂದೆ ಯನ್ನು ಕಳೆದುಕೊಂಡ ತಬ್ಬಲಿ. ಆದರೂ ಎಲ್ಲ ಭಾರವನ್ನೂ ತಾನೇ ಹೊತ್ತಿದ್ದ ದಿಟ್ಟೆ. ನರಸಿಂಗರಾಯರಿಗೆ ಬಲು ಮೆಚ್ಚುಗೆ ವಿಶಾಲಾಕ್ಷಿ ಎಂದರೆ.

ಹೊರಕ್ಕಿಳಿಯುತ್ತ ಅವರು ಮತ್ತೂ ಕೇಳಿದರು :

"ಮನೇಲಿ ಎಲ್ಲರೂ ಕ್ಷೇಮ, ಅಲ್ವೆ ?"

"ಹೂಂ. ಎಲ್ಲರೂ ಚೆನ್ನಾಗಿದಾರೆ."

ಆ ಮಾತು ಮುಗಿಸಿ ವಿಶಾಲಾಕ್ಷಿ ನರ್ಮದೆಯ ಬಳಿ ಸಾರಿದಳು. ಮುರಲಿಯನ್ನು ಒಂದು ಸ್ಟೂಲಿನ ಮೇಲೆ ಕುಳ್ಳಿರಿಸಿ, ಆತನೆದುರು ನರ್ಮದಾ ಮಂಡಿಯೂರಿದ್ದಳು, ಕೈಯಲ್ಲಿ ಹಣಿಗೆ ಹಿಡಿದು. ವಿಶಾಲಿ ತಾನೂ ಗೆಳತಿಯ ಮಗ್ಗುಲಲ್ಲಿ ಮೊಣಕಾಲೂರಿ ಕುಳಿತಳು.

ಕನ್ನಡಕದ ಈ ಮುಖ ಅಪರಿಚಿತವಲ್ಲವೆಂದು, "ಹುಂ!" ಎಂದು ಅಬ್ಬರಿಸಿತು ಮಗು.

ಸ್ವಾಗತದ ಮುಗುಳುನಗೆ ಬೀರಿದ ನರ್ಮದೆಯೊಡನೆ ವಿಶಾಲಾಕ್ಷಿ, ಆಕ್ಷೇಪಿಸುತ್ತ ಅಂದಳು :

"ನಮ್ಮ ಮನೆಗೆ ಬನ್ನೀಂತ ಆಹ್ವಾನ ನಾನು ಕೊಟ್ಟಿದ್ದರೆ, ನೀನು ನನ್ನನ್ನೇ ಇಲ್ಲಿಗೆ ಕರೆಸಿದೆಯಲ್ಲೇ. ನಡಿ ಹೋಗೋಣ. ನಮ್ಮಮ್ಮ ತುಂಬಾ ಸಂತೋಷ ಪಡ್ತಾರೆ."

"ಜತೆಯಾಗಿ ಹೋಗೋಣ ಅಂತಲೇ ನಿನ್ನನ್ನು ಕರೆಸ್ದೆ. ನೀನಂತೂ ಈ ಕಡೆಗೆ ಹಾಯೋದೇ ಇಲ್ವಂತೆ ?"

ರುಕ್ಮಿಣಮ್ಮನೂ ಧ್ವನಿಕೂಡಿಸಿದರು :

"ಸ್ನೇಹಿತೆ ಇದ್ದಾಗ ಬರ್ತಿದ್ಲು. ಮುದುಕರನ್ನು ನೋಡೋಕೆ ಯಾಕ್ಬರ್ತಾಳೆ, ಹೇಳು!"

"ಹಾಗೇನೂ ಇಲ್ರಿ. ನಿಮಗೇ ಗೊತ್ತಲ್ಲ ನನಗೆ ಎಷ್ಟೊಂದುಕೆಲಸ ಅಂತ...."

ರುಕ್ಮಿಣಮ್ಮನಿಗೆ ಗೊತ್ತಿತ್ತು. ಅದನ್ನು ಯೋಚಿಸಿ ಎಷ್ಟೋಸಾರೆ ಅವರು ಮರುಗಿದ್ದರು; ನಿಟ್ಟುಸಿರುಬಿಟ್ಟಿದ್ದರು. 'ಈ ಹುಡುಗಿಗೊಂದು ಮದುವೆಯಾದರೂ ಆಗಿದ್ದರೆ....'

ತನ್ನನ್ನು ಹಾಗೆಯೇ ಬಿಟ್ಟು ಹೆಂಗಸರು ಮಾತಿಗೆ ಆರಂಭಿಸಿದರೆಂದು, ಮುರಲಿ ಹೂಂಕರಿಸಿದ :

"ಮಾಡು !"

[ಕ್ರಾಪು ಬಾಚಿ ಮುಗಿಸು–ಎಂದು ಆದೇಶ.]

ನರ್ಮದಾ ಪುನಃ ಆ ಕೆಲಸದಲ್ಲಿ ನಿರತಳಾಗುತ್ತ, ಅಂದಳು :

"ತುಂಬಾ ಗುಂಗುರು ಕೂದಲು. ಬಹಳ ಕಷ್ಟ ಕಣೇ ಬಾಚೋದು."

ಇದು ಮಾತ್ರ ಸುಳ್ಳು ಎಂಬುದನ್ನು ಎದುರಿನ ನೋಟವೇ ಸಾರಿ ಹೇಳು ತ್ತಿತ್ತು. ಆದರೆ ಆ ಸುಳ್ಳನ್ನು ಆಕೆ ಆಡಿದುದು, ಮಗುವಿನ ಮೇಲಣ ಮಮತೆ ಯಿಂದ. ಆ ಕಾರಣದಿಂದ ಅದು ಕ್ಷಮ್ಯವೆನಿಸಿತು ವಿಶಾಲಾಕ್ಷಿಗೆ. ನಗು ಬಂತು.

"ಹಾಗೇ ಇರಲಿ ಬಿಡೇ. ಚೆನ್ನಾಗಿ ಕಾಣುತ್ತೆ."

ರುಕ್ಮಿಣಮ್ಮ ತಿಂಡಿ ಕಾಫಿ ತರತೊಡಗಿದರು.

ವಿಶಾಲಾಕ್ಷಿ ಅಂದಳು :

"ಬೇಡವೇ ನರ್ಮದಾ. ನಮ್ಮಲ್ಲಿಗೇ ಹೋಗೋಣ."

"ಎರಡೂ ಕಡೆ ಆಗಲಿ," ಎಂದರು ರುಕ್ಮಿಣಮ್ಮ.

"ಐದು ಘಂಟೆಗೆ ಸರಿಯಾಗಿ ಟಾಂಗಾ ತಗೊಂಡು ಅನಂತು ಬರ್‍ತಾನೆ. ತಕ್ಷಣ ಹೊರಟುಬಿಡೋಣ," ಎಂದು ನರ್ಮದಾ ಹೇಳಿದಳು.

"ಹಾಗಾದರೆ ನಮ್ಮನೇಲಿ ಬಹಳ ಹೊತ್ತು ಇರೋದಿಲ್ಲ, ಅನ್ನು."

"ಒಂದು ಭಾನುವಾರ ಬಂದು, ಇಡೀ ದಿನ ನಿಮ್ಮ ಮೇಲೆ ಇರ್‍ತೀನಿ. ಆಯ್ತೇನಮ್ಮ?"

"ಸರಿ, ಸರಿ! ನೀನು ಇದ್ದ ಹಾಗೇ!"

....ನರ್ಮದಾ ಹೇಳಿದುದು ಸುಳ್ಳಾಗಿರಲಿಲ್ಲ. ಐದು ಘಂಟೆಗೆ ಅಲ್ಲವಾದರೂ ಐದೂಕಾಲಿಗೆ ಸರಿಯಾಗಿ, ಟಾಂಗಾದೊಡನೆ ಅನಂತ ಬಂದ. ಮೊದಲು ಸೈಕಲು. ಅದರ ಹಿಂದೆ ಟಾಂಗಾ. ಕಾಲೇಜು ಮುಗಿದ ಬಳಿಕ ಆತ ನೇರವಾಗಿ ಬಂದುದೇ ಮನೆಗೆ.

"ಒಂದೂವರೆಗಿಂತ ಕಡಮೆಗೆ ಬರೋಕೆ ಯಾರೂ ಒಪ್ಪಲಿಲ್ಲ. ಇವನನ್ನು ಒಂದೂಕಾಲಿಗೆ ಗೊತ್ಮಾಡಿದೀನಿ," ಎಂದ ಅನಂತ. "ಇವರ ಮನೇಲಿ ಅರ್ಧ ಘಂಟೆ ಹಾಲ್ಟು," ಎಂದೂ ನುಡಿದ, ವಿಶಾಲಾಕ್ಷಿಯ ಕಡೆ ನೋಡಿ.

"ಒಂದೂಕಾಲು ಜಾಸ್ತಿಯಲ್ವೇನೋ," ಎಂದರು ರುಕ್ಮಿಣಮ್ಮ.

ಅನಂತನಿಗೆ ಸಿಟ್ಟು ಬಂತು.

"ಈಗಿನ ರೇಟು ನಿಮಗೆ ಗೊತ್ತಿಲ್ವಮ್ಮ!"

ರುಕ್ಮಿಣಿಯಮ್ಮ ಸುಮ್ಮನಾದರು. ಮೊಮ್ಮಗನನ್ನು ಕಂಕುಳಲ್ಲಿ ಇರಿಸಿ ಕೊಂಡೇ ಒಳಹೋಗುತ್ತ ಅವರೆಂದರು :

"ಗಾಡಿಯವನಿಗೆ ದುಡ್ಡು ಇಲ್ಲೇ ಕೊಟ್ಟಿಡು, ಅನಂತು."

ನರ್ಮದಾ ತಾಯಿಯನ್ನು ತಡೆದಳು.

"ನನ್ನ ಹತ್ತಿರ ಇದೆಯಮ್ಮ. ನೀನು ಸುಮ್ನಿರು. ತರದೇ ಇದ್ದಾಗ ಕೇಳಿ ಇಸಕೋತೀನಿ."

ಹಣ ಕೊಡುವೆನೆಂಬ ಮಾತನ್ನು ಸ್ವಾಭಿಮಾನ ಆಡಿಸಿತ್ತು. ಆದರೆ, ಮಗಳು ಬೇಡವೆಂದಾಗ, ರುಕ್ಮಿಣಿಯಮ್ಮ ಮೌನವಾದರು. [ಹಾಗೆ ಒತ್ತಾಯಿಸಿ ಕೊಡುವಷ್ಟು ಹಣವಿರಲಿಲ್ಲ ಈಗ.]

ಇದ್ದಕ್ಕಿದ್ದಂತೆ ಬಿಸಿಲು ಮಾಯವಾಗಿ ಮೋಡ ಕವಿಯತೊಡಗಿದುದನ್ನು ಲಕ್ಷಿಸಿ, ಅವರೆಂದರು :

"ಮಳೆ ಬರೋ ಲಕ್ಷಣ. ಬೇಗನೆ ಹೊರಡಿ ಇನ್ನು. ಅನಂತುವನ್ನು ಕರಕೊಂಡು ಹೋಗ್ತೀಯೇನು ?"

[ಸೈಕಲಿಗೆ ದೀಪವಿರಲಿಲ್ಲ. ಆದರೂ ಹೊರಡಲು ಸಿದ್ಧನಿದ್ದ ಅನಂತ.]

"ಬೇಡ ಯಾತಕ್ಕೆ? ಇನ್ನು ಸ್ವಲ್ಪ ಹೊತ್ತಿನೊಳಗೇ ಯಾದವಗಿರಿ ಸೇರಿರ್ತೀವಿ."

....ಟಾಂಗಾ ಹೊರಟಿತು. ಮುರಲಿಯ ಕೈಯಲ್ಲಿ ಆತನ ಅಜ್ಜಿಗೆ ನರ್ಮದಾ 'ತಾತಾ' ಮಾಡಿಸಿದಳು.

* * * * *

ಮೋಡ ದಟ್ಟೈಸುತ್ತಲೇ ಇತ್ತೆಂದು, ವಿಶಾಲಾಕ್ಷಿಯ ಮನೆಯಲ್ಲಿ ನರ್ಮದೆ ಹೆಚ್ಚು ಹೊತ್ತು ಇರುವುದಾಗಲಿಲ್ಲ.

ಹಿಂದೆ ಅಲ್ಲಿಯ ಕಾಫಿ ತಿಂಡಿ ರುಚಿಸುತ್ತಿರಲಿಲ್ಲ ನರ್ಮದೆಗೆ. ಈಗ ಸಂತೋಷದಿಂದ ಸ್ವೀಕರಿಸಿದಳು. ಆಗಿನ ಬಡತನದ ಪ್ರೇತಕಳೆಯೂ ಮನೆಯಲ್ಲಿ ಈಗ ಇರಲಿಲ್ಲ. ಗೋಡೆಗಳಿಗೆ ಸುಣ್ಣ ಹಚ್ಚಿತ್ತು. ಪ್ರತಿಯೊಂದರಲ್ಲೂ ಶಿಸ್ತಿತ್ತು....

ಮುರಲಿ ನಾಗಮ್ಮನ ಕಂಕುಳೇರಿ, ಅವರ ಕಣ್ಣು ಮೂಗುಗಳನ್ನು ಮುಟ್ಟಿ ನೋಡಿದ.

ಮಾತಿನ ನಡುವೆ ನರ್ಮದಾ ಅಂದಳು :

"ಅಂದ ಹಾಗೆ, ನಿನ್ನ ಲೇಖನ ಓದಿ ನೋಡಿದೆ ಕಣೇ. ನಿಜವಾಗಿಯೂ ತುಂಬಾ ಚೆನ್ನಾಗಿದೆ. ನೀನೇ ಅದನ್ನು ಬರೆದೆ ಅಂತ ನಂಬೋಕೇ ಆಗೊಲ್ಲ.... ಅಷ್ಟು ಚೆನ್ನಾಗಿದೆ."

ಇನ್ನೊಬ್ಬರು ಬರೆದುಕೊಟ್ಟಿರಬಹುದು ಎನ್ನುವ ಸೂಚನೆಯಲ್ಲ; ಸರಳವಾಗಿ ಆಡಿದ ಮಾತು.

"ಏನು ಚೆನ್ನಾಗಿದೆಯೊ!" ಎಂದು ವಿಶಾಲಾಕ್ಷಿ ಉದ್ಗರಿಸಿದಳು. ಆಕ್ಷಣವೆ, ಬಲು ಸಹಜವಾಗಿ, ಆಕೆಯ ಬಾಯಿಂದ ಹೊರಬಿತ್ತು: "ಆ ಲೇಖನ ಮೆಚ್ಕೊಂಡು, ಬರೆದವರ ಭೇಟಿಗೇಂತ ಇಲ್ಲಿಗೆ ಒಬ್ಬರು ಬಂದಿದ್ದರು ಕಣೇ."

"ಹ್ಞಾ? ಏನೇ ಅದು? ಏನು ಸಮಾಚಾರ?"

ನರ್ಮದೆಯ ಕಣ್ಣುಗಳು ತುಂಟತನದಿಂದ ಮಿನುಗಿದುದನ್ನು, ಅರೆಕ್ಷಣ ತಡವಾಗಿ ವಿಶಾಲಾಕ್ಷಿ ಗುರುತಿಸಿದಳು. ಸಿಟ್ಟು ಬರಲಿಲ್ಲ. ಲಜ್ಜೆ ಎನಿಸಿತು. 'ಅವರು ಕವಿ' ಎಂದು ಹೇಳಲು ಹೊರಟಿದ್ದವಳು ಅಲ್ಲಿಗೇ ತಡೆದಳು.

ನರ್ಮದಾ ಆಗ್ರಹಪಡಿಸಿದಳು:

"ಏನಾಯಿತೆ ಮತ್ತೆ?"

"ಬಂದರು, ನೋಡಿದರು, ಹೋದರು!"

"ಎಷ್ಟು ವಯಸ್ಸು ಆತನಿಗೆ?"

"ಹಣ್ಣು ಹಣ್ಣು ಮುದುಕ!"

ವಿಶಾಲಾಕ್ಷಿ ಆಡಿದುದು ನಿಜವೇ ಇರಬಹುದೆಂದು ನರ್ಮದಾ ನಂಬಿದಳು. ಕನ್ನಡದ ಹುಚ್ಚರಿಗೇನು ಕಡಮೆ–ಈ ದೇಶದಲ್ಲಿ?....

ಟಾಂಗಾದವನು ಪುನಃ ಕೂಗಿ ಹೇಳಿದ:

"ಒಂಟ್ಬಿಡಾನಾ ಅಮ್ಮಾವ್ರೇ....ಇನ್ನು ಕಾಲು ಗಂಟೆಯೊಳಗೇ ಉಯ್ದು ಬಿಡ್ತೇತೆ ಮಳೆ."

ಯಾದವಗಿರಿ ಸೇರುವುದಷ್ಟೇ ಅಲ್ಲ, ಮಳೆ ಬರುವುದಕ್ಕೆ ಮುನ್ನ ಪುನಃ ಊರೊಳಕ್ಕೆ ಬರಬೇಕೆಂಬ ಆತುರ ಟಾಂಗಾದವನಿಗಿತ್ತು.

ಕುಂಕುಮದ ತಟ್ಟೆಯನ್ನು ನರ್ಮದೆಯ ಬೊಟ್ಟು ಮುಟ್ಟಿತು.

ಮುರಲಿಯ ಕೈಯಲ್ಲಿ 'ತಾತಾ' ಮಾಡಿಸುವುದಕ್ಕೂ ಅವಸ್ಪದವೀಯದೆ, ಟಾಂಗಾ ಹೊರಟಿತು.

## ೬

"ಹ್ನಾ ? ಏನೇ ಅದು ? ಏನು ಸಮಾಚಾರ ?" ಎಂದು ನರ್ಮದೆ ಆಡಿದು ದೇನೋ ನಗೆಚಾಟಿಕೆಯ ನುಡಿ. ಆದರೆ, ಗಂಗಾಧರನನ್ನು ವಿಶಾಲಾಕ್ಷಿ ಕಂಡ ದಿನದಿಂದ ಅವಳ ಹೃದಯದೊಳಗೆ ಸ್ಪಂದಿಸತೊಡಗಿದ್ದ ಭಾವನೆಯೊಂದು, ಆ ಮಾತು ಕೇಳಿದ ಬಳಿಕ ಬಲಗೊಂಡಿತು ; ಗಲಭೆ ಆರಂಭಿಸಿತು.

ದಿನಗಳು ಕಳೆದುವು. ಒಮ್ಮೆಯೂ ಎಲ್ಲಿಯೂ ಕಣ್ಣಿಗೆ ಬೀಳಲೇ ಇಲ್ಲ ಆ ಕವಿವರ್ಯ.

ಲೈಬ್ರೆರಿಯಲ್ಲಿ 'ಪ್ರಬುದ್ಧ ಕರ್ಣಾಟಕ'ದ ಹಿಂದಿನ ಸಂಚಿಕೆಯನ್ನೆತ್ತಿಕೊಂಡು ವಿಶಾಲಾಕ್ಷಿ ಪುಟ ಮಗುಚಿದಳು. ಆ ಕವಿತೆ ಇತ್ತು–ಆತ ಬರೆದುದು. 'ಕಲ್ಲರಳಿ ಹೂವಾಯ್ತು'–ಗಂಗಾಧರ. ಭಾವಗೀತ. ಲಲಿತ ಪದಗಳು ಚೆಲ್ಲಾಡಿದ್ದುವು : ಶತಮಾನಗಳಿಂದ ಜಡವಾಗಿ ಬಿದ್ದಿತ್ತು ಜೀವ. ಬಳಿಕ ಒಮ್ಮೆ ಪ್ರಲಯವಾಗಿತ್ತು. ಬೆಟ್ಟಗಳು ಬಿರಿದುವು. ಭೂಗರ್ಭದಿಂದ ಜ್ವಾಲಾಮುಖಿಗಳು ಆಸ್ಫೋಟಿಸಿದುವು. ಸಾಗರಗಳು ಉಕ್ಕಿಬಂದುವು. ಜಲಮಯವಾಯ್ತು ಜಗವೆಲ್ಲ'........'ಉಳಿದು ದೊಂದೇ ಒಂದು–ಶಿಲೆ.' 'ದಿನ ಕಳೆದು, ನೀರಿಳಿದು....' 'ಜೀವಹಸ್ತವು ಸೋಂಕಿ ಕಲ್ಲರಳಿತು.' ಮುಂದೆ, ಮೆಲ್ಲಮೆಲ್ಲನೆ, 'ಕಲ್ಲರಳಿ ಹೂವಾಯಿತು.....'

ಓದಿದ ವಿಶಾಲಾಕ್ಷಿಗೆ, ಹೃದಯವನ್ನು ಯಾರೋ ಮೃದುವಾಗಿ ಮುಟ್ಟಿದಂತೆ ಭಾಸವಾಯಿತು. ಮುಟ್ಟಿದುದು ಮೃದುವಾಗಿ. ಆದರೂ ಗೂಡು ಕಂಪಿಸಿತು. ಒಳಗಿದ್ದ ಎಳೆಯ ಹಕ್ಕಿಗಳೆಲ್ಲ ಪುಕ್ಕವಿಲ್ಲದ ರೆಕ್ಕೆ ಬಡೆಯುತ್ತ ಚಿಲಿಪಿಲಿಗುಟ್ಟಿದುವು.

ಒಳ್ಳೆಯ ಕವಿತೆ. ಸಂದೇಹವೇ ಇರಲಿಲ್ಲ.

ವಿಶಾಲಾಕ್ಷಿ ಅದನ್ನು ಮತ್ತೊಮ್ಮೆ ಓದಿದಳು, ಮತ್ತೊಮ್ಮೆ.

ಕವಿತೆಯಲ್ಲಿ ಅಭಿವ್ಯಕ್ತಿಗೊಂಡಿದ್ದ ಭಾವ ಉದಾತ್ತವಾಗಿ ಅವಳಿಗೆ ಕಂಡಿತು. ಅದನ್ನು ಬರೆದ ವ್ಯಕ್ತಿ ಪ್ರಿಯನಾಗಿ ತೋರಿದ.

ಆ ರಸಾನುಭವವನ್ನು ಇತರರೊಡನೆ ಹಂಚಿಕೊಳ್ಳಬೇಕೆಂದು ಎಷ್ಟು ಆಸೆ ಪಟ್ಟಳು ಆಕೆ! ತನ್ನ ಲೇಖನವನ್ನೇನೋ ಬಹಳ ತಡೆದು-ಅದೂ, ಪ್ರಾಧ್ಯಾಪಕ ರೊಮ್ಮೆ ಪ್ರಸ್ತಾಪ ಮಾಡಿದ ಬಳಿಕ-ಸಹಾಧ್ಯಾಯಿಗಳಲ್ಲಿ ಒಬ್ಬಿಬ್ಬರು ಓದಿದ್ದರು. ಉಳಿದವರು ಬರಿದೆ ಗುಲ್ಲೆಬ್ಬಿಸಿದ್ದರು. ಈಗ ಅವರೊಡನೆ ಇದೊಂದು ಕವಿತೆಯನ್ನು ಕುರಿತು ಚರ್ಚಿಸಲಿ ತಾನು? 'ಆಸಕ್ತಿ ಕವಿತೆಯಲ್ಲೊ ? ಕವಿಯಲ್ಲೊ ?' ಎಂದು ಕೇಳದೆ ಇರುವವರಲ್ಲ ಅವರು!

ಕವಿತೆಯನ್ನು ಓದಿದ ಮೇಲಂತೂ ಗಂಗಾಧರನನ್ನು ಕಾಣಬೇಕೆಂದು ವಿಶಾಲಾಕ್ಷಿ ಚಡಪಡಿಸಿದಳು. ಮಧುರವಾದ ಯಾತನೆಯಿಂದ ಅವಳು ಬಾಧಿತ ಳಾದಳು. ಹೃದಯ ಭಾರವಾಯಿತು.

ಹೊರಕ್ಕಿಳಿದು ನಡೆಯತೊಡಗಿದರೆ, ತನ್ನ ಸಂಕಟವನ್ನು ಲೋಕವೆಲ್ಲ ಬಲ್ಲುದು-ಎಲ್ಲರೂ ತನ್ನನ್ನೇ ದಿಟ್ಟಿಸುತ್ತಿದ್ದಾರೆ-ನಗುತ್ತಿದ್ದಾರೆ ಎಂದು ಗಾಬರಿ ಗೊಳ್ಳುವಂತಾಯಿತು.

ಗಿರಿಜಾಬಾಯಿಯನ್ನೊಮ್ಮೆ ಕಾಣಬೇಕೆಂದು ವಿಶಾಲಾಕ್ಷಿ ಅಪೇಕ್ಷೆ ಪಟ್ಟಳು. [ತನ್ನನ್ನು ಹುಡುಕಿಕೊಂಡು ಹೊರಟಿದ್ದ ಗಂಗಾಧರ, ಅವರನ್ನು ಹಿಂದೆ ಕಂಡಿದ್ದ.] ಆದರೆ, ತನ್ನೊಳಗಿನ ಅರ್ಥವಿಲ್ಲದ ಸಂಕಟ ಅವರೆದುರು ಬಯಲಾಗುವುದು-ಎಂದು ಅವಳು ಭೀತಳಾದಳು.

ಒಮ್ಮೊಮ್ಮೆ ತನ್ನ ಪರಿಸ್ಥಿತಿ ಕಂಡು ತನಗೇ ನಾಚಿಕೆ ಎನಿಸುತ್ತಿತ್ತು; ನಗು ಬರುತ್ತಿತ್ತು ಕೂಡಾ.

ಯೋಚನೆಗಳನ್ನು ದೂರದಲ್ಲಿದ್ದ ರಂಗರಾಜನ ಕಡೆ ಹರಿಯಬಿಟ್ಟು, ವಸ್ತು ಸ್ಥಿತಿಯನ್ನು ಮರೆಯಲು ಆಕೆ ಯತ್ನಿಸಿದಳು.

ರಷ್ಯಾ ಯಾತ್ರೆಗೆ ಒಪ್ಪಿಗೆ ಸೂಚಿಸಿ ತಂತಿ ಬಂತೆಂದು, ತಂಗಿ ಬರೆದಳೆಂದು, ಅಣ್ಣನಿಗೆ ಸಂತೋಷವಾಗಿತ್ತು.

ಅವನು ಉತ್ತರವಿತ್ತಿದ್ದ :

'ದಸರೆಗೆ ಆಗುತ್ತದೋ ಇಲ್ಲವೋ. ಅಂತೂ ಬರುತ್ತೇನೆ-ಒಂದು ವಾರದ ಮಟ್ಟಿಗಾದರೂ....ನಿನ್ನ ಲೇಖನ ಓದಿದೆ. ಭೇಷ್!'

ಯಾರೊಡನೆಯೂ ವಿಶಾಲಾಕ್ಷಿ ಆಡಲಾಗದಿದ್ದ ವಿಷಯ, 'ಬಲು ಸುರಕ್ಷಿತ' ವೆಂದು, ಅಣ್ಣನಿಗೆ ಬರೆದ ಕಾಗದದಲ್ಲಿ ಒಡಮೂಡಿತು :

'ನಮ್ಮ ಮನೆಗೆ ಒಬ್ಬರು ಕವಿ ಬಂದಿದ್ದರು. ಕ್ಷೌರಿಕನ ಕೈ ಓಡದ, ಹಣೆಗೆ ಕಾಣದ, ನೀಳವಾದ ಕ್ರಾಪು; ಬೆರಳುಗಳ ಮಧ್ಯೆ ಉರಿಯುತ್ತಲೇ ಇರುವ ಸಿಗರೇಟು; ಕೊಳಕಾದ ಶರಟು ಪಾಯಜಾಮ–ಒಂದೂ ಇಲ್ಲ! ನನ್ನ ಲೇಖನ ಅವರಿಗೆ ಇಷ್ಟವಾಯ್ತಂತೆ. ಈ ವರ್ಷ ಕನ್ನಡ ಎಂ.ಎ.ಗೆ ಕುಳಿತಿದಾರೆ.'

ಆದರೆ, ಉತ್ತರದಲ್ಲಿ ಆ ಅಣ್ಣ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸಲಿಲ್ಲ. [ಅದು ಮಹತ್ವದ ವಿಷಯ ಎಂದು ಅವನಿಗೆ ಅನಿಸಿದ್ದರೆ ತಾನೆ....?]....

....ಕಾಲದ ಒತ್ತಡಕ್ಕೆ ಸಿಲುಕಿ, ಒಂದು ತಿಂಗಳ ಹಿಂದಿನ ಆ ನೆನಪು ನಜ್ಜು ನಜ್ಜಾಗಿ ಕಣಕಣವಾಗಿ ಚೆದರುತ್ತಿದ್ದಂತೆಯೇ, ಒಂದು ಮಧ್ಯಾಹ್ನ ಕಾಲೇಜಿನ ಆವರಣದಲ್ಲಿ ಗಂಗಾಧರನ ಭೇಟಿಯಾಯಿತು. ಕಂಡೂ ಕಾಣದಂತೆ ಹೋಗಿಬಿಡ ಬೇಕೆಂದು ವಿಶಾಲಾಕ್ಷಿಗೆ ಅನಿಸಿದರೂ ಆಕೆ ತಲೆ ಎತ್ತಿ ನೋಡಿದಳು.

ಆತ ನಸುನಕ್ಕು, ತುಸು ತಲೆಬಾಗಿ, ಮೌನ ನಮಸ್ಕಾರವಿತ್ತ. ವಿಶಾಲಾಕ್ಷಿಯ ಎದೆಗುಂಡಿಗೆ ಡವಡವನೆ ಹೊಡೆದುಕೊಂಡಿತು. ಪ್ರತಿಯಾಗಿ ಮುಗುಳುನಕ್ಕು ಹೊರಟುಹೋಗೋಣವೆಂದಿದ್ದರೂ, ಕಾಲುಗಳು ಕೈಕೊಟ್ಟುವು.

ಗಂಗಾಧರ ಕೇಳಿದ:

"ಮನೆಗೆ ಹೊರಟಿದೀರಾ?"

"ಹೂಂ. ಬೆಳಗ್ಗೆ ಕ್ಲಾಸಿತ್ತು."

"ನೀವು ಸಿಗುತ್ತೀರೇನೋಂತ ಈ ಕಡೆ ಬಂದೆ. ಎರಡು ದಿವಸಗಳಿಂದ ಹುಡುಕ್ತಾ ಇದೀನಿ ನಿಮ್ಮನ್ನ. ನನ್ನ ಕ್ಲಾಸು ಮೂರು ಗಂಟೆಗೆ. ಬಿಡುವಿದೆ ಯೇನು ನಿಮಗೆ?"

[ಎರಡು ದಿವಸಗಳಿಂದ ಹುಡುಕುತ್ತಿದ್ದನಂತೆ. ಎರಡೇ ದಿವಸಗಳಿಂದ?]

"ಮನೆಗೆ ಅಂತ ಹೊರಟಿದೀನಿ. ಅವಸರವೇನೂ ಇಲ್ಲ."

ಹಿಂದಿನ ರಾತ್ರೆ ಮಳೆಬಂದು ತೋಯ್ದಿದ್ದ ನೆಲ. ಬಿಸಿಲೂ ಪ್ರಖರ ವಾಗಿರಲಿಲ್ಲ. ಆದರೂ ಅಲ್ಲಿಯೇ ನಿಂತಿರುವುದು ಹೇಗೆ ಸಾಧ್ಯ?

ಮಧ್ಯಾಹ್ನದ ಹೊತ್ತು; ಹೆಲ್ತ್‌ಕಿರ್ಚ ಖಾಲಿಯಾಗಿಯೇ ಇದ್ದುದು ಅಲ್ಲಿಗೆ

ಕಾಣಿಸುತ್ತಿತ್ತು. ಆ ಕಡೆ ನೋಡಿ, ವಿಶಾಲಾಕ್ಷಿಯ ನೋಟವೂ ತನ್ನ ದೃಷ್ಟಿಯನ್ನು ಅನುಸರಿಸಿದಾಗ, ಅವನೆಂದ:

"ಒಳಗೆ ಹೋಗೋಣವೆ?"

'ಬೇಡ್ರೀ' ಎನ್ನಬೇಕೆಂದಿದ್ದ ವಿಶಾಲಾಕ್ಷಿ, ಕ್ಷೀಣಧ್ವನಿಯಲ್ಲಿ "ಹೂಂ" ಎಂದಳು.

ಮಾಸಿದ್ದ ಬೆತ್ತದ ಕುರ್ಚಿಗಳು–ಬಡಕಲು ಪೀಠಗಳು–ಅವರನ್ನು ಆಹ್ವಾನಿಸಿದುವು.

"ನೀವು ಕಾಫಿ ತಗೋತೀರಿ, ಅಲ್ವೆ?"

"ಬರೇ ಕಾಫಿ."

ಅದನ್ನು ತರಹೇಳಿ ಗಂಗಾಧರ ಮಾತಿಗೆ ಮೊದಲು ಮಾಡಿದ:

"ನಾನು ಆವತ್ತು ನಿಮ್ಮನ್ನು ಕಂಡ ಮಾರನೆಯ ದಿನವೇ ಊರಿಂದ ತಾರು ಬಂತು. ಶಿವಮೊಗ್ಗಾದಿಂದ. ಆಗ ಹೋದವನು ಬರೋದು ಇಷ್ಟು ತಡವಾಯ್ತು.... [ಸ್ವಲ್ಪ ತಡೆದು]....ನಮ್ಮ ತಾಯಿ ತೀರಿಕೊಂಡ್ರು...."

ಆತ ಕಾಣಿಸದೇ ಇದ್ದುದಕ್ಕೆ ಕಾರಣ ತಿಳಿದು ಸಮಾಧಾನವೆನಿಸಿದಾಗ ಆ ಸುದ್ದಿ.

"ಆ! ಹಾಗೇನು? ಏನಾಗಿತ್ತು?"

"ಈಗ ಎರಡು ವರ್ಷಗಳಿಂದ ಪಾರ್ಶ್ವವಾಯುವಿನಿಂದ ನರಳ್ತಾನೇ ಇದ್ರು. ವಯಸ್ಸೂ ಆಗಿತ್ತು. ನಾನು ಹೋದಮೇಲೂ ಒಂದು ವಾರ ನರಳಾಡಿದ್ರು."

"ಅಯ್ಯೋ ಪಾಪ!"

"ಅಂತೂ ಆ ಜೀವಕ್ಕೆ ಬಿಡುಗಡೆಯಾಯ್ತು. ತಾಯಿ, ನಮ್ಮ ಕುಟುಂಬದಲ್ಲಿ ನಾನು ಪ್ರೀತಿಸಿದ್ದ ಒಬ್ಬಳೇ ವ್ಯಕ್ತಿ."

"ನಿಮ್ಮ ತಂದೆ—"

"ಇದಾರೆ. ದೊಡ್ಡ ಕಂಟ್ರಾಕ್ಟರು. ಅವರೂ ಹಿರಿಯಣ್ಣನೂ ವ್ಯವಹಾರ ನಡೆಸ್ಕೊಂಡು ಹೋಗ್ತಿದಾರೆ. ನಮ್ಮದೇನೂ ಸಣ್ಣ ಸಂಸಾರವಲ್ಲ [ನಿಮ್ಮದರ ಹಾಗೆ]. ಎರಡನೆಯವನು ಸಾಗರದಲ್ಲಿ ಅಮಲ್ದಾರ. ಆಮೇಲೆ ಎರಡು ಹೆಣ್ಣು. ಮದುವೆಯಾಗಿದೆ. ನಾನೇ ಚಿಕ್ಕವನು. ಅಧ್ಯಾಪಕವೃತ್ತಿಗೆ ಇಳಿದೇಂತ ನಮ್ಮ ತಂದೆಗೆ ನನ್ನ ಮೇಲೆ ಸಿಟ್ಟು."

"ಎಲ್ಲಿ ಅಧ್ಯಾಪಕರಾಗಿದ್ದಿರಿ ?"

ಕಾಫಿ ಬಂದು, ಸಂಭಾಷಣೆಗೆ ಅಲ್ಪ ವಿರಾಮ ದೊರೆಯಿತು.

ಹೀರಿ, ರುಚಿನೋಡಿ, "ಇದೆ ತಕ್ಕಮಟ್ಟಿಗೆ" ಎಂದು, ಗಂಗಾಧರ ಮುಂದು ವರಿದ:

"ಗುಲ್ಬರ್ಗಾದಲ್ಲಿ. ನಾನು ಆನರ್ಸ್ ಮಾಡ್ಕೊಂಡು ಐದು ವರ್ಷಗಳಾದುವು. ಪಾಸಾದ ವರ್ಷವೇ ಅಲ್ಲಿ ಕಾಲೇಜಿನಲ್ಲಿ ಲೆಕ್ಚರರ್ ಆಗಿ ಒಂದು ತಾತ್ಕಾಲಿಕ ಉದ್ಯೋಗ ಸಿಗ್ತು. ಎರಡು ವರ್ಷ ಅಲ್ಲಿದ್ದೆ."

"ಗುಲ್ಬರ್ಗಾ, ಹೈದರಾಬಾದ್ ಸಂಸ್ಥಾನದಲ್ಲಲ್ವೆ ಇರೋದು ?"

"ಹೂಂ. ಇನ್ನೂ ಒಂದು ತಿಂಗಳು ಅದೇ ಸಂಸ್ಥಾನದಲ್ಲಿರುತ್ತೆ. ಆಮೇಲೆ ಕರ್ನಾಟಕ ಪ್ರಾಂತ ಆಗುತ್ತೆ...."

"ಹೌದು. ಪತ್ರಿಕೇಲಿ ಓದಿದೀನಿ."

"ಏನು ಹೇಳ್ತಿದ್ದೆ ಅಂದ್ರೆ–ಅದೇ–ಉದ್ಯೋಗದ ವಿಷಯ. ಅಲ್ಲಿಂದ ಬಂದ ವನು ಒಂದು ವರ್ಷ ಮನೇಲೇ ಇದ್ದೆ. ಆಮೇಲೆ ನಮ್ಮೂರಿನ ಪುರಪ್ರೌಢ ಶಾಲೇಲಿ ಎರಡ್ವರ್ಷ ಅಧ್ಯಾಪಕನಾದೆ!"

ಕಾಲೇಜಿನಲ್ಲಿ ಉಪನ್ಯಾಸಕನಾಗಿದ್ದ ಬಳಿಕ ಹೈಸ್ಕೂಲಿನಲ್ಲಿ ಉಪಾಧ್ಯಾಯ.

"ಅಲ್ಲೇನು ಕನ್ನಡ ಕಲಿಸ್ತಿದ್ರಾ ?"

"ಎಲ್ಲಾ ಹೇಳ್ಕೊಡ್ತಿದ್ದೆ !....ತಾಯಿಗೆ ಕಾಹಿಲೆ ಬೇರೆ. ಕಿರಿಮಗ ಅಂತ ಅವರಿಗೂ ನನ್ನ ಮೇಲೆ ಪ್ರೀತಿ. ಈ ವರ್ಷ ಎಂ.ಎ. ಮಾಡ್ಕೊಳ್ಳೋದಕ್ಕೆ ಬಿಟ್ರು....ಇನ್ನು ಮೇಲೆ ಮಾತ್ರ ಯಾವ ಬಂಧನವೂ ನನಗಿಲ್ಲ."

['ಮದುವೆಯಾಗಿಲ್ಲ ನನಗೆ.']

ಕಾಫಿ ಕುಡಿದಾಗಿತ್ತು. ಆದರೆ; ಆಗಲೇ ಏಳುವ ಆತುರವನ್ನು ಇಬ್ಬರೂ ತೋರಲಿಲ್ಲ.

ವಿಶಾಲಾಕ್ಷಿ ಅಂದಳು:

"ನಿಮ್ಮ ಕವಿತೆ ಓದಿದೆ."

"ಹೌದೆ? ಈಗ ನೆನಪಾಯ್ತು. ಮಾತನಾಡೋದರಲ್ಲಿ ಮರತೇ ಬಿಡ್ತಿದ್ದೆ. ನಿಮಗೊಂದು ಪ್ರತಿ ಕೊಡಬೇಕೂಂತ ಇರಿಸಿದ್ದು–ಇಗೋ–"

ಪುಸ್ತಕಗಳೆಡೆಯಿಂದ ಆತ ತೆಗೆದುಕೊಟ್ಟ. ಬಿಳಿಯ ಹೊದಿಕೆಯೋ.

ತುಸು ಮಾಸಲು, ಒಳಗೆ ಒಂದೇ ಹಾಳೆ. ಮೇಲೆ ಬರೆದಿತ್ತು: ಶ್ರೀಮತಿ ಎಸ್. ವಿಶಾಲಾಕ್ಷಿ ಅವರಿಗೆ–ಆದರಪೂರ್ವಕ–ಗಂಗಾಧರ. ದಿನಾಂಕ: ಒಂದು ತಿಂಗಳಿಗೆ ಹಿಂದಿನದು. ['ಆ ದಿನವೇ ಬರೆದಿರಬೇಕು.']

ಕವಿತೆ ಹೇಗಿದೆ?–ಎಂದು ಆತ ಕೇಳಲಿಲ್ಲ. ನಿರೀಕ್ಷಿಸಿದ ಪ್ರಶ್ನೆ ಬರಲಿಲ್ಲ ವೆಂದು ವಿಶಾಲಾಕ್ಷಿಯೇ ಅಂದಳು:

"ಓದಿ ಸಂತೋಷಪಟ್ಟೆ."

[ಪ್ರತಿಗಾಗಿ 'ಥ್ಯಾಂಕ್ಸ್' ಎನ್ನುವುದು ಮರೆತು ಹೋಯಿತು.]

"ನಾನು ಬರೆಯೋದು ಕಡಮೆ. ಯಾವ ಮಹತ್ವಾಕಾಂಕ್ಷೆಯೂ ನನಗಿಲ್ಲ. ಯಾವತ್ತಾದರೂ ಏನಾದರೂ ಗೀಚ್ತೇನೆ, ಅಷ್ಟೆ."

"ನೀವು ಬರೆದದ್ದನ್ನೆಲ್ಲಾ ಒಮ್ಮೆ ಓದೋಕೆ ಕೊಡಿ."

ಗಂಗಾಧರ ಮುಗುಳುನಕ್ಕ.

"ಆಗಲಿ....ಆಮೇಲೆ ನೀವು ಏನಾದರೂ ಹೊಸದು ಬರೆದಿರಾ?"

"ಇಲ್ಲವಪ್ಪ. ನಮ್ಮ ಪ್ರಾಧ್ಯಾಪಕರಿಗಂತೂ ಕನ್ನಡದಲ್ಲಿ ನಾನು ಬರೆಯೋದು ಇಷ್ಟವಿಲ್ಲ."

"ಅವನ ಸಂಕಟ ನಾನು ಅರ್ಥಮಾಡ್ಕೋಬಲ್ಲೆ! ಇಂಗ್ಲಿಷ್ ಸಾಹಿತ್ಯದ ವಿಷಯವಾಗಿ ನೀವು ಕನ್ನಡದಲ್ಲಿ ಬರೆದಿದೀರಿ. ಇದು ಆಚಾರ್ಯ ಶ್ರೀಯವರ ಪರಂಪರೆ. ಹಾಗೆಯೇ ಕನ್ನಡ ಸಾಹಿತ್ಯದ ವಿಷಯವಾಗಿ ಇಂಗ್ಲಿಷಿನಲ್ಲೂ ನೀವು ಬರೀಬೇಕು. ಹಿಂದಿ ಕಲಿತ ನಮ್ಮ ಜನ, ಕನ್ನಡ ಸಾಹಿತ್ಯದ ಪರಿಚಯವನ್ನು ನಮ್ಮ ದೇಶೀಯರಿಗಾದರೂ ಮಾಡಿಕೊಡಬಹುದೂಂತ ನಿರೀಕ್ಷಿಸಿದೆ. ಆದರೆ, ಇವರಲ್ಲಿ ಹೆಚ್ಚಿನವರು ದಾಸೋಹಭಾವದವರು. ಹಿಂದೀ ಪ್ರಚಾರಕರಾಗಿ ಹೊಟ್ಟೆ ಹೊರೆಯೋದೇ ಇವರ ಜೀವಿತಧ್ಯೇಯ. ಕವಿತೆ ಕತೆ ಕಾದಂಬರಿ ನಾಟಕ ಯಾವ ವಿಷಯ ಎತ್ತಿದರೂ ಹಿಂದಿಯ ಗುಣಗಾನ ಮಾಡ್ತಾರೆ...."

"ನನಗೆ ಹಿಂದಿಯ ಮೇಲೆ ವ್ಯಾಮೋಹವಿಲ್ಲ," ಎಂದಳು ವಿಶಾಲಾಕ್ಷಿ, ಸಣ್ಣನೆ ನಕ್ಕು.

"ಗೊತ್ತು. ನಿಮ್ಮನ್ನು ಉದ್ದೇಶಿಸಿ ನಾನು ಹೇಳಲಿಲ್ಲ. ಆದರೆ, ನಮ್ಮ ಮಧ್ಯಮವರ್ಗದ ಮಹಿಳೆಯರಲ್ಲಿ ಹೆಚ್ಚಿನ ಜನ ಹಿಂದಿ ಅಂದರೆ ಪ್ರಾಣಬಿಡ್ತಾರೆ."

"ರಾಷ್ಟ್ರಭಾಷೆ–ಅಂತ!"

"ಕನ್ನಡವೂ ರಾಷ್ಟ್ರಭಾಷೆಯೇ. ನಮ್ಮ ದೇಶದಲ್ಲಿ, ಒಂದಲ್ಲ-ಹದಿನಾಲ್ಕು ಹದಿನೈದು ರಾಷ್ಟ್ರಭಾಷೆಗಳಿವೆ. ಹೆಚ್ಚು ಜನಕ್ಕೆ ತಿಳಿದಿರೋ ಹಿಂದಿ, ಯಾವತ್ತೂ ರಾಷ್ಟ್ರಭಾಷೆಯಾಗದು."

"ಹಾಗಾದರೆ ನೀವು ಹಿಂದೀದ್ವೇಷಿ ಅನ್ನಿ!"

"ನಾನು ಹಿಂದೀದ್ವೇಷಿಯೂ ಅಲ್ಲ, ಇಂಗ್ಲಿಷ್ ದ್ವೇಷಿಯೂ ಅಲ್ಲ. ನಾನು ಎಲ್ಲಾ ಭಾಷೆಗಳನ್ನೂ ಪ್ರೀತಿಸ್ತೇನೆ!"

ಇದ್ದದ್ದಂತೆ ವಿಶಾಲಾಕ್ಷಿ ಕೈಗಡಿಯಾರದ ಕಡೆ ನೋಡಿದಳು. ಅದನ್ನು ಗಮನಿಸಿ ಗಂಗಾಧರನೆಂದ:

"ಹೊತ್ತಾಯ್ತೇನು? ಕ್ಷಮಿಸಿ. ಸಾಧಾರಣವಾಗಿ ನಾನು ಮಿತಭಾಷಿ. ಆದರೆ, ನಿಮ್ಮನ್ನ ನೋಡಿ ಒಂದು ತಿಂಗಳ ಮೇಲಾಯ್ತಲ್ಲ? ಹೀಗಾಗಿ ಭೈರಿಗೆ ಕೊರೆದೆ."

"ದಯವಿಟ್ಟು ತಪ್ಪು ತಿಳ್ಕೋಬೇಡಿ. ನನಗೇನೂ ಬೇಸರವಾಗಿಲ್ಲ. ಇನ್ನೂ ಹನ್ನೆರಡೂಕಾಲು ಅಷ್ಟೆ."

ವಿಷಯಾಂತರವಾಗಲೆಂದು ಗಂಗಾಧರ ಕೇಳಿದ:

"ನಿಮ್ಮ ತಮ್ಮ ಹೈಸ್ಕೂಲಲ್ಲಿ ಓದ್ತಿದಾನೆ, ಅಲ್ವೆ?"

"ಹೌದು. ಚಿಕ್ಕವನು. ಆವತ್ತು ನೋಡಿದಿರಲ್ಲ, ಆತ ಅವನಿಗಿಂತ ದೊಡ್ಡವನು ಯುವರಾಜಾ ಕಾಲೇಜಿನಲ್ಲಿ ಜೂನಿಯರ್ ಬಿ.ಎಸ್‌ಸೀಲಿ ಓದ್ತಿದಾನೆ. ನನ್ನ ಅಣ್ಣ ಎಂಜಿನಿಯರು. ಭಿಲಾಯಿಲೀದಾನೆ."

"ಹಾಗೇನು? ['ನೀವೇ ಹಿರಿಯಾಕೆ-ಎಂದಿದ್ದೆ.'] ಭಿಲಾಯಿ ಹೊಸ ಉದ್ಯಮ. ಬದಲಾಗ್ತಿರೋ ರಾಷ್ಟ್ರದ ಹೊಸ ಮುಖ. ಎಂಜಿನಿಯರ್ ಆಗೂಂತ ನಮ್ಮ ತಂದೆ ನನಗೂ ಅಂದಿದ್ದರು. ಆದರೆ ನನ್ನ ಒಲವು ಸಾಹಿತ್ಯದ ಕಡೆಗೇ ಹರೀತು."

"ಹೆತ್ತವರೆಲ್ಲರೂ ಅಷ್ಟೇ. ಗಂಡುಮಕ್ಕಳು ಎಂಜಿನಿಯರುಗಳೋ ಡಾಕ್ಟರರೋ ಆಗಬೇಕೂಂತ ಆಸೆ ಪಡ್ತಾರೆ. ನಮ್ಮಣ್ಣನಿಗೆ ಎಂಜಿನಿಯರಿಂಗ್ ಇಷ್ಟವೂ ಇತ್ತೆನ್ನಿ....[ತುಸು ತಡೆದು] ನಮ್ಮ ತಂದೆ ಈಗಿಲ್ಲ. ಒಂದು ವರ್ಷದ ಹಿಂದೆಯೇ ತೀರಿಕೊಂಡರು."

"ಆಗಲೇ ಊಹಿಸಿದ್ದೆ."

ಈ ಉತ್ತರ ವಿಶಾಲಾಕ್ಷಿಗೆ ಅಸಾಧಾರಣವೆನಿಸಿತು.

"ಹೇಗೆ?"

"ನಿಮ್ಮ ತಾಯಿಯಾನ ಆವತ್ತು ನೋಡಿದೆನಲ್ಲ? ಹಣೆ ಬರಿದಾಗಿತ್ತು."

"ಹೌದಲ್ಲ!"

ನಿರೀಕ್ಷಿಸಿ ತಿಳಿಯುವ ಗಂಗಾಧರನ ಈ ಸಾಮರ್ಥ್ಯ, ವಿಶಾಲಾಕ್ಷಿಗೆ ಮೆಚ್ಚುಗೆಯಾಯಿತು.

ಆತನೆಂದ :

"ಏಳಿ, ಹೊರಡೋಣ. ಒಂದೇಸಲ ಇನ್ನೂ ಹೆಚ್ಚು ಬೇಸರಪಡಿಸಿದೆನೆಂದರೆ, ಇನ್ನೊಮ್ಮೆ ನನ್ನನ್ನು ದೂರದಿಂದ ನೋಡಿಯೇ, ನೀವು ಬೇರೆ ಹಾದಿ ಹಿಡಿಯೋದು ಖಂಡಿತ!"

ಆಕಡೆ ಸುಳಿದ ಹುಡುಗನಿಗೆ ಗಂಗಾಧರ ಬಿಲ್ ಸಂದಾಯ ಮಾಡಿದೊಡನೆ, ಅವರೆದ್ದರು.

ಬಿಸಿಲಿನ ಚುರುಕು ಮುಟ್ಟಿತೆಂದು ಸೆರಗನ್ನು ತಲೆಯ ಮೇಲಕ್ಕೆ ಎಳೆದುಕೊಳ್ಳುತ್ತ, ವಿಶಾಲಾಕ್ಷಿ ಅಂದಳು :

"ಬರ್ತೀನ್ರೀ. ಕಾಫಿಗಾಗಿ ಥ್ಯಾಂಕ್ಸ್!"

ಗಂಗಾಧರ ನಗುತ್ತ ಅಂದ :

"ಸರಿ, ಸರಿ! ಇಷ್ಟಕ್ಕೇ ಆಗಿಹೋಯ್ತು ಅಂದ್ಕೊಂಡಿರಾ?...."

ಮರಗಳ ಕೆಳಗೆ ಅಲ್ಲಿ ಇಲ್ಲಿ ವಿದ್ಯಾರ್ಥಿಗಳಿದ್ದರು. ಅವರ ಕಡೆಗೆ ನೋಡದೆ, ಸರಸರನೆ ನಡೆಯುತ್ತ, ವಿಶಾಲಾಕ್ಷಿ ಮನೆಯತ್ತ ಸಾಗಿದಳು.

ಆತನ ಜತೆ, ಸಂಕೋಚವಿಲ್ಲದೆ, ತಾನು ಹೋಗಿಬಿಟ್ಟಿದ್ದಳು ಉಪಾಹಾರ ಗೃಹಕ್ಕೆ. ಅವಳಿಗೆ ನೆನಪಿತ್ತು. ಮೂರು ವರ್ಷಗಳಿಗೆ ಹಿಂದೆ ಆನರ್ಸ್ ಪರೀಕ್ಷೆ ಮುಗಿದ ದಿನ, ನರ್ಮದೆಯನ್ನೂ ತನ್ನನ್ನೂ ರಘುನಾಥ ಕರೆದಿದ್ದಾಗ? ಆಗಿನ ವಿಶಾಲಾಕ್ಷಿಯಲ್ಲಿ ತಾನು. ರಘುನಾಥನಲ್ಲ, ಈ ಗಂಗಾಧರ....

ಅವಳ ಹೃದಯ ಈಗ ಹಗುರವಾಗಿತ್ತು. ಆ ಬಿಸಿಲಿನಲ್ಲೂ ದಾರಿಯ ದೂರದ ಅರಿವು ಅವಳಿಗಾಗಲಿಲ್ಲ.

## ೧೦

ಗಂಗಾಧರನ ಹೃದಯವೂ ಈಗ ಹಗುರವಾಗಿತ್ತು. ಒಂದು ತಿಂಗಳ ಹಿಂದೆ ಸಣ್ಣನೆ ಬೀಸಿತ್ತು ತಂಗಾಳಿ. ಹೃದಯದ ಹಕ್ಕಿಯ ಪುಕ್ಕಗಳಿಗೆ ಅದು ಸೋಂಕುವುದಕ್ಕೆ ಮೊದಲೇ, ತಾಯಿಯ ಮರಣ ಎಲ್ಲವನ್ನೂ ತಲೆಕೆಳಗು ಮಾಡಿತ್ತು. ಅನಂತರವೋ, ಸ್ವಲ್ಪಕಾಲ ಅಲ್ಲಿದ್ದುದು ಶೂನ್ಯ–ಬರಿಯ ಶೂನ್ಯ.

ತಂದೆ ಕೇಳಿದ್ದರು:

"ಎಂ. ಎ. ಮುಗಿಸ್ಲೇಬೇಕೇನು ?"

"ಹೌದು, ಹೌದು."

"ಹೀಗೆ ವಾರಗಟ್ಟಲೆ ನೀನು ಇಲ್ಲೇಇದ್ದರೆ ?"

"ಏನೂ ಪರವಾಗಿಲ್ಲ, ಓದ್ಕೊಕ್ತೇನೆ."

ಮಗ ಬುದ್ಧಿವಂತನೆಂದು ತಂದೆ ಬಲ್ಲರು. ಆತ 'ನಿಷ್ಪ್ರಯೋಜಕ ಭಾವ ಜೀವಿ'ಯಾದನೆಂಬುದೇ ಅವರ ಆಕ್ಷೇಪ.

ಮೈಸೂರಿಗೆ ಗಂಗಾಧರ ಹಿಂತಿರುಗಿ ಬಂದ. ಮಾತೃವಾತ್ಸಲ್ಯದ ಮರ ಮರುಳಿ, ಆಸರೆಯಿಲ್ಲದ ಪಥಿಕನಾಗಿದ್ದ ಆತ. ಅಂಥದೇ ಬೇರೆ ವಾತ್ಸಲ್ಯವನ್ನು, ಅವನ ಹೃದಯ ಬಯಸುತ್ತಿತ್ತು.

ಹಿಂದೆ ಸಣ್ಣನೆ ಬೀಸಿದ್ದ ತಂಗಾಳಿ....

ಮೈಪುಲಕಗೊಳ್ಳುವಷ್ಟು ಮಧುರವಾಗಿತ್ತು ನೆನಪು....

ತನ್ನ ವರ್ತನೆ ಉಚಿತವೆ? ವಿಚಾರ ನಿರ್ಮಲವೆ?–ಎಂದು ಎಷ್ಟೋಸಾರಿ ಆತ ಯೋಚಿಸಿದ. 'ಅಲ್ಲ' ಎಂಬ ಸಂದೇಹ ಕೂಡಾ ಅವನಿಗೆ ಆಗಲಿಲ್ಲ.

ಇಷ್ಟಿದ್ದೂ ತನ್ನ ಕಲ್ಪನೆ ಮುರಿದುಬಿದ್ದರೆ? ಭ್ರಮೆ ಬಂಡೆಗೆ ಅಪ್ಪಳಿಸಿ ನುಚ್ಚುನೂರಾದರೆ ?

ಕೆಟ್ಟುದನ್ನೇ ಇದಿರುನೋಡುವುದರಲ್ಲಿ ಅರ್ಥವಿಲ್ಲ–ಎಂದುಕೊಂಡ ತನ್ನಷ್ಟಕ್ಕೇ....

....ಎರಡನೆಯ ಭೇಟಿಯಿಂದ, ಶೂನ್ಯದ ಬಿರುಗಾಳಿ ಶಮನವಾಗಿ, ಹೃದಯ ಹಗುರವಾಗಿತ್ತು.

ಆದರೂ, ಹೃದಯದ ಪ್ರಕೃತಿ ಎಷ್ಟೊಂದು ಸೂಕ್ಷ್ಮ! ತುಸು ಮಿಸುಕಿದರೂ ಸಾಕು, ತಪ್ಪುತ್ತಿತ್ತು ಸಮತೂಕ.

ಮದುವೆಯ ಪ್ರಯತ್ನವನ್ನೂ ತಂದೆ ಹಿಂದೆ ಮಾಡಿದ್ದರು. ಗಂಗಾಧರ ಯಾವುದಕ್ಕೂ ಒಪ್ಪಿರಲಿಲ್ಲ.

'ನಿಮ್ಮ ಕನ್ಯಾನ್ವೇಷಣೆ ನಿಲ್ಲಿಸಿ; ಇಲ್ಲದ ಆಸೆ ಹುಟ್ಟಿಸಿ ಹೆಣ್ಣು ಹೆತ್ತವರ ಮನಸ್ಸು ನೋಯಿಸಬೇಡಿ'–ಎಂದಿದ್ದ.

'ನೀನು ನಿಶ್ಚಿಂತೆಯಾಗಿರಮ್ಮ. ಒಬ್ಬಳು ಸೊಸೆ [ದೊಡ್ಡಣ್ಣನ ಹೆಂಡತಿ]–ಮೊಮ್ಮಕ್ಕಳು–ಮನೇಲೇ ಇಲ್ವೆ? ಈಗ ಅಷ್ಟು ಸಾಕು'–ಎಂದು ತಾಯಿಯೊಡನೆ ಅಂದಿದ್ದ.

ಆಕೆ ಮಲಗಿದಲ್ಲಿಂದಲೇ ಕಣ್ಣೀರು ಹರಿಸಿದಾಗ ನುಡಿದಿದ್ದ :

'ಭಾಷೆ ಕೊಡ್ತೀನಿ, ಅಮ್ಮ. ನಾನೇನೂ ಸನ್ಯಾಸಿಯಾಗೋದಿಲ್ಲ. ಖಂಡಿತ ಮದುವೆ ಮಾಡ್ಕೊಳ್ತೀನಿ. ನೀನು ಮೆಚ್ಚಿ ಸಂತೋಷಪಡುವಂಥ ಒಳ್ಳೇ ಹುಡುಗಿಯ ಕೈ ಹಿಡೀತೀನಿ. ಆದರೆ ಸ್ವಲ್ಪ ತಡವಾದೀತು!'

ಅದು, ತಾಯಿಗೆ ಮಗ ಕೊಟ್ಟ ಮಾತು. ಅಷ್ಟರಿಂದಲೇ, ನರಳುತ್ತಿದ್ದ ಆ ಜೀವಕ್ಕೆ ಸ್ವಲ್ಪ ನೆಮ್ಮದಿ ಅನಿಸಿತ್ತು.

ಸತ್ತವರ ಬಗೆಗೆ ಇನ್ನು ಯೋಚಿಸುವುದರಲ್ಲಿ ಅರ್ಥವಿಲ್ಲ–ಎಂದುಕೊಳ್ಳುತ್ತಿದ್ದ ಗಂಗಾಧರ. ಆದರೂ ತಾಯಿಗೋಸ್ಕರವಲ್ಲ–ತನಗೋಸ್ಕರವೇ, ತಾನು ಮದುವೆಯಾಗಬೇಕು. ಒಂಟಿಯಾಗಿಯೇ ಇರಬಹುದು, ಇರೋಣ–ಎನ್ನುವ–ಭಾವನೆ ಒಂದು ನಿರ್ದಿಷ್ಟ ಅವಧಿಯವರೆಗೆ. ದೇಹದ ಬಯಕೆಗಳನ್ನು ಮೆಟ್ಟಿ ನಿಂತರೂ, ತನ್ನದೇ ಆದ–ತನ್ನೊಬ್ಬನದೇ ಆದ–ಜೀವದ ಸಖ್ಯ ಬೇಕೆನಿಸುತ್ತಿತ್ತು.

ತನಗೋಸ್ಕರ ತಾನೇ ಆರಿಸಿಕೊಳ್ಳಬೇಕಾದ ಇನ್ನೊಂದು ಜೀವ.

'ಕಾಲೇಜಿನ ಪ್ರೇಮ' ಎಂದು ಕುತ್ಸಿತ ಟೀಕೆಗೆ ಬಲಿಯಾಗುವಷ್ಟು ಎಳೆಯನಲ್ಲವಲ್ಲ ತಾನು!

ಇಷ್ಟಿದ್ದೂ ತನ್ನ ಈ ಆಯ್ಕೆ ತಪ್ಪೆನಿಸಿದರೆ? ಬಯಕೆ ಈಡೇರದೇ ಹೋದರೆ? ಯಾವ ಉಪಜಾತಿಯೊ? ಯಾವ ಒಳಪಂಗಡವೊ? ಮತ್ತಾವ ಗೋತ್ರವೊ? ಅಂತಹ ಬಿರುಗಾಳಿಯನ್ನೆಲ್ಲ, ತಾನು ಇದಿರಿಸಬಲ್ಲೆ. ಆದರೆ, ಆಕೆ?

ಎಂತಹ ಹುಚ್ಚು! ಮದುವೆಗೆ ಅವಳ ಒಪ್ಪಿಯೇ ಇರುವಳೇನೋ ಎನ್ನು ವಂತೆ ವಿಚಾರ ಸರಣಿ.

'ಸುರಸುಂದರಿ ಬೇಕೇನೋ ನಿಂಗೆ?'

ಸಿಡುಕಿನಿಂದ ತಂದೆ, ಹಾಗೆ ಕೇಳಿದ್ದರು ಒಮ್ಮೆ.

ಸುರಸುಂದರಿಯೇ ಬೇಕು ತನಗೆ. ಆ ಸುರಸುಂದರಿ ಈಕೆಯೇ.

ಆ ಲೇಖನದಲ್ಲಿ ಕೆಲವೇ ಪುಟಗಳಲ್ಲಿ ಹರಿದು ಬಂದಿತ್ತು, ಮಧುರಭಾವಗಳ–ವಿಚಾರಗಳ–ಹೊನಲು. ಅದನ್ನು ಬರೆದ ವ್ಯಕ್ತಿಯ ಆತ್ಮ ಸೌಂದರ್ಯ ಎಂಥದಿರ ಬೇಡ!

'ಆಧುನಿಕ ಆಂಗ್ಲ ಕಾವ್ಯದಲ್ಲಿ ಸೌಂದರ್ಯೋಪಾಸನೆ.' ಅದನ್ನು ಬರೆದ ಸುಂದರಿಯ ಉಪಾಸಕನೇ ಆದೆ ತಾನು!....

*  *  *  *

ಊರು ಎಚ್ಚೆತ್ತಿತ್ತು, ದಸರೆಯ ಸಿದ್ಧತೆ ಆರಂಭಿಸಿತ್ತು. ಧೂಳು ತೊಳೆಯುವ ಕೆಲಸ ತನ್ನದೆಂದು ಮಳೆ ಸುರಿದಿತ್ತು.

ಆ ಸಂಜೆ ಮಹಡಿಯ ಮೇಲಣ ಕೊಠಡಿಯಿಂದ [ಪುಕ್ಕಟೆ ಊಟಕ್ಕೋಸ್ಕರ ವಲ್ಲ; ಜಾತೀಯ ಹಣೆಪಟ್ಟಿ ಇಲ್ಲದ ವಿದ್ಯಾರ್ಥಿನಿಲಯ ಬೇಕೆಂದು ಅಲ್ಲಿಗೆ ಆತ ಬಂದಿದ್ದ] ಬೀದಿಯಲ್ಲಿ ಹರಿಯುತ್ತಿದ್ದ ಮಳೆನೀರನ್ನು ನೋಡುತ್ತ, ಗಂಗಾಧರ ಕುಳಿತಿದ್ದ. ನೆಪಕ್ಕೊಂದು ಅಭ್ಯಾಸದ ಪುಸ್ತಕವಿತ್ತು ಕೈಯಲ್ಲಿ. ಮಳೆ ನಿಂತಿ ತೆಂದು ವಿದ್ಯಾರ್ಥಿನಿಲಯ ಬರಿದಾಯಿತು. ಇನ್ನು ಎಲ್ಲರೂ ಗೂಡುಸೇರುವುದು ಕತ್ತಲಾದ ಮೇಲೆ.

ತಾನೂ ಬೀದಿಯುದ್ದಕ್ಕೂ ಸುತ್ತಾಡಿಕೊಂಡು ಬರೋಣವೆಂದು, ಗಂಗಾಧರ ಹೊರಡಲು ಅಣಿಯಾದ.

ಮೆಟ್ಟಿಲುಗಳನ್ನು ಇಳಿಯುತ್ತ ಮನಸ್ಸಿನಲ್ಲೆ ಅಂದುಕೊಂಡ :

'ಕವಿತೆಗಳನ್ನು ಓದಲು ಕೇಳಿದ್ದಾಳೆ. ತನ್ನ ಟಿಪ್ಪಣಿ ಪುಸ್ತಕವನ್ನು ನಾಳೆ ಒಯ್ದು ಕೊಡಬೇಕು.'

ಅಂಗಳ ಸೇರುವ ಹೊತ್ತಿಗೆ ಹೊಸ ನಿರ್ಧಾರ ಕೈಗೊಂಡ:

'ನಾಳೆ ಬೇಡ. ನಾಲ್ಕು ದಿನ ಬಿಟ್ಟು ಅವಳನ್ನು ಕಂಡರೆ ಸಾಕು, ಆಗ ಕೊಟ್ಟರೆ ಸಾಕು.'

೧೧

ಮುಂದೆಯೊಂದು ಶುಕ್ರವಾರ ವಿಶಾಲಾಕ್ಷಿ ತರಗತಿಗೆ ಬರುತ್ತಿದ್ದಂತೆ, ಸಹಾಧ್ಯಾಯಿಯೊಬ್ಬ ಅವಳ ಕೈಗೆ ಒಂದು ಚೀಟಿಯನ್ನಿತ್ತ.

"ಏನಿದು?" ಎಂದು ಕೇಳಿದಳು ವಿಶಾಲಾಕ್ಷಿ, ಅದನ್ನು ಕೈಗೆ ತೆಗೆದುಕೊಳ್ಳುತ್ತ.

"ಓದಿನೋಡಿ."

ಚೀಟಿಯಲ್ಲಿ ಇದ್ದುದಿಷ್ಟು:

'ಭಾನುವಾರ ಬೆಳಗ್ಗೆ ಒಂಭತ್ತರ ಸುಮಾರಿಗೆ ಮನೆಗೆ ಬರುತ್ತೇನೆ—ತಪ್ಪಿಸಿಕೊಳ್ಳಬೇಡಿ!

ಗಿರಿಜಾಬಾಯಿ.'

"ಯಾರು ತಂದುಕೊಟ್ಟರು?"

ಕಣ್ಣುಗಳನ್ನು ಕಿರಿದುಗೊಳಿಸಿ, ತುಂಟತನದ ನಗೆ ಬೀರಿ, ಆತನೆಂದ:

"ಮಹಾರಾಣಿ ಕಾಲೇಜಿನ ಜವಾನ. ಗಾಬರಿಯಾಗ್ಬೇಡಿ. ಯಾರೂ ಅದನ್ನು ಓದಿಲ್ಲ!"

ಅಲ್ಲಿದ್ದವರೆಲ್ಲ ಆಗಲೇ ಓದಿದ್ದರು. ಅವರಲ್ಲಿ ಹಲವರು, ಆ ಸಂವಾದ ಮುಗಿಯುವುದನ್ನೆ ಕಾದಿದ್ದು, ತಾಳಬದ್ಧವಾಗಿ ಚಪ್ಪಾಳೆ ತಟ್ಟಿದರು.

ವಿಶಾಲಾಕ್ಷಿಯ ಮುಖ ಕೆಂಪಗಾಯಿತು. ಚೀಟಿ ಗಂಗಾಧರನಿಂದ ಬಂತೇನೋ ಎಂದು ಮೊದಲು ಹೆದರಿದ್ದಳು. ಸಧ್ಯಃ, ಬರೆದಿದ್ದವರು ಗಿರಿಜಾಬಾಯಿ. ಆದರೆ, ಗಂಡು ಬರೆಯಲಿಲ್ಲವೆಂಬುದೇ ಪರಿಹಾಸ್ಯಕ್ಕೆ ವಸ್ತು ಆ ಸಹಪಾಠಿಗಳಿಗೆ.

ಅಧೀರಳಾಗದೆ, ಆ ತಂಡವನ್ನೆ ದಿಟ್ಟಿಸಿನೋಡಿ, ವಿಶಾಲಾಕ್ಷಿ ಅಂದಳು:

"ಒನ್ಸ್ ಮೋರ್ !"

ಹುಡುಗರು ತೆಪ್ಪಗಾಗಿ ಹೋದರು. ಈ ಧೈರ್ಯ, ಹಾಸ್ಯ ಪ್ರವೃತ್ತಿ, ತನಗೆಲ್ಲಿಂದ ಬಂತೆಂದು ಸ್ವತಃ ವಿಶಾಲಾಕ್ಷಿಯೇ ಅಚ್ಚರಿಪಟ್ಟಳು. ಅನಿರೀಕ್ಷಿತ ಆಘಾತದಿಂದ ಚೇತರಿಸಿಕೊಂಡ ಹುಡುಗರು, ಆತ್ಮರಕ್ಷಣೆ ಮಾಡಿಕೊಳ್ಳಬೇಕು–ಎನ್ನುವಷ್ಟರಲ್ಲೆ, ಪ್ರಾಧ್ಯಾಪಕರು ಬಂದರು....

....ಮನೆಗೆ ಮರಳಿದ ವಿಶಾಲಾಕ್ಷಿಗೆ ಗಿರಿಜಾಬಾಯಿಯ ವಿಷಯದಲ್ಲಿ ತಾನೇನೋ ತಪ್ಪುಮಾಡಿರುವೆನೆನಿಸಿತು. ಅವರನ್ನು ಕಂಡು ಎರಡು ತಿಂಗಳಾಗುತ್ತ ಬಂತಲ್ಲ? ಕಾಲೇಜಿನಲ್ಲಿ ತಾನು ಸುಲಭವಾಗಿ ಸಿಗುವಂತಿದ್ದರೆ ಅವರೇ ಹುಡುಕಿ ಕೊಂಡು ಬರುತ್ತಿದ್ದರು. 'ಬಿಡುವಾದಾಗ ನಾನೇ ಬರ್ತೀನ್ರೀ' ಎಂದು ಹಿಂದೆ ಹೇಳಿದ್ದವಳೂ ತಾನೇ.

'ತಪ್ಪಿಸಿಕೊಳ್ಳಬೇಡಿ!' ಅಂದಿದ್ದರು. ಯಾಕೆ ಆ ಹಾಸ್ಯೋಕ್ತಿ? ಗಂಗಾಧರನನ್ನು ಎರಡು ಮೂರು ಸಾರೆ ತಾನು ಕಂಡುದೇನಾದರೂ ಅವರಿಗೆ ತಿಳಿದಿಲ್ಲ ವಷ್ಟೆ? [ಕಂಡರೆ ಏನೀಗ?] ಗಂಗಾಧರನ ವಿಷಯ ಅವರಿಗೆ ತಿಳಿಸಿಯೇ ಇಲ್ಲ. [ಏನಾಗಿದೆ ಅಂತ ತಿಳಿಸುವುದು? ಏನಾದರೂ ಆಗಿತ್ತೇನು? ಏನೂ ಇಲ್ಲ. ಮತ್ತೆ?] ಅಂತೂ, ಗಿರಿಜಾಬಾಯಿ ಮತ್ತು ತನ್ನ ನಡುವೆ ಎಂದೂ ಇಲ್ಲದ ಯಾವುದೋ ಬಗೆಯ ಮುಚ್ಚುಮರೆ ಈಗ....

....ಆಗಾಗ್ಗೆ ಮೂಡುತ್ತಿದ್ದ ಅಂತಹ ಯೋಚನೆಗಳಲ್ಲೇ ಶನಿವಾರ ಕಳೆಯಿತು.

* * * *

....ಹೇಳಿದ್ದ ದಿನ ಸೂಚಿಸಿದ್ದ ಹೊತ್ತಿಗೆ ಗಿರಿಜಾಬಾಯಿ ಬಂದರು, ತನ್ನ ಕಿರಿಯ ಮಗಳೊಡನೆ.

ಅವರನ್ನು ಕಂಡು ನಾಗಮ್ಮನಿಗೆ ಬಹಳ ಸಂತೋಷವಾಯಿತು.

ಇಷ್ಟು ದಿನ ಕಾಣದೇ ಇದ್ದುದಕ್ಕೆ ಪರಿಹಾರ ಕಾಣ್ಕೆ ಎಂದು, ವಿಶಾಲಾಕ್ಷಿ ಅಂದಳು :

"ಇವತ್ತು ನಮ್ಮನೇಲೇ ಇದ್ದು ಊಟಮಾಡ್ಕೊಂಡು ಸಾಯಂಕಾಲ ಹೋಗ್ಬೇಕು."

ಗಿರಿಜಾಬಾಯಿ ನಕ್ಕರು. [ಅಂದು ಜ್ವರಬಂದು ಕೃಶವಾಗಿದ್ದ ಶರೀರ ಈಗ ತುಂಬಿಕೊಂಡಿತ್ತು. ಹೆಚ್ಚು ಬಿಳುಪಾದಂತೆ ಕಾಣಿಸುತ್ತಿದ್ದುದು ತಲೆಗೂದಲೊಂದೇ.]

"ಎಣ್ಣೆ ಬರುವಾಗ ಗಾಣ ಮುರೀತಂತೆ. ಊಟಕ್ಕೆ ಕರೆದರೆ ಯಾರೂ ಒಲ್ಲೆ ಅನ್ನೋದಿಲ್ಲ. ಆದರೆ, ಇವತ್ತೇ ಕರೀಬೇಕೆ ನೀವು? ಏಳೂವರೆಯ ಬಸ್ಸಿಗೆ ಬೆಂಗಳೂರಿನಿಂದ ಹೊರಡ್ತೀನಿ ಅಂತ ಯಜಮಾನರು ಬರೆದಿದಾರೆ. ಹನ್ನೊಂದು ಘಂಟೆಗೆ ನಾವು ಬಸ್‌ಸ್ಟ್ಯಾಂಡಿನಲ್ಲಿರಬೇಕು."

ವಿಶಾಲಾಕ್ಷಿಗೆ ನಿರಾಸೆಯಾಯಿತು.

"ದುರದೃಷ್ಟ ಅನ್ನೋದು ಇದಕ್ಕೇ."

"ಸುಮ್ನಿರಿ. ಅಂಥ ಪದ ನೀವು ಬಳಸಬಾರದು. ಊಟಕ್ಕೆ ಇನ್ನೊಂದು ದಿವಸ ಬರ್ತೀನಿ."

ಎಂದಿನಂತೆ ಈ ಭಾನುವಾರವೂ ಚಂದ್ರ ಮನೆಯಲ್ಲಿರಲಿಲ್ಲ. ಅತಿಥಿಗಳು ಬಂದ ಬಳಿಕ ಜಯರಾಮುವೂ 'ಇಲ್ಲೇ ಹೋಗ್ಬಿಟ್ಟು ಬರ್ತೀನಕ್ಕ' ಎಂದು ನುಡಿದು ಹೊರಟುಬಿಟ್ಟ.

ಕೊಠಡಿ ಸೇರಿದ ಮೇಲೆ ಗಿರಿಜಾಬಾಯಿ, ಆತ್ಮೀಯವಾಗಿ ಕೇಳಿದರು :

"ಪತ್ತೇನೇ ಇಲ್ವಲ್ರೀ....ಏನು ಸಮಾಚಾರ?"

ವಿಶಾಲಾಕ್ಷಿಯ ಮುಖ ವಿವರ್ಣವಾಯಿತು.

"ಏನೂ ಇಲ್ರೀ....ಹೀಗೇ...."

ನಿತ್ಯದಂತಿಲ್ಲ ಈಕೆ – ಎಂದು ಗಿರಿಜಾಬಾಯಿಗೆ ಹೊಳೆಯಿತು. ಕಾರಣ ತಿಳಿಯದೆ, ಅವರು ಚಿಂತೆಗೊಳಗಾದರು. ಯಾವ ಕಷ್ಟವೋ ಏನೋ ಎಂದು ವ್ಯಾಕುಲಗೊಂಡರು.

"ನಿಮ್ಮಣ್ಣನಿಂದ ಕಾಗದ ಬಂದಿದೆಯೆ?"

['ಒಳ್ಳೆಯ ಸುದ್ದಿಯನ್ನೂ ಗಿರಿಜಾಬಾಯಿಗೆ ತಿಳಿಸಿರಲಿಲ್ಲ ತಾನು. ಎಂತಹ ತಪ್ಪು!']

"ಹೂಂ. ಬರ್‍ತಾ ಇರುತ್ತೆ. ಭಿಲಾಯಿಯಿಂದ ರಷ್ಯಾಕ್ಕೆ ಆರುತಿಂಗಳ ವ್ಯಾಸಂಗಕ್ಕೇಂತ ಎಂಜಿನಿಯರುಗಳ ಒಂದು ತಂಡ ಹೋಗುತ್ತಂತೆ. ರಾಜುವನ್ನೂ ಆರಿಸಿದಾರಂತೆ."

"ಹೌದೆ? ಬಹಳ ಸಂತೋಷಾ಼ ಬರ್‍ತಾ಼ ಯೂರೋಪ್ ಪ್ರವಾಸವೂ ಇದೆಯೋ ಏನೋ."

"ಗೊತ್ತಿಲ್ಲ. ಹೊರಡೋದು ಡಿಸೆಂಬರ್‍ನಲ್ಲಂತೆ. ಅದಕ್ಕೆ ಮುಂಚೆ ಬರ್‍ತಾನೆ.... ಕಾರ್ಯಕ್ರಮ ನಿಶ್ಚಯವಾದ್ಮೇಲೆ ನಿಮ್ಮನ್ನು ಕಂಡು ಹೇಳಿದರಾಯ್ತೂಂತಿದ್ದೆ."

ತನ್ನನ್ನು ಕಾಣದೇ ಇರಲು ಬೇರೆಯೇ ಕಾರಣವಿರಬೇಕೆನಿಸಿತು ಗಿರಿಜಾ ಬಾಯಿಗೆ.

"ಬಹಳ ಜೋರಾಗಿ ಓದ್ತಿದೀರಿ ಅಂತ ಕಾಣುತ್ತೆ."

"ಓದ್ತಿದೀನಿ ತಕ್ಕವುಟ್ಟಿಗೆ."

"ಇಲ್ಲಿ ಬಾ ವಿಶಾಲಿ" ಎಂದು ನಾಗಮ್ಮ ಕರೆದರು.

ಕರೆದುದು ತಿಂಡಿತೀರ್ಥಗಳ ಸರಬರಾಜಿಗೆ ಎಂದು ಊಹಿಸಿದ ಗಿರಿಜಾಬಾಯಿ ಅಂದರು :

"ದಯವಿಟ್ಟು ಸ್ವಲ್ಪ ಸ್ವಲ್ಪವೇ ತಗೊಂಡ್ಬನ್ರೀ. ಮನೇಲಿ ಒಂದ್ಸಲ ಆಗಿದೆ."

"ಅದೆಲ್ಲಾ ನಡೆಯೋದಿಲ್ಲ. ಕೊಟ್ಟದ್ದೆಲ್ಲಾ ತಿಂದು ಹೋಗ್ಬೇಕು" ಎಂದು ನಗುತ್ತ ವಿಶಾಲಾಕ್ಷಿ ಒಳಹೋದಳು.

ಗಿರಿಜಾಬಾಯಿಯ ದೃಷ್ಟಿಯ ಮೇಜಿನ ಮೇಲಿದ್ದ ಪುಸ್ತಕಗಳ ಕಡೆಗೆ ಹರಿಯಿತು. ಕಣ್ಣಿಗೆ ಬಿದ್ದ ಎರಡು ಎಕ್ಸರ್‌ಸೈಜ್ ಪುಸ್ತಕಗಳನ್ನು ಕೈಗೆತ್ತಿ ಕೊಂಡರು. ಒಂದು ವಿಶಾಲಾಕ್ಷಿಯದೇ. ಇನ್ನೊಂದು ಕನ್ನಡ,–ಕವಿತೆಗಳು! ಕುತೂಹಲದಿಂದ ಅವರು ಪುಟಗಳನ್ನು ಮಗುಚಿದರು. ಏಳೆಂಟು ಭಾವಗೀತೆಗಳು, 'ಸುನೀತ'ಗಳು, ಕಥನ ಕವನಗಳು....ಬಾಲ ಬರೆಹವಲ್ಲ–ಪಳಗಿದಕೈ. ಮೊದಲ ಹಾಳೆ ತೆರೆದರು–ಹೆಸರಿರಲಿಲ್ಲ; ಹೊದಿಕೆಯ ಮೇಲೂ ಇರಲಿಲ್ಲ.

ತಿಂಡಿಯ ತಟ್ಟೆಗಳೊಡನೆ ಒಳಬಂದ ವಿಶಾಲಾಕ್ಷಿಯನ್ನು ಅವರು ಕೇಳಿದರು :

"ಯಾರ್‍ರೀ ಈ ಕವಿತೆಗಳನ್ನು ಬರೆದಿರೋರು?"

ಪ್ರಶ್ನೆಯ ಜತೆಯಲ್ಲೇ ಪರೀಕ್ಷಕ ನೋಟವನ್ನೂ ಬೀರಿದರು.

"ಬಂದೆ, ಹೇಳ್ತೀನಿ" ಎಂದು ವಿಶಾಲಾಕ್ಷಿ ಪುನಃ ಒಳಹೋದಳು.

[ಸಂಗ್ರಹ ಅವರ ಕಣ್ಣಿಗೆ ಬೀಳಲಾರದು ಎಂದುಕೊಂಡಿದ್ದಳು. ಬಿದ್ದೇ ಬಿಟ್ಟಿತ್ತು.]

['ತುಸು ನಾಚಿದಳಲ್ಲ!?']

ನೀರು ತುಂಬಿದ ಲೋಟಗಳೊಡನೆ ವಿಶಾಲಾಕ್ಷಿ ಬಂದಾಗ, ಗಿರಿಜಾಬಾಯಿ ಅಂದರು:

"ಎರಡೆರಡು ಇದೆಯಲ್ರೀ ದೋಸೆ!"

"ಇದಾದ್ಮೇಲೆ ಇನ್ನೂ ಎರಡೆರಡು ಬಿಸಿ ಆಗ್ತಾ ಇದೆ."

"ಬೇಡೀಮ್ಮಾ ಬೇಡಿ!....ತಗೊಳ್ಳೀ ಪುಷ್ಪಾ...."

ಅವರೆಗೂ ಸುಮ್ಮನೆ ಕುಳಿತಿದ್ದ ಅವರ ಮಗಳು ತಟ್ಟೆಯನ್ನೆತ್ತಿಕೊಂಡಳು.

ಅತಿಥಿಗಳ ಜತೆ ತಾನೂ ತಿನ್ನತೊಡಗುತ್ತ ವಿಶಾಲಾಕ್ಷಿ ಅಂದಳು:

"ನನ್ನನ್ನು ಕೇಳ್ಕೊಂಡು ಒವ್ಮೆ ಒಬ್ಬರು ಮಹಾರಾಣೀ ಕಾಲೇಜಿಗೆ ಬಂದಿದ್ದರು–ನೆನಪಿದೆಯಾ? ನೀವೇ ನಮ್ಮ ಮನೆ ವಿಳಾಸ ಕೊಟ್ಟರಂತೆ."

ಗಿರಿಜಾಬಾಯಿಯ ಕಣ್ಣುಗಳು ಅರಳಿದುವು.

"ಹ್ಞಾ! ಚಿಕ್ಕವಯಸ್ನೋರು. ಯಾರೋ ಲೆಕ್ಚರರ್ ಇರಬಹುದು ಅಂದ್ಕೊಂಡಿದ್ದೆ."

"ಇಲ್ಲ. ಕನ್ನಡ ಎಂ.ಎ. ಮಾಡ್ತಿದಾರೆ. ಅವರೇ ಈ ಕವಿತೆಗಳನ್ನು ಬರೆದಿರೋದು."

"ಹಾಗೇನು?"

[ಮೆದುಳು ಕೆಲಸ ಆರಂಭಿಸಿತ್ತು. ಮುಗುಳುನಗೆ ತುಟಿಗಳೆಡೆಗೆ ಸುಳಿದು ಹಿಂತೆಗೆಯಿತು. ಇರಬಹುದೆ? ಇದು ಸಾಧ್ಯವೆ? ಗಿರಿಜಾಬಾಯಿಗೆ ಗೆಳತಿಯ ಬಗೆಗೆ ಕಾತುರ ಉಂಟಾಯಿತು.]

"ಗಂಗಾಧರ ಅಂತ. ನಿಮ್ಮ ಭೇಟಿಯೇ ಆಗಿರಲಿಲ್ಲ ನೋಡಿ,–ಹೀಗಾಗಿ ನಿಮಗೆ ಹೇಳಿರಲಿಲ್ಲ."

ಸಂಕೋಚದ ಧ್ವನಿಯನ್ನು ಗುರುತಿಸುವುದು ಗಿರಿಜಾಬಾಯಿಗೆ ಕಷ್ಟ ವಾಗಲಿಲ್ಲ.

"ಚೆನ್ನಾಗಿಯೇ ಬರೀತಾರೆ."

"ನನ್ನ ಲೇಖನ ಇಷ್ಟವಾಯ್ತಂತೆ. ನೋಡೋದಕ್ಕೆ ಅಂತ ಬಂದಿದ್ರು."

[ಒಮ್ಮೆಲೆ ವಿಶಾಲಾಕ್ಷಿಯ ಮುಖ ರಂಗೇರಿತು–'ನೋಡೋದಕ್ಕೆ ಬಂದಿದ್ದರು' ಎಂದೆನಲ್ಲ!]

ಆ ಪದಗಳ 'ವಿಪರೀತಾರ್ಥ' ಹೊಳೆದು ಗಿರಿಜಾಬಾಯಿಗೂ ನಗು ಬಂತು. ಆದರೂ, ಗಂಭೀರವಾಗಿರಲೆತ್ನಿಸುತ್ತ ಅವರು ಕೇಳಿದರು :

"ಆಗಾಗ್ಗೆ ಇಲ್ಲಿಗೆ ಬರ್‍ತಾರೇನು ?"

"ಇಲ್ಲವಪ್ಪ! [ನಿಧಾನವಾಗಿ] ಕಾಲೇಜ್ನಲ್ಲಿ ಯಾವಾಗದರೊಮ್ಮೆ ಸಿಗ್ತಾರೆ. ಹೋದ ತಿಂಗಳು ಅವರ ತಾಯಿ ತೀರಿಕೊಂಡ್ರು."

ಗಿರಿಜಾಬಾಯಿಗೆ ಯಾವ ಸಂದೇಹವೂ ಉಳಿಯಲಿಲ್ಲ.

ಮಾತು ಕಡಮೆಯಾಯಿತು. ಅವರು ಯೋಚಿಸುತ್ತ ತಿಂದರು; ತಿನ್ನುತ್ತ ಯೋಚಿಸಿದರು. ಮುಂದೇನಾಗಬಹುದು ? ಏನಾಗಬಹುದು ಮುಂದೆ ?

ಏನನ್ನಾದರೂ ಆಡಬಾರದೆ ಗಿರಿಜಾಬಾಯಿ ?–ಎಂದು ವಿಶಾಲಾಕ್ಷಿ ಪಡಪಡಿಸಿದಳು. ಗಂಗಾಧರನ ಸ್ನೇಹ [ಸ್ನೇಹ ?–ಅಲ್ಲಿ, ಪರಿಚಯ] ಅವರಿಗೆ ಸಮ್ಮತವಾಗದೆಂದು, ಅವಳಿಗೆ ಭಯವಾಯಿತು.

ಅಷ್ಟರಲ್ಲಿ, ಗಿರಿಜಾಬಾಯಿ ಮುಗುಳುನಗುತ್ತ ಕೇಳಿದರು :

"ನಿಮ್ಮ ಕವೀನ ನನಗೂ ಒಮ್ಮೆ ಪರಿಚಯ ಮಾಡಿಸ್ಕೊಡ್ರಿ."

[ಆತ ಎಂಥವನೋ ತಾನು ನೋಡಲೇಬೇಕು.]

ವಿಶಾಲಾಕ್ಷಿಯ ಮುಖ ಅರಳಿತು.

"ಖಂಡಿತವಾಗಿ."

ನಾಗಮ್ಮ ದೋಸೆಗಳನ್ನು ತಂದರು. ಗಿರಿಜಾಬಾಯಿ ತೀವ್ರವಾಗಿ ಪ್ರತಿಭಟಿಸಿದರೆಂದು ಹಿಂತಿರುಗಿ ಒಯ್ದರು. ಕಾಫಿ ಬಂತು.

"ಚೆನ್ನಾಗಿದೆಯೋ ಇಲ್ವೋ...."

"ನೀವು ಮಾಡಿದ ಕಾಫಿ ಚೆನ್ನಾಗಿಯೇ ಇರುತ್ತೆ."

ವಯಸ್ಸಾದವರನ್ನು ಸಂತುಷ್ಟಪಡಿಸಲೆಂದು ಆ ಬಗೆಯ ಮುಖಸ್ತುತಿ.

ಕೈತೊಳೆದು, ಕಾಫಿ ಕುಡಿದುದೂ ಆಯಿತು.

ಬರ್‍ತೀವಿ, ವಿಶಾಲಿ. ಎಕ್ಸ್‌ಪ್ರೆಸ್ ಬಸ್ಸು ಬಂದೊದ್ನಲ ಹೊತ್ತಿಗೆ ಮುಂಚೆಯೇ ಬಂದ್ಬಿಡುತ್ತೆ....ಹೂಂ. ಪುರಸೊತ್ತು ಮಾಡ್ಕೊಂಡು ಹಳೇ ಭಕ್ತರಿಗೂ ಆಗಾಗ್ಗೆ ದರ್ಶನ ಕೊಡೀಪ್ಪಾ," ಎಂದರು ಗಿರಿಜಾಬಾಯಿ.

ಕುಂಕುಮ ತರುತ್ತ, "ಯಾಕ್ರೀ ಹಾಗಂತೀರಾ ?" ಎಂದು ವಿಶಾಲಾಕ್ಷಿ ರಾಗವೆಳೆದಳು.

•

"ಸುಮ್ನೆ ಅಂದೆ," ಎಂದು ಗಿರಿಜಾಬಾಯಿ ನಕ್ಕುಬಿಟ್ಟರು.

"ಇನ್ನೊವ್ಮೆ ಊಟಕ್ಕೇ ಬರಬೇಕು-ಮರೀಬೇಡಿ!"

ಇಲ್ಲ. ಮರೆಯೋದಿಲ್ಲ!"

[ಔತಣವೇ ಕಾದಿದೆಯೋ ಏನೋ? ಯಾರಿಗೆ ಗೊತ್ತು?]

ಹಾದಿ ನಡೆಯುತ್ತ ಗಿರಿಜಾಬಾಯಿ, ಮಗಳ ಆ ಮಾತು ಈ ಮಾತಿಗೆ ಹೂಂಗುಟ್ಟಿದರೂ, ಮನಸ್ಸೆಲ್ಲ ವಿಶಾಲಾಕ್ಷಿಯನ್ನು ಕುರಿತೇ ಚಿಂತಿಸುತ್ತಿತ್ತು:

'ಎಷ್ಟೊಂದು ಹಚ್ಕೊಂಡ್ಬಿಟ್ಟಿದಾಳೆ ಆ ಗ ಲೇ. ಯಾವ ಜನವೊ? ಎಂಥವನೊ? ಹುಡುಗಿಗೇನೂ ವೃಥಾ ಹಿಂಸೆಯಾಗದಿರಲಪ್ಪ ಸದ್ಯ....'

'ವಿಶಾಲಾಕ್ಷಿಯ ಬದುಕಿನಲ್ಲಿ ಪ್ರಣಯ ಪ್ರಸಂಗ'-ಎಂಬ ಒಂದೇ ಅಂಶ ಕಾಣಿಸಿದಾಗ, ವಿಸ್ಮಯ ಸಂತೋಷಗಳೆರಡೂ ಗಿರಿಜಾಬಾಯಿಗೆ ಆದುವು.

ಹರ್ಷಿತಳಾಗಿದ್ದ ತಾಯಿಯ ಮುಖವನ್ನು ನೋಡಿ, ಪುಷ್ಪಾ ಕೇಳಿದಳು:

"ಯಾಕಮ್ಮ ಸಂತೋಷವಾಗಿದೀಯ?"

ಗಿರಿಜಾಬಾಯಿ ಉತ್ತರವಿತ್ತರು:

"ಅಪ್ಪಯ್ಯ ಬರ್ತಾರೆ ನೋಡು, ಅದಕ್ಕೆ."

## ೧೨

"ಅರಮನೇಲಿ ಗೋವುಗಳಿಗೆ ಅಲಂಕಾರ ಮಾಡ್ತಿದಾರೆ, ನೋಡೋಕೆ ಬರೊಲ್ವೇನ್ರೀ?" ಎಂದು ಪಕ್ಕದ ಮನೆಯಾಕೆ ನಾಗಮ್ಮನನ್ನು ಕೇಳಿದಳು.

"ಅಷ್ಟುದೂರ ನಡೆಯೋಕೆ ಆಗೋದಿಲ್ರೀ ನನ್ಕೈಲಿ," ಎಂದರು ನಾಗಮ್ಮ.

ಹಾಗೆ ಹೇಳಿ ಅವರು ಮನೆಯ ಇನ್ನೊಂದು ಪಕ್ಕಕ್ಕೆ ತಿರುಗುತ್ತಿದ್ದಂತೆಯೇ, ನಾಲ್ವತ್ತರೊಳಗಿನ ಮನುಷ್ಯನೊಬ್ಬ, ಮನೆಯ ಮುಂದೆ ಬಂದು ನಿಂತ.

"ರಂಗರಾಜ್ ಅನ್ನೋರ ಮನೆ ಇದೇನಾ?"

ಅನಿರೀಕ್ಷಿತವಾಗಿ ಮಗನ ಹೆಸರೆತ್ತಿ ಆತ ಕೇಳಿದ ಪ್ರಶ್ನೆಯಿಂದ, ನಾಗಮ್ಮ ಗಾಬರಿಗೊಂಡರು.

"ಹೌದು. ಅದರೆ, ರಾಜು ಊರಲಿಲ್ಲ. ಭಿಲಾಯಿಾಲಿ ಕೆಲಸದ ಮೇಲಿದಾನೆ."

ಆಹ್ವಾನವಿಲ್ಲದೆಯೇ ಆತ ಗೇಟು ತೆರೆದ.

"ಮನೇಲಿ ಯಾರೆಲ್ಲ ಇದೀರಾ?"

"ನಾನು ಮತ್ತು ಹುಡುಗರು. ಯಾಕಪ್ಪಾ?"

"ಒಂದೆರಡು ವಿಷಯ ಕೇಳಿ ತಿಳಕೋಬೇಕಾಗಿತ್ತು."

ನಾಗಮ್ಮ ಒಳಕ್ಕೆ ಧಾವಿಸಿ ಮಗಳನ್ನು ಕರೆದರು. ಅದೇ ಆಗ ಮನೆ ಸೇರಿ ಮುಖಕ್ಕೆ ನೀಳು ಹನಿಸಿಕೊಳ್ಳುತ್ತಿದ್ದ ವಿಶಾಲಾಕ್ಷಿ, ಕನ್ನಡಕ ಧರಿಸಿ, ಕುಂಕುಮ ವಿಟ್ಟುಕೊಂಡು, ಹೊರಬಂದಳು.

[ಗಂಗಾಧರ ಬಂದಿರಲಿಲ್ಲ. ಬೇರೆಯೇ ವ್ಯಕ್ತಿ.]

ವಂದಿಸುವ ಗೋಜಿಗೆ ಹೋಗದೆಯೇ ಆ ಮನುಷ್ಯ ಕೇಳಿದ:

"ಮಿ|| ರಂಗರಾಜ್ ಅವರ ತಂಗೀನೇ ನೀವು?"

ಊಹಿಸಿರಬೇಕು–ಎಂದುಕೊಂಡಳು ವಿಶಾಲಾಕ್ಷಿ. ಆದರೆ ವಾಸ್ತವವಾಗಿ ಆ ಮನುಷ್ಯನಿಗೆ ಗೊತ್ತಿತ್ತು.

ಹೌದು; ಏನು ಬೇಕಾಗಿತ್ತು?"

"ರಂಗರಾಜ್ ಪಾಸ್‌ಪೋರ್ಟಿಗೆ ಅರ್ಜಿ ಹಾಕಿದಾರೆ. ಅವರ ಬಗ್ಗೆ ಸ್ವಲ್ಪ ವಿವರ ಕೊಡ್ತೀರಾ?"

"ಪಾಸ್‌ಪೋರ್ಟು ಆಫೀಸಿನವರೆ ನೀವು?"

"ಅಲ್ಲ. ಆ ಆಫೀಸು ಇರೋದು ಮದರಾಸಿನಲ್ಲಿ. ನಾನು ಇಲ್ಲಿನ ಸ್ಪೆಶಲ್ ಬ್ರಾಂಚಿನಿಂದ ಬಂದಿದೀನಿ–ಸಬ್ ಇನ್ಸ್‌ಪೆಕ್ಟರು."

ಪದಗಳೇನೋ ನಾಗಮ್ಮನ ಕಿವಿಗೆ ಬಿದ್ದುವು. ಅರ್ಥ ಸರಿಯಾಗಿ ಆಗಲಿಲ್ಲ. ಮಗನಿಗೆ ಏನೋ ಆಪತ್ತು ಒದಗಿದೆ–ಎಂದು ಅವರು ಗಾಬರಿಯಾದರು. ಏನು ಹೇಳಬೇಕೆಂಬುದು ತಿಳಿಯದೆ, ನಡುಮನೆಯ ಒಂದು ಮೂಲೆಯಲ್ಲಿ ಕುಸಿ ಕುಳಿತರು.

ವಿಶಾಲಾಕ್ಷಿ ಒಂದು ಕುರ್ಚಿಯನ್ನು ನಡುಮನೆಯಲ್ಲಿರಿಸಿ, ಆ ಮನುಷ್ಯನನ್ನು ಒಳಕ್ಕೆ ಬರಹೇಳಿದಳು.

"ಕಾಲಲ್ಲಿ ಬೂಟ್ಸಿದೆ," ಎಂದ ಆತ.

"ಪರವಾಗಿಲ್ಲ, ಬನ್ನಿ."

ಸದ್ಯಃ ಖಾಕಿ ಡ್ರೆಸ್ಸಿನಲ್ಲಿ ಇವನು ಬರಲಿಲ್ಲವಲ್ಲ–ಎಂದು ವಿಶಾಲಾಕ್ಷಿಗೆ ಸಮಾಧಾನವೆನಿಸಿತು.

ನೋಟ್‌ಬುಕ್ಕು ಹೊರತೆಗೆದು ಪೆನ್ಸಿಲು ಕೈಲಿ ಹಿಡಿದು, ಆತ ಕೇಳಿದ:

"ಮಿ|| ರಂಗರಾಜ್ ಇನ್ಸ್‌ಟಿಟ್ಯೂಟ್ ಆಫ್ ಎಂಜಿನಿಯರಿಂಗ್‌ನಲ್ಲಿ ಓದಿದರು ಅಲ್ಲವೆ?"

"ಹೌದು."

"ಅವರು ಯಾವತ್ತಾದರೂ ಜೈಲಿಗೆ ಹೋಗಿದ್ದರಾ?"

"ಏನಂದಿರಿ? ಜೈಲಿಗೆ?" ಎಂದು ಅಪ್ರತಿಭಳಾಗಿ ವಿಶಾಲಾಕ್ಷಿ ಕೇಳಿದಳು.

ಆತ ನಸುನಕ್ಕು ವಿವರಿಸಿದ:

"ನಾಲ್ವತ್ತೆರಡರ ಚಳುವಳಿ ಅಥವಾ ಆಮೇಲೆ ಯಾವುದರಲ್ಲಾದರೂ ಭಾಗವಹಿಸಿದ್ದರೆ,–ಅಂತ."

"ಇಲ್ಲ. ಆಗ ನಾವು ತೀರಾ ಚಿಕ್ಕ ಹುಡುಗರು."

"ಈ ಊರಲ್ಲಿ ಹಿಂದೆ ಶ್ರೀಧರ ಅಂತ ಒಬ್ಬರು ಕಮ್ಯೂನಿಸ್ಟ್ ಲೀಡರಿದ್ರು. ಅವರೇನಾದರೂ ನಿಮ್ಮಣ್ಣನಿಗೆ ಪರಿಚಯವೆ?"

"ಆ ಹೆಸರು ನಾವು ಕೇಳಿಲ್ಲ. ನಮ್ಮಣ್ಣನಿಗೆ ಯಾವ ಲೀಡರುಗಳ ಪರಿಚಯವೂ ಇಲ್ಲ."

"ಇಲ್ಲೇ ಕೃಷ್ಣಮೂರ್ತಿ ಪುರದಲ್ಲಿ ರಷ್ಯಾ-ಭಾರತ ಸಾಂಸ್ಕೃತಿಕ ಸಂಘ ಅಂತ ಬಂದಿದೆ. ನಿಮ್ಮ ಅಣ್ಣನಾಗಲೀ ನೀವಾಗಲೀ ಅದಕ್ಕೆ ಸದಸ್ಯರೆ?"

"ಅಲ್ಲ."

"ನಿಮ್ಮ ತಂದೆಯವರು?"

"ತೀರಿಕೊಂಡು ಒಂದು ವರ್ಷವಾಯ್ತು."

"ರಷ್ಯಾಕ್ಕೆ ಹೋಗಬೇಕೂಂತ ಮಿ|| ರಂಗರಾಜ್ ಯಾವತ್ತಾದರೂ ಹಿಂದೆ ಹೇಳಿದ್ದರಾ?"

ಈ ವಿಚಿತ್ರ ಪ್ರಶ್ನೆಗಳಿಗೂ ಒಂದು ಮಿತಿ ಇರಬೇಕೆಂದು, ವಿಶಾಲಾಕ್ಷಿಗೆ ರೇಗಿತು. ಆದರೂ, ಸಿಟ್ಟನ್ನು ನುಂಗಿಕೊಳ್ಳುತ್ತ ಅವಳೆಂದಳು:

"ಇಲ್ಲ. ಉಚ್ಚ ಶಿಕ್ಷಣಕ್ಕೆ ಅಮೆರಿಕಕ್ಕೆ ಹೋಗಬೇಕೂಂತ ಮಾತ್ರ ಹೇಳ್ತಿದ್ದ. ಆದರೆ, ವಿದ್ಯಾರ್ಥಿವೇತನ ಸಿಗಲಿಲ್ಲ."

"I See."

ಅವನಿಗೆ ಬರುವ ಇಂಗ್ಲೀಸು ಅಷ್ಟು ಮಾತ್ರ, ಎನ್ನುವಹಾಗೆ."

ನೋಟ್‌ಪುಸ್ತಕ, ಪೆನ್ಸಿಲು, ಹೊರಗೆ ಬಂದಿದ್ದುವು ಅಷ್ಟೆ. ಬರೆದುಕೊಂಡುದು ಮಾತ್ರ ಏನೂ ಇಲ್ಲ. ಅವು ಪುನಃ ಆತನ ಕೋಟಿನ ಜೇಬನ್ನು ಸೇರಿದುವು.

ಮುಗಿಯುತ್ತ ಬಂತು-ಎನ್ನುವ ಧ್ವನಿಯಲ್ಲಿ, ಅವನು ಕೇಳಿದ:

"ಆಡಳಿತದವರು ತಾವಾಗಿ ಅರಿಸದೇ ಇದ್ದಿದ್ದರೆ, ಮಿ|| ರಂಗರಾಜ್ ರಷ್ಯಕ್ಕೆ ಹೋಗುವ ಪ್ರಶ್ನೆಯೇ ಇರ್ತಿರ್ಲಿಲ್ಲ ಅಲ್ವೆ?"

"ಹೂಂ. ಅದಂತೂ ಸ್ಪಷ್ಟವಾಗೇ ಇದೆ."

"ಕ್ಷಮಿಸಿ. ವೈಯಕ್ತಿಕ ಪ್ರಶ್ನೆ ಒಂದಿದೆ."

"ಏನು?"

"ಮಿ॥ ರಂಗರಾಜರಿಗೆ ಮದುವೆ ಆಗಿಲ್ವೆ?"

ಕಿವಿ ನಿಮಿರಿಸಿ ಕುಳಿತಿದ್ದ ನಾಗಮ್ಮ, ಗಟ್ಟಿಯಾದ ಧ್ವನಿಯಲ್ಲಿ ಅಂದರು:

"ಇಲ್ಲವಪ್ಪ. ಆ ಕೆಲಸ ಬೇಡ, ಬಂದ್ಬಿಡು, ಅಂತ ನಾನು ಹೇಳ್ತಾನೇ ಇದೀನಿ....ಇವಳು-ಚಿಕ್ಕ ಹುಡುಗರು ಇಬ್ಬರು....ಮನೆ ನೋಡ್ಕೊಳ್ಳೋರು ಗತಿ ಇಲ್ಲ ನಮ್ಮಲ್ಲಿ."

"ನೀನು ಸುಮ್ನಿರಮ್ಮ!" ಎಂದಳು ವಿಶಾಲಾಕ್ಷಿ.

ಹಿರಿಯರು ಯಾವಾಗಲೂ ಹೀಗೆಯೇ, ತಾನು ಬಲ್ಲೆ-ಎನ್ನುವಂತೆ ಮುಗುಳು ನಕ್ಕು, ಏಳುತ್ತ ಆತ ಅಂದ:

"ಬಹಳ ಒಳ್ಳೇ ಉದ್ಯೋಗದಲ್ಲಿದಾರಮ್ಮ ನಿಮ್ಮ ಮಗ."

ಹೀಗೆ ಅಂದುದಕ್ಕೆ ನೀನು ಖುಣಿಯಾಗಬೇಕು-ಎನ್ನುವಂತೆ, ವಿಶಾಲಾಕ್ಷಿಯ ಕಡೆಗೊಮ್ಮೆ ನೋಡಿ, ಅವನೆಂದ:

"ಬರ್ತೀನಿ. ಥ್ಯಾಂಕ್ಸ್."

"ಆಗಲಿ."

ನಾಗಮ್ಮನ ಮನಃ ಶಾಂತಿಯನ್ನೆಲ್ಲ ಕಸಿದುಕೊಂಡು, ಆ ಮನುಷ್ಯ ಹೊರಟೇ ಹೋದ.

"ಏನೇ ಅದು ಆತ ಕೇಳಿದ್ದು? ಏನು ಬರಕೊಂಡ? ರಷ್ಯಕ್ಕೋ-ಅದೆಲ್ಲಿಗೋ-ಹೋಗೋದು ಬೇಡ ಅಂತ ಆವತ್ತೇ ಹೇಳ್ಲಿಲ್ವೇನೆ ನಾನು? ಇದೇನು ಪ್ರಾರಬ್ಧವೇ!"

ಐದು ನಿಮಿಷಗಳ ಕಾಲ ಒಂದೇ ಸಮನೆ ನಾಗಮ್ಮ ಗೋಳಾಡಿದರು. ಬಳಿಕ ನಿಧಾನವಾಗಿ, ವಿವರಿಸಿ ಹೇಳಲು ಯತ್ನಿಸಿದಳು ವಿಶಾಲಾಕ್ಷಿ. ಪಾಸ್ ಪೋರ್ಟ್ ಅಂದರೇನು? ಯಾತಕ್ಕೆ? ಗುಣನಡತೆಗೂ ಅದಕ್ಕೂ ಸಂಬಂಧವೇನು?........

ವಿವರಿಸುತ್ತಿದ್ದಂತೆ, ಪೋಲೀಸ್ ಅಧಿಕಾರಿಯ ಪ್ರಶ್ನೆಗಳು ತಮಾಷೆಯಾಗಿ ಕಂಡು, ವಿಶಾಲಾಕ್ಷಿಗೆ ನಗುಬಂತು.

ಕೊನೆಯಲ್ಲಿ ಅವಳೆಂದಳು:

"ಬಹಳ ಒಳ್ಳೇ ಉದ್ಯೋಗದಲ್ಲಿದಾರಮ್ಮ ನಿಮ್ಮ ಮಗ-ಅಂತ ಆತ ಹೇಳ್ಲಿಲ್ವೇನಮ್ಮ?!"

## ೧೩

ಮಾರ್ಕೆಟಿನ ಬಸ್ ನಿಲ್ದಾಣದವರೆಗೂ ಗಿರಿಜಾಬಾಯಿ ಜತೆ ವಿಶಾಲಾಕ್ಷಿ ಬಂದ ಒಂದು ಸಂಜೆ, ಅಕಸ್ಮಾತ್ತಾಗಿ ಗಂಗಾಧರನ ಭೇಟಿಯಾಯಿತು. ಹಿಂದೆ ಆತನನ್ನು ಮೊದಲ ಬಾರಿ ಗಿರಿಜಾಬಾಯಿ ಕಂಡಿದ್ದುದು ಒಂದುಕ್ಷಣ–ವಿಶಾಲಾಕ್ಷಿ ಯನ್ನು ಹುಡುಕುತ್ತ ಆತ ಬಂದಿದ್ದಾಗ. ಅವನನ್ನು ಪರೀಕ್ಷಿಸುವ ನೋಟದಿಂದ ನೋಡಬೇಕೆಂದೇನೂ ಆಗ ಅವರಿಗೆ ಅನಿಸಿರಲಿಲ್ಲ. ಮುಖಪರಿಚಯವೂ ಮರೆತು ಹೋಗಿತ್ತು.

"ಇವರು ಗಿರಿಜಾಬಾಯಿ, ಇವರು ಗಂಗಾಧರ," ಎಂದು ಶಿಷ್ಟಾಚಾರದ ಮಾತುಗಳನ್ನು ವಿಶಾಲಾಕ್ಷಿ ಮುಗಿಸಿದಾಗ, ಆತನೆಂದ:

"ಆದಿನ ಭೇಟಿಮಾಡಿದ್ದೆ. ತಮಗೆ ನೆನಪಿರಬಹುದು."

ಗಿರಿಜಾಬಾಯಿ ನಸುನಕ್ಕು ಅಂದರು:

"ಆಗಿನದು ಭೇಟಿ. ಈಗಿನದು ಪರಿಚಯ."

ಬಸ್ಸು ಬರಲಿದ್ದುದು ಕೆಲವೇ ನಿಮಿಷಗಳು. ಇತ್ತೀಚೆಗೆ ಆತನ ಬಗೆಗೆ ವಿಶಾಲಾಕ್ಷಿಯಿಂದ ಎಷ್ಟನ್ನೋ ಕೇಳಿ ತಿಳಿದಿದ್ದ ಗಿರಿಜಾಬಾಯಿ, ಮೌನವಾಗಿ ಆತನನ್ನು ದಿಟ್ಟಿಸುತ್ತ ನಿಂತರು.

ಗಂಗಾಧರ ಅಲ್ಲೇ ಗಂಭೀರವಾಗಿ ನಿಂತ, ತಾನು ಹೊರಟುಬಿಡುವುದು ವಾಸಿಯಲ್ಲವೆ–ಎಂದು ಮನಸಿನೊಳಗೇ ತರ್ಕಿಸುತ್ತ.

ಮಾತಾಡದೆ ಹಾಗೆಯೇ ಇರುವುದು ಸರಿಯಲ್ಲವೆಂದು ಗಿರಿಜಾಬಾಯಿ ಅಂದರು:

"ಸಾರ್ವಜನಿಕ ಹಾಸ್ಟೆಲ್ನಲ್ಲಿ ಇದೀರಂತೆ."

"ಹೌದು."

"ಊರು ಶಿವಮೊಗ್ಗಾ, ಅಲ್ವೆ?"

"ಹೂಂ."

ಕೆಸರಿಗೆ ಹೋಗುವ ಬಸ್ಸು ಬಂದು ಸಂದಿಗ್ಧವನ್ನು ಬಗೆಹರಿಸಿತು. ವಿಶಾಲಾಕ್ಷಿಯ ಬಸ್ಸೂ ಬಂತು ಆಗಲೇ. ತಾನು ಹೊರಟ ಬಳಿಕ ಗಂಗಾಧರನ ಗೆಳತಿ ತನ್ನ ಬಸ್ಸು ಹತ್ತಿದುದನ್ನೂ ಗಂಗಾಧರ ನಡೆಯುತ್ತ ಹೊರಟುಹೋದುದನ್ನೂ ಕಂಡು, ಸಮಾಧಾನದ ನಿಟ್ಟುಸಿರುಬಿಟ್ಟರು.

ಸಂಜೆಯ ಬಸ್ಸು ಬಲು ಬೇಗನೆ ತುಂಬಿಕೊಂಡಿತು. ಬಿಡುವ ವೇಳೆಯೂ ಆಯಿತು. 'ಟ್ರಿಪ್ ಶೀಟಿ'ಗೆ ಸಹಿಹಾಕಿ, 'ರೈಟ್' ಕೊಟ್ಟ ಇನ್ಸ್‌ಪೆಕ್ಟರು, ವಿಶಾಲಾಕ್ಷಿ ಕುಳಿತಿದ್ದುದನ್ನು ಕಳುಹಲೆಂದು ಅತ್ತ ತೆರಳಿದ. ಗೆಳತಿ ಕಾಣಿಸುವಳೇನೋ ಎಂದು, ಆ ಬಸ್ಸಿನ ಕಡೆಗೆ ಗಿರಿಜಾಬಾಯಿ ದೃಷ್ಟಿ ಹರಿಸಿದರು. ವಿದ್ಯಾರ್ಥಿನಿಯರ ತಂಡವೇ ಅಡ್ಡ ನಿಂತಿದ್ದುದರಿಂದ ಅವರು ನಿರಾಶರಾಗಬೇಕಾಯಿತು.

ಚಲಿಸುತ್ತಿದ್ದ ಬಸ್ಸಿನಲ್ಲಿ ಕುಳಿತು, ಗಿರಿಜಾಬಾಯಿ ಯೋಚನಾಮಗ್ನರಾದರು. ವಿಶಾಲಾಕ್ಷಿಯ ಮನೆಗೆ ತಾನು ಹೋಗಿದ್ದ ಆ ದಿನದ ಅನಂತರ, ಹಿಂದಿನ ತಪ್ಪಿಗೆ ಪ್ರಾಯಶ್ಚಿತ್ತವೆಂದೋ ಏನೋ, ಎರಡು ಮೂರು ಸಾರೆ ಗೆಳತಿ ಅವರನ್ನು ಕಾಣಲು ಬಂದಿದ್ದಳು. ನಡುವೆ ದಸರೆಯ ರಜಾ ಬಂತು. ರಜಾ ಇದ್ದರೂ ಹೊರಗೆ ಓಡಾಡಲಾಗದಷ್ಟು ಗದ್ದಲ. ಅದರ ಅನಂತರ ಮತ್ತೊಮ್ಮೆ ಭೇಟಿಯಾಗಿತ್ತು. ವಿಶಾಲಾಕ್ಷಿ ಬಾಯಿ ಬಿಟ್ಟು ಏನನ್ನೂ ಹೇಳಿರಲಿಲ್ಲ. ಆದರೂ ಮಾತುಕತೆಯ ಮಧ್ಯೆ, ಯಾವುದಾದರೂ ಕಾರಣಕ್ಕಾಗಿ, ಗಂಗಾಧರನ ಪ್ರಸ್ತಾಪ ಬರುತ್ತಿತ್ತು. ಆಗ ಅವಳ ಮುಖಭಾವದಲ್ಲಾಗುತ್ತಿದ್ದ ಸೂಕ್ಷ್ಮ ಬದಲಾವಣೆಗಳನ್ನು ಗಿರಿಜಾಬಾಯಿ ಲಕ್ಷ್ಯಪೂರ್ವಕವಾಗಿ ದಿಟ್ಟಿಸುತ್ತಿದ್ದರು....ಅವಳೀಗ ಹೆಚ್ಚು ಆಸಕ್ತಿಯಿಂದ 'ಸಿಂಗರಿಸಿಕೊಳ್ಳು'ತ್ತಿದ್ದಂತೆಯೂ ಕಂಡಿತು.

ವಿಶಾಲಾಕ್ಷಿಯ ಹೃದಯದಲ್ಲೊಂದು ರಹಸ್ಯ ಅವಿತಿದೆ–ಎನ್ನುವುದರ ಬಗೆಗೆ ಗಿರಿಜಾಬಾಯಿಗೆ ಯಾವ ಸಂದೇಹವೂ ಇರಲಿಲ್ಲ.

ಆ ಎಲ್ಲ ತಿಳಿವಳಿಕೆಯ ಹಿನ್ನೆಲೆಯಲ್ಲಿ, ಗಂಗಾಧರನನ್ನು ಅವರು ನೋಡಿದ್ದರು. ಸಂಭಾವಿತನಂತೆ ಕಾಣುತ್ತಿದ್ದ ಹುಡುಗ.

'ಏನಾದರೂ ಇದೆ' ಎಂದಾದರೆ, ಅದು ನಿರ್ದಿಷ್ಟ ಘಟ್ಟವನ್ನು ತಲಪದ ಹೊರತು, ಹೆಚ್ಚು ವಿಚಾರಿಸುವುದು ಹೇಗೆ?

ಅಥವಾ, ವಿಶಾಲಾಕ್ಷಿಯ ಭಾವನೆಗಳೆಲ್ಲ ಏಕಪಕ್ಷೀಯವೋ ಏನೋ. ಯುವಕರನ್ನು ಸಾಮಾನ್ಯವಾಗಿ ಆಕರ್ಷಿಸುವ ಗುಣಗಳು ಅವಳಲ್ಲಿಲ್ಲ. ಅಂದ ಮೇಲೆ? ಬರಿಯ ಕಲ್ಪನೆಯ ರಾಜ್ಯದಲ್ಲಿ ಅವಳ ವಿಹಾರವೋ ಹೇಗೆ? ಹಾಗೆ-ಎಂದಾದರೆ, ಭಗ್ನಹೃದಯಿಯಾಗಿ ಅನುಭವಿಸಬೇಕಾದ ಸಂಕಟ ಕಾದಿಟ್ಟದ್ದೇ....

ವಿಶಾಲಾಕ್ಷಿಯ ಅಂತರಂಗದ ಕೊರಗು, ಗಿರಿಜಾಬಾಯಿಯ ಹೃದಯದಲ್ಲೂ ಪ್ರತಿಧ್ವನಿಸಿತು. ಅನಿವಾರ್ಯವೆನಿಸಿದ ಗಂಡಾಂತರದ ಕಲ್ಪನೆಯಿಂದ, ಅವರ ಮುಖ ಬಾಡಿತು. ಗೆಳತಿಗೆ ನೆರವಾಗುವ ವಿಧಾನಗಳನ್ನು ಅರಸುತ್ತ, ಮೆದುಳು ಧಿಮಿಗುಟ್ಟಿತು.

ಮರುಕ್ಷಣದಲ್ಲೇ, ಪ್ರಕರಣ ಸುಖಾಂತವಾಗಬಹುದೆಂಬ ಆಸೆಯೂ ಕೊನರಿ, ಆ ಸುಂದರ ಚಿತ್ರ ಕಣ್ಣೆದುರು ಕಟ್ಟಿ, ಮನಸ್ಸು ಪ್ರಸನ್ನವಾಯಿತು.

* * * * *

ಬಸ್ಸಿನಲ್ಲಿ ಕುಳಿತ ವಿಶಾಲಾಕ್ಷಿಯನ್ನು ಕಾಡುತ್ತಿದ್ದುದೂ ಅಂತಹದೇ ಚಿಂತೆ. ಅನಿರೀಕ್ಷಿತವಾಗಿ ಗಂಗಾಧರ ಕಾಣಸಿಕ್ಕಿದ್ದ. ಒಂದುಕ್ಷಣ ಗಾಬರಿಯಾಗಿತ್ತು. ಮತ್ತೆ ಸಂತೋಷವೆನಿಸಿತ್ತು. ಒಮ್ಮೆ ಪರಿಚಯ ಮಾಡಿಸಿಕೊಂಡು-ಎಂದು, ಗಿರಿಜಾಬಾಯಿಯೇ ಕೇಳಿರಲಿಲ್ಲವೆ ಹಿಂದೆ? ಆತನನ್ನು ನೋಡಿ, ಅವರಿಗೆ ಹೇಗೆ ಅನಿಸಿತೊ ?

ತಾನೇ ಗಿರಿಜಾಬಾಯಿಯಾಗಿ, ಬಗೆಗಣ್ಣಿನಲ್ಲಿ ಗಂಗಾಧರನನ್ನು ವಿಶಾಲಾಕ್ಷಿ ಕಂಡಳು. ಯಾವ ಅವಸರವೂ ಇಲ್ಲದವನಂತೆ ಮಾತು. ಸೌಮ್ಯಪ್ರಕೃತಿ. ಪ್ರಶ್ನೆಗೆ ಉತ್ತರ,-ಮುಗುಳುನಗೆಯ ಮುನ್ನುಡಿಯೊಡನೆ. ಸರಳವಾದ-ಆದರೆ ನಿರ್ಮಲವಾದ-ಉಡುಗೆ. ಸಾಧಾರಣವಾಗಿ ನೂಲಿನದು. ಎಂದಾದರೊಮ್ಮೆ ಉಣ್ಣೆಯ ಪ್ಯಾಂಟು-ಶೂ; ಲಿನನ್ ಬುಶ್‌ಶರಟು....

ಈದಿನ ಮತ್ತೆ ಕಂಡುದರ ಮೇಲಿಂದ, ಗಿರಿಜಾಬಾಯಿಗೆ ಆತ ಮೆಚ್ಚುಗೆಯಾಗಿರಲೇಬೇಕು.

ತನ್ನ ಬದುಕಿನಲ್ಲಿ ಗಂಗಾಧರನ ಪ್ರವೇಶವಾಗಿತ್ತು, ಒಮ್ಮೆಂದೊಮ್ಮೆಲೆ. ಆ ಲೇಖನವೇ ಅದಕ್ಕೆ ಕಾರಣ. ಲೇಖನ ಅಚ್ಚಾದುದಂತೂ, ಗಿರಿಜಾಬಾಯಿಯ ಪ್ರೇರಣೆಯಿಂದ. 'ಗಿರಿಜಾಬಾಯಿಯೇ ಮೂಲ ಇದೆಲ್ಲಕ್ಕೂ !'

ತನ್ನೊಳಗಿನ ಕಾತರವನ್ನು ಅವರಿಗೆ ತಿಳಿಸಬೇಕೆಂದು ಅನಿಸುತ್ತಿತ್ತು. ಆದರೆ, ಏನೆಂದು ? ಹೇಗೆ ?

ಗಂಗಾಧರನ ವರ್ತನೆಯಲ್ಲಿ 'ವಿಶೇಷ'ವಾದುದೇನನ್ನು ತಾನು ಕಂಡೆ ? 'ಅಂತಹ' ಊಹೆಗೆ ಅವಕಾಶವಿತ್ತಿದ್ದನೆ ಆತ ? ಮಾತು ಆತ್ಮೀಯವಾಗಿರುತ್ತಿತ್ತು–ಆತ್ಮೀಯ ವಿಷಯಗಳಿಗೆ ಸಂಬಂಧಿಸಿದ ಮಾತು: ಅಧ್ಯಯನ, ಸಾಹಿತ್ಯ, ಆಪ್ತರು–ಸಂಬಂಧಿಕರು....

ಅಥವಾ, ಇಲ್ಲದುದನ್ನು ಸುಮ್ಮನೆ ಊಹಿಸಿಕೊಂಡೆನೆ ತಾನು ?

'ಏನೂ ಇಲ್ಲ'ವೆಂದಾದರೆ, ಆ ಮೊದಲದಿನ ಆತ ಖಂಡಿತ ಮನೆಗೆ ಬರುತ್ತಿರಲಿಲ್ಲ. ಅಲ್ಲ; ಆದಿನ ಬಂದುಹೋದವನು, ಪುನಃ ತನ್ನನ್ನು ಸಂಧಿಸುತ್ತಿರಲಿಲ್ಲ....

ಎಂತಹ ಸಂಕಟ! ಲಜ್ಜೆಯ ಮಾತೇನು ಇದರಲ್ಲಿ ? ತಾನು ಅವನನ್ನು ಪ್ರೀತಿಸುತ್ತಿರುವುದೇ ನಿಜ.

ಆದರೆ ಆತ ?

ಆ–ಬಾಯಿಬಿಟ್ಟು ಒಂದು ಮಾತನ್ನಾದರೂ ಹೇಳಬಾರದೆ ?

ಅವನ ಪರಿಚಯವಾದುದಕ್ಕೆ ಮುಂಚೆ, ಒಂದು ರೀತಿಯಲ್ಲಿ ತಾನು ಸುಖಿಯಾಗಿದ್ದೆ, ನಿಶ್ಚಿಂತೆಯಾಗಿದ್ದೆ. ಈಗ, ತನ್ನ ಬದುಕನ್ನೇ ಕುಲುಕಿದೆಯಲ್ಲ ಈ ಚಂಡಮಾರುತ ?

ಆತನೂ ಈ ಬಸ್ಸಿನಲ್ಲೇ ಬರಬಹುದಿತ್ತು. ಚಿಕ್ಕಮಾರ್ಕೆಟಿನ ಹತ್ತಿರ ಇಳಿದು ಇಬ್ಬರೂ ನಡೆಯಬಹುದಿತ್ತು. ಆದರೆ ಅವನು ಬರಲಿಲ್ಲ. ಬರುವ ಆಸಕ್ತಿಯನ್ನೂ ತೋರಲಿಲ್ಲ–ತೋರಲಿಲ್ಲ....

ಹಾಗೆ ಯೋಚಿಸುತ್ತ ವಿಶಾಲಾಕ್ಷಿ ಖಿನ್ನಳಾದಳು....ಪ್ರಾಯಶಃ ಅವನ ಹೃದಯದಲ್ಲಿ ತನಗೆ ಸ್ಥಾನವೇ ಇಲ್ಲವೇನೋ.

ಮತ್ತೆ ನೆನಪಾಯಿತು. ಒಮ್ಮೆ ಆತನೆಂದಿದ್ದ :

'ನಿಮ್ಮನ್ನು ಕಂಡು ಮಾತನಾಡಿದ ಮೇಲೆ ಪ್ರತಿಸಲವೂ ಹೃದಯ ಹಗುರವಾಗ್ತದೆ.'

ಅರ್ಥಪೂರ್ಣವಾದ ಮಾತು. ಖಂಡಿತವಾಗಿಯೂ ತನಗೋಸ್ಕರವಾಗಿಯೇ ಆಡಿದುದು–ತನ್ನೊಬ್ಬಳಿಗಾಗಿಯೇ.

....ವಿಶಾಲಾಕ್ಷಿ ಕಣ್ಣೆವೆಗಳನ್ನು ಮುಚ್ಚಿಕೊಂಡು, ಬದಿಯ ಕಂಬಿಗಳಿಗೆ ತಲೆಯಾನಿಸಿದಳು. ಸೊರಗಿದ್ದ ತುಟಿಗಳನ್ನು ಮಂದಹಾಸ ಮೆಲ್ಲನೆ ಆವರಿಸಿತು.

*  *  *  *  *

ವಿಶಾಲಾಕ್ಷಿ ಕುಳಿತಿದ್ದ ಬಸ್ಸು ಹೊರಟ ದಿಕ್ಕಿನಲ್ಲೇ, ಗೊತ್ತುಗುರಿಯಿಲ್ಲದೆ ಗಂಗಾಧರ ನಡೆದ. ಕಾಫಿಯ ಹರಟೆಯ ಗೆಳೆಯರಿಗೆ ಬರಗಾಲವಿರಲಿಲ್ಲ. ಅಂಥವರು ಆಗಾಗ್ಗೆ ಸಿಗುತ್ತಿದ್ದರು. ಆದರೆ ಎಷ್ಟೋಸಾರೆ, ಜನರಿಂದ ತಪ್ಪಿಸಿ ಕೊಳ್ಳುವುದನ್ನೇ ಅವನು ಇಷ್ಟಪಡುತ್ತಿದ್ದ. ತನ್ನೆಲ್ಲ ಯೋಚನೆಗಳಿಗೆ ಸಂಗಾತಿ ಯಾಗಿ ಒಬ್ಬನೇ ಅಲೆಯುವುದು....

ಒಬ್ಬನೇ ?

'ಯಾವ ಕಡೆ ಹೊರಟಿದೀರಾ? ನಡೆದುಹೋಗೋಣವೇನು ?' ಎಂದ ವಿಶಾಲಾಕ್ಷಿ ಒಂದು ಮಾತು ಕೇಳಿದ್ದರೆ, ಈಗಿನ ಈ ಒಂಟಿತನ ಇರುತ್ತಿರಲಿಲ್ಲ.

ಅಥವಾ, ತಾನೂ ಆ ಬಸ್ಸನ್ನೇರಿ ಕುಳಿತಿದ್ದರೆ? ಉಂಟೆ ಎಲ್ಲಾದರೂ ? ತನ್ನ ಬಗ್ಗೆ ತಪ್ಪು ಗ್ರಹಿಕೆಗೆ ಸುಲಭವಾಗಿ ಎಡೆಸಿಗುತ್ತಿತ್ತು.

ಆ ಗಿರಿಜಾಬಾಯಿ ಪರೀಕ್ಷಿಸುವ ನೋಟದಿಂದ ತನ್ನನ್ನು ನೋಡಿದರು. 'ಈತ ಒಳ್ಳೆಯವನೆ? ಕೆಟ್ಟವನೆ?' ವಿಶಾಲಾಕ್ಷಿ ತನ್ನೊಡನೆ ಮಾತನಾಡಿದಾಗಲೆಲ್ಲ, ಯಾವುದಾದರೊಂದು ಕಾರಣಕ್ಕಾಗಿ ಗಿರಿಜಾಬಾಯಿಯ ಪ್ರಸ್ತಾಪ ಬರುತ್ತಿತ್ತು. ವಯಸ್ಸಿನ ಅಂತರವಿದ್ದರೂ ಅವರಿಬ್ಬರೂ ಆತ್ಮೀಯ ಗೆಳತಿಯರೆಂಬುದು ಸ್ಪಷ್ಟ. ಗಿರಿಜಾಬಾಯಿಯ ದೃಷ್ಟಿಯಲ್ಲೂ ತಾನು ಒಳ್ಳೆಯವನಾಗಿ ಕಾಣುವುದು ಮುಖ್ಯ....

ಆ ಯೋಚನೆಯಿಂದ ಗಂಗಾಧರನಿಗೆ ನಗು ಬಂತು. ರಸ್ತೆಯ ಮಗ್ಗುಲು ಹಾದಿ. ಇಷ್ಟಬಂದಂತೆ ನಗುವಹಾಗಿರಲಿಲ್ಲ. ಎದುರು ಗಡೆಯಿಂದ ಜನ ಬರು ತ್ತಿದ್ದರು. ಹೆಂಗಸರು—ಯುವತಿಯರು. ಕೈಗಳಲ್ಲಿ ಚೀಲ ಹಿಡಿದು ಮಾರ್ಕೆಟಿಗೆ ಹೊರಟ ಸದ್ಗೃಹಸ್ಥರು. ಸಿನಿಮಾ ಮಂದಿರಗಳಿಗೆ ಧಾವಿಸುತ್ತಿದ್ದವರು. ಆತನನ್ನು ಹಿಂದಿಕ್ಕಿ ಬೇರೆ ಕೆಲವರು ಸಾಗುತ್ತಿದ್ದರು—ಕೆಲಸ ಮುಗಿಸಿ ಮನೆಗೆ.

....ತಾನು ಒಳ್ಳೆಯವನಾಗಿ ಕಾಣುವುದು ಮುಖ್ಯ. ಒಳ್ಳೆಯತನ ಮತ್ತು ಕೆಟ್ಟತನ. ಜಗತ್ತಿನಲ್ಲಿ ಯಾವುದು ಒಳ್ಳೆಯದು? ಯಾವುದು ಕೆಟ್ಟದು ? ಯಾವ ಮಾನದಂಡದಿಂದ ಅಳೆಯಬೇಕು ಇವನ್ನು ?

ಈ ಅಲ್ಪ ಅವಧಿಯಲ್ಲೇ ಎಷ್ಟೊಂದು ಬದಲಾಗಿರುವೆ ತಾನು! ವಿಶಾಲಿ [ಅಲ್ಲ, ವಿಶಾಲಾಕ್ಷಿ] ಗಮನಿಸಿರುವಳೆ ಇದನ್ನು?

ಅನಿಶ್ಚಯತೆಯ ಭಾವನೆ. ಅದರಿಂದ ಸಂಕಟ. ಪರಿಹಾರ? ಬಾಯಿ ತೆರೆದು ಕೇಳಬೇಕು. ಉತ್ತರ ಬಂದಾಗ—

'ನ'ಕಾರದ ಉತ್ತರಕ್ಕೆ ಸಿದ್ಧನಿರಲಿಲ್ಲ ಗಂಗಾಧರ. ಆ ಬಗೆಯ ಮುಕ್ತಾಯವೆ ಈ ಆರಂಭಕ್ಕೆ? ಅದನ್ನು ಸಹಿಸುವುದು ಖಂಡಿತ ಸಾಧ್ಯವಿರಲಿಲ್ಲ ತನ್ನಿಂದ....

ಅವನ ಮೆದುಳು ಚೀಂಗುಟ್ಟಿತು.

ಹತ್ತಿರದಲ್ಲೇ ಇದ್ದ ಪೆಂದ್ಯಾಟದ ಕಳದಿಂದ, ಬೇಲಿ ಹಾರಿ, ಕಾಲ್ಚೆಂಡು ಓಡಿಬಂತು ಬೀದಿಗೆ. ಗಂಗಾಧರ ಯಾಂತ್ರಿಕವಾಗಿ ಅದನ್ನು ತಡೆದು, ಮತ್ತೆ ಬಯಲಿಗೆಸೆದ. [ಪಾದದಿಂದ ತುಳಿದೇ ದಾಟಿಸಬಹುದಾಗಿತ್ತು. ಆದರೆ, ಗುರಿ ತಪ್ಪಬಹುದೆಂಬ ಶಂಕೆ.. ನಿರಾಶನಾಗಲು ಗಂಗಾಧರ ಸಿದ್ಧನಿರಲಿಲ್ಲ.]

ಬೇಲಿಯಾಚೆಗಿಂದ ಎಳೆಯ ಧ್ವನಿಯೊಂದು ನುಡಿಯಿತು:

"ಥ್ಯಾಂಕ್ಸ್!"

[ಸದಾಕಾಲವೂ ಬಾಲಕನಾಗಿಯೇ ಇರುವುದು ಎಷ್ಟು ಚೆನ್ನು! ಯಾವ ಸಮಸ್ಯೆಯೂ ಇಲ್ಲ ಆಗ.]

ನೆಲವನ್ನೇ ನೋಡುತ್ತ ನಡಿಗೆ ಮುಂದಕ್ಕೆ....

....ತಾನು ಕಟ್ಟುತ್ತಿರುವುದು ಗಾಳಿಗೋಪುರವೇ ಸರಿ. ತನ್ನ ಬಗೆಗೆ ವಿಶಾಲಾಕ್ಷಿಯ ಹೃದಯದಲ್ಲಿ ಸ್ಥಾನವಿದೆ ಎನ್ನುವುದಕ್ಕೆ ಎಲ್ಲಿದೆ ಪುರಾವೆ?

....ಆ ಯೋಚನೆಯಿಂದ ಮುದುಡಿತು. ಒಮ್ಮೆ ವಿಶಾಲಾಕ್ಷಿ ಅಂದಿದ್ದಳು:

'ಇನ್ನೊಬ್ಬರ ಜತೆ ನಾನು ಸಂಕೋಚವಿಲ್ಲದೆ ಮಾತಾಡ್ತಿರೋದು, ಓಡಾಡ್ತಿ ಇದೇ ಮೊದಲು.'

ನಿನ್ನ ಸಹವಾಸ ನನಗಿಷ್ಟ–ಎಂದಲ್ಲದೆ ಬೇರೇನು ಅರ್ಥ ಆ ಮಾತಿಗೆ?

ಬೇರೆ ಏನು ಅರ್ಥವೂ ಇಲ್ಲವೆಂಬುದು ಮನವರಿಕೆಯಾಗಿ, ಗಂಗಾಧರ ಹಸನ್ಮುಖಿಯಾದ.

## ೧೪

ನೂತನ ಪ್ರಾಂತೋದಯವಾದ ಮೊದಲವಾರದ ಅಂತ್ಯದಲ್ಲಿ, ಸಂತಸದ ಕಡಲಾಯಿತು ವಿಶಾಲಾಕ್ಷಿಯ ಮನೆ. ಯಾವ ಮುನ್ಸೂಚನೆಯೂ ಇಲ್ಲದೆ ರಂಗರಾಜ ಬಂದಿಳಿದ.

ಹರ್ಷಾತಿರೇಕದಿಂದ ಗದ್ಗದಿತವಾದ ಕಂಠದಲ್ಲಿ ನಾಗಮ್ಮ ಅಂದರು :

"ಬರ್ತೀನಿಂತ ಒಂದು ಕಾಗದವಾದರೂ ಹಾಕಬಾರದಾಗಿತ್ತೇನೋ ?"

"ಇಂಥ ದಿನವೇ ಹೊರಡೋದೂಂತ ಗೊತ್ತಾಗಿರ್ಲಿಲ್ಲ ಅಮ್ಮ," ಎಂದ ರಂಗರಾಜ.

ವಿಶಾಲಾಕ್ಷಿ ಕಣ್ಣುತುಂಬ ಅಣ್ಣನನ್ನು ನೋಡುತ್ತ ಕೇಳಿದಳು :

"ಟೆಲಿಗ್ರಾಂ ಕೊಡೋಕೆ ಏನಾಗಿತ್ತು ?"

"ಅನಿರೀಕ್ಷಿತವಾಗಿ ಬರೋದೇ ಚೆನ್ನಾಗಿರುತ್ತೆ ಅಂದ್ಕೊಂಡೆ," ಎಂದು ರಂಗರಾಜ ನಕ್ಕ.

ತಾಯಿ ಮತ್ತು ತಂಗಿಗೋಸ್ಕರ ಸೀರೆಗಳಿದ್ದುವು. ತಮ್ಮಂದಿರಿಗಾಗಿ 'ತಯಾರಿ ಅರಿವೆ.'

ನಾಗಮ್ಮ ಕೇಳಿದರು :

"ಸೀರೆಗೆಷ್ಟು ಬೆಲೆ ?"

ರಂಗರಾಜ ಧ್ವನಿ ಏರಿಸಿ ಅಂದ :

"ಬೆಲೆ ತಗೊಂಡು ಏನ್ಮಾಡ್ತೀಯಾ ? ಚೆನ್ನಾಗಿದೆಯೋ ಹೇಳು."

"ಚೆನ್ನಾಗೆ ಇದೇ. ಸಂಪಾದಿಸೋರು ನೀವು. ಖರ್ಚುಮಾಡೋರೂ ನೀವೇ. ಸುಮ್ನೆ ಕೇಳಿದೆನಪ್ಪ."

ಅವರು ತಿಳಿಯಲು ಹಾತೊರೆಯುತ್ತಿದ್ದ ಮುಖ್ಯ ವಿಷಯ ಬೇರೆಯೇ ಇತ್ತು. ಕೆಲಸಕ್ಕೆ ರಾಜಿನಾಮೆಕೊಟ್ಟು, ಇಲ್ಲಿ ತಾಯಿಯ ಬಳಿಯಲ್ಲೇ ಇರಲು ಮಗ ಬಂದಿರಬೇಕೆಂಬುದು ಅವರ ನಂಬುಗೆ. ಕೇಳಿ ಖಚಿತಪಡಿಸಿಕೊಳ್ಳಬೇಕೆಂಬ ಬಯಕೆ. ಹಾಗೇನೂ ಇಲ್ಲದೆ, ಆತ ಹಿಂತಿರುಗಿ ಹೋಗಲೂಬಹುದೆಂಬ ಶಂಕೆ. ಆ ಶಂಕೆ ಏನಾದರೂ ನಿಜವಾದರೆ—

ಹೋಗಲಿ, ಬಂದದಿನವೇ ಈ ಮಾತು ಬೇಡ–ಎಂದು ಅವರು ಒಂದು ದಿನ ತಡೆದರು, ಒಂದೇ ದಿನ. ತನ್ನ ಮಾತಿಗೆ ಬೆಲೆ ಕೊಡುವವರಲ್ಲ ಈ ಮಕ್ಕಳು ಎಂದು ತಿಳಿದಾಗ, ಗಂಗಾ ಯಮುನಾ ಪ್ರವಾಹಗಳನ್ನೇ ನಾಗಮ್ಮ ಹರಿಸಿದರು.

"ಇದೇ ಏನು ನೀನು ಅಮ್ಮನನ್ನು ಒಪ್ಪಿಸಿರೋದು ?" ಎಂದು ರಂಗರಾಜ ತಂಗಿಯ ಮೇಲೆ ಸಿಟ್ಟಾದ.

ವಿಶಾಲಾಕ್ಷಿ ನಿಧಾನವಾಗಿ ಅಂದಳು :

"ಹೇಗೂ ಎರಡು ಮೂರು ವಾರ ಇರ್ತಿಯಲ್ಲ. ಗಿರಿಜಾಬಾಯಿಂದಲೂ ಹೇಳಿಸೋಣ. ಒಪ್ಪಿಯೇ ಒಪ್ತಾರೆ."

ವಿದೇಶ ಶಿಕ್ಷಣಕ್ಕೆ ಹೊರಡಲಿದ್ದ ರಂಗರಾಜ, ತಾನು ಓದಿ ಪದವೀಧರ ನಾಗಿದ್ದ. ವಿದ್ಯಾನಿಲಯಕ್ಕೆ ಹೋಗಿ, ತನ್ನ ಪ್ರಿನ್ಸಿಪಾಲರನ್ನೂ ಪ್ರಾಧ್ಯಾಪಕರನ್ನೂ ಕಂಡುಬಂದ.

['ಎಲ್ಲಾ ನಿಮ್ಮ ಆಶೀರ್ವಾದ, ಸಾರ್.'

'ಮೈಸೂರು ಎಂಜಿನಿಯರುಗಳು ಅಂದರೆ ಲೋಕವಿಖ್ಯಾತರು!'

ಆ ಮಾತಿಗೆ ಉತ್ತರ, ಸವಿನಯ ಮಂದಹಾಸ.

'ಬೇರೊಬ್ಬರಿಂದ ನಾವು ಕಲಿಯುವಂಥಾದ್ದು ಏನೂ ಇಲ್ಲ ಅಂತ ಹೇಳಲಾರೆ. ಮಹಾ ಸಾಧನೆಗಳು ಎಲ್ಲೇ ಆದರೂ ನಾವು ಸ್ಫೂರ್ತಿ ಪಡೀಬೇಕು. ಆದರೂ, ನಮ್ಮದೇ ಆದ ಜೀನಿಯಸ್ ಅನ್ನೋದು ಇದ್ದೇ ಇದೆ.'

'ಹೌದು, ಸಾರ್.']

ಪದವೀಧರರಾಗಿ ಇನ್ನೂ ಒಳ್ಳೆಯ ಉದ್ಯೋಗದ ಹಾದಿ ನೋಡುತ್ತಲೇ ಇದ್ದ ಸಹಪಾಠಿಗಳೂ ಒಬ್ಬಿಬ್ಬರು ರಂಗರಾಜನಿಗೆ ಭೇಟಿಯಾದರು.

[—'ನೀನು ಲಕೀ ಫೆಲೋ ಕಣಯ್ಯ.'

—'ನಮ್ಮ ಅದೃಷ್ಟ ಹೀಗಿದೆ. ಆವತ್ತು ಕಾಲೇಜ್ನಲ್ಲಿ ಸೀಟು ಸಿಗೋದಿಲ್ಲಾಂತಿದ್ವಿ. ಈಗ ಸಿಗ್ತಾ ಇಲ್ಲಾಂತಿದೀವಿ.']

....ಮಗ ಪ್ರಸನ್ನ ಚಿತ್ತನಾಗಿದ್ದ ಸಂದರ್ಭ ನೋಡಿ, ಸಂಸಾರದ ಜವಾಬುದಾರಿಯ ಮಾತನ್ನೆತ್ತಿದರು ನಾಗಮ್ಮ.

"ನಿನ್ನ ತಂಗೀದೊಂದು ಮದುವೆಯಾಗಿ, ಸೊಸೆಯೂ ಮನೆಗೆ ಬಂದಳೂಂದರೆ ಹಾಯಾಗಿ ಕಣ್ಣುಚ್ಚಿತೀನಪ್ಪ ನಾನು."

ಈ ಸಂವಾದದಿಂದ ತಪ್ಪಿಸಿಕೊಳ್ಳುವಂತೆಯೇ ಇಲ್ಲ, ಎಂದು ರಂಗರಾಜ ತಿಳಿದೇ ಇದ್ದ. ಆದರೂ ಆತನೆಂದ:

"ಮಾತನಾಡೋಕೆ ಬೇರೆ ವಿಷಯವೇನೂ ಇಲ್ಲವೇನಮ್ಮ ನಿಂಗೆ?"

"ಬೇರೆ ಏನಿರುತ್ತೆ ಹೇಳು? ಹಾಡಿದ್ದನ್ನೇ ಹಾಡೋಳು ನಾನು."

ಅಳು ಅದರ ಜತೆಯಲ್ಲಿ.

"ಸ್ವಲ್ಪ ತಾಳು. ಯಾವುದಕ್ಕೂ ಅವಸರ ಪಡಬಾರದು."

"ನಿನಗೂ ವಿಶಾಲಿಗೂ ಈಗ ಎಷ್ಟು ವಯಸ್ಸು ಅಂದ್ಕೊಂಡೆ?"

"ಎಷ್ಟಾದರೂ ಇರಲಿ!"

"ನವರಾತ್ರಿಗೆ ಬಂದು ಹೋಗೀಂತ ತುಮಕೂರಿಗೆ ಕಾಗದ ಬರೆಸಿದ್ದೆ. ಚಿಕ್ಕಮಗೂಗೆ ಕಾಹಿಲೆ ಅಂತ ಯಾರೂ ಬರಲಿಲ್ಲ....ನಿನ್ನ ಚಿಕ್ಕಪ್ಪನಂತೂ ಮೈಸೂರು ಕಡೆಗೆ ಹಾಯೋದೇ ಇಲ್ಲ."

"ಹಾಯದೇ ಇದ್ದರೆ ಅಷ್ಟೇಹೋಯ್ತು. ಅವರಿಂದ ಯಾವ ಉಪಕಾರವೂ ನಮಗೆ ಆಗಬೇಕಾದ್ದಿಲ್ಲ."

"ಸಂತೋಷ ರಾಜೂ. ನಿಮ್ಮ ತಂದೆಗೂ ಅಂಥದೇ ಸ್ವಾಭಿಮಾನ ಇತ್ತು. ನನಗೂ ಕೂಡಾ ಯಾರ ಹಂಗೂ ಬೇಕಾಗಿಲ್ಲ. ನೀನೊಬ್ಬ ಇಲ್ಲಿಗೆ ಬಂದು...."

"ಪುನಃ ಶುರುಮಾಡ್ದೆ!"

"ರಷ್ಯಾಕ್ಕೋ ಅದೆಲ್ಲಿಗೋ ಯಾಕೆ ಹೋಗ್ಬೇಕು ಹೇಳು?"

"ಅದರಿಂದ ಮುಂದೆ ಅನುಕೂಲವಾಗುತ್ತೇಂತ ಹೋಗ್ತೀನಿ. ಅಪ್ಪಯ್ಯ ಇದ್ದಿದ್ದರೆ, ನಾನು ಹೋಗ್ತಿದೀನೀಂತ ಎಷ್ಟು ಸಂತೋಷಪಡ್ತಿದ್ರು—ಗೊತ್ತೆ?"

"ಅವರು ಇದ್ದಿದ್ದರೆ ಈ ವಿಷಯಕ್ಕೆಲ್ಲಾ ನಾನು ತಲೆ ಹಾಕ್ತಿದ್ನೆ?"

"ಎಲ್ಲಾ ಸರಿಹೋಗುತ್ತೆ. ನೀನು ಧೈರ್ಯವಾಗಿರು...."

ಆದಿನ ಅಷ್ಟಕ್ಕೇ ನಿಂತಿತು.

....ಮನೆಗೆ ಬಂದ ಗಿರಿಜಾಬಾಯಿಯೂ ಅದೇ ಮಾತನ್ನು ಆಡಿದರು.

"ನೀವು ಧೈರ್ಯವಾಗಿರಿ. ಎಲ್ಲಾ ಸರಿಹೋಗುತ್ತೆ."

ಹಾಗೆ ಹೇಳುತ್ತ ಗಿರಿಜಾಬಾಯಿ ವಿಶಾಲಾಕ್ಷಿಯ ಮುಖವನ್ನೂ ನೋಡಿದರು, ಆ ಭಾವವನ್ನು ಓದಬಯಸುತ್ತ. ಆದರೆ, ತನ್ನ ದೃಷ್ಟಿಯನ್ನು ಇದಿರಿಸದೆ ಪಕ್ಕಕ್ಕೆ ತಿರುಗಿಬಿಟ್ಟಿದ್ದಳು ಗೆಳತಿ.

....ಪಾಸ್‌ಪೋರ್ಟಿಗೆ ಸಂಬಂಧಿಸಿ ಪೋಲೀಸ್ ಅಧಿಕಾರಿ ತನಿಖೆ ನಡಸಿದುದರ ಬಗ್ಗೆ ವಿಶಾಲಾಕ್ಷಿಯಾಗಲೇ ಅಣ್ಣನಿಗೆ ಬರೆದಿದ್ದಳು. ಆ ಸಂಬಂಧವಾಗಿ ಆತ ಹಿರಿಯ ಪೋಲೀಸ್ ಅಧಿಕಾರಿಯನ್ನೇ ನೋಡಿಬಂದ.

"ಭಿಲಾಯಿಗೆ ಪಾಸ್‌ಪೋರ್ಟ್ ಇಷ್ಟರಲ್ಲೇ ಹೋಗಿರುತ್ತೆ–ವೀಸಾನೂ ತರಿಸ್ಕೊಂಡಿರ್‍ತಾರೆ–ಅಂದರು," ಎಂದ.

"ಆಡಳಿತದವರೇ ಕಳಿಸ್ತಿರೋದರಿಂದ ಆಯಿತು. ಇಲ್ಲದೇ ಹೋಗಿದ್ದರೆ ಆರ್ಥಿಕ ಭರವಸೆಗೆ ಯಾರೂ ಸಿಗದೆ, ಪ್ರವಾಸವೇ ಆಗ್ತಿರಲಿಲ್ಲ," ಎಂದೂ ಹೇಳಿದ.

ವಿಶಾಲಾಕ್ಷಿ ಕೇಳಿದಳು :

"ಆರ್ಥಿಕ ಭರವಸೆ ಅಂದರೆ ?"

"ನಾನು ವಾಪಸು ಬರದೆ ಅಲ್ಲೇ ಇದ್ಬಿಟ್ಟೆ–ಅಂತಿಟ್ಕೋ. ಆಗ, ಒಂದು ನಿರ್ದಿಷ್ಟ ಸಮಯದವರೆಗೆ ಅಲ್ಲಿ ನನ್ನನ್ನು ಸಾಕೋ ಖರ್ಚು, ನಮ್ಮ ಸರ್ಕಾರದ ತಲೆ ಮೇಲೆ ಬೀಳುತ್ತೆ. ಅದನ್ನು ಕೊಡ್ತೀನೀಂತ ನಮ್ಮ ಪರವಾಗಿ ಯಾರಾದರೂ ಮೊದಲೇ ಒಪ್ಪಬೇಕು."

"ನೀನು ಸದ್ಯಃ ಅಲ್ಲೇ ಇರಬೇಡ ! ರಷ್ಯದ ಹುಡುಗೀರನ್ನು ನಂಬೋದು ಕಷ್ಟ," ಎಂದು ವಿಶಾಲಾಕ್ಷಿ ನಕ್ಕಳು.

ಪರದೇಶದ ಚಳಿ ಸಹಿಸಲೆಂದು ಅವಸರವಾಗಿ ಪೋಷಾಕು ಹೊಲಿಸುವ ಗಡಿಬಿಡಿಯಲ್ಲಿ, ತಂಗಿಯ ಕಡೆಗೆ ರಂಗರಾಜ ಹೆಚ್ಚು ಲಕ್ಷ್ಯಕೊಟ್ಟೇ ಇರಲಿಲ್ಲ.

ವಿಶಾಲಾಕ್ಷಿ ಒಮ್ಮೆ ಅಂದಳು :

"ಒಬ್ಬರು ಕವಿ ನಮ್ಮ ಮನೆಗೆ ಬಂದಿದ್ದರೂಂತ ಆವತ್ತು ಬರೆದಿದ್ದೆ. ನೆನಪಿದೆಯಾ ರಾಜು ?"

ಅಸ್ಪಷ್ಟವಾಗಿ ನೆನಪಿತ್ತು.

"ಹೂಂ–ಹೂಂ. ಅದೇನೋ ಬರೆದಿದೆಯಲ್ಲ.

"ಅವರು ನಿನ್ನನ್ನು ನೋಡಬೇಕು ಅಂತಿದ್ದು. ನೀನು ಹೊರಡೋಕ್ಮುಂಚೆ ಒವ್ಮೆ ಕರಸ್ತೀನಿ."

"ಅದೇನೇ ಕವಿ–ಅಂದರೆ ? ಅವರಿಗೆ ಬೇರೇನೂ ಕೆಲಸ ಇಲ್ಲಾ ?"

"ತಮಾಷೆಗೆ ಕವಿ ಅನ್ನೋದು. ಲೆಕ್ಚರರ್ ಆಗಿದ್ರು. ಈ ವರ್ಷ ಎಂ.ಎ. ಮಾಡ್ಕೊಳ್ತಿದಾರೆ. ಕನ್ನಡ."

ರಂಗರಾಜ ಊರಿಗೆ ಬಂದಿದ್ದ ಸುದ್ದಿಯನ್ನು ವಿಶಾಲಾಕ್ಷಿಯಿಂದ ತಿಳಿದ ಗಂಗಾಧರ, ಕೆಲದಿನಗಳ ಅನಂತರ ಅವರ ಮನೆಗೆ ಬಂದ.

"ತುಂಬಾ ಸಂತೋಷವಾಯ್ತು ನಿಮ್ಮ ಪರಿಚಯವಾಗಿ," ಎಂದ.

ಹಸ್ತಲಾಘವ ಆತ್ಮೀಯವಾಗಿತ್ತು.

"ನನಗೂ ಅಷ್ಟೆ. ವಿಶಾಲಿ–ನನ್ನ ತಂಗಿ–ನಿಮ್ಮ ವಿಷಯ ಆಗಲೇ ತಿಳಿಸಿದಾಳೆ," ಎಂದ ರಂಗರಾಜ.

"ತಿಳಿಸೋದಕ್ಕೆ ಇದೆಯಾದರೂ ಏನು ?"

[ನಿಜವಾಗಿಯೂ ಏನಿತ್ತು ?]

ವಿಶಾಲಾಕ್ಷಿ ನಗುತ್ತ ನಡುವೆ ಬಾಯಿಹಾಕಿ ಅಂದಳು :

"ನಿಮ್ಮ ಕವಿತೆಗಳು ಇವೆಯಲ್ರೀ...."

ಗಂಗಾಧರ ನೇರವಾಗಿ ವಿಶಾಲಾಕ್ಷಿಯ ಕಡೆ ನೋಡುತ್ತಲೇ ಇರಲಿಲ್ಲ. ತಂಗಿಯ ನಡೆನುಡಿ, ಆತನ ವರ್ತನೆ, ಎರಡೂ ಸ್ವಲ್ಪ ವಿಚಿತ್ರವಾಗಿ ರಂಗರಾಜನಿಗೆ ತೋರಿದುವು. ಮರುಕ್ಷಣದಲ್ಲೇ, 'ವಿಚಿತ್ರವೇನೂ ಇಲ್ಲ. ಸರಿಯಾಗೇ ಇದಾರೆ. ಏನೋ ಭ್ರಮಿಸ್ತಿದೇನೆ' ಎಂದೂ ಅನಿಸಿತು. ಆತ ನಕ್ಕು ಅಂದ :

"ಉಕ್ಕಿಗೂ ಕವಿತೆಗೂ ಬಹಳ ದೂರ. ಏನಂತೀರಾ ?"

"ಸಾಮಾನ್ಯವಾಗಿ ಸರಿಯಾದ ಕಲ್ಪನೆ. ಆದರೆ, ನೀವು ಇಷ್ಟಪಟ್ಟರೆ, ಹತ್ತಿರದ ಸಂಬಂಧ ಏರ್ಪಡಿಸಲೂಬಹುದು," ಎಂದ ಗಂಗಾಧರ. ತನ್ನ ಮಾತಿನ ಜಾಣತನಕ್ಕೆ ತಾನೇ ತಲೆದೂಗಿ, ಮತ್ತೂ ಅಂದ :

"ಮುಖ್ಯ ನಿಮಗೆ ಪುರಸೊತ್ತಿರಬೇಕು–ಓದೋದಕ್ಕೆ."

ಆ ಒಗಟುಮಾತು, ಆರೆಕ್ಷಣ ವಿಶಾಲಾಕ್ಷಿಯ ಉಸಿರು ಕಟ್ಟಿಸಿತು.

"ಅದು ನಿಜವೆನ್ನಿ," ಎಂದ ರಂಗರಾಜ.

ಗಂಗಾಧರ ಅಲ್ಲಿ ಹೆಚ್ಚು ಹೊತ್ತಿರಲಿಲ್ಲ. ತನಗಿಂತ ಒಂದೆರಡು ವರ್ಷ ಚಿಕ್ಕವನಂತೆ ಕಂಡ ರಂಗರಾಜನನ್ನು ಒಲವು ತುಂಬಿದ ನೋಟದಿಂದ ನೋಡಿ, ಶುಭ ಹಾರೈಸಿ, ಹೊರಟುಹೋದ.

....ಮಗನು ಭಿಲಾಯಿಗೆ ಮರಳುವ ದಿನ ಹತ್ತಿರ ಬಂದಂತೆ, ನಾಗಮ್ಮನ ಮನೋಸ್ಥಿತಿ ಕೆಟ್ಟಿತು. ನಿದ್ದೆ ದೂರವಾಯಿತು. ಆದರೂ ಬಿಮ್ಮನೆ ತುಟಿ ಬಿಗಿದುಕೊಂಡು, ಸಿಹಿಖಾರದ ತಿಂಡಿಗಳನ್ನು ಅವರು ತಯಾರಿಸಿದರು; ಡಬ್ಬದಲ್ಲಿ ತುಂಬಿ ಸಿದ್ಧಗೊಳಿಸಿದರು.

....ಎಷ್ಟು ಬೇಗನೆ ಕಳೆದುಹೋಗಿದ್ದುವು ಮೂರು ವಾರಗಳು!

ಹೊರಡುವ ಹೊತ್ತಿನಲ್ಲಿ, ಚೆನ್ನಾಗಿ ಓದಿರೆಂದು ಹಿತವಚನ ತಮ್ಮಂದಿರಿಗೆ.

ಜಯರಾಮು ಕೇಳಿದ:

"ರಷ್ಯದಲ್ಲಿ ಸೈಕಲು ಕಡಮೆಗೆ ಸಿಗುತ್ತಾ ಅಣ್ಣ ?"

ರಂಗರಾಜನೆಂದ:

"ಊಹೂ. ಅಲ್ಲಿ ವಿಮಾನ ನಮ್ಮಲ್ಲಿಗಿಂತ ಕಡಮೆಗೆ ಸಿಗುತ್ತೆ. ಸೈಕಲು ಇಲ್ಲೀದೇ ಚಂದ. ಬೆಲೆಯೂ ಕಮ್ಮಿ. ಬಾಳಿಕೇನೂ ಜಾಸ್ತಿ. ವಾಪಸು ಬಂದ ಮೇಲೆ ತಕ್ಕೊಡ್ತೀನಿ."

ಪಾದ ಮುಟ್ಟಿ ನಮಿಸಿದ ಮಗನನ್ನು ನಾಗಮ್ಮ ಅಳುತ್ತ ಆಶೀರ್ವದಿಸಿದರು:

"ಹೋಗಿಬಾ...."

ಒಡಹುಟ್ಟಿದವರು ರೈಲುನಿಲ್ದಾಣಕ್ಕೆ ಹೋಗಿ, ತಮ್ಮ ಅಣ್ಣನನ್ನು ಬೀಳ್ಕೊಟ್ಟರು.

ರೈಲು ಹೊರಡುತ್ತಿದ್ದಂತೆ, ತಂಗಿಯನ್ನು [ತಮ್ಮಂದಿರನ್ನು ಕೂಡಾ] ಉದ್ದೇಶಿಸಿ ರಂಗರಾಜನೆಂದ:

"ಬಹುಶಃ ಇನ್ನು ಒಂದು ವಾರದಲ್ಲೇ ಭಿಲಾಯಿಯಿಂದ ದಿಲ್ಲಿಗೆ ಹೋಗ್ತೀವಿ. ದಿಲ್ಲಿ ಬಿಡೋಕ್ಕಿಂಚೆ ಕಾಗದ ಬರೀತೀನಿ."

## ೧೫

ರಂಗರಾಜನನ್ನೊಳಗೊಂಡ ಎಂಜಿನಿಯರುಗಳ ತಂಡ, ಭಿಲಾಯಿ ಬಿಡುವುದು ತಡವಾಯಿತು. ಆತನಿಂದ ವಿಶಾಲಾಕ್ಷಿಗೆ ಪತ್ರ ಬಂದುದು, ಕ್ರಿಸ್‌ಮಸ್ ರಜಾ ಆರಂಭವಾದ ಮೂರನೆಯ ದಿನ.

ಬೆಳಗ್ಗೆ ರಂಗರಾಜನಿಂದ ಬಂತು; ಸಂಜೆ ಗಂಗಾಧರನಿಂದ.

ಅಣ್ಣ ಬರೆದುದನ್ನು, ಹರ್ಷಿತಳಾಗಿ ಕುಣಿದಾಡುತ್ತ, ವಿಶಾಲಾಕ್ಷಿ ಓದಿದಳು; ಗಟ್ಟಿಯಾಗಿ ಓದಿ ಹೇಳಿದಳು.

[ಆ ಇನ್ನೊಂದನ್ನು—]

ನನ್ನ ಪ್ರೀತಿಯ ವಿಶಾಲಿ,

ಈ ಕಾಗದ ಮನೆಗೆ ತಲಪುವುದರೊಳಗೆ, ನಾನು ಬೇರೆಯೇ ದೇಶದಲ್ಲಿರುತ್ತೇನೆ.

ನಮ್ಮ ವಿಮಾನ ಪಾಲಮ್ ನಿಲ್ದಾಣದಿಂದ ಹೊರಡಲು ಒಂದು ಘಂಟೆ ಹೊತ್ತಿದೆ. ಇನ್ನು ಕೆಲವೇ ನಿಮಿಷಗಳಲ್ಲಿ, ನಿಲ್ದಾಣಕ್ಕೆ ನಮ್ಮನ್ನೊಯ್ಯುವ ಬಸ್ಸು ಬರುತ್ತದೆ. ನಾವೆಲ್ಲ ಸಿದ್ಧರಾಗಿ ಕುಳಿತಿದ್ದೇವೆ.

ಬಹಳ ಕಾಲದಿಂದ ಇದಿರುನೋಡುತ್ತಿದ್ದ ಪ್ರವಾಸ ಇನ್ನು ಶುರು–ಎಂದು ಎಲ್ಲರಿಗೂ ಸಂತೋಷವಾಗಿದೆ.

ನಿನ್ನೆ ರಾತ್ರಿ, ತಮ್ಮ ನೂರಾರು ಕೆಲಸಗಳ ನಡುವಿನಲ್ಲೂ ಬಿಡುವು ಮಾಡಿಕೊಂಡು, ಪ್ರಧಾನಿ ನೆಹರೂ ನಮಗೆ ಸಂದರ್ಶನವಿತ್ತರು. ಆಗ ಅವರು ಏನು ಹೇಳಿದರು ಗೊತ್ತೆ? 'ನೀವಿನ್ನೂ ಯುವಕರು. ಸಂಭವಪೂರ್ಣವಾದ ಬದುಕು ನಿಮಗಾಗಿ ಕಾದಿದೆ. ಎಂಜಿನಿಯರುಗಳಾದ ನೀವು ಹೊಸ ಸಮಾಜದ ನಿರ್ಮಾತೃಗಳು. ನೂತನ ಇತಿಹಾಸವನ್ನು

ಬರೆಯುವ ಭಾಗ್ಯ ನಿಮಗೆ ಲಭಿಸಿದೆ....ಪರನಾಡಿನಲ್ಲಿ ನಮ್ಮ ದೇಶದ ಗೌರವವನ್ನು ನೀವು ಕಾಪಾಡಬೇಕು. ಸ್ವತಂತ್ರ ಭಾರತದ ಪ್ರಜೆಗಳಿಗೆ ಒಪ್ಪುವ ಹಾಗೆ ಸ್ವಾಭಿಮಾನದಿಂದ ವರ್ತಿಸಬೇಕು.' ಹೀಗೆಯೇ ಇನ್ನೂ. ತೀರಾ ಹತ್ತಿರದಲ್ಲಿ ನಿಂತು, ಹೃದಯಸ್ಪರ್ಶಿಯಾದ ಆತ್ಮೀಯವಾದ ಅವರ ಮಾತುಗಳಿಗೆ ಕಿವಿಗೊಟ್ಟಾಗ, ರೋಮಾಂಚನದ ಅನುಭವವಾಯಿತು.

ದಿಲ್ಲಿಯಿಂದ ಹೊರಟವರು ಅಫ್‌ಘಾನಿಸ್ತಾನದ ಕಾಬೂಲಿಗೆ ಹೋಗುತ್ತೇವೆ–ಏರ್ ಇಂಡಿಯಾ ಇಂಟರ್ ನ್ಯಾಷನಲ್ ವಿಮಾನದಲ್ಲಿ. ಅಲ್ಲಿಂದ ರಷ್ಯಾದ ವಿಮಾನ, ಸೋವಿಯಟ್ ರಷ್ಯಾದಲ್ಲಿರುವ ಟಾಷ್ಕೆಂಟ್ ನಗರಕ್ಕೆ ನಮ್ಮನ್ನು ಒಯ್ಯುತ್ತದೆ. ಅನಂತರದ ಕಾರ್ಯಕ್ರಮ ತಿಳಿದುಬಂದಿಲ್ಲ.

ಸ್ವದೇಶ ಬಿಡುತ್ತಿರುವ ಈ ಘಳಿಗೆಯಲ್ಲಿ, ನಿಮ್ಮೆಲ್ಲರನ್ನೂ ನೆನೆಸುತ್ತಿದ್ದೇನೆ. ಆರು ತಿಂಗಳಲ್ಲೇ ವಾಪಸು ಬರುವೆನಾದರೂ, ಏನೋ ಒಂದು ಬಗೆಯ ಬೇಸರ. ಸ್ವಾಭಾವ–ಅಲ್ಲವೆ? ನನ್ನ ಹಾಗೆಯೇ ಬೇರೆಯೂ ಕೆಲವರು ಈಗ ಕಾಗದ ಬರೆಯುತ್ತ ಕುಳಿತಿದ್ದಾರೆ. ಎಲ್ಲರೂ ತಮ್ಮತಮ್ಮ ಬಂಧುಗಳನ್ನು ಸ್ಮರಿಸುತ್ತಿರಬಹುದು.

ಟಾಷ್ಕೆಂಟ್ ನಗರ ಸೇರಿದೊಡನೆ ಕಾಗದ ಬರೆಯುತ್ತೇನೆ. ಮುಂದೆ ಪ್ರತಿ ತಿಂಗಳಿಗೂ ಒಂದೊಂದು ಕಾಗದ. ಟಾಷ್ಕೆಂಟಿನಿಂದ ಬರೆಯುವ ಕಾಗದದಲ್ಲಿ ವಿಳಾಸ ತಿಳಿಸುತ್ತೇನೆ. ಕ್ಷೇಮಸಮಾಚಾರಗಳಿಗೆ ಆಗಾಗ್ಗೆ ಬರೆಯುತ್ತಿರು.

ಅಗೋ ಬಸ್ಸು ಬಂತು....

ಅಮ್ಮನಿಗೆ ಪ್ರಣಾಮಗಳು. ನಿಮಗೆ ಮೂವರಿಗೂ ಒಲವು.

ಎಂದು, ಪ್ರೀತಿಪೂರ್ವಕವಾಗಿ,

ರಾಜೂ.

ತಾನು ನೋಡಿರದ ದಿಲ್ಲಿಯನ್ನು, ಭಾವಚಿತ್ರ ಚಲಚ್ಚಿತ್ರಗಳಿಂದ ಹಾವ ಭಾವಗಳಲ್ಲಿ ಪರಿಚಿತವಾಗಿದ್ದ–ದೂರದಿಂದೊಮ್ಮೆ ತಾನು ಕಂಡೂ ಇದ್ದ–ಜವಾಹರರನ್ನು, ಕಾಬೂಲನ್ನು, [ಕಾಬೂಲ್ ದ್ರಾಕ್ಷೆ; 'ಕಾಬೂಲಿವಾಲಾ'] ತೀರಾ ಅಪರಿಚಿತವಾದ ಟಾಷ್ಕೆಂಟನ್ನು, ಚಿತ್ರಿಸಿಕೊಳ್ಳಲು ವಿಶಾಲಾಕ್ಷಿ ಯತ್ನಿಸಿದಳು.

['ಆ ಊರಿಗೆ ಇಷ್ಟರೊಳಗೇ ಆತ ತಲಪಿರಬೇಕು....']

ಅವರ ಸಂಸಾರಕ್ಕೆ ಅದು ಅಮೂಲ್ಯವಾದ, ಮಹತ್ವದ, ಕಾಗದ. ನೆರೆ ಹೊರೆಯವರಿಗೆ, ಸ್ನೇಹಿತರಿಗೆ, ವಿಷಯ ತಿಳಿಸಿ ಸಂತೋಷಪಡುವಂಥಾದ್ದು,– ತಾವೇ ಮತ್ತೆಮತ್ತೆ ಓದಿ ಹೆಮ್ಮೆಪಡುವಂಥಾದ್ದು.

ಆ ಸಂತಸದ ಗುಂಗಿನಲ್ಲಿ ವಿಶಾಲಾಕ್ಷಿ ಮಧ್ಯಾಹ್ನವನ್ನು ಕಳೆದಳು.

* * * * *

ಸಂಜೆಯ ಅಂಚೆಯಲ್ಲಿ ಬಂತು ಆ ಇನ್ನೊಂದು ಕಾಗದ.

[ಬೆಳಗ್ಗೆಯಷ್ಟೇ ಮಗನ ಕಾಗದ ಬಂದಿದ್ದುದರಿಂದ, ಸಾಯಂಕಾಲ ಮತ್ತೆ ಅಂಚೆಯವನು ಆಗಮಿಸಿದುದು, ಒಳಗಿದ್ದ ನಾಗಮ್ಮನ ಗಮನಕ್ಕೆ ಬೀಳಲಿಲ್ಲ.]

ಹಸ್ತಾಕ್ಷರದ ಗುರುತು ಹತ್ತಲಿಲ್ಲ, ಒಮ್ಮೆಲೆ. ಅದು ಯಾರದೆಂಬುದು ತಿಳಿದಾಗ, ವಿಶಾಲಾಕ್ಷಿ ಚಕಿತಳಾದಳು. ಮೈಪುಲಕಗೊಂಡಿತು. ಬೇಸಗೆಯಲ್ಲಿ ಬೆಂದ ದೇಹಕ್ಕೆ, ಹಿಮುಗಡ್ಡೆಯಂತೆ ತಂಪಾದ ನೀರನ್ನು ಇದ್ದಕ್ಕಿದ್ದಂತೆ ಸುರಿದ ಹಾಗೆ, ಚಳಿಯಾಯಿತು.

ಯಾರಾದರೂ ಕಂಡರೇನೋ ಎಂದು ಗಾಬರಿಗೊಂಡು, ವಿಶಾಲಾಕ್ಷಿ ಅತ್ತಿತ್ತ ನೋಡಿದಳು. ಯಾರೂ ಕಣ್ಣಿಗೆ ಬೀಳಲಿಲ್ಲ.

ಹೃದಯ ಡವಡವನೆ ಹೊಡೆದುಕೊಳ್ಳುತ್ತಿದ್ದಂತೆಯೇ, ಅವಳು ಕೊಠಡಿಗೆ ಧಾವಿಸಿದಳು. ಕದ ಮುಚ್ಚಿ ಅಗಣಿ ಇಕ್ಕಿದಳು. ಕೈಯಲ್ಲಿ ಕಾಗದ ಹಿಡಿದು, ದೇಹದ ಆದ್ಯಂತ ಕಂಪಿಸುತ್ತ, ಕುಳಿತಳು.

ಕಾಗದ ಕೆಂಡವಾಗಿ ಮೈ ಉರಿಯಿತು, ಮತ್ತೆ. ಪ್ರತಿಯೊಂದು ಕ್ಷಣವೂ ಯುಗದಂತೆ ಭಾವಿಸವಾಗಲು, ನಡುಗುವ ಬೆರಳುಗಳಿಂದ ಕವರನ್ನು ಒಡೆದಳು. ಕಾಗದ ಹೊರಬಂತು. ಮಡಚಿದ್ದುದನ್ನು ತೆರೆಯುವ ಮುನ್ನ ಮತ್ತೆರಡು ನಿಮಿಷ ಎವೆ ಮುಚ್ಚಿ ಕುಳಿತಳು.

ಇಷ್ಟರವರೆಗೂ ಆತ ಬರೆದಿರಲಿಲ್ಲ. ಇದೇ ಮೊದಲನೆಯ ಸಲ–ಮೊದಲ ನೆಯ ಸಲ.

ಏನಿತ್ತು ಅದರಲ್ಲಿ? ಏನಿತ್ತು ?

ಇದೇನು ಹುಚ್ಚು ? ಓದದೆಯೇ ಹೀಗೆ ಕುಳಿತಿರುವುದರ ಅರ್ಥವೇನು ?....

ತೆರೆದಾಗ—

ಊರು. ದಿನಾಂಕ. [ಇಲ್ಲಿಂದಲೇ. ಇಂದೇ. ಓ! ಬೆಳಗಿನಜಾವ.]
ಗೆಳತಿ ವಿಲಾಶಾಕ್ಷಿಗೆ,

ಈ ಕಾಗದ ನಿಮ್ಮ ಕೈಸೇರುವ ಹೊತ್ತಿಗೆ, ನಾನು ನಮ್ಮೂರು ಸಮೀಪಿಸಿರುತ್ತೇನೆ. ಬೆಳಗಿನ ರೈಲಲ್ಲಿ ಹೊರಡಬೇಕು. ಅದಕ್ಕಿನ್ನೂ ಎರಡು ತಾಸು ಹೊತ್ತಿದೆ. ರಾತ್ರೆಯೆಲ್ಲ ಮನಸಿನ ತಳಮಳದಿಂದ ಸಂಕಟ ಪಟ್ಟ ಬಳಿಕ, ಕೊನೆಯ ನಿರ್ಧಾರಕ್ಕೆ ಬಂದು, ಮುಂಜಾವದಲ್ಲೆ ಎದ್ದು ಕುಳಿತು, ಇದನ್ನು ಬರೆಯುತ್ತಿದ್ದೇನೆ.

ವಿಷಯ ಏನು ಎಂದು ಊಹಿಸಬಲ್ಲಿರಾ?

ನೇರವಾಗಿ ಹೇಳಿ ಮುಗಿಸುವೆ:

ನಾನು ಕಷ್ಟದಲ್ಲಿದ್ದೇನೆ. ನಿಮ್ಮನ್ನು ಮೊದಲು ನೋಡಿದಂದಿನಿಂದ-ಅಥವಾ, ನಿಮ್ಮ ಲೇಖನ ಓದಿದಂದಿನಿಂದಲೇ, ಎನ್ನಲೆ?-ನನ್ನ ಮನಸ್ಸು ನೆಮ್ಮದಿ ಕಳೆದುಕೊಂಡು, ಗಲಿಬಿಲಿಯ ಸಂತೆಮಾಳವಾಗಿದೆ. ತಾಯಿ ಕಣ್ಣುಮುಚ್ಚಿದ ಮೇಲಂತೂ, ಈ ಕಾಹಿಲೆ ಉಲ್ಬಣವೇ ಆಯಿತೆನ್ನಬೇಕು. ತಿಂದುದು ರುಚಿಸುವುದಿಲ್ಲ. ಉಂಡುದು ಮೈಸೇರುವುದಿಲ್ಲ. ಓದು-ಮಾತು, ಪ್ರತಿಯೊಂದು ಯಾಂತ್ರಿಕವಾಗಿದೆ. ಈ ಸ್ಥಿತಿಯಲ್ಲೇ ಇನ್ನೂ ನಾನು ಮುಂದುವರಿಯುವುದು ಅಪಾಯಕರ.

ನನ್ನನ್ನು ಈ ಕಷ್ಟದಿಂದ ಪಾರುಮಾಡಬಲ್ಲ ವ್ಯಕ್ತಿಯೊಂದಿದೆ. ಆ ವ್ಯಕ್ತಿಯನ್ನು ನೀವು ಬಲ್ಲಿರಿ. ಹೆಸರು ಎಸ್. ವಿಶಾಲಾಕ್ಷಿ. ಆ ಜೀವದ ಸಖ್ಯ, ಸಾಮೀಪ್ಯ, ಯಾಜಮಾನ್ಯ-ಇಷ್ಟು ಮಾತ್ರವೇ ಈಗ ನನ್ನನ್ನು ಉಳಿಸಬಲ್ಲುವು.

ಆ ನೆರವನ್ನು ಎಸ್. ವಿ. ಯಿಂದ ನಾನು ನಿರೀಕ್ಷಿಸಲೆ?

ನಿಮಗೆ ನಾನು ಬರೆಯುತ್ತಿರುವ ಮೊದಲ ಕಾಗದ ಇದು. ಕೊನೆಯದಾಗಲೂ ಬಹುದು. ಅದು ಅವಲಂಬಿಸಿರುವುದು ನಿಮ್ಮನ್ನು.

ಹೇಳಿ, ನನ್ನವರಾಗುತ್ತೀರಾ? ಈಗಲೇ ಅಲ್ಲ-ಇನ್ನೆಂಟು ತಿಂಗಳ ಅನಂತರ, ಹೇಳಿ, ಆಗುತ್ತೀರಾ?

ಉತ್ತರಕ್ಕಾಗಿ ವಿಳಾಸ ಕೆಳಗಿದೆ. ಬರೆಯಿರಿ.

ಎಂದು, ಒಲವು
ಗಂಗಾಧರ.

ಅಂತೂ ಕೊನೆಗೊಮ್ಮೆ ಓದಿ ಮುಗಿಸಿದ ವಿಶಾಲಾಕ್ಷಿ, ತನ್ನ ಹೃದಯ ಬಿರಿದೇ ಹೋಗುತ್ತಿದೆಯೇನೋ ಎಂಬ ಭಯದಿಂದ, ಎರಡೂ ಕೈಗಳನ್ನು ಭದ್ರವಾಗಿ ಎದೆಗವಚಿಕೊಂಡಳು. ಗಂಟಲಲ್ಲೇನೋ ಸಿಲುಕಿಕೊಂಡಂತಾಗಿ, ತಲೆ ಎತ್ತಿ, ಬಾಯಿತೆರೆದು, ಎವೆಮುಚ್ಚಿ, ಏದುಸಿರುಬಿಟ್ಟಳು.

ಇಷ್ಟು ದಿನ ಕಾದ ಬಳಿಕ – ಈಗ – ....

ಇಂತಹದೇ ಕಾಗದವನ್ನು ತಾನೂ ಬರೆಯಬಹುದಿತ್ತು–ಇಂತಹದೇ ಕಾಗದವನ್ನು.

'ನಾನು ಕಷ್ಟದಲ್ಲಿದೇನೆ. ನಿಮ್ಮನ್ನು ಮೊದಲು ನೋಡಿದಂದಿನಿಂದ–ಅಥವಾ, ನಿಮ್ಮ ಕವಿತೆಯನ್ನು ಓದಿದಂದಿನಿಂದ, ಎನ್ನಲೆ?–ನನ್ನ ಮನಸ್ಸು ನೆಮ್ಮದಿ ಕಳೆದುಕೊಂಡು, ಗಲಿಬಿಲಿಯ ಸಂತೆಮೊಳವಾಗಿದೆ.... ತಿಂದುದು ರುಚಿಸುವುದಿಲ್ಲ. ಉಂಡುದು ಮೈ ಸೇರುವುದಿಲ್ಲ. ಓದು–ಮಾತು, ಪ್ರತಿಯೊಂದೂ ಯಾಂತ್ರಿಕವಾಗಿದೆ. ಈ ಸ್ಥಿತಿಯಲ್ಲೇ ಇನ್ನು ನಾನು ಮುಂದುವರಿಯುವುದು ಅಪಾಯಕರ.'

ಛೆ–ಇಷ್ಟು ದಿನ ಹಿಡಿಯಿತೆ ಈ ಯಾತನೆಯಿಂದ ಮುಕ್ತಿ ದೊರೆಯಲು?

....ಸಂತಸದಿಂದ ಗಟ್ಟಿಯಾಗಿ ನಗಬೇಕೆನಿಸಿತು ವಿಶಾಲಾಕ್ಷಿಗೆ. ಅದರ ಬದಲು ಆಕೆ ಅತ್ತಳು. ಕನ್ನಡಕವನ್ನು ತೆಗೆದು ಪಕ್ಕಕ್ಕೆ ಸರಿಸಿ, ಕಾಗದವನ್ನು ಮೇಜಿನ ಮೇಲೆ ತನ್ನೆದುರು ಅರಡಿ, ಬಾಹುಗಳಿಂದ ಅದನ್ನು ಬಳಸಿ, ಅದರ ಅಂಚಿಗೆ ಹಣೆಯಾನಿಸಿ, ಒಂದೇ ಸಮನೆ ಅವಳು ಅತ್ತಳು.



# ನೆನಪು ೩೦

# ೧

"ಚಿಂವ್ ಚಿಂವ್ ಚಿಂವ್...."

ಹೊರಗಿನಿಂದ ಹಾರಿಬಂದು ಕಿಟಕಿಯ ದಂಡೆಯ ಮೇಲೆ ಕುಳಿತು, ಗಂಡು ಗುಬ್ಬಚ್ಚಿ ಕರೆಯುತ್ತಿತ್ತು.

ಒಳಗೆ ಒಂಟಿಯಾಗಿ ಇರುಳನ್ನು ಕಳೆದಿತ್ತು ಹೆಣ್ಣು, ವಿದ್ಯುತ್ ತಂತಿಗೆ ಹೊದಿಕೆಯಾಗಿದ್ದ ಮರದ ರೀಪು ತಾರಸಿಗೆ ತಿರುಗಿದ್ದ ಕಡೆ—ಆ ಸಂದಿಯಲ್ಲಿ. ಅದು ಉತ್ತರಿಸಲಿಲ್ಲ. ಪಿಳಿಪಿಳಿ ಕಣ್ಣು ಬಿಡುತ್ತ ಸುಮ್ಮನೆ ಕುಳಿತಿತ್ತು.

ಗಂಡು ಮತ್ತೊಮ್ಮೆ ಕರೆಯಿತು:

"ಚಿಂವ್ ಚಿಂವ್ ಚಿಂವ್."

[ತುಸು ರೇಗಿದ್ದ ಏರುಧ್ವನಿ.]

ಸ್ವರ ತನ್ನ ಗಂಡನದೇ ಎಂದು ಖಚಿತವಾಗಿ, ಹೆಣ್ಣುಗುಬ್ಬಚ್ಚಿ ಪುರ್ರೆಂದು ಕೆಳಕ್ಕೆ ಹಾರಿ, ಕಿಟಕಿಯ ದಂಡೆಯ ಮೇಲೆ ಕುಳಿತಿತು.

ಒಡನೆಯೇ ಆರಂಭ, ಚಿಲಿಪಿಲಿ ಚಿಲಿಪಿಲಿ ಸಂವಾದಕ್ಕೆ. ಬೇರೆಬೇರೆ ಯಾಗಿ ಕಳೆದ ಇರುಳಿನ ಬಗೆಗೆ ಮಾತು.

ಅದಾದ ಮೇಲೆ—

'ಹೋಗೋಣವಾ ಇನ್ನು? ಗೂಡು ಕಟ್ಟೋಕೆ ಜಾಗ ಹುಡುಕಬೇಕಲ್ಲ? ನಡಿ.'

'ಹೂಂ.'

ತೂರಿ ಬರತೊಡಗಿದ್ದ ನಸುಬೆಳಕಿನಲ್ಲಿ ಆ ಹಕ್ಕಿಗಳೆರಡೂ ಹೊರಕ್ಕೆ ಹಾರಿ ಹೋದುವು.

....ಆಗಲೇ ಎಚ್ಚರಗೊಂಡಿದ್ದ ವಿಶಾಲಾಕ್ಷಿ, ಇದನ್ನೆಲ್ಲ ನೋಡುತ್ತ ಮಲಗಿಯೇ ಇದ್ದಳು. ಹೆಣ್ಣುಗುಬ್ಬಚ್ಚಿ ಬಹಳ ದಿನಗಳಿಂದ ಅವಳ ಕೊಠಡಿಯಲ್ಲಿ ಆಸರೆ ಪಡೆಯುತ್ತಿತ್ತು. ಬೆಳಗ್ಗೆ, ನೆಲಕ್ಕೆ ಅಂಟಿಕೊಂಡಿರುತ್ತಿದ್ದ ಹಿಕ್ಕೆಗಳನ್ನು ಕಂಡಾಗ, 'ಸಂಜೆ ಸ್ವಲ್ಪಹೊತ್ತು, ಕಿಟಕಿ ಮುಚ್ಚಿಬಿಡಬೇಕು. ಗುಬ್ಬಚ್ಚಿ ಒಳಗೆ ಬರಲು ಬಿಡಬಾರದು,' ಎಂದು ವಿಶಾಲಾಕ್ಷಿ ಯೋಚಿಸಿದುದಿತ್ತು. ಆದರೆ, ಸಾಯಂಕಾಲದವೇಳೆ ಹಾಗೆ ಮಾಡಲು ಮಾತ್ರ, ಅವಳಿಗೆ ಮನಸಾಗುತ್ತಿರಲಿಲ್ಲ.

ಪುಟ್ಟ ಹಕ್ಕಿಗಳು. ಬೇರೆಬೇರೆಯಾಗಿ ಯಾಕಿವೆಯೊ ?

ಮಲೆನಾಡಿನಲ್ಲಿ ಮರಗಳು ಹೇರಳ. ಬಗೆಬಗೆಯ ಪಕ್ಷಿಗಳು. ಮಾಂದಳಿರ ಮರೆಯಿಂದ ಕೋಗಿಲೆ ಕುಹೂಕುಹೂ ಎನಬಹುದು. ಕಣ್ಮನಗಳನ್ನು ತಣಿಸುವ ಹಸುರು ಸದಾಕಾಲವೂ. ಎಲ್ಲೋ ಒಂದೆಡೆ ಓದಿದ್ದಳು : ಅಲ್ಲಿ ಸೂರ್ಯ ಉದಿಸುವುದೇ ತಡ.

ಈಗೆಷ್ಟು ಹೊತ್ತಾಯಿತೊ ? ಆರು ? ಮಲಗಿದಾಗ, ಬೇಗನೆ ಏಳಬೇಕು ಎಂದುಕೊಂಡಿದ್ದಳು. ನಡುವಿರುಳಿಗೆ ವರ್ಷ ಬದಲಾಗಿತ್ತು....ಇಂದು ಜನವರಿ ಒಂದು....

ಜನವರಿ ಒಂದು. ಆತ ಬರುವ ದಿನ!....

ವಾಸ್ತವವಾಗಿ ಸಡಗರದಿಂದ ತಾನು ಓಡಾಡಬೇಕು. ಆದರೆ ತಾಯಿ ಕೇಳಬಹುದು :

'ಯಾರು ಬರ್ತ್ತಾರೆಯೆ ಇವತ್ತು ?'

ಉತ್ತರಿಸುವುದು ಸಾಧ್ಯವೆ ಅದನ್ನು ? ಮುಖ್ಯ, ಅಂತಹ ಪ್ರಶ್ನೆಗೇ ಆಸ್ಪದ ಕೊಡಬಾರದು.

ತಮ್ಮಂದಿರು ಮಲಗಿಯೇ ಇದ್ದರು. [ಹೊಸ ರಗ್ಗುಗಳು ಬಂದಿದ್ದುವೆಂದು ಆ ಚಳಿಗಾಲ ಪ್ರಿಯವಾಗಿತ್ತು.] ಚಂದ್ರನಂತೂ ಏಳು ಗಂಟೆಗೆ ಮುಂಚೆ ಎಂದೂ ಎದ್ದವನಲ್ಲ. ಅಮ್ಮನ ಅಕ್ಕನ ಧ್ವನಿ ಕೇಳಿದ ಮೇಲೆ ಜಯರಾಮು ಎದ್ದು ಬಿಡುತ್ತಿದ್ದ, ಅಣ್ಣನಿಗಿಂತ ಮೊದಲು.

ಸು ಮ ಧು ರ ಭಾವನೆಯ–ಯಾತನೆಯ–ದಿನಗಳು. ಇವತ್ತು, ನಾಳೆ, ನಾಡದು–ಎನ್ನುತ್ತ ಎಷ್ಟು ಬೇಗನೆ ಕಳೆದುಹೋಗಿದ್ದುವು !

ಕೊನೆಗೊಮ್ಮೆ ಬಗೆಹರಿದಿತ್ತು, ತಿಂಗಳುಗಟ್ಟಲೆ ಕಾಡಿದ್ದ ಸಮಸ್ಯೆ. ಪರಿಹಾರವಾಗಿದ್ದುವು ಎಲ್ಲ ಸಂದೇಹಗಳೂ.

ಉತ್ತರ ಬರೆಯುವುದಾಗಿತ್ತೆ ತನ್ನಿಂದ ? ತಮ್ಮಂದಿರು ನಿದ್ದೆಹೋದ ಬಳಿಕ, ರಾತ್ರಿಹೊತ್ತು ಪ್ರಯತ್ನಪಟ್ಟು ತಾನು ಬರೆದ ಸುದೀರ್ಘ ಪತ್ರ. ಓದಿದಾಗ ನಾಚಿದ್ದಳು. ಚೂರುಚೂರಾಗಿ ಹರಿದು ಬಚ್ಚಿಟ್ಟದ್ದು, ಮಾರನೆಯ ಬೆಳಗ್ಗೆ ನೀರೊಲೆ ಸೇರಿತ್ತು.

ಕೊನೆಗೂ ಬರೆದುದು ಎರಡು ಸಾಲು–ಹೆಚ್ಚು ಯೋಚಿಸದೆಯೇ.

ಪ್ರಿಯ ಗಂಗಾಧರ,

ನಿಮ್ಮ ಕಾಗದ. ನೀವು ಬರುವುದನ್ನೇ ಇದಿರುನೋಡುತ್ತಿದ್ದೇನೆ. ಬೇಗನೆ ಬನ್ನಿ.

ನಿಮ್ಮ
ಎಸ್. ವಿ.

ಅಷ್ಟೇ ಚುಟುಕಾಗಿತ್ತು ಆತನ ಪ್ರತ್ಯುತ್ತರ:

'ಈ ವರ್ಷದ ಕೊನೆಯ ಸಂಜೆ ಹೊರಟು, ಹೊಸ ವರ್ಷದ ಮೊದಲ ಬೆಳಗ್ಗೆ ಮೈಸೂರು ಸೇರುವೆ.'

ಮನೆಯಲ್ಲಿ ಬೇರೆ ಯಾರ ಕೈಗೂ ಆ ಕಾಗದ ಬೀಳಬಾರದೆಂದು, ಅಂಚೆಯವನು ಬರಲು ಅರ್ಧ ಘಂಟೆ ಇದ್ದಾಗಲೇ ಅಂಗಳಕ್ಕಿಳಿದು ತಾನು ಕಾದಿದ್ದ ಬಗೆಯೊ!

ಅಣ್ಣನ ನೆನಪಾಗುತ್ತಿತ್ತು. [ಟಾಷ್ಕೆಂಟಿನಿಂದ ಆತ ಬರೆಯಲು ಇನ್ನೆಷ್ಟು ತಡವೊ ?] ಆ ದ ರೆ , ಯೋಚನೆಗಳಲ್ಲಿ ಅಗ್ರಸ್ಥಾನವನ್ನು ಆಕ್ರಮಿಸಿದ್ದುದು ಗಂಗಾಧರ.

ಹಿಂದೆ ವಿಶಾಲಾಕ್ಷಿಯ ತಂದೆ, ಮಗಳನ್ನು ತೋರಿಸಲೆಂದು 'ಗಂಡು' ಗಳನ್ನು ಕರಕೊಂಡು ಬಂದಿದ್ದ ಒಂದೆರಡು ಸಂದರ್ಭಗಳಲ್ಲಿ, ತನ್ನ ದಾಂಪತ್ಯ ಜೀವನದ ಕನಸನ್ನು ಅವಳು ಕಂಡುದಿತ್ತು. ಮುಂದೆ ಬೇಗನೆ, ಹಾಗೆ ಬರುತ್ತಿದ್ದ ಎಲ್ಲರ ವಿಷಯದಲ್ಲಿ ತಿರಸ್ಕಾರವೊಂದೇ ಅವಳ ಪ್ರತಿಕ್ರಿಯೆಯಾಯಿತು.

ಒಂದು ಯುಗದಂತೆ ಭಾಸವಾಗುತ್ತಿದ್ದ ಕಾಲಾವಧಿಯ ಅಂತರದ ಬಳಿಕ, ಈಗ ಮತ್ತೆ ಕಲ್ಪನೆಯ ಲೋಕದಲ್ಲಿ ಸಂಚಾರ....

ಗಂಗಾಧರ ಮತ್ತು ತಾನು....

ಅ ಕಲ್ಪನೆಯ ನಡುವೆ ಇದ್ದಕ್ಕಿದ್ದಂತೆ ಕಪ್ಪು ಕಂದರಗಳು ಕಾಣಿಸು ತ್ತಿದ್ದುವು; ಹಾದಿ ಕಡಿದುಹೋಗುತ್ತಿತ್ತು. ಇದೆಲ್ಲಾ ಕನಸು, ಎಚ್ಚರವಾದಾಗ ತಾನು ಕಾಣಲಿರುವ ಸ್ಥಿತಿಯೇ ಬೇರೆ–ಎಂದು ಭಯವಾಗುತ್ತಿತ್ತು.

ಅಂತಹ ಘಳಿಗೆಯಲ್ಲಿ ಮತ್ತೆ ದರ್ಶನವೀಯುತ್ತಿತ್ತು, ಗಂಗಾಧರನ ಅಭಯದ ಪ್ರಶಾಂತ ಮುಖಮುದ್ರೆ.

ಅವನ ಪತ್ರ ಕೈಸೇರಿದ ಬಳಿಕ, ಗಿರಿಜಾಬಾಯಿಯ ಬಳಿಗೆ ಓಡಬೇಕು, ಅವರಿಗೆ ಅದನ್ನು ತೋರಿಸಬೇಕು, ಎಂಬ ಯೋಚನೆ ಹೊಳದಿತ್ತು. ಹೋಗಿ ತೋರಿಸಲೇಬೇಕೆನ್ನುವ ಬಯಕೆಯಾಗಿ ಮಾರ್ಪಟ್ಟಿತ್ತು ಆ ಯೋಚನೆ. ತನ್ನ ಈಗಿನ ಸುಖದಲ್ಲಿ ಅವರು ಭಾಗಿಯಾಗಬೇಕು, ಅವರ ಒಪ್ಪಿಗೆಯನ್ನು ತಾನು ಪಡೆಯಬೇಕು, ಎಂದು ಉತ್ಕಟವಾದ ಅಪೇಕ್ಷೆಯುಂಟಾಗಿತ್ತು.

ಆದರೆ ಇದಕ್ಕೆ, ಅವರೇನೆನ್ನುವರೋ ಎಂಬ ಸಂಕೋಚ ಅಸಮ್ಮತಿ ಸೂಚಿಸ ಬಹುದೆಂಬ ದಿಗಿಲು, ಅಡ್ಡಿಯಾದುವು. ಅದಕ್ಕೂ ಮಿಗಿಲಾದ ತಡೆಯಾಗಿತ್ತು, ಗಂಗಾಧರನ ಆ ಪತ್ರ ತನ್ನೊಬ್ಬಳ ಮಹಾರಹಸ್ಯವಾಗಿಯೇ ಉಳಿಯಬೇಕೆಂಬ ಆಸೆ. [ಯಾರ ಕಣ್ಣಿಗೂ ಬೀಳದಂತೆ ಅದನ್ನು ಬಚ್ಚಿಡುವುದಂತೂ ಎಷು ಕಷ್ಟವಾಗಿತ್ತು!]

ಹಿಂದೆ ನರ್ಮದೆ ತನ್ನ ವೈಯಕ್ತಿಕ ಸಂಕಟವನ್ನು ಗೆಳತಿಯ ಎದುರು ತೋಡಿಕೊಂಡುದಿತ್ತು. [ರಘುನಾಥನ ಪ್ರಕರಣ.] ಆದರೆ, ಆ ಕಥೆ ಬೇರೆ; ತನ್ನದು ಬೇರೆ. ನರ್ಮದೆಯೊಡನೆ ಹೇಳಿಕೊಳ್ಳುವಷ್ಟು ಹಗುರವಾಗಿರಲಿಲ್ಲ ಈ ವಿಷಯ....

....ಯೋಚನೆಯ ಒಂದು ಸರಮಾಲೆ ಮುಗಿಯತೆಂದು ವಿಶಾಲಾಕ್ಷಿ ಮಗ್ಗುಲು ಹೊರಳಿದಳು. ಕಿಟಕಿಯ ಚೌಕಟ್ಟಿನೊಳಗೆ ಅಸ್ಪಷ್ಟವಾಗಿ ಕಂಡಿತು, ಚೆಂಬೆಳಕಿನಿಂದ ತೋಯ್ದ ಆಗಸದ ಚಿತ್ರ.

ಬೆಳಗಾಗಿಯೇ ಬಿಟ್ಟಿತ್ತು.

ಮಂಪರಿನ ಪರೆಯಂತಿದ್ದ ರಗ್ಗನ್ನು ಕಳಚಿ, ವಿಶಾಲಾಕ್ಷಿ ಗಡಬಡಿಸಿ ಎದ್ದಳು. ತನ್ನ ಹಾಸಿಗೆಯನ್ನು ಸುತ್ತಿ ಗೋಡೆಗೊರಗಿಸಿದಳು. ಸಡಿಲವಾಗಿದ್ದ ಹೆರಳನ್ನು ಸರಿಪಡಿಸಿ, ಮೇಜಿನ ಮೇಲಿದ್ದ ಕನ್ನಡಕದಿಂದ ಮುಖವನ್ನು ಅಲಂಕರಿ

ಸಿದಳು. ಕಿಟಕಿಯ ಕಂಬಿಗಳನ್ನು ಎರಡೂ ಕೈಗಳಲ್ಲಿ ಹಿಡಿದು, ಹೊಚ್ಚ ಹೊಸ ಗಾಳಿಯನ್ನು ಆಳವಾಗಿ ಉಸಿರೆಳೆದಳು.

ಆಗಬೇಕಾಗಿರುವ ಸಿದ್ಧತೆ ಏನೆಂದು ಅದೆಷ್ಟನೆಯ ಬಾರಿಗೋ ಮತ್ತೆ ಎಣಿಕೆ. ಕಿಟಕಿ ಬಾಗಿಲುಗಳಿಗೆ ಹೊಸದಾಗಿ ಹಾಕಿದ್ದ ಪರದೆಗಳು ಸೊಗಸಾಗಿದ್ದುವು. ಒಳಗಿದ್ದ ಮುರುಕಲು ಪೀಠಕ್ಕೆ ಯಾವುದಾದರೂ ಅರಿವೆ ಹೊದಿಸಿ, ನಡುಮನೆಯಲ್ಲಿರಿಸಿ, ಹೂದಾನಿಯನ್ನು ಅದರ ಮೇಲಿಡಬೇಕು. ಹೊಸ ಹೂಗಳು, ಬಣ್ಣಬಣ್ಣದ ಕ್ರೋಟನ್ ಎಲೆಗಳು. ಧೂಳನ್ನಂತೂ ನಾಲ್ಕು ದಿನಗಳ ಹಿಂದೆಯೇ ಝಾಡಿಸಿದ್ದಳು. ಅವರು ಬರುವರೆಂದು ತಾಯಿಗೆ ಹೇಳುವುದು ಸಾಧ್ಯವಿದ್ದಿದರೆ! ತಿಂಡಿ ಮಾಡಿಡುವಂತಿಲ್ಲ. ಏನೇ ಆಗಲಿ, ಇವತ್ತು ಅವರನ್ನು ಹಾಗೆಯೇ ಕಳುಹಬಾರದು. ತಾಯಿ ಆಕ್ಷೇಪಿಸಲಾರಳು. ಆಕ್ಷೇಪಿಸಿದರೂ ಅದು ದೊಡ್ಡ ವಿಷಯವಲ್ಲ. ಇವತ್ತಲ್ಲ ನಾಳೆ ತಿಳಿಯಲೇಬೇಕು ತಾನೆ?

ಇವತ್ತು ಒಂದೇದಿನ ರಜಾ. ನಾಳೆಯಿಂದ ಕಾಲೇಜು. ಇನ್ನು ಕೆಲವೇ ತಿಂಗಳಲ್ಲಿ ಪರೀಕ್ಷೆ. ಅದು ಮುಗಿಯುವ ಸಮಯದಲ್ಲೇ ಅಣ್ಣ ರಂಗರಾಜ ಹಿಂತಿರುಗಬಹುದು....

ಇವರು ಎಷ್ಟುಹೊತ್ತಿಗೆ ಬರುವರೊ? ಗಾಡಿ ಮೈಸೂರು ಸೇರುವುದು ಎಂಟೂವರೆ ಗಂಟೆಗಿರಬೇಕು. ಅಲ್ಲಿಂದ ಹಾಸ್ಟೆಲಿಗೆ. ಸ್ನಾನಗೀನ ಮುಗಿಸಿಕೊಂಡು ನಿಧಾನವಾಗಿ ಇಲ್ಲಿಗೆ. ಹತ್ತು ಘಂಟೆಗೆ? ಹನ್ನೊಂದಕ್ಕೆ? ಮಧ್ಯಾಹ್ನವೇ ಆಗುವುದೋ ಏನೋ. 'ಇಲ್ಲೇ ಊಟಕ್ಕೇಳಿ,' ಎಂದುಬಿಡಬೇಕು. ಅದುದಾಗಲಿ. ಆದರೆ, ತಾಯಿ ಏನೆನ್ನುವರೋ? ಬಡವರ ಮನೆ ಅಡುಗೆ....

....ಎಚ್ಚರಗೊಂಡ ಜಯರಾಮು ಮಲಗಿದಲ್ಲಿಂದಲೇ ಕೇಳಿದ:

"ಘಂಟೆ ಎಷ್ಟಕ್ಕಾ?"

ವಿಶಾಲಾಕ್ಷಿ ಮೇಜಿನ ಬಳಿಗೆ ಬಂದು, ತನ್ನ ಕೈಗಡಿಯಾರವನ್ನು ನೋಡಿ, ಅಂದಳು:

"ಆರೂ ಇಪ್ಪತ್ತು."

"ಏಳೋಣ ಹಾಗಾದರೆ," ಎಂದು, ಎದ್ದು ಕುಳಿತು, ಜಯರಾಮು ಕಣ್ಣು ಹೊಸಕಿಕೊಂಡ,

ಆಗಲೇ ಎದ್ದಿದ್ದ ತಾಯಿ ಏನು ಮಾಡುತ್ತಿರುವರೋ ನೋಡಲೆಂದು, ವಿಶಾಲಾಕ್ಷಿ ಅತ್ತ ನಡೆದಳು.

* * * * *

ಹತ್ತು ಹೊಡೆಯಲು ಕೆಲ ನಿಮಿಷಗಳಿದ್ದಾಗಲೇ, ಹೊರಗೆ ಟಾಂಗಾ ನಿಂತ ಸದ್ದಾಯಿತು.

ಇದೇನು? ಹಾಸಿಗೆ ಟ್ರಂಕು ಸಮೇತ ಇವರು ಇಲ್ಲಿಗೇ ಬಂದುಬಿಟ್ಟರೋ, ಹೇಗೆ?–ಎಂದು ವಿಶಾಲಾಕ್ಷಿ ಗಾಬರಿಗೊಂಡು, ಹೌಹಾರಿ ಎದ್ದು, ಕಿಟಕಿಯ ಪರದೆಯ ಎಡೆಯಿಂದ ನೋಡಿದಳು. [ಏಳುತ್ತ, 'ಗಂಗಾಧರನಲ್ಲ–ಬೇರೆ ಯಾರೋ ಬಂದಿರಬೇಕು,' ಎಂದೂ ಯೋಚಿಸಿದಳು.]

ಬಂದಿದ್ದುದು ಬೇರೆ ಯಾರೂ ಅಲ್ಲ, ಗಂಗಾಧರನೇ. ಇಳಿಯುತ್ತಿದ್ದ ಆತನ ಕೈಯಲ್ಲಿದ್ದುದು, ಒಂದು ಬುಟ್ಟಿ ಮಾತ್ರ.

ಆತನನ್ನು ನೋಡುತ್ತಲೇ, ವಿಶಾಲಾಕ್ಷಿಯ ಎದೆಗುಂಡಿಗೆ ಅತ್ಯಂತ ತೀವ್ರವಾಗಿ ಬಡಿದುಕೊಂಡಿತು. ಉಸಿರಾಟ ಕಷ್ಟವೆನಿಸಿತು. ಅಂಗಾಂಗಗಳು ಒಂದು ಕ್ಷಣ ನಿಶ್ಚೇಷ್ಟಿತವಾದುವು.

ಗೇಟು ತೆರೆದ ಸದ್ದು. ಹೊರಗೆ ಬರಬೇಕು ತಾನು. ಆದರೆ ಬರಲಾರಳು!

ಟಕ್‌ಟಕ್‌ಟಕ್ ಬಾಗಿಲಿಗೆ. ಮನೆಯಲ್ಲಿದ್ದುದು ಚಂದ್ರನೊಬ್ಬನೇ. ಇಸ್ತ್ರಿ ಪೆಟ್ಟಿಗೆಗೆ [ಹೊಸದು] ಆಗಲೇ ಇದ್ದಿಲು ತುಂಬುತ್ತಿದ್ದ. 'ನನ್ನದು ಬುಶ್‌ಕೋಟು–ಪ್ಯಾಂಟು, ಅಷ್ಟೇ. ನಿನ್ನ ರವಕೆಗಿವಕೆ ಏನಾದರೂ ಇದ್ದರೆ, ಆಮೇಲೆ ಮಾಡ್ಕೊ,' ಎಂದಿದ್ದ. ಹೊರಗೆ 'ಅವರು' ಬಂದುದು, ಆತನಿಗೆ ಕೇಳಿಸಲಿಲ್ಲವೇನೋ.

ತಾನೇ ಹೊರಡಬೇಕೆಂದು, ನೆಲಕ್ಕೆ ಅಂಟಿದ್ದ ಕಾಲುಗಳನ್ನು ವಿಶಾಲಾಕ್ಷಿ ಕಿತ್ತಳು.

ಅಷ್ಟರಲ್ಲೇ ಚಂದ್ರ ಬಾಗಿಲಲ್ಲಿ ಕಾಣಿಸಿಕೊಂಡ.

"ಕವಿಗಳು ನಿನ್ನನ್ನು ಕೇಳ್ಕೊಂಡು ಬಂದಿದಾರೆ," ಎಂದು ನುಡಿದು, ಪುನಃ ಇಸ್ತ್ರಿ ಪೆಟ್ಟಿಗೆಯನ್ನಿರಿಸಿದ್ದ ಕೊಠಡಿಗೆ ಆತ ಹೋದ.

[ಭಾವೋದ್ವೇಗಕ್ಕೆ ಗಂಗಾಧರನೂ ಬಲಿಯಾಗಿದ್ದ. ಮನಸಿನ ಯಾತನೆಯನ್ನೇನೋ ವಿಶಾಲಾಕ್ಷಿಯ ಉತ್ತರ ಕೊನೆಗಾಣಿಸಿತ್ತು. ಆದರೆ, ಈಗ ಆರಂಭ

ವಾಗಿತ್ತು, ಹೊಸ ಬಗೆಯ ತಳಮಳ. ಕೈಯಲ್ಲಿ ಬುಟ್ಟಿ. ಎಷ್ಟು ಧೈರ್ಯದಿಂದ ಕೆಲಸ ಆರಂಭಿಸಿದ್ದೆ ತಾನು!]

ವಿಶಾಲಾಕ್ಷಿ ಹೊರಬಂದಳು. ಗಂಗಾಧರ ನಿತ್ಯದ ಮುಗುಳುನಗೆಯೊಡನೆ ನಿಂತೇ ಇದ್ದ.

ವಿಶಾಲಾಕ್ಷಿಯ ಪಾದಗಳು ಅಸ್ಥಿರವಾದುವು. ಬವಳಿ ಬಂದು ತಾನು ಬಿದ್ದು ಬಿಡಬಹುದೆಂದು ಅವಳಿಗೆ ಭಯವಾಯಿತು. ಗೋಡೆಗೆ ಒರಗಿ ನಿಂತಳು.

ಕಣ್ಣೆವೆಗಳನ್ನೊಮ್ಮೆ ಮುಚ್ಚಿ, ನಿಧಾನವಾಗಿ ತೆರೆದು, ಅವಳೆಂದಳು :

"ಬಂದಿರಾ ?"

ಮೆಲ್ಲನೆ, ಆಕೆಯೊಬ್ಬಳಿಗೇ ಕೇಳಿಸುವಂತೆ, ಅವನೆಂದ :

"ಹೂಂ."

"ಚಂಪ್ರು! ಕುರ್ಚಿ ತಂದಿಡು."

ವಿಚಿತ್ರವಾಗಿತ್ತು ಅಕ್ಕನ ಸ್ವರ. 'ಇದೊಂದು ಕೆಲಸ' ಎಂದು ಮನಸಿನಲ್ಲೆ ಗೊಣಗಿ, ಚಂದ್ರ ಬಂದು, ಕೊಠಡಿಯಿಂದ ಕುರ್ಚಿಗಳನ್ನು ತಂದು ನಡುಮನೆಯಲ್ಲಿರಿಸಿದ,-ಎರಡನ್ನು.

ನಾಗಮ್ಮ ಆಗಲೇ ಅತ್ತ ಬಂದಿದ್ದರು. ಅವರ ವಿಚಾರಗಳನ್ನು ತಾನೇ ರೂಪಿಸಲೆಳಸಿ, ಗಂಗಾಧರನೆಂದ:

"ನಮಸ್ಕಾರ, ಹಿಂದೆ ಒಂದೆರಡುಸಾರೆ ಬಂದಿದ್ದೆ. ನೆನಪಿದೆ, ಅಲ್ವೆ ?"

ನೆನಪಿತ್ತು-ನೆನಪಿರಲಿಲ್ಲ.

"ನನಗೆ ವಯಸ್ಸಾಯ್ತು...."

"ತಗೊಳ್ಳಿ. ಊರಿಗೆ ಹೋಗಿದ್ದೆ-ಮಲೆನಾಡಿಗೆ. ಒಂದಿಷ್ಟು ತರಕಾರಿ ತಂದಿದೇನೆ."

[ಚೇತರಿಸಿಕೊಂಡಿದ್ದ ವಿಶಾಲಾಕ್ಷಿ ಮನಸಿನಲ್ಲೇ ಉದ್ಗರಿಸಿದಳು : 'ಅಬ್ಬ!']

ನಾಗಮ್ಮ ತಮ್ಮನ್ನು ತಾವೇ ನಂಬದಾದರು. ಯಾವ ಬಾಂಧವ್ಯ-ಹೀಗೆ ತರಲು ?

ಕುರ್ಚಿಯ ಮೇಲೆ ಕುಳಿತು, ಬುಟ್ಟಿಯ ಮುಚ್ಚಳವೆತ್ತಿ, ದೃಷ್ಟಿಗಳು ಅತ್ತ ಹರಿಯಲು ಅವಕಾಶ ಕಲ್ಪಿಸಿ, ಗಂಗಾಧರನೆಂದ :

"ಹಾಸ್ಟೆಲಿಗೆ ತಗೊಂಡು ಹೋಗಿ ಕೊಡೂಂತ ನಮ್ಮ ತಂದೆ ಅಂದರು.

[ಸುಳ್ಳು.] ದೊಡ್ಡ ಹಾಸ್ಟೆಲಿಗೆ ಇದೆಲ್ಲಿಗೆ ಸಾಕು? ನಿಮಗಾದರೂ ಆಗ್ತದೆ ಅಂತ ಇಲ್ಲಿಗೆ ತಗೊಂಡು ಬಂದೆ."

ಬಗೆಬಗೆಯ ತರಕಾರಿಗಳು. ಹೀರೇಕಾಯಿ, ಸೌತೆ, ಪಡುವಲಕಾಯಿ, ಸೊಗಸಾಗಿ ಬೆಳೆದಿದ್ದ ದಂಟಿನಸೊಪ್ಪು....ಅವುಗಳನ್ನೆಲ್ಲ ನೋಡುತ್ತ, ನಾಗಮ್ಮನ ಯೋಚನಾಶಕ್ತಿಯೇ ಕುಗ್ಗಿತು.

"ಇಷ್ಟೊಂದು!" ಎಂದು ಅವರು ಉದ್ಗರಿಸಿದರು.

"ಶಿವಮೊಗ್ಗೆಯ ಹತ್ತಿರವೇ ನಮ್ಮ ತಂದೆಯವರ ತೋಟ ಇದೆ. ಇದೆಲ್ಲಾ ಅಲ್ಲಿಯೇ ಬೆಳೆದದ್ದು."

ಗಂಗಾಧರನಿಗೆ ವಿಶಾಲಾಕ್ಷಿಯೂ ನೆರವಾಗುತ್ತ ಅಂದಳು :

"ತಗೊಂಡು ಹೋಗಿ ಒಳಗಿಡಮ್ಮ."

ನಾಗಮ್ಮ ಬುಟ್ಟಿಯನ್ನೆತ್ತಿ [ಭಾರವಾಗಿತ್ತು,] ಕೇಳಿದರು :

"ಖಾಲಿ ಮಾಡಿಕೊಡ್ಲೇನು ಬುಟ್ಟೀನಾ?"

"ಏನೂ ಬೇಡಿ!" ಎಂದ ಗಂಗಾಧರ.

ಮೊದಲ ಗೆಲುವು. ಯಾವ ಸೇನಾನಿಗೆ ಕಡಮೆ ತನ್ನ ಗಂಗಾಧರ?

ತಾಯಿ ಒಳಹೋದ ಬಳಿಕ, ಗಂಗಾಧರನನ್ನೆ ನೋಡುತ್ತ ವಿಶಾಲಾಕ್ಷಿ ಆತ್ಮೀಯವಾಗಿ ಮುಗುಳುನಕ್ಕಳು. ಆ ಭಾಷೆಯಲ್ಲೇ ಉತ್ತರ ಕೊಟ್ಟು ಗಂಗಾಧರನೆಂದ :

"ಕೂತ್ಕೊಳ್ಳಿ."

ಇನ್ನೊಂದು ಕುರ್ಚಿಯಲ್ಲಿ ವಿಶಾಲಾಕ್ಷಿ ತಾನೂ ಆಸೀನಳಾದಳು.

ಮಾತನಾಡಬೇಕಾದುದು ಏನನ್ನು? ಹೇಗೆ?–ಎಂಬುದೊಂದೂ ತಿಳಿಯದೆ, ಅವಳು ಸುಮ್ಮನೆ ಕುಳಿತಳು. ಹೃದಯದ ವೀಣೆಯೊಂದೇ ಸೂಕ್ಷ್ಮತರವಾಗಿ, ವೇಗವಾಗಿ, ಟುಂಯ್ ಟುಂಯ್‌ಗುಟ್ಟುತ್ತಿತ್ತು : ಚಿಲಿಪಿಲಿಚಿಲಿ....ಚೀಂವ್, ಚೀಂವ್!

ಭಾವನೆಗಳನ್ನು ಪ್ರಯತ್ನಪೂರ್ವಕವಾಗಿ ಅಂಕೆಯೊಳಗಿರಿಸುತ್ತ ಗಂಗಾಧರ ಕೇಳಿದ :

"ಜಯರಾಮು ಎಲ್ಲಿ?"

"ಇಲ್ಲೇ ಸ್ನೇಹಿತರ ಮನೆಗೆ ಹೋಗಿರಬೇಕು."

ತನ್ನ ಸ್ವರ ಉಡುಗಿರಲಿಲ್ಲ. ಮಾತು ಬಂದಿತ್ತು.

"ಕಾಗದ ಬಂತೆ ನಿಮ್ಮಣ್ಣನಿಂದ?"

"ಇನ್ನೂ ಇಲ್ರಿ. ದಿಲ್ಲಿಯಿಂದ ಹೊರಡೋಕ್ಮುಂಚೆ ಬರೆದಿದ್ದ. [ತಗ್ಗಿದ [ಧ್ವನಿಯಲ್ಲಿ] ನಿಮ್ಮದು ಬಂದ ದಿನವೇ ಅದೂ ಬಂತು."

"ಗಿರಿಜಾಬಾಯಿ ಚೆನ್ನಾಗಿದಾರಾ?"

[ಈಗಾಗಲೇ ವಿಶಾಲಾಕ್ಷಿ ಅವರನ್ನು ಕಂಡಿರುತ್ತಾಳೆ–ಎಂದು ನಂಬಿಕೆ ಅವನದು.]

"ಚೆನ್ನಾಗಿದಾರೆ. ಒಂದುಸಲ ಸಿಕ್ಕಿದ್ರು. ಕೆಲವೇ ನಿಮಿಷಗಳಕಾಲ. ಮಾತಾಡೋಕೆ ಪುರಸೊತ್ತಿರಲಿಲ್ಲ."

[ಇನ್ನೂ ಅವರಿಗೇನನ್ನೂ ತಿಳಿಸಿಲ್ಲ–ಎಂದರ್ಥ.]

ನಾಗಮ್ಮ ಮಗಳನ್ನು ಕರೆದರು:

"ವಿಶಾಲೀ, ಬಂದುಹೋಗು."

ಸ್ವಲ್ಪ ಇಂಪಾಗಿ ಕೇಳಿಸಿದ ಧ್ವನಿ.

ಒಳ ಬಂದ ಮಗಳೊಡನೆ ನಾಗಮ್ಮ ಅಂದರು:

"ಉಪ್ಪಿಟ್ಟು ಮಾಡ್ತೀನಿ ಸ್ವಲ್ಪ. ಆಗದೆ?"

ಅಂತರಂಗದ ಹಿಗ್ಗನ್ನು ತೋರಗೊಡದೆ. ವಿಶಾಲಾಕ್ಷಿ ಅಂದಳು:

"ಹೂಂ."

"ಕಾಫಿಗೆ ನೀರಿಟ್ಮೇಲೆ ಕರೀತೀನಿ. ನೀನೇ ಬಂದು ಮಾಡು."

"ಆಗಲಮ್ಮ."

"ರಾಜೂ ಹೊರಡೋಕ್ಮುಂಚೆ ಇವರು ಬಂದಿದ್ರು, ಅಲ್ವೆ?

"ಹೂಂ. ನಮ್ಮಣ್ಣನ ಸ್ನೇಹಿತರು [!]."

"ಕಾಲೇಜ್ನಲ್ಲಿ ಕೆಲಸದಲ್ಲಿದಾರಾ?"

"ನಿನ್ನ ಹಾಗೇ ಅನ್ನು."

"ನನ್ನ ಹಾಗೇ."

"ಯಾವ ಜನ?"

ಅಡವಿ ಕಳೆಯಿತು ಎಂದಾಗಲೇ ಗರ್ಜಿಸಿತ್ತು ಹುಲಿ,

"ಎಲ್ಲಾ ಒಂದೇ ಅಮ್ಮ. ಯಾವ ಪಂಗಡ, ಯಾವ ಗೋತ್ರ, ಅಂತೆಲ್ಲಾ ಕೇಳೋಕಾಗುತ್ತಾ?"

ಹಾಗೆಲ್ಲ ಮಗಳು ಕೇಳುವಂತಿಲ್ಲ-ಎಂಬುದನ್ನು ನಾಗಮ್ಮ ಬಲ್ಲರು. ಇನ್ನೊಂದು ಪ್ರಶ್ನೆ: ಅವರಿಗೆ ಮದುವೆಯಾಗಿದೆಯೆ?-ಎಂದು. ಅದನ್ನಂತೂ ತಾನೂ ಕೂಡಾ ಬಾಯಿ ತೆರೆದು ಕೇಳುವಂತಿರಲಿಲ್ಲ.

ಅವರ ಹಣೆ ನೆರಿಗೆ ಕಟ್ಟಿತು. ಒಲೆಯ ಮೇಲೆ ಬಾಂಡಲೆ ಇಡುತ್ತ ಅವರೆಂದರು:

"ತುಂಬಾ ಒಳ್ಳೆಯವರು. ಎಷ್ಟೊಂದು ತರಕಾರಿ ತಂದಿದಾರೆ!"

[ಊಟಕ್ಕೇ ಇರಲು ಹೇಳೋಣವೆ?-ಎಂದು ವಿಶಾಲಾಕ್ಷಿ ಕೇಳಹೊರಟಳು. ಆದರೆ, ವಿವೇಕ ಪಿಸುನುಡಿಯಿತು: 'ತಡೆ!']

ಹೊರಗೆ ಬಂದವಳನ್ನು ಗಂಗಾಧರ ಪ್ರಶ್ನಿಸಿದ:

"ಏನು ಸಮಾಚಾರ? ಏನಂದರು ಅಮ್ಮ?"

['ಅತ್ತೆ' ಎನ್ನಬೇಕಾಗಿತ್ತು; ಇಲ್ಲವೆ 'ನಿಮ್ಮಮ್ಮ.']

"ಅತಿಥಿ ಸತ್ಕಾರ ಹೇಗೆ ಮಾಡೋಣ-ಅಂತ ಕೇಳಿದ್ರು."

ಗಂಗಾಧರ ಸಣ್ಣನೆ ನಕ್ಕ.

ಅಷ್ಟರಲ್ಲೇ ಚಂದ್ರ ಅತ್ತ ಬಂದ. ಅವನನ್ನು ನೋಡಿ ಗಂಗಾಧರನೆಂದ:

"ಕ್ಷಮಿಸಿ. ಆಗಲೇ ಹೇಳೋದಕ್ಕೆ ಮರೆತೆ. ಹೊಸ ವರ್ಷದ ಶುಭಾಶಯಗಳು ನಿಮಗೆ."

ಸಲಿಗೆಯನ್ನೂ ತೋರದೆ, ತೀರಾ ಗಾಂಭೀರ್ಯವನ್ನೂ ತಳೆಯದೆ, ಇಂಗ್ಲಿಷಿನಲ್ಲಿ ಚಂದ್ರನೆಂದ:

"ಥ್ಯಾಂಕ್ಸ್. ನಿಮಗೂ ಅದನ್ನೇ ಆಶಿಸ್ತೀನಿ."

ಗಂಗಾಧರ ವಿಶಾಲಾಕ್ಷಿಯರ ಮಾತುಕತೆ, ಕಾಲೇಜಿನತ್ತ ಪಾಠಪ್ರವಚನಗಳತ್ತ ಹೊರಳಿತು. ಬಳಿಕ, ಆಗತಾನೇ ಪ್ರಕಟವಾಗಿದ್ದ 'ಪ್ರಬುದ್ಧ ಕರ್ಣಾಟಕ'ದ ಪುಷ್ಯ ಸಂಚಿಕೆ, ಕನ್ನಡ ಪತ್ರಿಕೆಗಳು, ಪುಂಖಾನುಪುಂಖವಾಗಿ ಬರುತ್ತಿದ್ದ ಕಾದಂಬರಿಗಳು, ಸಾರ್ವತ್ರಿಕ ಚುನಾವಣೆಗಾಗಿ ದೇಶದಲ್ಲಿ ನಡೆದಿದ್ದ ಸಿದ್ಧತೆ-ಈ ವಿಷಯಗಳನ್ನು ಆವರಿಸಿತು.

"ವಿಶಾಲೀ, ನೀರು ಮರಳ್ತಿದೆ, ಬಾ," ಎಂದು ನಾಗಮ್ಮ ಕರೆದರು.

....ವಿಶಾಲಾಕ್ಷಿ ಕಾಫಿ ತಿಂಡಿ ತಂದಾಗ ಗಂಗಾಧರ ಕೇಳಿದ:

"ನಾನೊಬ್ಬನೇ ತಗೋಬೇಕೇನು?"

"ನಮ್ಮದೆಲ್ಲಾ ಆಗಿದೆ."

....ನಾಗಮ್ಮ ಕಾಣಿಸಿಕೊಂಡಾಗ ಗಂಗಾಧರನೆಂದ:

"ಉಪ್ಪಿಟ್ಟು ಚೆನ್ನಾಗಿದೇರೀ. ನಮ್ಮಮ್ಮನೂ ಹೀಗೆ ಮಾಡ್ತಿದ್ರು."

ಹೊಗಳಿಕೆ ನಾಗಮ್ಮನಿಗೆ ಇಷ್ಟವಾಯಿತು. ಮುಂದಿನ ಮಾತು ಕೇಳಿ, 'ಈತನ ತಾಯಿ ಈಗ ಇಲ್ಲವೇನೋ-ತಬ್ಬಲಿ, ಪಾಪ, ಎಂದು ಮರುಗಿದರು....

....ಗಂಗಾಧರ ಇನ್ನು ಹೊರಡುವೆನೆಂದಾಗ, ಮೆಲುದನಿಯಲ್ಲಿ ವಿಶಾಲಾಕ್ಷಿ ಅಂದಳು:

"ನಾಳೆ ಸಂಜೆ ಕಾ ಲೇ ಜಿ ನಿಂ ದ ಗಿರಿಜಾಬಾಯಿಯವರ ಮನೆಗೆ ಹೋಗೋಣ."

"ಅಪ್ಪಣೆ," ಎಂದ ಗಂಗಾಧರ, ಅಷ್ಟೇ ಮೆಲ್ಲಗೆ.

## ೨

ಬಸ್ಸಿನಿಂದಿಳಿದು ಗಿರಿಜಾಬಾಯಿಯ ಮನೆಯ ದಿಕ್ಕಿಗೆ ನಡೆಯತೊಡಗಿದಂತೆ ಗಂಗಾಧರನೆಂದ:

"ನನ್ನ ಕಾಗದಕ್ಕೆ ಸ್ಪಷ್ಟವಾದ ಉತ್ತರ ನಿಮ್ಮಿಂದ ಬರಲಿಲ್ಲ."

ಗಂಗಾಧರನತ್ತ ನೋಡದೆ, ಹಾದಿಯ ಕಡೆಗೇ ಲಕ್ಷ್ಯವಿಟ್ಟು, ವಿಶಾಲಾಕ್ಷಿ ಅಂದಳು:

"ಬರೆದಿದ್ದೆನಲ್ಲ ?"

"ಅದರ ಅರ್ಥ ಏನೆಂದು ?"

"ನೀವು ಊಹಿಸಿಕೊಂಡಿರೋದೇ ಅರ್ಥ."

[ಗದ್ಗದಿತವಾಯಿತು ಗಂಟಲು.]

"ಗಿರಿಜಾಬಾಯಿಯವರಿಗೆ ಹೇಳಬೇಕು, ಅಲ್ಲವೆ ?"

"ನನಗೆ ನಾಚಿಕೆ."

"ನಾನು ಹೇಳ್ಲೇನು ?"

ವಿಶಾಲಾಕ್ಷಿ ತಲೆಯೆತ್ತಿ ಗಂಗಾಧರನನ್ನೊಮ್ಮೆ ನೋಡಿದಳು. ತಡಮಾಡಿ ಉತ್ತರವಿತ್ತಳು.

"ಪರೀಕ್ಷೆ ಮುಗಿಯಬೇಕು, ಅಲ್ಲವೆ ?"

"ಯಾವ ಪರೀಕ್ಷೆ ? ಇನ್ನು ಉಳಿದಿರೋದು ಎಂ. ಎ. ದು ಮಾತ್ರ!"

ದುಗುಡವನ್ನೆಲ್ಲ ತೊಡೆದುಹಾಕುವ ಹಾಸ್ಯಪ್ರವೃತ್ತಿ.

"ಅದನ್ನೇ ನಾನು ಹೇಳಿದ್ದು."

"ಹೌದು,—ಮುಗಿಯುವುದಷ್ಟೇ ಅಲ್ಲ—ಉತ್ತೀರ್ಣರಾಗಲೂ ಬೇಕು."

"ನನ್ನದು ಆಗುತ್ತೆ. ನೀವು ಸ್ವಲ್ಪ ಗಮನವಿಟ್ಟು ಓದಿ."

"ನಾನು ದಡ್ಡ ಅಂತ ತಿಳಕೊಂಡಿದೀರೇನು ?"

"ಹಾಗಲ್ರೀ....."

ಮನೆಯ ಬಾಗಿಲು ತೆರೆದೇ ಇತ್ತು. ಗಂಗಾಧರನ ಜತೆ ವಿಶಾಲಾಕ್ಷಿ ಬರುತ್ತಿದ್ದುದನ್ನು ಆಗಲೇ ಗಿರಿಜಾಬಾಯಿ ನೋಡಿದ್ದರು. ಇಬ್ಬರನ್ನೂ ಒಟ್ಟಿಗೆ ಕಂಡಾಗ ಅವರಿಗೆ ಆಶ್ಚರ್ಯವಾಗದೇ ಇದ್ದರೂ ವಿಸ್ಮಯವೆನಿಸಿತು, ಸಂತೋಷವೂ ಆಯಿತು.

ಬಾಗಿಲಲ್ಲಿ ನಿಂತು ಅವರು ಸ್ವಾಗತ ಬಯಸಿದರು :

"ಬನ್ನಿ."

"ಕಾಲೇಜಿನಿಂದ ಬೇಗನೆ ಹೊರಟಿರಾ ಇವತ್ತು ? ಆಕಡೆ ಹೋಗಿದ್ದೆ-ನೀವಿರಲಿಲ್ಲ," ಎಂದಳು ವಿಶಾಲಾಕ್ಷಿ, ಕುಳಿತುಕೊಳುತ್ತ.

"ಕ್ಲಾಸಿರಲಿಲ್ಲ ಅಂತ ಬಂದ್ಬಿಟ್ಟೆ."

"ಮಧ್ಯಾಹ್ನವೇ ಬಿಟ್ಟಿಡ್ತಾರೆ. ಸ್ನೇಹಿತೆಯರ ಜತೆ ಮ್ಯಾಟಿನಿಗೆ ಹೋಗ್ತೀವಿ-ಅಂದಿದ್ರು. ಹೋಗಿರ್ಬೇಕು. ಆರು-ಐವತ್ತರ ಬಸ್ಸಿನಲ್ಲಿ ಬರಬಹುದು."

ಮಕ್ಕಳಿಗೆಂದು ಗಿರಿಜಾಬಾಯಿ ತಿಂಡಿತೀರ್ಥ ಮಾಡಿ ಇರಿಸಿದ್ದರು. ಬಂದವರಿಗೆ ಅದರಿಂದಲೇ ಕೊಟ್ಟರಾಯಿತು, ಎಂದುಕೊಂಡರು. ಒಳ ಹೋಗಲೆಂದು ಅವರು ಎದ್ದೊಡನೆ, ವಿಶಾಲಾಕ್ಷಿ ಆಗ್ರಹದ ಧ್ವನಿಯಲ್ಲಿ ಅಂದಳು :

"ಗಿರಿಜಾಬಾಯಿ ! ನಮಗೇನೂ ಬೇಡಿ. ಈಗ್ತಾನೇ ಆಯಿತು."

"ಸುಳ್ಳು !"

"ಇವರನ್ನೇ ಕೇಳಿ. [ಸ್ವಲ್ಪ ಅನುಮಾನಿಸಿ] ಹೆಲ್ತ್ ಕಿಚನ್‌ನಲ್ಲಿ ಇದೇ ಈಗ ಕುಡಿದು ಬಂದ್ವಿ."

ಗಂಗಾಧರನೂ ಸಾಕ್ಷಿ ನುಡಿದ :

"ಹೌದು ಕಣ್ರೀ. ಇಬ್ಬರಿಗೂ ಆಗಿದೆ."

"ಬನ್ನಿ, ಕೂತ್ಕೊಳ್ಳಿ. ಪ್ಲೀಸ್ !" ಎಂದು ವಿಶಾಲಾಕ್ಷಿ ಪುನಃ ಆಗ್ರಹಿಸಿದಳು.

"ಸರಿಯಮ್ಮ," ಎಂದರು ಗಿರಿಜಾಬಾಯಿ.

ರಂಗರಾಜನ ವಿಷಯವಾಗಿ ಮಾತು ಬಂತು. ಅಸಂಬಧ್ಧದಲ್ಲಿ, ವಿಶಾಲಾಕ್ಷಿಯಂತೆ ಗಿರಿಜಾಬಾಯಿಯನ್ನೂ ಬೇಸರಕ್ಕೆ ಗುರಿಪಡಿಸಿದ ಅಂಶ ಬಂದಿತ್ತು.

"ದಿನ ಬೆಳಗಾದರೆ ಪತ್ರಿಕೇಲಿ ಫೋಟೋಗಳು ಬರ್ತವೆ-ಅವರು ಅಲ್ಲಿಗೆ ಹೊರಟಿದಾರೆ, ಇಲ್ಲಿಗೆ ಪ್ರವಾಸ ಬೆಳಸ್ತಿದಾರೆ-ಅಂತ. ನಿಮ್ಮಣ್ಣನ್ದು ಹಾಕಬಾರದಾಗಿತ್ತೆ? 'ಸಾಧ್ವಿ'ಲಿ, ಶಾಸ್ತ್ರಿ ಅಂತ ಒಬ್ಬರು ನನಗೆ ಪರಿಚಯ, ಮೊನ್ನೆ ಸಿಕ್ಕಾಗ ಅವರನ್ನು ಕೇಳ್ದೆ. 'ದೊಡ್ಡ ಪತ್ರಿಕೆಗಳಲ್ಲಿ ಭಾವಚಿತ್ರ ಅಚ್ಚಾಗೋದಕ್ಕೂ ಪ್ರಭಾವಬೇಕು. ರಂಗರಾಜನ ಫೋಟೋ ಇದ್ದರೆ ಕಳಿಸ್ಕೊಡಿ. 'ಸಾಧ್ವಿ'ಲಿ ಹಾಕ್ತೀನಿ,' ಅಂದರು. ನಿಮ್ಮ ಹತ್ತಿರ ಒಳ್ಳೇ ಫೋಟೋ ಇದೆಯೇನು?"

"ಪಾಸ್‌ಪೋರ್ಟ್ ಸೈಜಿಂದು ಒಂದಿದೆ. ಸಾಕಾಗುತ್ತೆ, ಅಲ್ವಾ? ಎಂದಳು ವಿಶಾಲಾಕ್ಷಿ, ಅಣ್ಣನ ವಿಷಯದಲ್ಲಿ ಗಿರಿಜಾಬಾಯಿ ತೋರಿದ ಆಸಕ್ತಿಗಾಗಿ ಸಂತೋಷಪಟ್ಟು.

"ಸಾಕು. ಪತ್ರಿಕೇಲಿ ಅಷ್ಟೇತಾನೇ ಬರೋದು? ಯಾರ ಕೈಲಾದರೂ ನಾಳೇನೇ 'ಸಾಧ್ವಿ' ಆಫೀಸಿಗೆ ಕೊಟ್ಟು ಕಳಿಸಿ. ನಾನು ಅವರಿಗೆ ಫೋನ್ ಮಾಡ್ತೀನಿ. ಕೊನೆಯಪಕ್ಷ ಈ ನಗರದ ಪತ್ರಿಕೆಯಲ್ಲಾದರೂ ಸುದ್ದಿ ಪ್ರಕಟವಾಗಲಿ...."

ಆ ವಿಷಯ ಮುಗಿದ ಬಳಿಕ ಗಿರಿಜಾಬಾಯಿ ಗಂಗಾಧರನ ಕಡೆಗೆ ತಿರುಗಿದರು:

"ಹೊಸದಾಗಿ ಏನು ಬರೆದಿದೀರಿ, ಇವರೆ?"

ವಿಶಾಲಾಕ್ಷಿಯ ಕಡೆ ನೋಡಿ ನಸುನಕ್ಕು ಗಂಗಾಧರನೆಂದ:

"ಒಂದು ಬರೀತಾ ಇದೀನಿ. ಕವಿತೆಯಲ್ಲ-ಕಾವ್ಯ."

ತುಂಟತನದ ಮಾತು. ವಿಶಾಲಾಕ್ಷಿಗೆ ತಿಳಿಯದುದಲ್ಲ.

"ಹೆಸರು ಏನಿಟ್ಟಿದೀರಾ?"

ಗಂಗಾಧರ, 'ಅದು ಬಹಳ ಮುಂದಿನ ಮಾತು' ಎಂದು ಹೇಳಲು ಹೊರಟವನು, ಅರ್ಧದಲ್ಲೇ ಅದನ್ನು ನುಂಗಿ, ಅಂದ:

"ಇನ್ನೂ ಇಟ್ಟಿಲ್ಲ."

ಮಲೆನಾಡು-ಬಯಲು ಸೀಮೆಗಳ ಹೋಲಿಕೆ, ಸಂಭಾಷಣೆಗೆ ವಸ್ತುವಾಯಿತು: ಅಲ್ಲಿನ ಊಟದ ವೈಖರಿ, ಉಪ್ಪಿನಕಾಯಿ. ಮಳೆ ನೋಡಬೇಕಾ

ದರೆ ಅಲ್ಲಿಗೇ ಹೋಗಬೇಕು. [ಕಡಲ ಕರೆಯಲ್ಲೇನೋ ಇನ್ನೂ ಜಾಸ್ತಿ. ಮಳೆ ನಾಡಿಗೆ ಮಳೆನಾಡು ಅಂತ ಹೆಸರಿಟ್ಟರೂ ತಪ್ಪಿಲ್ಲ....ಹೊಸ ಮೈಸೂರು ರಾಜ್ಯ ....ಮೊದಲು ಚಿಕ್ಕದಾಗಿ ಚೆನ್ನಾಗಿತ್ತು. ಕರ್ನಾಟಕ ರಾಜ್ಯ ಹೊಸ ಕಲ್ಪನೆ ಯೇನೋ ಅಲ್ಲ. ಅದು ನಿಜ. ಕನ್ನಡ ಮಾತಿನ ರೀತಿಗಳೇ ಬೇರೆಬೇರೆ. ದೂರದ ಧಾರವಾಡದ ಮಾತೇಕೆ? ದಾವಣಗೆರೆಯ ಕನ್ನಡಕ್ಕೂ ಮೈಸೂರು ನಗರದ ಕನ್ನಡಕ್ಕೂ ವ್ಯತ್ಯಾಸ ಇಲ್ವೇನು? ಶಿವಮೊಗ್ಗಾ ಕಡೆಯವರು ಆಡುವ ರೀತಿಯೂ ಬೇರೆ.

"ಅಲ್ವೇನ್ರಿ?"

—ಗಂಗಾಧರನನ್ನು ಕುರಿತು ಗಿರಿಜಾಬಾಯಿ ಕೇಳಿದ ಪ್ರಶ್ನೆ.

"ಹೌದು, ಹೌದು."

ಮುಂದೆ ಒಮ್ಮೆಲೆ, ವಿಷಯಗಳೆಲ್ಲ ತೀರಿದುವೇನೋ ಎನ್ನುವಂತೆ, ಮೌನ ನೆಲೆಸಿತು. ಮಾತಿನ ಚಟಕ್ಕೋಸ್ಕರವಷ್ಟೆ ಮಾತು ಬೆಳೆದಿತ್ತೆಂದು, ಅಸಹಜವಾದ ವಾತಾವರಣದಲ್ಲಿ ತಾವು ಉಸಿರಾಡುತ್ತಿರುವೆವೆಂದು, ಗಿರಿಜಾಬಾಯಿಗೆ ಅನಿಸಿತು.

ಮತ್ತೂ ಒಂದುಕ್ಷಣ ಸುಮ್ಮನಿದ್ದು, ವಿಶಾಲಾಕ್ಷಿಯನ್ನು ಉದ್ದೇಶಿಸಿ ನಸು ನಗುತ್ತ ಅವರೆಂದರು:

"ಏನು ಸಮಾಚಾರ?"

[ಏನೋ ಇದೆ; ಹೇಳಿಬಿಡಿ—ಎನ್ನುವಂತೆ!]

ಸಮಾಚಾರವಿತ್ತು. ಸಶೇಷವಾದುದು. ಆದರೆ, ಅದನ್ನು ತಿಳಿಸುವ ಬಗೆ?

ವಿಶಾಲಾಕ್ಷಿಯ ಉಸಿರು ಬಿಸಿಯಾಯಿತು. ತುಟಿಪಿಟಿನ್ನದೆ ಅವಳು ಕುಳಿತಳು. ಶಾಂತವಾಗಿ ಸರಾಗವಾಗಿ ಉಸಿರಾಡಲು ಗಂಗಾಧರ ಯತ್ನಿಸಿದ. ವಿಶಾಲಾಕ್ಷಿಯ ಮನಸಿನೊಳಗೆ ಏನಿದೆ?—ಎಂದು ತಿಳಿಯಬಯಸಿ, ಅವಳ ಮುಖ ವನ್ನು ದಿಟ್ಟಿಸಿದ. ಆದರೆ, ಅವಳು ತನ್ನೆಡೆಗೆ ನೋಡಲೇ ಇಲ್ಲ.

ಒಮ್ಮಿಂದೊಮ್ಮೆಲೆ, ಗಂಗಾಧರ ಗಂಟಲು ಸರಿಪಡಿಸಿದ. ತುಸು ಮುಂದಕ್ಕೆ ಬಾಗಿ ಕುಳಿತ. ನಾಲಗೆ ಸ್ವಲ್ಪ ತಡವರಿಸಿತು—ಸ್ವಲ್ಪ. ಮಳೆಯ ಮೊದಲ ಹನಿಗಳ ಹಾಗೆ ಮಾತುಗಳು ಹೊರಬಂದುವು.

"ಗಿರಿಜಾಬಾಯಿ! [ಕಂಪಿಸುತ್ತಿದ್ದ ಸ್ವರ. ಆತ್ಮೀಯತೆಯನ್ನು ತೋರು ತ್ತಿದ್ದ ಸಂಬೋಧನೆ, ಕಿವಿಗೊಡುತ್ತಿದ್ದಾಕೆ ಚಕಿತಳಾದರು.] ನಿಮ್ಮ ಆಶೀ

ರ್ವಾದ ಕೇಳೋಕೆ ಅಂತ ಇಬ್ಬರೂ ಬಂದಿದೇವೆ. ಸಂದರ್ಭ ಏನೂಂತ ಈಗಾಗಲೇ ನೀವು ಊಹಿಸಿಕೊಂಡಿರಬಹುದು."

ಮಾತಿಗಾಗಿ ಚಡಪಡಿಸುವ ಸರದಿ, ಗಿರಿಜಾಬಾಯಿಯದು ಈಗ. ತುಟಿಗಳ ಮೇಲಿನ ಮುಗುಳುನಗೆಯನ್ನು ಹಾಗೆಯೇ ಇರಗೊಳಿಸಿ, ಅವರು ವಿಶಾಲಾಕ್ಷಿಯ ಕಡೆ ನೋಡಿದರು. ಗಂಗಾಧರನ ಮಾತನ್ನು ಸಮರ್ಥಿಸಿ, ಬಲವನ್ನು ಯೋಚಿಸು ತ್ತಿತ್ತು ಅವಳ ದೃಷ್ಟಿ. ಅವನೆಡೆಗೆ ದಿಟ್ಟಿಸಿದರು. 'ಉತ್ತರಕ್ಕಾಗಿ ಕಾದಿದೇನೆ,' ಎನ್ನುತಿತ್ತು ಆ ನೋಟ.

ಗಿರಿಜಾಬಾಯಿ ಅಂದರು :

"ಆಶೀರ್ವಾದ–ಬಹಳ ದೊಡ್ಡ ಪದ, ಅಲ್ಲವೆ? ಅದನ್ನು ಮಾಡುವ ಹಕ್ಕಿದೆಯ ನನಗೆ ?"

ಯಾವುದೋ ಗವಿಯಿಂದ ಬಂದಂತೆ, ವಿಶಾಲಾಕ್ಷಿಯ ಸ್ವರ ಕೇಳಿಸಿತು :

"ನನಗೆ ನೀವೇ ದೊಡ್ಡವರು."

ಅವಳು, ಇನ್ನೇನು–ಅಳಬೇಕು. ಅದನ್ನು ತಡೆಗಟ್ಟಲು ಹವಣಿಸಿ, ವಿಶಾ ಲಾಕ್ಷಿಯ ಅಂಗೈಯನ್ನು ಗಿರಿಜಾಬಾಯಿ ಮುಟ್ಟಿದರು, ತಟ್ಟಿದರು.

"ನನ್ನ ಆಶೀರ್ವಾದ ಯಾವಾಗಲೂ ಇದ್ದೇ ಇದೆ."

ಅವರು ಮತ್ತೂ ಕೇಳಿದರು :

"ಅಮ್ಮನಿಗೆ ಹೇಳಿದೀರಾ ವಿಶಾಲಿ ?"

"ಇಲ್ರೀ. ಈಗ್ಲೇ ಹೇಳಿದರೆ ಗಾಬರಿಯಾಗ್ತಾರೆ. ಅಣ್ಣ ಬಂದ್ಮೇಲೆ"–

"ಅದು ಒಳ್ಳೇದು. ಆದರೆ, ಇನ್ನೂ ಬೇಕಷ್ಟು ಸಮಯ ಇದೆ–ಅಲ್ಲವೆ ?"

ಗಂಗಾಧರ ಉತ್ತರವಿತ್ತ :

"ಏನಿದ್ದರೂ ಆಗಸ್ಟ್ ತಿಂಗಳಲ್ಲಿ. ಫಲಿತಾಂಶ ಪ್ರಕಟವಾದ ಮೇಲೆ."

"ಅದೇ ಒಳ್ಳೇದು. ದುಡುಕೋದಕ್ಕೆ ನೀವೇನೂ ಎಳೇ ಹುಡುಗರಲ್ಲವಲ್ಲ."

ಮೌನ. ಗಾಳಿ–ಬಿಸಿಲು. ಪುನಃ ಮಾತಿನ ಮಳೆ ಹನಿ.

"ಒಂದು ದೃಷ್ಟೀಲಿ ನಾನು ನಿಮಗೆ ಪೂರಾ ಅಪರಿಚಿತ. ಆದರೂ ನನ್ನಲ್ಲಿ ನೀವು ವಿಶ್ವಾಸ ತೋರಿಸಿ, ನನ್ನನ್ನು ಸುಖಿಯಾಗಿ ಮಾಡಿದೀರಿ."

"ವಿಶಾಲಿಗೋಸ್ಕರ ಏನು ಮಾಡೋದಕ್ಕೂ ನಾನು ಸಿದ್ಧ. ಇವರ ಸುಖವೇ ನನ್ನ ಸುಖ. ಇವರ ದುಃಖವೇ ನನ್ನ ದುಃಖ"

ಒತ್ತರಿಸಿದ ಕಂಬನಿಯನ್ನು ಪ್ರಯತ್ನಪೂರ್ವಕವಾಗಿ ತಡೆಹಿಡಿದು, ವಿಶಾಲಾಕ್ಷಿ ಉಗುಳು ನುಂಗಿದಳು. ತಾಯಿ ತೀರಿಕೊಂಡಾಗ ಒಮ್ಮೆ ಚಿಮ್ಮಿದ್ದ ಒರತೆಗಳು, ಈಗ ಪುನಃ ತೀವಗೊಂಡಂತೆ ಗಂಗಾಧರನಿಗೂ ಅನಿಸಿತು.

ಸ್ವಲ್ಪ ದಪ್ಪಗಾದಂತೆ ಕಂಡ ಸ್ವರದಲ್ಲಿ, ಆತನೆಂದ:

"ಇವತ್ತೇ ನಿಶ್ಚಿತಾರ್ಥವಾದ ಹಾಗೆ, ಗಿರಿಜಾಬಾಯಿ."

ಅವರೆಂದರು:

"ಹೌದು. ಶುಭಕಾರ್ಯ. ಆದರೆ, ಊಟೋಪಚಾರ ಒಂದೂ ಇಲ್ಲದೆ ನಿಮ್ಮನ್ನು ಕಳಿಸ್ತೀನಲ್ಲ!"

ಲಜ್ಜಾನ್ವಿತೆಯಾದಳು ವಿಶಾಲಾಕ್ಷಿ.

ಸ್ವಲ್ಪ ಯೋಚಿಸಿ, ಗಿರಿಜಾಬಾಯಿ ಅಂದರು:

"ನಾಡದು ಭಾನುವಾರ ಸಾಯಂಕಾಲ ಉಪಾಹಾರಕ್ಕೆ ಇಲ್ಲಿಗೇ ಬನ್ನಿ."

ಇಬ್ಬರ ಪರವಾಗಿಯೂ ಎನ್ನುವಂತೆ ವಿಶಾಲಾಕ್ಷಿ ಉತ್ತರವಿತ್ತಳು:

"ಹೂಂ. ಬರ್‍ತೀವಿ."

ಮತ್ತೆ ಸ್ವಲ್ಪ ಹೊತ್ತಿನಲ್ಲಿ ಬಸ್ಸು ಬಂತು. ಗಿರಿಜಾಬಾಯಿಯ ಮೂವರು ಹುಡುಗಿಯರೂ ಮನೆ ಸೇರಿದರು.

"ಇದೇ ಬಸ್ಸು ವಾಪಸು ಬರುತ್ತೆ. ಇದರಲ್ಲೇ ಹೋಗೋಣ," ಎಂದಳು ವಿಶಾಲಾಕ್ಷಿ.

ಗಿರಿಜಾಬಾಯಿ ಎದ್ದುನಿಂತು, ಆವಳ ಭುಜ ಮುಟ್ಟಿ, ಅಂದರು:

"ಇನ್ನು ಬಸ್‌ಸ್ಟಾಪ್‌ವರೆಗೆ ಜತೆಯಲ್ಲಿ ಬರಬೇಕಾದ್ದೇನೂ ಇಲ್ಲ!—ಅಲ್ಲವೇ ನಮ್ಮ?"

೩

'ಸಾಧ್ವಿ' ಪತ್ರಿಕೆಯಲ್ಲಿ ಅಚ್ಚಾದ ತಮ್ಮ ಮಗನ ಭಾವಚಿತ್ರವನ್ನು ಕಂಡು, ನಾಗಮ್ಮ ಸಂತೋಷಪಟ್ಟರು.

"ಚೆನ್ನಾಗಿ ಬಿದ್ದಿದೆ, ಅಲ್ವೇನೆ?" ಎಂದು ಮಗಳೊಡನೆ ಅಂದರು.

ಹರವಾದ ಹಣೆ. ಇದೇ ಈಗ ಸ್ವಲ್ಪ ತುಂಬಿಕೊಂಡಿದ್ದ ಕೋಲುಮುಖ. ಹಿಂದಕ್ಕೆ ಬಾಚಿದ್ದ ನುಣುಪಾದ ತಲೆಗೂದಲು. ಕತ್ತಿನಲ್ಲಿ ಟೈ. ಹೊಸ ಕೋಟು.

ಅದನ್ನು ನೋಡುತ್ತ ನೋಡುತ್ತ ನಾಗಮ್ಮನ ನೆನಪು ಬಹಳ ಹಿಂದಕ್ಕೆ ಸರಿಯಿತು. ಎಂತಹ ಸಾಮ್ಯ! ಮದುವೆಯಾದ ಹೊಸದರಲ್ಲಿ, ತಮ್ಮ ಯಜಮಾನರು ತೆಗೆಸಿಕೊಂಡಿದ್ದ ಒಂದು ಫೋಟೋ. ಅವರ ತಲೆಯಮೇಲಿನ ಟೋಪಿಯೊಂದನ್ನು ತೆಗೆದರೆ, ಉಳಿದುದೆಲ್ಲಾ ತದ್ರೂಪ....

ಹೆತ್ತವಳ ಮುಖದ ಮೇಲೆ ವ್ಯಸನದ ತೆರೆ ಸುಳಿದುದನ್ನು ಗಮನಿಸಿದ ವಿಶಾಲಾಕ್ಷಿ ಕೇಳಿದಳು:

"ಏನು ಯೋಚಿಸ್ತಿದೀಯಾ, ಅಮ್ಮ?"

ತಲೆಯಲ್ಲಾಡಿಸಿ, ಮುತ್ತಿಬಂದ ನೆನಪನ್ನು ಝಾಡಿಸಿ, ನಾಗಮ್ಮ ಅಂದರು:

"ಏನೂ ಇಲ್ಲ. ಫೋಟೋದಲ್ಲಿ ರಾಜೂ ಮುದ್ದಾಗಿ ಬಿದ್ದಿದಾನೆ."

ಚಿತ್ರದ ಕೆಳಗೆ ಪತ್ರಿಕೆಯಲ್ಲಿ ಬರೆದಿದ್ದ ಕೆಲ ಸಾಲುಗಳನ್ನು ವಿಶಾಲಾಕ್ಷಿ ಅಮ್ಮನಿಗೆ ಓದಿ ಹೇಳಿದಳು.

"....ಇಂತಹ ಉಚ್ಚ ಶಿಕ್ಷಣ ಪಡೆಯುತ್ತಿರುವ ಮೊದಲ ಕನ್ನಡಿಗರು...."

ಅದು ಪೂರ್ತಿ ಅರ್ಥವಾಗದೆ ನಾಗಮ್ಮ ಕೇಳಿದರು:

"ಕನ್ನಡಿ–ಗರು–ಎಂದರೆ?"

"ಕನ್ನಡಿಗ–ಕನ್ನಡ ದೇಶದವನು–ಕನ್ನಡ ಮಾತನಾಡುವವನು, ಅಂತ."

ಅಂತೂ ಬರೆದಿದ್ದುದೆಲ್ಲ ಚೆನ್ನಾಗಿತ್ತು.

['ಈ ಘಳಿಗೆಯಲ್ಲಿ ಅವರೂ ಇದ್ದಿದ್ದರೆ–']

"ಮಗು ಹೋಗಿ ಒಂದು ತಿಂಗಳಾಗ್ತಾ ಬಂತು...."

"ಇಲ್ಲಮ್ಮ, ಮೂರುವಾರ."

"ಕಾಗದ ಬರಲಿಲ್ಲ–ಅದಕ್ಕೆ ಅಂದೆ."

"ಇನ್ನೇನು, ಬಂದ್ಬಿಡುತ್ತೆ."

*     *     *     *     *

ಮಾರನೆಯ ದಿನವಲ್ಲ–ಮತ್ತೆರಡು ದಿವಸಗಳ ಅನಂತರ, ರಂಗರಾಜನಿಂದ ಪತ್ರ ಬಂತು.

ದಪ್ಪಗಿನ ಲಕೋಟೆ. ತೆಳು ನೀಲಿಯದು. ಆ ದೇಶದ ಅಂಚೆ ಚೀಟಿಗಳು. ಅದೆಷ್ಟೋ ಕೊಪೆಕ್.

ಮಾಸ್ಕೋನಗರ

೨೬ ಡಿಸೆಂಬರ್, ೧೯೫೬

ನನ್ನ ಪ್ರೀತಿಯ ವಿಶಾಲಿ,

ಇದೋ, ದೂರದ ದೇಶದಿಂದ ಮೊದಲು ನಿಮಗೆಲ್ಲಾ ವಂದನೆ.

ಟಾಷ್ಕೆಂಟ್ ನಗರದಿಂದ ನಾನು ಯಾಕೆ ಬರೆಯಲಿಲ್ಲವೆಂದು ನೀವೆಲ್ಲ ಗಾಬರಿಯಾಗಿರಬಹುದು, ಅಲ್ಲವೆ? ಆ ನಗರದಲ್ಲಿ ನಾವು ತಂಗದೆ ಇದ್ದುದೇ, ಅಲ್ಲಿಂದ ಬರೆಯದೆ ಇರಲು ಕಾರಣ. ಕಾಬೂಲಿನಿಂದ ನಮ್ಮನ್ನು ಕರೆದು ತಂದ ಸೋವಿಯೆಟ್ ವಿಮಾನ–ಟಿ. ಯು. ೧೦೪–, ಟಾಷ್ಕೆಂಟಿನಿಂದ ಮಾಸ್ಕೋಗೆ ನೇರವಾಗಿ ಪ್ರಯಾಣ ಬೆಳೆಸಿತು. ಸು ಖ ಕ ರ ವಾ ದ ಪ್ರಯಾಣ. ಮಾ ಸ್ಕೋ ಗೆ ಸಮೀಪದಲ್ಲಿರುವ ವಿಮಾನನಿಲ್ದಾಣಕ್ಕೆ ಸೋವಿಯೆಟ್ ಅಧಿಕಾರಿಗಳಲ್ಲದೆ, ನಮ್ಮ ರಾಯಭಾರಿ ಕಚೇರಿಯ ಪ್ರತಿನಿಧಿಯೂ ಬಂದಿದ್ದರು. ನಮ್ಮ ತಂಡ–ಒಟ್ಟು ಇಪ್ಪತ್ತು ಜನ ನಾವು–ಇಳಿದೊಡನೆಯೇ, ಪ್ರತಿಯೊಬ್ಬರಿಗೂ ಒಂದೊಂದು ತುಪ್ಪಳದ ಕೋಟು, ಕೈಹೊದಿಕೆಗಳು ಮತ್ತು ಟೋಪಿ ಕೊಟ್ಟರು. ಇದನ್ನು ಧರಿಸಿ, ಎಲ್ಲರೂ ಗಾತ್ರದ ಮನುಷ್ಯರಾದೆವು! ಮಾತನಾಡಲು ತುಟಿ ತೆರೆದರೆ ಸಾಕು, ಬಾಯಿಯಿಂದ ಉಗಿ ಬರುತ್ತದೆ ಈ ದೇಶದಲ್ಲಿ. 'ಭಯಂಕರ' ಎನ್ನುವ ವಿಶೇಷಣ ಪದವನ್ನು ಪೂರ್ಣ ಅರ್ಥದಲ್ಲಿ ಇಲ್ಲಿಯ ಚಳಿಗೆ ಅನ್ವಯಿಸಬಹುದು. ಹಿಂದೆ ಈ ಚಳಿಗೆ ಹೆದರಿಯೇ ನೆಪೋಲಿಯನ್ ಮಾಸ್ಕೋ ಬಿಟ್ಟು ಸ್ವದೇಶಕ್ಕೆ ಓಡಿದ್ದು....

ಬರೆಯುತ್ತ ಎಲ್ಲಿಗೋ ಬಂದು ತಲಪಿದೆ.

ನಮ್ಮನ್ನೆಲ್ಲ ಒಸ್ತಾಂಕಿನೋ ಎಂಬ ವಸತಿಗೃಹಕ್ಕೆ ಒಯ್ದರು. ನಾವು, ಎರಡು ಸರಕಾರಗಳ ನಡುವಿನ ಒಪ್ಪಂದದ ಪ್ರಕಾರ ಬಂದವರಷ್ಟೆ? ಹೀಗಾಗಿ, ಇಲ್ಲಿ ನಾವು ಸಂಕಾರಿ ಅತಿಥಿಗಳು. ಸಾಕಷ್ಟು ಒಳ್ಳೆಯ ಅಡುಗೆ. ಶಾಕಾಹಾರ-ಮಾಂಸಾಹಾರ ಎರಡೂ ಇವೆ.

ನಿನ್ನೆ ಸಂಜೆ ಇಲ್ಲಿಯ ಅಧಿಕಾರಿಗಳೂ ನಮ್ಮ ಮುಖ್ಯಸ್ಥರೂ ಕಲೆತು, ನಮ್ಮ ಕಾರ್ಯಕ್ರಮ ಗೊತ್ತು ಪಡಿಸಿದರು. ನಿನ್ನೆ ರಾತ್ರೆ, ನಮ್ಮ ರಾಯಭಾರಿ ಕಚೇರಿಯಲ್ಲಿ ಭೋಜನಕೂಟವಿತ್ತು. ಮಿಸೆಸ್ ಮೇನನ್, ಇಡ್ಲಿ ತಯಾರಿಸಿ ಬಡಿಸಲು ಏರ್ಪಾಟು ಮಾಡಿದ್ದರು. ದಕ್ಷಿಣಭಾರತದಿಂದ ಬಂದವರಿಗೆ ಬೇರೇನುಬೇಕು, ಹೇಳು? ಉತ್ತರಭಾರತದ ನಮ್ಮ ಮಿತ್ರರಿಗೂ-ಬಂಗಾಳಿಗಳು, ಉತ್ತರಪ್ರದೇಶದವರು, ಪಂಜಾಬಿನವರು, ಗುಜರಾಥ್‌ನವರು ಎಲ್ಲರಿಗೂ-ಇಡ್ಲಿ ಇಷ್ಟವೇ ಆಯಿತು. ರಾಯಭಾರಿ ಮೇನನರು ಬಹಳ ಹಾಸ್ಯಪ್ರವೃತ್ತಿಯವರು. ಅವರ ಪುಟ್ಟ ಭಾಷಣ ನಮಗೆಲ್ಲ ಮೆಚ್ಚುಗೆಯಾಯಿತು.

ಇವತ್ತು ಬೆಳಗಿನಿಂದ ಈ ಸಂಜೆಯವರೆಗೆ ಅಲೆದಾಟ. ಮಾಸ್ಕೋ ನಗರದ ಪ್ರೇಕ್ಷಣೀಯ ಅಂಶಗಳನ್ನೆಲ್ಲ ನೋಡಿಬಂದೆವು. ಔದ್ಯೋಗಿಕ ಮತ್ತು ವ್ಯವಸಾಯಿಕ ಪ್ರದರ್ಶನ. ಆರ್ಟ್‌ಗ್ಯಾಲರಿ, [ದಯವಿಟ್ಟು ನಮ್ಮ ಚಿತ್ರಶಾಲೆಯನ್ನು ಸ್ಮರಿಸಿಕೊಳ್ಳಬೇಡ.] ಮಾಸ್ಕೋ ವಿಶ್ವವಿದ್ಯಾನಿಲಯ, ರೆಡ್‌ಸ್ಕ್ವೇರ್, ಇತ್ಯಾದಿ....ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ಬಾಲ್ಷಾಯ್ ಥಿಯೇಟರಿಗೆ ಹೋಗುತ್ತೇವೆ. ಇವತ್ತು ಚೆಖಾವರ ನಾಟಕದ ಒಂದು ಪ್ರದರ್ಶನವಿದೆಯಂತೆ.

ನಾಳೆ ನಾವು ರೈಲಿನಲ್ಲಿ ಯುಕ್ರೇನ್ ಪ್ರಾಂತದ ಕಡೆಗೆ ಪ್ರಯಾಣ ಬೆಳೆಸುತ್ತೇವೆ. ನಕಾಶೆಯಲ್ಲಿ ಗುರುತಿಸು. ನಾವು ಶಿಕ್ಷಣ ಪಡೆಯಲಿರುವುದು ಬೇರೆಬೇರೆ ಕಾರ್ಖಾನೆಗಳಲ್ಲಿ. ನಾನು ಮತ್ತು ಕೆಲವರು ತರಬೇತಿಗಾಗಿ ಝಪರೋಝ್ಯೆಯಲ್ಲಿರುವ ಭಾರೀ ಕಬ್ಬಿಣ ಮತ್ತು ಉಕ್ಕಿನ ಕರ್ಮಾಗಾರಕ್ಕೆ ಹೋಗುತ್ತೇವೆ. ಇನ್ನು ಕೆಲವರು ರುದ್ದನೋವ್ ಎಂಬಲ್ಲಿರುವ ರಾಸಾಯನಿಕ ಯಂತ್ರಸ್ಥಾವರಕೆ ಹೋಗುತ್ತಾರೆ. ಬೇರೆ ಕೆಲವರು

ಕ್ರಿವಾರ್ಯ್ ರಾಗ್ ಎಂಬಲ್ಲಿರುವ ಅದ್ಭುತ ಬಲವರ್ಧನ ಯಂತ್ರಾಗಾರಕ್ಕೆ. ಎಣ್ಣೆ ತಯಾರಿಯ ಕೇಂದ್ರವಾದ ಬಾಕುವಿಗೂ ಕೆಲವರು ಹೋಗುತ್ತಾರೆ.

ಇದಿಷ್ಟು ಮಾಸ್ಕೋದಿಂದ. ಥಿಯೇಟರಿನಿಂದ ಹಿಂತಿರುಗಿದ ಮೇಲೆ ಈ ಕಾಗದವನ್ನು ಮುಕ್ತಾಯಗೊಳಿಸಿ ಅಂಚೆಗೆ ಹಾಕುತ್ತೇನೆ....

[ಆ ಕಾಗದ ಮುಕ್ತಾಯವಾಗಿಯೂ ಇರಲಿಲ್ಲ. ಮುಂದಕ್ಕೆ ದೃಷ್ಟಿ ಹಾಯಿಸಿ ವಿಶಾಲಾಕ್ಷಿ ಅಂದುಕೊಂಡಳು: ರಾಜು ಅಂಚೆಗೆ ಹಾಕುವುದಕ್ಕೇ ಮರೆತಿರಬೇಕು. ಅಥವಾ—]

ಕೇರಾಫ್ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ
ಝಪರೋರ್ಝ್ಯ ಉಕ್ರೇನ್
೨ ಜನವರಿ, ೫೮

ಪ್ರಿಯ ಸೋದರಿ ವಿಶಾಲಿ,

ಹೀಗೆ ತಡ ಮಾಡಿರುವುದು ಅಕ್ಷಮ್ಯ ಎನಿಸುತ್ತಿದೆ. ಆದರೂ ಅನಿವಾರ್ಯವಾಯಿತು. ಆವತ್ತು ರಾತ್ರಿ, ಥಿಯೇಟರಿನಿಂದ ಹಿಂತಿರುಗಿದವನು ಏನೂ ಬರೆಯಲಾಗದೆ ನಿದ್ದೆ ಹೋದೆ. ಬಹಳ ಆಯಾಸವಾಗಿತ್ತು. ಮಾರನೆಯ ಬೆಳಗ್ಗೆ ಪುನಃ ಹೊರಡುವ ಗದ್ದಲ, ರೈಲಲ್ಲಿ ಬರೆಯೋಣವೆಂದುಕೊಂಡೆ. ರೈಲು ಹತ್ತಿದ ಮೇಲೆ 'ಹೇಗೂ ಝಪರೋರ್ಝ್ಯಗೆ ಹೋಗುತ್ತಿದ್ದೇನೆ; ಊರು ಸೇರಿದ ಮೇಲೆ ವಿಳಾಸ ತಿಳಿಸಿ ಬರೆದರಾಯಿತು,' ಎನಿಸಿತು. ಊರೇನೋ ಸೇರಿದ್ದಾಯಿತು. ಆದರೆ, ವಸತಿಯ ಏರ್ಪಾಟಾಗಿ ಜೀವನ ವ್ಯವಸ್ಥಿತವಾಗಲು ಒಂದೆರಡು ದಿನ ಹಿಡಿಯಿತು. ಅಂತೂ ಇವತ್ತು ಬರೆಯುತ್ತಿದ್ದೇನೆ. ಇನ್ನಷ್ಟು ತಡವಾಗಬಾರದೆಂದು, ದೀರ್ಘಗೊಳಿಸುವುದಿಲ್ಲ!

ದೇಶ ಬಿಟ್ಟು ಬಂದಮೇಲೆ ಅದೆಷ್ಟೋ ಸಾರಿ ನಿಮ್ಮ ನೆನಪಾಗಿದೆ. ಅಮ್ಮ ಚೆನ್ನಾಗಿದಾರಾ? ನೀವೆಲ್ಲಾ ಆರೋಗ್ಯವಾಗಿದೀರಾ?

ಇವತ್ತು ಬೆಳಗ್ಗಿನಿಂದ ಕಾರಖಾನೆಗೆ ಹೋಗುತ್ತಿದ್ದೇನೆ. ಓಪನ್ ಹಾರ್ತ್ ಫರ್ನೇಸಿನ ಕೆಲಸ. ಆ ವಿಭಾಗದ ಮುಖ್ಯಸ್ಥ ಆದರದಿಂದಲೇ ಬರಮಾಡಿಕೊಂಡ. ಅವನಿಗೆ ಅಲ್ಪಸ್ವಲ್ಪ ಇಂಗ್ಲಿಷು ಬರುತ್ತದೆ. ಬೇರೆಯವರ ಜತೆ ಮಾತನಾಡುವುದು ಮಾತ್ರ ಬಲು ಕಷ್ಟ. ಸಣ ದೊಂದು

ರಷ್ಯನ್ ಇಂಗ್ಲಿಷ್ ಶಬ್ದಕೋಶ ಕೊಂಡು, ಜೇಬಿನಲ್ಲೇ ಇಟ್ಟುಕೊಳ್ಳಬೇಕು. ನನ್ನ ಸಹೋದ್ಯೋಗಿಗಳು ಕೆಲವರು ರಷ್ಯನ್ ಕಲಿಯಲು ನಿರ್ಧರಿಸಿದ್ದಾರೆ.

ನಾಲ್ವತ್ತು ವರ್ಷಗಳಿಗೆ ಹಿಂದೆ ಈ ದೇಶದಲ್ಲಿ ಏನೂ ಇರಲಿಲ್ಲವಂತೆ. ಆ ದೃಷ್ಟಿಯಿಂದ ಈಗಿನ ಪ್ರಗತಿ ಅದ್ಭುತವೇ ಸರಿ. ಒಂದೂವರೆ ಶತಮಾನಕ್ಕೆ ಹಿಂದೆ ಅಮೆರಿಕ ದೇಶವಾದರೂ ಎಲ್ಲಿತ್ತು? ಈಗ ಆ 'ಹೊಸ ಜಗತ್ತು' ಅಗ್ರಸ್ಥಾನಕ್ಕೆ ಹಳಬನಾಗಿದೆ. ಇದೂ ಒಂದು 'ಹೊಸ ಜಗತ್ತು.' ನಮ್ಮ ಭಾರತವೂ ಒಂದು 'ಹೊಸ ಜಗತ್ತು.' ನಾವು ಸ್ವತಂತ್ರರಾಗಿ ಇನ್ನೂ ಹತ್ತು ವರ್ಷಗಳು ಸಂದಿಲ್ಲ. ನಮ್ಮದೇ ಆದ ರೀತಿಯಲ್ಲಿ ನಾವೂ ನವರಾಷ್ಟ್ರ ನಿರ್ಮಾಣ ಆರಂಭಿಸಿದೇವೆ.

ಇಲ್ಲಿಯ ಜನ–ಅದರಲ್ಲೂ ವಿಶೇಷವಾಗಿ ಮಹಿಳೆಯರು–ಆರೋಗ್ಯವಂತರು, ದೃಢಕಾಯರು. ಭಾರತದ ಬಗ್ಗೆ ಈ ಜನರಿಗೆ ತಿಳಿವಳಿಕೆ ಕಡಮೆ. ತಿಳಿಯಬೇಕೆಂಬ ಆಸಕ್ತಿ ಧಾರಾಳವಾಗಿದೆ.

ಆದರೂ, ಈ ರಾಜ್ಯ ಪದ್ಧತಿ ಮಾತ್ರ ನನಗೆ ಅರ್ಥವಾಗಿಲ್ಲ. ಇತಿಹಾಸ ಪ್ರಸಿದ್ಧವಾದ ಕ್ರುಶೇವ್ [ಇಲ್ಲಿ ಕುಶ್ಚಾಫ್ ಎನ್ನುತ್ತಾರೆ] ಭಾಷಣದ ವಿವರವನ್ನು ಭಾರತದಲ್ಲೇ ಓದಿದ್ದೆ. ಮೊನ್ನೆಯವರೆಗೂ ಆರಾಧಿಸಿದ ಪೂಜಿಸಿದ ವ್ಯಕ್ತಿಯನ್ನು ಈದಿನ ಗೋರಿಯಿಂದ ಅಗೆದು ತೆಗೆದು ಉಗುಳಿ ನಿಂದಿಸುವುದರ ಅರ್ಥವೇನು? ಸ್ಟಾಲಿನ್ [ಇಲ್ಲಿ ಸ್ತಲೀನ್ ಎನ್ನುತ್ತಾರೆ] ಕೆಟ್ಟವನೆಂಬುದು ಸ್ಪಷ್ಟ. ಆದರೆ, ಅವನು ಬದುಕಿದ್ದಾಗ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದ ಇವರೆಲ್ಲ ಎಂತಹ ಧೀರರು? ರಾಜಕೀಯ ಕಾರಣಕ್ಕಾಗಿ ಬೆರಿಯಾ ಎಂಬವನನ್ನು ಗಲ್ಲಿಗೇರಿಸಿದರಲ್ಲ–ಆ ಘಟನೆಯಂತೂ ದೊಡ್ಡ ಪ್ರಶ್ನಾರ್ಥಕ ಚಿಹ್ನೆಯಾಗಿಯೇ ನನ್ನ ಮನಸ್ಸಿನಲ್ಲಿ ಇವತ್ತಿಗೂ ಉಳಿದಿದೆ.

ಹೋಗಲಿಬಿಡು. ನಾನು ಎಂಜಿನಿಯರು. ರಾಜಕಾರಣದ ಗೊಡವೆ ನನಗೆ ಯಾತಕ್ಕೆ?

ಇಲ್ಲಿ ಕ್ರಿಸ್‌ಮಸ್ ಹಬ್ಬ, ಹೊಸ ವರ್ಷದ ಹಬ್ಬ,–ಎಲ್ಲಾ ಒಂದೇ. ಹಲವಾರು ದಿನ ಒಂದೇ ಸಮನೆ ಸಂಭ್ರಮ.

ನಿಮಗೆಲ್ಲರಿಗೂ ತರಗತಿಗಳು ಈಗ ಆರಂಭವಾಗಿರಬೇಕಲ್ಲವೆ? ಇಲ್ಲಿ ಹಿಮ ಕರಗಲು ಇನ್ನೂ ಸ್ವಲ್ಪ ಸಮಯಬೇಕು.

ಭಿಲಾಯಿಯಲ್ಲಿ ನನ್ನ ವೇತನವನ್ನೆಲ್ಲ ನನ್ನ ಲೆಕ್ಕಕ್ಕೆ ಜಮೆ ಮಾಡುತ್ತಾರೆ. ತಿಂಗಳ ವೆಚ್ಚಕ್ಕಾಗಿ ಪೋಸ್ಟಾಫೀಸಿನಲ್ಲಿ ಇಟ್ಟಿರುವ ಎಸ್. ಬಿ. ಲೆಕ್ಕದಿಂದಲೇ ತೆಗೆಯುತ್ತಿರು.

ಇದು ತಲಪಿದೊಡನೆ, ತಡಮಾಡದೆ, ಉತ್ತರ ಬರೆ. ಎಲ್ಲ ವಿಷಯಗಳಿಗೂ ವಿವರವಾಗಿ ಬರೆ.

ಅಮ್ಮನಿಗೆ ಪ್ರಣಾಮಗಳು. ತಮ್ಮಂದಿರಿಗೆ ಒಲವು. ಎಲ್ಲ ಸ್ನೆಹಿತರಿಗೂ ನೆನಕೆಗಳು.

ಇತಿ, ರಾಜು

ಚುಟುಕಾಗಿ ಬರೆಯುವೆನೆಂದಿದ್ದ. ಆದರೂ ಕಾಗದ ದೀರ್ಘವಾಗಿತ್ತು. ವಿಶಾಲಾಕ್ಷಿಗೆ ಅರ್ಥವಾಗದ ವಿಷಯಗಳಿದ್ದುವು. ಒಣ ಹರಟೆ ಇತ್ತು. ಗಂಗಾಧರನ ಬರೆವಣಿಗೆಯಷ್ಟು ಮುದ್ದಾಗಿರಲಿಲ್ಲ ಕೈಬರಹ. ಶೈಲಿಯೂ ಅಷ್ಟು ಮೋಹಕವಾಗಿರಲಿಲ್ಲ.

['ನನ್ನಣ್ಣ ಎಂಜಿನಿಯರು; ಇಷ್ಟು ಸೊಗಸಾಗಿ ಆತ ಬರೆದಿರುವುದೇ ದೊಡ್ಡದು.']

ನಾಗಮ್ಮನಿಗಂತೂ, ಮಗನಿಂದ ಕಾಗದ ಬಂದಿದೆ ಎನ್ನುವುದು ಮುಖ್ಯ ವಿಷಯ. ಆತ ದೊಡ್ಡ ಕಾಗದ ಬರೆದಿರುವನೆನ್ನುವುದು ಹೆಚ್ಚಿನ ಸಂತೋಷಕ್ಕೆ ಕಾರಣ. ಬರೆದುದೆಲ್ಲ ಅರ್ಥವಾಗದಿದ್ದರೇನಂತೆ? ತನ್ನ ಮಗನಷ್ಟು ಓದಿರುವೆನೆ ತಾನು? ಆತ ಅಮ್ಮನಿಗೆ ಪ್ರಣಾಮಗಳನ್ನು ಸಲ್ಲಿಸಿದ್ದ. ತನ್ನ ಪಾಲಿಗೆ ಅಷ್ಟು ಸಾಕು. ಮಗನ ಒಲವೇ ಪರಮಭಾಗ್ಯ.

['ಇನ್ನೈದು ತಿಂಗಳು ಯಾವ ತೊಂದರೆಯೂ ಇಲ್ಲದೆ ಕಳೆಯಲಿ. ನನ್ನ ಮಗನನ್ನು ನೋಡಿಕೋ ದೇವರೇ. ಸುರಕ್ಷಿತವಾಗಿ ರಾಜೂ ಊರಿಗೆ ಬರಲಿ.']

ಚಂದ್ರನೆಂದ:

"ಅಕ್ಕಾ, ಅಲ್ಲಿಯ ದೃಶ್ಯಗಳ ಚಿತ್ರ ಕಳಿಸೋಕೆ ಬರಿ. ವರ್ಣಚಿತ್ರ ವಾಸಿ."

ಜಯರಾಮುವೆಂದ:

"ಸ್ಟಾಂಪೆಲ್ಲ ನನಗೆ ಕೊಡಕ್ಕ."

೬

ದಿನಗಳು ಕಳೆದುವು.

ಅಣ್ಣನಿಗೆ ಇಷ್ಟವೆನಿಸಬಹುದಾದ ಸಣ್ಣಪುಟ್ಟ ವಿಷಯಗಳನ್ನೂ ಬಿಡದೆ, ವಿಶಾಲಾಕ್ಷಿ ಬರೆದ್ದ ಕಾಗದಕ್ಕೆ ರಂಗರಾಜನಿಂದ ಬಂದುದು ಚುಟುಕಾದ ಉತ್ತರ:

'ವ್ಯಾಸಂಗ ಬಿರುಸಾಗಿ ನಡೆದಿದೆ. ಬಳಕೆಗೆ ಅತ್ಯಗತ್ಯವಾದ ರಷ್ಯನ್ ಪದಗಳನ್ನೆಲ್ಲ ಕಲಿತಿದ್ದೇನೆ.

'ಚಿತ್ರಗಳನ್ನೆಲ್ಲ ಬರುವಾಗ ತರುವೆನೆಂದು ಚಂದ್ರನಿಗೆ ಹೇಳು.'

'ಜಯನಿಗಾಗಿ ಒಂದು ಹೊರೆ ಸ್ಟಾಂಪುಗಳನ್ನೂ ತರುತ್ತೇನೆ.'

'ಸಾಧ್ವಿ' ಪತ್ರಿಕೆಯ ಒಂದು 'ಕಟಿಂಗ'ನ್ನೂ ವಿಶಾಲಾಕ್ಷಿ ಕಳುಹಿದ್ದಳು–ರಂಗರಾಜನ ಭಾವಚಿತ್ರ ಪ್ರಕಟವಾಗಿದ್ದ ಕಾಲಂ.

ಅದನ್ನು ಕುರಿತು ಆತ ಬರೆದಿದ್ದ:

'ನೋಡಿ ತಮಾಷೆಯೆನಿಸಿತು. ರಷ್ಯಾಕ್ಕೆ ಹೋದುದೇ ಮಹತ್ಸಾಧನೆ ಎಂದಾಯಿತು! ಒಳ್ಳೇದು. ಹುಡುಗಿ ಕೊಡ್ತೀವಿ ಅಂತ ಜನ ಹುಡುಕಿಕೊಂಡು ಬರಬಹುದ್ದು. ಹುಷಾರಿ!'

ರಂಗರಾಜ ಸರಿಯಾಗಿಯೇ ಊಹಿಸಿದ್ದ. ಹೆಣ್ಣು ಹೆತ್ತ ಹಲವರು ಆತನ ಮೇಲೆ ಕಣ್ಣಿಟ್ಟಿದ್ದರು. 'ಸಾಧ್ವಿ' ಪತ್ರಿಕೆಯಲ್ಲಿ ಬಂದಿದ್ದ ಚಿತ್ರ ಮತ್ತು ಸುದ್ದಿ ಒಳ್ಳೆಯ ಜಾಹೀರಾತಾಯಿತು. ಮನೆಯಲ್ಲಿ ನಾಗಮ್ಮ ಒಬ್ಬರೇ ಇದ್ದ ಸಮಯ ಸಾಧಿಸಿ, 'ಸಂಬಂಧ ಕೂಡಿಸುವ' ಪುಣ್ಯಾತ್ಮರು ಕೆಲವರು, ಬಂದೇ ಬಂದರು.

'ಸ್ವಲ್ಪ ಜಾತಕ ಕೊಡ್ತೀರಾ?'

ಆ ಪ್ರಶ್ನೆ ಕೇಳಿದಾಗಲೆಲ್ಲ ನಾಗಮ್ಮನಿಗೆ ಹೆಮ್ಮೆ ಎನಿಸುತ್ತಿತ್ತು. ಆದರೆ, ವಿಶಾಲಾಕ್ಷಿಯ ಕಟ್ಟಪ್ಪಣೆಯಾಗಿತ್ತು:

'ಅಣ್ಣ ಬರುವವರೆಗೂ ನೀನು ಸುಮ್ಮನಿರಬೇಕಮ್ಮ.'

ಆದರೂ ಒಂದು ಆಸೆ ಇತ್ತು ನಾಗಮ್ಮನಿಗೆ. ಒಂದೇ ಕುಟುಂಬದೊಡನೆ ಜಂಟಿ ಸಂಬಂಧ ಕಲ್ಪಿಸುವುದು ಸಾಧ್ಯವಾದರೆ! ಒಳ್ಳೆಯ ಹುಡುಗಿಯನ್ನು ರಂಗರಾಜನಿಗೆ ತರುವುದು; ಆ ಹುಡುಗಿಯ ಅಣ್ಣನಿಗೆ 'ನಮ್ಮ ವಿಶಾಲಿ'ಯನ್ನು

ಕೊಡುವುದು. ಎರಡನೆಯದು ಆಗುವಂತಿದ್ದರೆ ಮಾತ್ರ ಮೊದಲನೆಯದು ಸಾಧ್ಯ–ಎಂಬ ಶರತ್ತು.

ಕಲ್ಪನೆ ಯೋಚನೆಗಳಲ್ಲಿ ಇದೆಲ್ಲ ಉಳಿಯಿತೇ ಹೊರತು, ಕೃತಿಯಲ್ಲಿ ನಾಗಮ್ಮ ಮುಂದುವರಿಯಲಿಲ್ಲ.

ಅವರು ಉತ್ತರ ಕೊಡುತ್ತಿದ್ದರು:

'ನಮ್ಮ ಹುಡುಗ ಬಂದ್ಮೇಲೆ ನೋಡೋಣ.'

'ನೀವು ನೋಡಿಟ್ಟರಾಯ್ತು. ಮಗ ಬೇಡ ಅಂತಾರೆಯೆ?'

ಹೇಗಾದರೂ ಮಾಡಿ ಒಪ್ಪಿಸಿಬಿಡುವ ಯತ್ನ.

'ಈಗಿನ ಕಾಲದಲ್ಲಿ ಅದೆಲ್ಲಾ ಎಲ್ಲಿ ಆಗುತ್ತೇಂದ್ರೆ....'

'ನೀವೇ ಹಾಗಂದರೆ–'

'ರಾಜೂಮದುವೆಗೆ ಮುಂಚೆ ನಮ್ಮ ವಿಶಾಲೀದು ಒಂದು ಆಗಬೇಕಲ್ಲ.'

'ಆ ಜವಾಬ್ದಾರಿಯನ್ನೂ ನಾವು ವಹಿಸಿಕೊಳ್ಳೋಕೆ ಸಿದ್ಧ. ಎಲ್ಲಾದರೂ ಒಂದು ವರ ನೋಡ್ತೀವಿ.'

ಒಮ್ಮೆಲೆ, ಇದೆಲ್ಲ ತನ್ನ ಸಾಮರ್ಥ್ಯಕ್ಕೆ ಮೀರಿದ್ದು, ಎಂದು ನಾಗಮ್ಮನಿಗೆ ಅನಿಸುತ್ತಿತ್ತು.

'ಮಗ ಬರುವವರೆಗೂ ದಯವಿಟ್ಟು ಯಾವ ಪ್ರಸ್ತಾಪವೂ ಬೇಡಿ.'

....ಗಂಗಾಧರನೊಮ್ಮೆ ಮನೆಗೆ ಬಂದ. ಆಗ ವಿಶಾಲಾಕ್ಷಿ ಇರಲಿಲ್ಲ.

ನಸುನಗುತ್ತ ಆತ ಕೇಳಿದ:

"ಗುರುತು ಸಿಗು, ಅಲ್ವೆ?"

ನಾಗಮ್ಮನಿಗೆ ನಾಚಿಕೆಯಾಯಿತು.

"ವಯಸ್ಸೇನೋ ಆಯ್ತು. ಆದರೆ ಹಾಗೆಲ್ಲಾ ಮರೆಯೋದಿಲ್ಲವಪ್ಪ ನಾನು."

"ರಂಗರಾಜ ಬರೆದಿರಬೇಕೂಂತ ಕಾಣುತ್ತೆ."

"ಬರೆದಿದಾನೆ!"

ನಾಗಮ್ಮನಿಗೆ ಬೇಕಾಗಿದ್ದುದೂ ಗಂಗಾಧರನಂತಹ ಒಬ್ಬ ವ್ಯಕ್ತಿ. ತಮ್ಮ ಕೈಯಲ್ಲಿ ಭೈರಿಗೆ ಕೊರೆಸಿಕೊಳ್ಳಲು ಕಿವಿ ಗಟ್ಟಿ ಇದ್ದ ಮನುಷ್ಯ.

ವಿಶಾಲಾಕ್ಷಿಯನ್ನು ನೋಡಿಯೇ ಹೋಗಬೇಕೆಂದು ನಿರ್ಧರಿಸಿದ್ದ ಗಂಗಾಧರ, ಆ ಬಗೆಯ 'ಸಮಯದಾನ'ಕ್ಕೆ ಸಿದ್ಧನಾಗಿದ್ದ.

ನಾಗಮ್ಮ ಮಗನ ವಿಷಯ ಮಾತನಾಡಿದರು. [ವಿಶಾಲಾಕ್ಷಿ ಕೊಟ್ಟಿದ್ದ ರಂಗರಾಜನ, ಪತ್ರಗಳನ್ನೆಲ್ಲ, ಆಗಲೇ ಓದಿದ್ದ] ಗಂಗಾಧರನಿಗೆ, ಮಗನ ರಷ್ಯಾ ಪ್ರವಾಸದ ವಿವರವನ್ನಿತ್ತರು.

ಅದು ಮುಗಿದಾಗ, ಮನೆಯ ಕಷ್ಟಗಳನ್ನೂ ಅವನ ಮುಂದೆ ತೋಡಿ ಕೊಂಡರು.

"ಹೇಗೂ ನಿಮ್ಮ ಸ್ನೇಹಿತ. ಒಮ್ಮೆ ಕಾಗದ ಬರೀರಿ. ಅಲ್ಲಿ ಕಲಿಯೋದು ಮುಗಿದ್ಮೇಕ್ಲೆ ಊರಿಗೆ ಬಂದ್ಬಿಡಬೇಕೂಂತ ತಿಳಿಸಿ."

ಆ ಸಲಹೆ ಗಂಗಾಧರನಿಗೂ ಒಪ್ಪಿಗೆಯೇ!

"ಆಗಲಿ. ಖಂಡಿತ ಬರೀತೀನಿ."

[ಈಡೇರಿಸಲೇಬೇಕಾದ ವಾಗ್ದಾನವೇನೂ ಅಲ್ಲ.]

"ನಾನು ಕಣ್ಣು ಮುಚ್ಚೋದಕ್ಮುಂಚೆಯೊಮ್ಮೆ ವಿ ಶಾ ಲೀ ದೂ ರಾಜೂದೂ........"

ನಾಗಮ್ಮ ಮುಂದುವರಿಸುವುದೂ ಕಷ್ಟವಾಯಿತು, ಒತ್ತರಿಸಿ ಬಂದ ಕಂಬನಿಯ ದೆಸೆಯಿಂದ.

['ನಿನ್ನ ನಾಟಕ ಅತಿಯಾಯ್ತು ಕಣೋ,' ಎಂದು ಗಂಗಾಧರ ತನ್ನನ್ನು ತಾನೇ ಟೀಕಿಸಿದ.]

ಅಷ್ಟರಲ್ಲೇ ವಿಶಾಲಾಕ್ಷಿಬಂದಳು. ನಾಗಮ್ಮ ಎದ್ದು, ಸರಸರನೆ ಒಳಹೋದರು.

"ಏನು ನಡೀತಾ ಇತ್ತು?" ಎಂದು ಕೇಳಿದಳು ವಿಶಾಲಾಕ್ಷಿ, ಗಾಬರಿಗೊಂಡು.

ಗಂಗಾಧರನೆಂದ:

"ಮಕ್ಕಳಿಗೆ ಮದುವೆಯಾಗಿಲ್ಲಾಂತ ರೋದಿಸ್ತಾ ಇದ್ರು...."

"ನೀವೂ ಸರಿ!" ಎಂದಳು ವಿಶಾಲಾಕ್ಷಿ.

"ಮಾತಾಡ್ತಾ ಇರಿ. ಒಂದಿಷ್ಟು ಕಾಫಿ ಮಾಡ್ಕೊಂಡು ಬರ್‍ತೀನಿ," ಎಂದರು ನಾಗಮ್ಮ, ಒಳಗಿನಿಂದ.

ಊಹೂಂ-ಎಂದು ಆಕ್ಷೇಪಿಸುವ ನಿರ್ದೇಶವೇ ಅದು? ಕಾಫಿ ಮಾಡಿಕೊಂಡು ಅವರು ಬರುವವರೆಗೂ, ಗಂಗಾಧರ ಮತ್ತು ವಿಶಾಲಾಕ್ಷಿ ಮಾತನಾಡುತ್ತಲೇ ಇದ್ದರು.

* * * * *

ಆನಂತರದ ಸ್ವಲ್ಪ ಸಮಯದಲ್ಲೇ ರಂಗರಾಜನಿಂದ ಮತ್ತೊಂದು ಕಾಗದ ಬಂತು.

ತನ್ನ ತರಬೇತಿಯ ಪ್ರಗತಿಯ ವಿವರವನ್ನೆಲ್ಲ ಕೊಟ್ಟು ಆತ ಬರೆದಿದ್ದ:

'ಮನಸ್ಸು ಉಲ್ಲಾಸವಾಗಿದೆ. ಮಳೆಗಾಲ ಮುಗಿಯಿತೆನ್ನುವುದಕ್ಕೆ ಸೂಚನೆಯಾಗಿ ಊರನ್ನೆಲ್ಲ ಮಂಜು ಕವಿಯುವುದನ್ನು ನೆನೆಸಿಕೋ. ಅಥವಾ, ಬಿಳಿ ಮೋಡಗಳಿಂದ ಚಾಮುಂಡಿಬೆಟ್ಟ ಮುಚ್ಚಿಹೋಗುವ ಚಿತ್ರವನ್ನು ಜ್ಞಾಪಿಸಿಕೋ. ಬಿಸಿಲು ಬಂದಂತೆ ಏನಾಗ್ತದೆ? ಊಹೂಂ. ಅದೂ ಸರಿಯಲ್ಲ. ಆದರೆ ಬೇರೆ ಯಾವ ಹೋಲಿಕೆ ಕೊಡಲಿ? ಇಲ್ಲಿಯ ಈಗಿನ ನಿಸರ್ಗ ಸೌಂದರ್ಯವನ್ನು ಬಣ್ಣಿಸುವುದಕ್ಕೆ, ನಮ್ಮ ಪುರಾಣಗಳ ಆದಿಶೇಷನೂ ಸಮರ್ಥನಾಗಲಾರ. ಹಿಮ ಕರಗಿ ನೀರಾಗಿ ಹರಿಯುತ್ತಿದೆ. ಮೈತೊಳೆದು ಮರಗಿಡಗಳು ನಿಂತಿವೆ, ಹಸುರು ಚಿಗುರು ಎಲ್ಲೆಲ್ಲೂ. ಸೂರ್ಯರಶ್ಮಿ ಇಲ್ಲಿ ಎಷ್ಟು ಸುಂದರ! ಜನರಲೆಲ್ಲ ಲವಲವಿಕೆ ತುಂಬಿದೆ. ಇಲ್ಲಿಯವರಿಗೆ ವಸಂತಾಗಮನ, ನಮ್ಮೂರ ಹಳ್ಳಿಗರಿಗೆ ಸುಗ್ಗಿ ಇದ್ದಹಾಗೆ.

'ನಾನು ಕವಿಯಾಗಬೇಕಿತ್ತು. ಇದನ್ನೆಲ್ಲ ನೋಡಿ ಇಂಥ ಕವಿತೆ ಬರೆಯುತ್ತಿದ್ದೆ! ಆವತ್ತು ನಮ್ಮ ಮನೆಗೆ ದಯಮಾಡಿಸಿದ್ದರಲ್ಲ ಕವಿ–ನಿನ್ನ ಸ್ನೇಹಿತರು? ಅವರೇನಾದರೂ ಇಲ್ಲಿಗೆ ಬಂದಿದ್ದರೆ, ಖಂಡಿತವಾಗಿಯೂ ಹುಚ್ಚೆದ್ದು ಕುಣಿಯುತ್ತಿದ್ದರು; ಇದರ ಬಣ್ಣನೆಯನ್ನೂ ಸೊಗಸಾಗಿ ಮಾಡುತ್ತಿದ್ದರು.

'ರಾಜಕೀಯ ತಂತ್ರಕುತಂತ್ರಗಳು ಲೋಕದಲ್ಲಿ ನಡೆಯುತ್ತಲೇ ಇವೆ. ರಾಜಕಾರಣಿಗಳು ಕಪಟನಾಟಕ ಆಡುತ್ತಲೇ ಇದ್ದಾರೆ. ಮಾರಕ ಅಸ್ತ್ರಗಳ ಸ್ಫೋಟನೆಯಾಗುತ್ತಲೇ ಇದೆ. ಒಬ್ಬರನ್ನು ಉರುಳಿಸಿ ಇನ್ನೊಬ್ಬರು–ಈ ದೇಶದಲ್ಲೂ ಕೂಡಾ–ಗದ್ದುಗೆ ಏರುತ್ತಲೇ ಇದ್ದಾರೆ. ಆದರೆ, ಜನರು ಮಾತ್ರ ತಮ್ಮ ನಿತ್ಯಕರ್ಮಗಳನ್ನು ಬಿಟ್ಟಿಲ್ಲ. ಆಳುವ ವರ್ಗ ಏನೇ ಮಾಡುತ್ತಿರಲಿ, ವ್ಯಕ್ತಿಜೀವನವೂ ಸಾಮೂಹಿಕ ಜೀವನವೂ ನಡೆದೇ ಇವೆ.

'ಇಂಥ ಸಮಸ್ಯೆಗಳು ಏನಿದ್ದರೂ, ಒಂದು ಕ್ಷಣ ಮರೆತು, ಈ ನಿಸರ್ಗ ಸೌಂದರ್ಯವನ್ನು ಸವಿಯಲು ಮನುಷ್ಯನಿಗೆ ಹಿರಿಯ ಹೃದಯಬೇಕು.

ಇಲ್ಲಿ, ಸುತ್ತುಮುತ್ತಲಿನ ಜನರಲ್ಲಿ, ಆ ರೀತಿಯ ಹೃದಯವನ್ನು ನಾನು ಕಾಣುತ್ತಿದ್ದೇನೆ.'

ಸಾಕಷ್ಟು ಕಾವ್ಯಮಯವಾದ, ಗಹನವೂ ಆದ, ಕಾಗದ

ಅದನ್ನು ಗಂಗಾಧರನಿಗೆ ತೋರಿಸಬೇಕೆಂದು ವಿಶಾಲಾಕ್ಷಿ ಅಪೇಕ್ಷೆಪಟ್ಟಳು. ಕಾಲೇಜಿನಲ್ಲಿ ಆತ ಸಿಗಬಹುದೆಂದು, ಅದನ್ನೆತ್ತಿಕೊಂಡು ಹೊರಟಳು.

ಗಂಗಾಧರ ಎಲ್ಲಿಯೂ ಅವಳ ಕಣ್ಣಿಗೆ ಬೀಳಲಿಲ್ಲ.

ನಿರಾಶೆಗೊಂಡ ವಿಶಾಲಾಕ್ಷಿ, ಗಿರಿಜಾಬಾಯಿಯನ್ನು ನೋಡಹೋದಳು.

ಅವರು ತರಗತಿಯೊಳಕ್ಕೆ ಹೋಗಲು ಹತ್ತು ನಿಮಿಷಗಳು ಮಾತ್ರ ಇದ್ದುವು.

ರಂಗರಾಜನ ಕಾ ಗ ದ ವ ನ್ನು ಅವರು ಓದಿ ನೋಡಿದರು. ಬಳಿಕ ಅವರೆಂದರು:

"ಇದನ್ನೆಲ್ಲ ಜೋಪಾನವಾಗಿಡಿ, ವಿಶಾಲೀ....ಇರೋ ಹಾಗೆಯೇ ಅಚ್ಚು ಹಾಕಿದರೂ ಹಾಕಬಹುದು."

"ಹೋದ ಜನ್ಮದಲ್ಲಿ ನೀವು ಪ್ರಕಾಶಕರಾಗಿದ್ದಿರೋ ಏನೋ!" ಎಂದಳು ವಿಶಾಲಾಕ್ಷಿ.

ಆ ಹಾಸ್ಯೋಕ್ತಿಯನ್ನು ಗಮನಿಸದೆಯೇ ಗಿರಿಜಾಬಾಯಿ ಅಂದರು:

"ತಮಾಷೆಯಲ್ಲ, ವಿಶಾಲಿ. ಪ್ರವಾಸಸಾಹಿತ್ಯ ನಮ್ಮಲ್ಲಿ ಎಲ್ಲಿದೆ? ಈ ಕಾಗದಗಳು ಸಾಕಷ್ಟು ಪರಿಪೂರ್ಣವಾಗಿ ಕಾಣದೇ ಇದ್ದರೆ, ನಿಮ್ಮ ಅಣ್ಣನಿಗೆ ಹೇಳಿ ಪ್ರವಾಸಕಥನ ಬರೆಸ್ಬೇಕು."

"ನಮ್ಮಣ್ಣ? ಅವನು ಬರೆದ ಹಾಗೆಯೇ!"

"ಹಾಗಾದರೆ ನೀವು ಬರೀರಿ."

"ಸರಿ, ಸರಿ."

ಸಮಯವಾಯಿತೆಂದು ಎದ್ದು, ತರಗತಿಗೆ ಒಯ್ಯಬೇಕಾದ ಪುಸ್ತಕಗಳನ್ನೆತ್ತಿ ಕೊಳುತ್ತ, ಗಿರಿಜಾಬಾಯಿ ಅಂದರು:

"ನಿಮ್ಮವರು ಸಿಕ್ಕಿದಾಗ ನನ್ನ ನಮಸ್ಕಾರ ತಿಳಿಸೀಪ್ಪಾ."

ವಿಶಾಲಾಕ್ಷಿಯ ಮುಖ ಕೆಂಪಡರಿತು.

೫

ಬೇಸಗೆ ಆರಂಭವಾಯಿತು. "ಈಗಲೇ ಇಷ್ಟೊಂದು ಸೆಖೆ. ಇನ್ನು ಮೇ ತಿಂಗಳಲ್ಲಿ ಹೇಗೋ," ಎಂದು ಎಲ್ಲರೂ ಗೋಳಾಡಿದರು. ['ಈ ವರ್ಷ ಸೆಖೆ ಕಡಮೆ' ಎಂದು ಯಾವ ವರ್ಷವೂ ಯಾರೂ ಅಂದುದನ್ನು ವಿಶಾಲಾಕ್ಷಿ ಕೇಳಿರಲಿಲ್ಲ.] ಕೆಲವರು–ಬಲ್ಲವರು–ಈಸಲ ಅಂದರು :

"ಈ ಉಷ್ಣಕ್ಕೆ ಅಣು ಆಸ್ಫೋಟನೆಯೇ ಕಾರಣ. ಈ–ಮಕ್ಕಳು ವಾತಾವರಣವನ್ನೆಲ್ಲ ವಿಷಮಯ ಮಾಡಿದಾರೆ. ಇನ್ನು ಬದುಕುವುದೇ ಕಷ್ಟ."

ಸ್ನಾತಕೋತ್ತರ ವಿದ್ಯಾರ್ಥಿಗಳ ಹೊರತಾಗಿ, ಉಳಿದೆಲ್ಲರ ಪರೀಕ್ಷೆಗಳೂ ಮುಗಿದು, ಮೈಸೂರಿನ ಬೀದಿಗಳು ಬಹುಮಟ್ಟಿಗೆ ನಿರ್ಜನವಾದುವು.

ಅಂತಹ ಒಂದು ಸಂಜೆ, ಸೈಕಲ್ ಸವಾರ ಅನಂತ ಆಗಮಿಸಿದ. ಅಕ್ಕ ಒಪ್ಪಿಸಿದ ಕೆಲಸ.

ವಿಶಾಲಾಕ್ಷಿ ಕೇಳಿದಳು :

"ಯಾದವಗಿರಿಗೆ ಹೋಗಿದ್ಯಾ ಅನಂತೂ ?"

"ಹೂಂ. ತಗೊಳ್ಳಿ. ಅಕ್ಕಕೊಟ್ಲು," ಎಂದ ಅನಂತ, ಗಂಭೀರವಾಗಿ.

ವಿಶಾಲಾಕ್ಷಿ ಇಸಕೊಂಡು ಓದಿದಳು. ಡಾಕ್ಟರ್ ಶ್ರೀಕಾಂತನ ಹೆಸರು ನಮೂದಿಸಿದ ಚಿಕ್ಕ ಆಕೃತಿಯ ಹಾಳೆಯ ಮೇಲೆ ['ಗಂಡನ ಲೆಟರ್ ಪ್ಯಾಡಿನಿಂದ ಧಾರಾಳವಾಗಿ ಹರಿದಿರಬೇಕು–,'] ದುಂಡಗಿನ ಅಕ್ಷರದಲ್ಲಿ ನರ್ಮದಾ ಬರೆದಿದ್ದಳು :

'ನಾಳೆ ಸಂಜೆ ನಮ್ಮ ಮನೆಯಲ್ಲಿ ಸಂಜೆ ೫ ರಿಂದ ೮ ರವರೆಗೆ ಚೈತ್ರ ಮಾಸದ ಗೌರೀ ಹೂವೀಳ್ಯ, ಅರಿಶಿಣಕುಂಕುಮಕ್ಕೆ ಬಾ.'

"ಗಿರಿಜಾಬಾಯಿಯವರ ಮನೆ ಎಲ್ರೀ ?" ಎಂದು ಅನಂತ, ಗಾಂಭೀರ್ಯವನ್ನು ಬಿಟ್ಟುಕೊಡದೆ ಕೇಳಿದ.

"ಅವರಿಗೂ ಬಂದಿದೆಯೇನು ?"

"ಹೂಂ."

"ಮನೆ ಕೆಸರೇಲಿ. ದೂರವಿದೆಯಲ್ಲಪ್ಪ."

"ಇರಲಿ. ಏನು ಮಹಾ?"

ವಿಶಾಲಾಕ್ಷಿ, ಕ್ಷಣಕಾಲ ಯೋಚಿಸಿ, ಅಂದಳು :

"ತಾಳು. ಗಿರಿಜಾಬಾಯಿಯವರಿಗೆ ನಾನೂ ಒಂದು ಕಾಗದ ಕೊಡ್ತೀನಿ."

ಇದು ಇನ್ನೆಷ್ಟು ತಡವಾಗುತ್ತದೋ–ಎನಿಸಿತು ಅನಂತನಿಗೆ. ಆತ ಒಳಗೆ ಬಂದು, ವಿಶಾಲಾಕ್ಷಿ ಅದೇ ಕೆಲ ದಿನಗಳಿಂದ ತರಿಸತೊಡಗಿದ್ದ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯನ್ನು ಎತ್ತಿಕೊಂಡು, ಕೊನೆಯ–ಪಂದ್ಯಾಟದ–ಪುಟವನ್ನು ನೋಡುತ್ತ ಕುಳಿತ. ಆದರೆ ವಿಶಾಲಾಕ್ಷಿ, ಎರಡೇ ನಿಮಿಷಗಳಲ್ಲಿ ಬರೆದು ಮುಗಿಸಿದಳು. ದೀರ್ಘಕಾಗದವಲ್ಲ. ಪುಟ್ಟ ಚೀಟಿ.

'ನಾಲ್ಕು ಗಂಟೆಯ ಹೊತ್ತಿಗೆ ನಮ್ಮಲ್ಲಿಗೆ ಬನ್ನಿ. ಆಮೇಲೆ ಜತೆಯಾಗಿ ಹೋಗೋಣ.'

* * * * *

ಮಾರನೆಯ ದಿನ ನಾಲ್ಕು ಗಂಟೆಯ ಹೊತ್ತಿಗೆ ಸರಿಯಾಗಿ ಗಿರಿಜಾಬಾಯಿ ಬಂದರು.

"ಒಬ್ಬಳೇ ಬಂದೆ," ಎಂದರು, ಜತೆಯಲ್ಲಿ ಮಕ್ಕಳಿಲ್ಲದುದನ್ನು ಕಂಡು ವಿಶಾಲಾಕ್ಷಿ ಕೇಳಬಹುದಾದ ಪ್ರಶ್ನೆಗೆ, ಮುಂದಾಗಿಯೇ ಉತ್ತರವೀಯುತ್ತ.

ನಾಗಮ್ಮ ಗೌರವಿಸುತ್ತಿದ್ದ ಜೀವ, ಗಿರಿಜಾಬಾಯಿ. ವಯಸ್ಸಾದವರು. ವಿಶಾಲಾಕ್ಷಿಗೆ ಹಿರಿಯಕ್ಕನಿದ್ದ ಹಾಗೆ. ಅಥವಾ, ತನಗೇ ಒಬ್ಬಳು ಕಿರಿಯ ತಂಗಿ ಇದ್ದ ಹಾಗೆ. ಅನುಭವ ವಿವೇಕಗಳಿಂದ ಮಾಗಿದ್ದ ವ್ಯಕ್ತಿ. ಸಮಾಧಾನದ ಒಂದು ಮಾತನ್ನು ಅವರು ಆಡಿದರೂ ಸಾಕು–ಮನಸ್ಸಿಗೆ ಎಷ್ಟೋ ನೆಮ್ಮದಿ ಎನಿಸುತ್ತಿತ್ತು.

"ಮಗು [ಅಂದರೆ ರಂಗರಾಜ] ಯಾರ ಮಾತೂ ಕೇಳೋದಿಲ್ಲ. ಮುಂದೆ ನಮ್ಮ ಯಜಮಾನರು ಈಕಡೆ ಬಂದಾಗ ಅವರ ಕೈಲಿ ನೀವೊಂದು ಮಾತು ಹೇಳಿಸಬೇಕು. ನೀವೂ ಹೇಳಬೇಕು. ಊರಲ್ಲೇ ಇದ್ದು ಮನೆಯ ಜವಾಬ್ದಾರೀನೆಲ್ಲ ವಹಿಸಿಕೊಂಡರೆ ಎಷ್ಟು ಚೆನ್ನ! ಇಲ್ಲಿಯೇ ಯಾವುದಾದರೂ ಕೆಲಸ ಸಿಗಲಾರದು ಅಂತೀರಾ?"

"ಕೆಲಸಕ್ಕೇನು ಸಿಗಬಹುದು."

ಮುಳ್ಳುತಂತಿಯನ್ನು ತಾನು ಮೆಟ್ಟುತ್ತಿರುವೆನೆಂದು ಭಾಸವಾಗಿ, ಗಿರಿಜಾಬಾಯಿ ಮತ್ತೂ ಅಂದರು:

"ಇಲ್ಲಿ ಸಂಬಳ ಜಾಸ್ತಿ ಇಲ್ಲ. ಅದೊಂದೇ ಕೊರತೆ."

"ಅಯ್ಯೋ ಬಿಡಿ! ಎಷ್ಟು ಬೇಕು ನಮ್ಮ ಸಂಸಾರಕ್ಕೆ?"

ವಿಶಾಲಾಕ್ಷಿ ಸಿದ್ಧಳಾದಳು. [ಕುಪ್ಪಸ ಸೀರೆಗಳ ಹೊಂದಾಣಿಕೆಯಲ್ಲಿ ಆಯ್ಕೆಯಲ್ಲಿ ಶ್ರದ್ಧೆ. ಮೊದಲಿಗಿಂತ ಮೈ ಹೆಚ್ಚು ತುಂಬಿಕೊಂಡಿತ್ತು. 'ಚಿತ್ತ ಸ್ವಾಸ್ಥ್ಯವಿದ್ದಾಗಲೇ ಆರೋಗ್ಯ. ಮದುವೆಯಾದ ಮೇಲೆ ಈಕೆ ಹೆಚ್ಚು ಮುದ್ದಾಗಿ ಕಾಣಿಸುವುದು ಖಂಡಿತ.']

'ಬಸ್ಸೋ ಇಲ್ಲವೆ ಟಾಂಗಾ, ಯಾವುದು ಸಿಗುತ್ತೋ ಅದು,' ಎಂದು ಅವರಿಬ್ಬರೂ ಹಾದಿ ನಡೆಯುತ್ತಿದ್ದಂತೆ, ಗಿರಿಜಾಬಾಯಿ ಕೇಳಿದರು:

"ಇದೇನು, ಹೂವೀಳ್ಯದ ಹುಚ್ಚು ನರ್ಮದೆಗೆ? ಉತ್ತರಕರ್ನಾಟಕದಲ್ಲಿ ಇದರ ಆಚರಣೆ ಹೆಚ್ಚು. ಶ್ರೀಕಾಂತ ಇಲ್ಲಿಯವರೇ ಅಲ್ಲವೆ?"

"ಇಲ್ಲಿಯವರೇನೇ. ಯಾರೋ ಹೇಳೋದು ಕೇಳಿರ್ತಾಳೆ. ಮಾಡೋಣ ಅನಿಸಿರಬೇಕು. ಅವಳ ಅತ್ತೆಗಂತೂ ಇಂಥದು ಇಷ್ಟ."

....ಅವರಿಬ್ಬರೂ ನರ್ಮದೆಯ ಮನೆ ತಲಪಿದಾಗ ಅಲ್ಲಿ ಯಾವ ಸಂಭ್ರಮದ ಸುಳಿವೂ ಇರಲಿಲ್ಲ! ನಡುಮನೆಯಲ್ಲಿ ಮುರಲಿ ಬುದ್ಧನಾಗಿ ಕುಳಿತು, ಗದ್ದಲ ಮಾಡುತ್ತಿದ್ದ. "ಯಾವುದಪ್ಪಾ ಬೇಕು ನಿಂಗೆ?" ಎಂದು ನರ್ಮದಾ, ಬೇಸತ್ತ ಧ್ವನಿಯಲ್ಲಿ ಕೇಳುತ್ತಿದ್ದಳು. "ಇದು ಚೆನ್ನಾಗಿದೆ, ತಗೋಮರಿ," ಎಂದು, ಮೊಮ್ಮಗನನ್ನು ಸಂತೈಸಲು, ಒಲಿಸಲು, ಭಾಗೀರಥಮ್ಮನೂ ಯತ್ನಿಸುತ್ತಿದ್ದರು.

ಆರೆಂಟು ಅಂಗಿ ಚಡ್ಡಿಗಳು ಸುತ್ತುಮುತ್ತೆಲ್ಲ ಹರಡಿಕೊಂಡಿದ್ದುವು. ಅಗಸನಿಂದ ಬಂದಿದ್ದ ಬಟ್ಟೆಗಳು. ಕೆಲವಂತೂ ಹೊಸವು.

"ಏನಿದು ಗಲಾಟೆ?" ಎನ್ನುತ್ತ ವಿಶಾಲಾಕ್ಷಿ, ಗಿರಿಜಾಬಾಯಿಯೊಡನೆ ಒಳಕ್ಕೆ ಕಾಲಿರಿಸಿದಳು.

"ಬನ್ನಿ, ಬನ್ನಿ!" ಎಂದಳು ನರ್ಮದಾ. ಅತಿಥಿಗಳನ್ನು ಸ್ವಾಗತಿಸುವ ಸ್ಥಿತಿಯಲ್ಲಿ ತಾನಿಲ್ಲ–ಸಿಂಗರಿಸಿಕೊಂಡಿಲ್ಲ–ಎಂದು ಅವಳೇನೂ ಗಾಬರಿಯಾಗಲಿಲ್ಲ. ಮಗನ ಕಡೆ ತಿರುಗಿ ಅವಳೆಂದಳು:

"ನೋಡು ಅತ್ತೆ ಬಂದಿದಾರೆ; ದೊಡ್ಡತ್ತೇನೂ ಬಂದಿದ್ದಾರೆ. ಅಂಗಿ ಹಾಕ್ಕೋಮರಿ."

ಬಂದಿದ್ದವರನ್ನು ಮುರಲಿ ನೋಡಿದ. ವಿಶಾಲಾಕ್ಷಿಯ ಗುರುತು ಸಿಕ್ಕಿತು. ಬುದ್ಧನಾಗಿ ತಾನು ಕುಳಿತಿದ್ದೆನೆಂದು ಸ್ವಲ್ಪ ನಾಚಿಕೆಯೂ ಆಯಿತು. ಬಳಿಕ, ತಾಯಿಯ ಕಡೆ ದಿಟ್ಟಿಸಿದ. ಸೊಗಸಾದ ಅಂಗಿಯೊಂದನ್ನು ಅವಳು ಆರಿಸಿ ತೊಡಿಸಲು ಬಂದಾಗ, ಆಕ್ಷೇಪಿಸಲಿಲ್ಲ.

ಅಷ್ಟು ಮುಗಿಸಿ, ಎದ್ದು, ನರ್ಮದಾ ಅಂದಳು:

"ಅಯ್ಯೋ, ನಿಂತೇ ಇದೀರಲ್ಲ! ವಂದನೆ ಸಲ್ಲಿಸೋದಕ್ಕೂ ಮರೆತೆ, ನಮಸ್ಕಾರ ಗಿರಿಜಾಬಾಯಿ. ಬನ್ನಿ."

ಗಿರಿಜಾಬಾಯಿ ಪ್ರತಿ ವಂದಿಸಿದರು. ಗೆಳತಿಯ ಜತೆ ಸೋಫಾದ ಮೇಲೆ ಕುಳಿತರು. ಮುರಲಿಯನ್ನು ಹತ್ತಿರಕ್ಕೆ ಕರೆದರು.

ಅಪರಿಚಿತರ ಜತೆ ಹಾಗೆಲ್ಲ ಮಾತನಾಡಬಾರದೆಂದು, ಮುರಲಿ ಗಂಭೀರವಾಗಿ ದೂರದಲ್ಲೇ ನಿಂತ.

ನರ್ಮದಾ ಅಂದಳು:

"ಮಹಾ ತುಂಟನಾಗಿದಾನೆ. ಪ್ರತಿಯೊಂದರಲ್ಲೂ ತನ್ನದೇ ಹಟ."

"ಈಗ ಚೆನ್ನಾಗಿ ಮಾತಾಡೋಕೆ ಬರುತ್ತೆ, ಅಲ್ವಾ?" ಎಂದು ವಿಶಾಲಾಕ್ಷಿ ಕೇಳಿದಳು.

"ಓಹೋ! ಬಾಯಿ ತೆರೆದರೆ ಮುಚ್ಚಿಸೋದು ಕಷ್ಟ. ಬಿಮ್ಮನೆ ತುಟಿ ಬಿಗಿದುಕೊಂತ ಅಂದರೆ ಬಾಯಿ ತೆರೆಸೋದು ಕಷ್ಟ!"

ಈ ಮಾತೆಲ್ಲ ತನ್ನನ್ನು ಉದ್ದೇಶಿಸಿಯೇ–ಎಂಬುದನ್ನು ಬಲ್ಲೆ, ಎನ್ನುವಂತೆ, ಮುರಲಿ ಹೂಂಕರಿಸಿದ. ಬಳಿಕ "ತೀತಾ, ಏ ತೀತಾ!" ಎಂದು, ತನ್ನ ಆಪ್ತಳಾದ ಸೀತೆಯನ್ನು ಕರೆಯುತ್ತ, ಹೊರಟುಹೋದ.

"ಇದೇನೇ ಇದು ಹೂವೀಳ್ಯ ಅಂತ ಹೇಳಿಕಳಿಸ್ದೆ," ಎಂದಳು ವಿಶಾಲಾಕ್ಷಿ; ಗಿರಿಜಾಬಾಯಿ ಯಾರೆಂಬುದನ್ನು ತಿಳಿದುಕೊಂಡು ಭಾ ಗೀ ರ ಥ ಮ್ಮ ಒಳ ಹೋದಮೇಲೆ.

ನರ್ಮದಾ ಗಟ್ಟಿಯಾಗಿ ನಕ್ಕಳು.

"ನೀವಿಬ್ಬರೂ ಜತೆಯಾಗಿ ಯಾವತ್ತೂ ಬರೋಲ್ಲ ನೋಡು. ಅದಕ್ಕಾಗಿ

ಈ ಹಂಚಿಕೆ ತೆಗೆದೆ. ಏಪ್ರಿಲ್ ಮೊದಲನೇ ತಾರೀಖು ಮಾಡೋಣ, ಫೂಲ್ಸ್ ಡೇ–ಚೆನ್ನಾಗಿರುತ್ತೆ, ಅನಿಸಿತ್ತು. ಆದರೆ ನಮ್ಮವರು, ಆದಿನ ಬೇಡ–ಅಂದ್ಬಿಟ್ರು. ಬಂದರೆ ಬಂದಿರಿ, ಇಲ್ಲದಿದ್ದರೆ ಇಲ್ಲ–ಅಂತ, ಇವತ್ತಿನ ದಿವಸ ಈ ಕಪಟಾಚರಣೆ ಗೊತ್ಮಾಡ್ದೆ!"

ಒಂದುಕ್ಷಣ, ಇವಳು ಹಳೆಯ ನರ್ಮದೆಯೇ ಸರಿ–ಎನಿಸಿತು ಗಿರಿಜಾಬಾಯಿಗೆ, ರೇಗಿತು ಕೂಡಾ!

ಆದರೆ ಅಷ್ಟರಲ್ಲೆ ನರ್ಮದಾ ಅಂದಳು:

"ಕ್ಷಮಿಸಿಬಿಡಿ, ಗಿರಿಜಾಬಾಯಿ. ವಿಶಾಲಾಕ್ಷಿಯಾದರೆ ನನ್ನ ಹಳೇ ಸ್ನೇಹಿತೆ. ನಿಮ್ಮ ಹತ್ತಿರ ಮಾತ್ರ ಈರೀತಿ ಸಲಿಗೆ ತೋರಿಸಬಾರದಾಗಿತ್ತು."

ನಿಟ್ಟುಸಿರಿಳಿದು, ಗಿರಿಜಾಬಾಯಿ ಅಂದರು:

"ಏನೂ ಪರವಾಗಿಲ್ಲ. ಯಾವತ್ತಾದರೂ ನಿಮ್ಮಲ್ಲಿಗೆ ಹೊಗ್ಬೇಕೂಂತ ಅಂದ್ಕೊಳ್ತಾನೇ ಇದ್ದೆ. ಇವತ್ತೇ ಬರಬೇಕೂಂತ ನೀವೇ ತೀರ್ಮಾನಿಸಿದಿರಿ. ಒಳ್ಳೇದೇ ಆಯ್ತು."

"ಅಂತೂ ನಿನ್ನ ಈ ಆಟದಲ್ಲಿ ಡಾಕ್ಟರು ಕೂಡಾ ಸೇರ್ಕೊಂಡಿದಾರೆ ಅನ್ನು," ಎಂದಳು ವಿಶಾಲಾಕ್ಷಿ.

"ದೊಡ್ಡಮನಸ್ಸು ಮಾಡಿ ಒಪ್ಪಿದರು. ಹೀಗೆಲ್ಲಾ ಮಾಡಿದರೆ, ನೀನು ಒಂದು ಮಗುವಿನ ತಾಯಿ ಅಂತ ಯಾರೂ ನಂಬಲಾರರು–ಅಂದರು. ನಮ್ಮ ಜವಾಬ್ದಾರಿ ಕಷ್ಟದ ಮಾತ್ರಕ್ಕೆ ಬಾಲ್ಯದ ಗೆಳತಿಯರನ್ನೆಲ್ಲ ಮರೆತುಬಿಡಬೇಕೂಂತ ಇದೆಯೇನೆ?"

"ಇಲ್ಲವಮ್ಮ ಇಲ್ಲ! ಆದರೆ ಇಂಥ ಯಶಸ್ವಿಯಾಗೋದು ಒಂದೇಸಲ. ನಿಮ್ಮ ಅತ್ತೆಗೆ ಗೊತ್ತಿದೆಯೋ ಇಲ್ವೋ?"

"ಅತ್ತೆಗೆ ಗೊತ್ತಿಲ್ಲ. ಮಾವ ಊರಲಿಲ್ಲ!"

"ಸರಿ, ಸರಿ!"

ಮಹಡಿಯ ಮೆಟ್ಟಲುಗಳಲ್ಲಿ ಹೆಜ್ಜೆಗಳ ಸಪ್ಪಳವಾಯಿತು. ಸಭ್ಯತೆಯ ಲಕ್ಷಣವಲ್ಲವೆಂದು, ಗಿರಿಜಾಬಾಯಿಯಾಗಲೀ, ವಿಶಾಲಾಕ್ಷಿಯಾಗಲೀ ಅತ್ತ ತಿರುಗಿ ನೋಡಲಿಲ್ಲ ಆಕಡೆಗೆ ಮುಗುಳ್ನಗುತ್ತ ದಿಟ್ಟಿಸಿದವಳು, ನರ್ಮದಾ.

ಗಂಡಸಿನ ಧ್ವನಿ ಕೇಳಿಸಿತು.

"ನಮಸ್ಕಾರ!"

ಪ್ರತಿವಂದನೆ ಮಾಡುತ್ತ ಬಂದಿದ್ದವರು ಏಳತೊಡಗಿದರೆಂದು, ಶ್ರೀಕಾಂತನೆಂದ :

"ಏಳಬೇಡಿ. ದಯವಿಟ್ಟು ಕೂತ್ಕೊಳ್ಳಿ."

ಹಾಗೆ ಹೇಳಿ ಶ್ರೀಕಾಂತ, ಒಳ ಬಾಗಿಲಿನಿಂದ ಹಿಂದಕ್ಕೆ ಹೋದ. ಬಿಳಿಯ ಪಾಯಜಾಮ–ಶರಟು, ಹೆಗಲ ಮೇಲೆ ಟವೆಲು; ತುಸು ಅಸ್ತವ್ಯಸ್ತವಾಗಿದ್ದ ಕ್ರಾಪು; ಬೆಡ್‌ರೂಂ ಸ್ಲಿಪ್ಪರುಗಳು ಪಾದಗಳಲ್ಲಿ. ಗಿರಿಜಾಬಾಯಿ ಮದುವೆಯಲ್ಲಿ ಕಂಡಿದ್ದ ಶ್ರೀಕಾಂತನಿಗಿಂತ ಸ್ವಲ್ಪ ಭಿನ್ನವಾಗಿತ್ತು ಈ ವ್ಯಕ್ತಿ. ಮೂವತ್ತರ ಗಡಿ ದಾಟುವಾಗ, ಇಲ್ಲವೆ ಮದುವೆಯಾದ ಬಳಿಕ, ಅಂಗಾಂಗ ತುಂಬಿಕೊಳ್ಳುವ ನಿಸರ್ಗನಿಯಮವನ್ನು ಅವರು ತಿಳಿಯದವರಲ್ಲ. [ಸ್ವತಃ ನರ್ಮದೆಯೂ ಹಿಂದಿನ ಬಳುಕುವ ಬಳ್ಳಿಯಾಗಿರಲಿಲ್ಲ ಈಗ.]

ವಿಶಾಲಾಕ್ಷಿಯ ದೃಷ್ಟಿಗೆ ಶ್ರೀಕಾಂತ, ಎಂದಿನಂತೆ ಚೆನ್ನಾಗಿಯೇ ಕಾಣಿಸಿದ.

"ಮಧ್ಯಾಹ್ನ ಡಾಕ್ಟರು ನಿದ್ದೆ ಮಾಡ್ತಾರೇನೇ?" ಎಂದು, ವಿಶಾಲಾಕ್ಷಿ ನರ್ಮದೆಯನ್ನು ಕೇಳಿದಳು :

"ಅವರು ಮನೆಗೆ ಬರೋದೇ ಒಂದೂವರೆ ಎರಡು ಘಂಟೆಗೆ. ನಿನಗೆ ಗೊತ್ತಿಲ್ಲ? ಇನ್ನು ಪುನಃ ಹೊರಡೋಹೊತ್ತು. ವಿಶ್ರಾಂತೀಂತ ಒಂದರ್ಧ ಘಂಟೆ ಮಲಗಿರ್ತಾರೆ. ಒಂದೊಂದುಸಲ ರೋಗಿಗಳು ಇಲ್ಲಿಗೇ ಬಂದರೆ, ಆ ವಿಶ್ರಾಂತಿಗೂ ಸೊನ್ನೆ. ಬಹಳ ಕಷ್ಟ ನಮ್ಮ ಈ ಡಾಕ್ಟರರ ಜೀವನ."

ಬೇಸರವಲ್ಲ, ಹೆಮ್ಮೆ ತುಂಬಿತ್ತು ಆ ಧ್ವನಿಯಲ್ಲಿ.

"ರಾತ್ರೆ ಬರೋದೂ ತಡವಾಗುತ್ತೆ, ಅಲ್ವೆ?" ಎಂದು ಗಿರಿಜಾಬಾಯಿ ಕೇಳಿದರು, ತಾವು ಬರಿಯ ಪ್ರೇಕ್ಷಕರಾಗಿ ಇರಬಾರದೆಂದು.

"ಒಂದೊಂದುಸಲ ಬಹಳ ತಡವಾಗುತ್ತೆ. ಅವರು ಬರೋಹೊತ್ತಿಗೆ ಮುರಲಿ ನಿದ್ದೆ ಮಾಡಿರ್ತಾನೆ."

ಸಣ್ಣನೆ ನಕ್ಕು, ಗೆಳತಿಯನ್ನು ಪರಿಹಾಸ್ಯಕ್ಕೆ ಗುರಿಪಡಿಸಲು ಯತ್ನಿಸುತ್ತ, ವಿಶಾಲಾಕ್ಷಿ ಅಂದಳು :

"ಮೊದಮೊದಲು ನರ್ಮದೆಗೆ ಬಹಳ ಬೇಸರವಾಗ್ತಿತ್ತು, ಕಣ್ರೀ. ಯುವರಾಜರು ಬಂದ್ಮೇಲೆ ಹೊತ್ತುಹೋಗೋದೇ ಗೊತ್ತಾಗೋದಿಲ್ಲ!"

"ಹೋಗೇ, ನಿನಗೊಂದು ತಮಾಷೆ!" ಎಂದಳು ನರ್ಮದಾ.

ಸಲಿಗೆಯಿಂದ ಏಕವಚನದಲ್ಲಿ ವಿಶಾಲಾಕ್ಷಿಯನ್ನು ಹೆಚ್ಚುಹೆಚ್ಚಾಗಿ ಗಿರಿಜಾಬಾಯಿಯ ಎದುರು ಸಂಬೋಧಿಸಬೇಕು; ತಮ್ಮ ಗೆಳೆತನ ಬಹಳ ಹಳೆಯದು–ಗಾಢವಾದುದು–ಎಂದು ತೋರಿಸಿಕೊಡಬೇಕು;–ಎಂಬ ತವಕ ನರ್ಮದೆಗೆ. ಗಿರಿಜಾಬಾಯಿಯ ಪರಿಚಯವಾದಂದಿನಿಂದ ವಿಶಾಲಿ ತನ್ನಿಂದ ದೂರವಾದಳು–ಎಂದು ಹಿಂದೆ ಅವಳಿಗೆ ಕಸಿವಿಸಿ ಎನಿಸಿತ್ತು. ಅಂತಹ ಭಾವನೆ ಈಗಿರಲಿಲ್ಲವಾದರೂ, ಆತ್ಮೀಯತೆಯ ಹಕ್ಕನ್ನು ಸಾಧಿಸುವುದರಲ್ಲಿ, ತಮ್ಮೊಳಗಿನ ಆಪ್ತತ್ವವನ್ನು ಗಿರಿಜಾಬಾಯಿಗೆ ತೋರಿಕೊಡುವುದರಲ್ಲಿ, ತಪ್ಪೇನು?

ಸಾಬೂನು ಹಚ್ಚಿ ಮುಖ ತೊಳೆದುಕೊಂಡು, ಶ್ರೀಕಾಂತ ಬಂದ.

"ಪುರಸೊತ್ತಿದ್ದರೆ ಎರಡು ನಿಮಿಷ ಕೂತ್ಕೋಬಹುದು. ನಮ್ಮ ಅಭ್ಯಂತರವೇನೂ ಇಲ್ಲ," ಎಂದಳು, 'ಬನ್ನಿ–ಕೂತ್ಕೋಳ್ಳಿ' ಎಂದು ಮೌನವಾಗಿ ವಿನಂತಿಸುವ ನೋಟ ಬೀರುತ್ತಾ.

ಶ್ರೀಕಾಂತ ಮುಗುಳುನಕ್ಕು ಆಕೆಯ ಮಗ್ಗುಲಲ್ಲೆ ಆಸೀನನಾದ. ಬಾಚಣಿಗೆಯ ಹಾದಿ ನೋಡುತ್ತಿದ್ದ ಅವನ ಮುಂಗುರುಳು, ಹಣೆಯ ಮೇಲೆ ಹರಿದಾಡುತ್ತಿತ್ತು.

"ಇವರು ಗೊತ್ತಲ್ಲ?" ಎಂದಳು ನರ್ಮದಾ, ಗಿರಿಜಾಬಾಯಿಯ ಕಡೆ ಕೈಮಾಡಿ.

ಗೊತ್ತು–ಎನ್ನುವಂತೆ ಶ್ರೀಕಾಂತ ತಲೆಯಾಡಿಸಿದ. ಆತನೆಂದ:

"ಎಲ್ಲರೂ ಆರೋಗ್ಯವಾಗಿದೀರಾ? ನನ್ನ ಹತ್ತಿರಕ್ಕಂತೂ ಔಷಧಿಗೇಂತ ನೀವು ಯಾರೂ ಬಂದ ನೆನಪಿಲ್ಲ!"

ಆ ಮಾತಿಗೆ ನಗೆಯ ಪ್ರತಿಕ್ರಿಯೆ ಮೊದಲು ಬಂದುದು, ನರ್ಮದೆಯಿಂದಲೇ. ಗಿರಿಜಾಬಾಯಿ–ವಿಶಾಲಾಕ್ಷಿಯರೂ ಡಾಕ್ಟರರ ಹಾಸ್ಯಪ್ರವೃತ್ತಿ ಕಂಡು ನಕ್ಕರು.

"ಪ್ರಾಕ್ಟೀಸು ಬಹಳ ಜೋರಾಗಿದೇಂತ ಕಾಣುತ್ತೆ," ಎಂದಳು ವಿಶಾಲಿ.

"ನಗರದಲ್ಲಿ ಹೊಲಸು ಕೊಂಪೆಗಳಿರೋವರೆಗೂ ಪ್ರಾಕ್ಟೀಸಿಗೆ ಬರಗಾಲವಿಲ್ಲ," ಎಂದ ಶ್ರೀಕಾಂತ.

ಗಿರಿಜಾಬಾಯಿ ನುಡಿದರು:

"ಯಾಕೆ ಹಾಗಂತೀರಿ? ಬಹಳ ಪವಿತ್ರವಾದದ್ದಲ್ವೆ ವೈದ್ಯವೃತ್ತಿ?"

ದುಡ್ಡು ಸುಲಿಯುವ ಡಾಕ್ಟರನ್ನು ಸಾಕಷ್ಟು ಕಂಡಿದ್ದ ಗಿರಿಜಾಬಾಯಿಯ ಆ ಮಾತಿನಲ್ಲಿ, ಅಣಕದ ಛಾಯೆ ಅನಿವಾರ್ಯವಾಗಿತ್ತು.

ಅದನ್ನು ಗುರುತಿಸಿದ ಶ್ರೀಕಾಂತನೆಂದ:

"ಥ್ಯಾಂಕ್ಸ್! ಬಹಳ ಪವಿತ್ರವಾದದ್ದು. ಹಾಗೇಂತ ಎಲ್ಲರೂ ಹೇಳ್ತಾರೆ."

ಒಂದುಕ್ಷಣ ತಡೆದು ಆತ ಮತ್ತೂ ಅಂದ:

"ನಿಮ್ಮ ವೃತ್ತಿಯೂ ಪವಿತ್ರವೇ. ಆದರೆ, ಪಾವಿತ್ರ್ಯ ಉಳಿಯೋದು, ಮನಸ್ಸಾಕ್ಷೀನ ನಾವು ಮಾರಿಕೊಳ್ಳದೇ ಇದ್ದರೆ ಮಾತ್ರ."

ನಾಟಕದ ನುಡಿಯಲ್ಲ—ಪ್ರಾಮಾಣಿಕವಾದ ಮಾತು. ಆತನ ಬಗೆಗೆ ಗೌರವ ಹುಟ್ಟಿಸಲು ಅಷ್ಟೇ ಸಾಕಾಗಿತ್ತು.

ಬೇರೇನೂ ಹೇಳಲು ತೋಚದೆ ಗಿರಿಜಾಬಾಯಿ ಅಂದರು:

"ಅದು ನಿಜ."

ಶ್ರೀಕಾಂತ ಗೋಡೆ ಗಡಿಯಾರದತ್ತ ನೋಡಿ, ಏಳುತ್ತ, ಅಂದ:

"ಬರ್ತೀನಿ, ಕ್ಷಮಿಸಿ. ಹೊತ್ತಾಗ್ತಾ ಬಂತು. ಇನ್ನು ಹೊರಡೋದಕ್ಕೆ ನಾನು ಸಿದ್ಧನಾಗಬೇಕು."

ಶ್ರೀಕಾಂತ ಮಹಡಿ ಹತ್ತಿ ಹೋದಮೇಲೆ, ಕಾಫಿಯ ಲೋಟಗಳೊಡನೆ ಭಾಗೀರಥಮ್ಮ ಬಂದರು. ನಾಲ್ಕು ಇದ್ದುವು. ಮೂರನ್ನು ಟೀಪಾಯ್‌ಯ ಮೇಲಿರಿಸಿ, "ತಗೊಳ್ಳಿ," ಎಂದು ಬಂದಿದ್ದವರಿಗೆ ಹೇಳಿ, ಒಂದು ಲೋಟವನ್ನು ನರ್ಮದಾ ಮಹಡಿಯ ಮೇಲಕ್ಕೆ ಒಯ್ದಳು—ಗಂಡನಿಗೆಂದು.

ಹಿಂತಿರುಗಿದಾಗ, ಆಕೆ ಕೇಳಿದಳು:

"ಬಿಸ್ಕತ್ತು ಕೊಡಲಾ?"

"ಬೇಡ–ಬೇಡ," ಎಂದರು ಇಬ್ಬರೂ.

"ಡಾಕ್ಟರ ಊಟವೇ ತಡ. ಹೀಗಾಗಿ ಸಂಜೆ ತಿಂಡಿ ಮಾಡೋದೇ ಬಿಟ್ಬಿಟ್ಟಿದೀವಿ. ಮೂರುಹೊತ್ತೂ ತಿನ್ತಾ ಇದ್ದರೆ ಎಲ್ಲಿ ಗುಜ್ಜಾನೆ ಮರಿಯಾಗಿ ಬಿಡ್ತೀನೋ ಅಂತ ನನಗೂ ಭಯವೇ."

ಹಳೆಯ ಧ್ವನಿ ಕೇಳಿಸಿದಂತಾಗಿ, ಪರೀಕ್ಷಿಸುವುದಕ್ಕೋಸ್ಕರ, ವಿಶಾಲಾಕ್ಷಿ ಚಿವುಟುಮಾತು ಆಡಿದಳು:

"ಯಾಕೆ, ದಪ್ಪಗಾಗೋದು ಇಷ್ಟ ಇಲ್ವೆ ನಿಂಗೆ?"

"ಹಾಗಲ್ವೇ. ಸ್ವಲ್ಪ ದಪ್ಪಗಿರೋದು—ಗಟ್ಟಿಮುಟ್ಟಾಗಿರೋದು—ಚೆನ್ನ. ಆದರೆ, ತೀರಾ ಕೊಬ್ಬಿದರೆ, ಸಲೀಸಾಗಿ ಓಡಾಡೋಕೂ ಆಗೋಲ್ವಪ್ಪ."

ಉತ್ತರದಿಂದ ಸಮಾಧಾನಕೊಂಡು, ವಿಶಾಲಾಕ್ಷಿ ಅಂದಳು:

"ಹೌದು. ತೀರಾ ತೆಳ್ಳಗೂ ಇರಬಾರದು. ತೀರಾ ದಪ್ಪಗೂ ಇರಬಾರದು."

ಕಾಫಿ ಕುಡಿಯುತ್ತ, ಒಮ್ಮೆಲೆ ನೆನಪಾಗಿ, ನರ್ಮದಾ ನುಡಿದಳು:

"ಮುಖ್ಯ ವಿಷಯ ಹೇಳೋದಕ್ಕೇ ಮರೆತಿದ್ದೆ. ಮೈನಾವತಿ ಬರೆದಿದಾಳೆ. ಈಸಲ ಹೆಣ್ಣಂತೆ. ರೂಪಾ ಅಂತ ಹೆಸರಿಟ್ಟಿದಾಳೆ. ಕ್ಯಾಂಪ್‌ನಲ್ಲೇ ಹೆರಿಗೆಯಾಯ್ತಂತೆ. ಹೆಸರು ಚೆನ್ನಾಗಿದೆ, ಅಲ್ವಾ?"

ರೂಪಾ. ಹೆಸರು ಚೆನ್ನಾಗಿತ್ತು.

ಗಿರಿಜಾಬಾಯಿ ಮುಗುಳುನಕ್ಕರು. ವಿಶಾಲಾಕ್ಷಿ ಅಂದಳು:

"ಹೂಂ."

"ಹುಡುಗ ಹರ್ಷ—ಹುಡುಗಿ ರೂಪಾ."

"ತಾಯಿ ಮಗು ಆರೋಗ್ಯವಾಗಿದಾರಾಂತಾ?"

"ಅದರ ವಿಷಯ ಏನೂ ಬರೆದಿಲ್ಲ—ಆರೋಗ್ಯವಾಗಿರಲೇ ಬೇಕು. [ನಕ್ಕು] 'ಸದ್ಯಕ್ಕೆ ಎರಡೇ; ಇನ್ನು ಐದು ವರ್ಷ ಏನೂ ಇಲ್ಲ'—ಅಂತ ಬರೆದಿದಾಳೆ. ನೋಡಬೇಕು!"

ವಿಶಾಲಾಕ್ಷಿಗೆ ಲಜ್ಜೆ ಎನಿಸಿತು. ಆದರೂ ಅದನ್ನು ತೋರ್ಪಡಿಸದೆ ಅವಳೆಂದಳು:

"ಊರಿಗೇನಾದರೂ ಬರ್ತಾಳಂತಾ?"

['ಆಗಸ್ಟ್ ಹೊತ್ತಿಗೆ ಅವಳು ಇಲ್ಲಿರುವುದು ಸಾಧ್ಯವಾದರೆ'—]

"ಮೊದಲ್ನೇ ಹೆರಿಗೆಗೆ ಬಂದಿದ್ಲು. ಎರಡನೇದು ಅಲ್ಲೇ ಆಯ್ತು. ಇನ್ನು ಯಾಕೆ ಬರ್ತಾಳೆ, ಇಷ್ಟು ದೂರ? ಚಿಕ್ಕ ಮಕ್ಕಳನ್ನು ಕಟ್ಟಿಕೊಂಡು ಪ್ರಯಾಣ ಬೆಳೆಸೋದು ಕಷ್ಟ ನೋಡು."

ವಿಶಾಲಾಕ್ಷಿಗೆ ಆ ವಿಷಯ ತಿಳಿಯದು. ಆದರೆ ಗಿರಿಜಾಬಾಯಿ ಅನುಭವಿ. ಅದನ್ನು ಮರೆಯದೆ, ವಿಶಾಲಿಯ ಕಡೆ ಬೀರಿದ ನೋಟವನ್ನು, ಗಿರಿಜಾಬಾಯಿಯತ್ತ ನರ್ಮದಾ ಹರಿಸಿದಳು.

ಶ್ರೀಕಾಂತ ಇಳಿದು ಬಂದ. ಉಣ್ಣೆಯ ಪ್ಯಾಂಟು, ಅರ್ಧ ತೋಳಿನ ಬುಶ್‌ಶರಟು; ಸದ್ದುಮಾಡದ ಕ್ರೇಪ್‌ಸೋಲಿನ ಶೂ. ತಿದ್ದಿ ತೀಡಿದ್ದ ಕ್ರಾಪು. ಕೈಯಲ್ಲಿ, ಅಗಲ ಕಿರಿದಾದ ತೊಗಲಿನ 'ಬ್ರೀಫ್ ಕೇಸ್.'

"ಬರ್‍ತೀನಿ!" ಎಂದ, ಎಲ್ಲರನ್ನೂ ಉದ್ದೇಶಿಸಿ.

ವಿಶಾಲಾಕ್ಷಿಯೂ ಗಿರಿಜಾಬಾಯಿಯೂ ನಮಸ್ಕರಿಸುತ್ತಿದ್ದಂತೆ, ನರ್ಮದೆಯ ಕಡೆ ನೋಡಿ ಕೇಳಿದ:

"ಎಲ್ಲಿ ಮುರಲಿ?"

[ಹೊರಡುವುದಕ್ಕೆ ಮುನ್ನ ಮುದ್ದಿಸಿ ಹೋಗುವ ಅಭ್ಯಾಸ.]

"ಹೊರಗಿದಾನೆ," ಎಂದಳು ನರ್ಮದಾ.

[ಮೊದಲು, ಹೊರಡುವುದಕ್ಕೆ ಮುನ್ನ ಮುದ್ದಿಸುತ್ತಿದುದು ತನ್ನನ್ನು. ಈಗ ಆ ಭಾಗ್ಯ ಮುರಲಿಗೆ.]

ಶ್ರೀಕಾಂತ ಹೊರಕ್ಕೆ ಹೆಜ್ಜೆ ಇರಿಸಿ, ಅಂಗಳಕ್ಕಿಳಿದ. ಗೇಟಿನ ಬಳಿಯಿಂದ ತಂದೆ ಮತ್ತು ಮಗನ ಸಂವಾದದ ಇಂಚರ ಕೇಳಿಸಿತು.

"ಡಾಕ್ಟರು ಮೆಡಿಕಲ್ ಕಾಲೇಜಿನ ಹತ್ತಿರ ಇಳಿದು ಡಿಸ್ಪೆನ್ಸರಿಗೆ ನಡೀತಾರೆ, ಅಲ್ವೆ?" ಎಂದು ವಿಶಾಲಾಕ್ಷಿ ಕೇಳಿದಳು. ವಿಷಯ ತಿಳಿದಿದ್ದೂ ಕೇಳಿದ ಪ್ರಶ್ನೆ, ಶ್ರೀಕಾಂತನ ಬಗೆಗೇ ಏನಾದರೂ ಮಾತಾಡಬೇಕೆಂದು.

ನರ್ಮದೆಯ ಮುಖ ಅರಳಿತು.

"ನಾನಾಗಿ ಹೇಳಬೇಕೊಂತಿದ್ದೆ. ನೀನೇ ಅವಕಾಶ ಮಾಡ್ಕೊಟ್ಟೆ. ಡಾಕ್ಟರು ಈ ತಿಂಗಳ ಕೊನೇಲಿ ಸಯ್ಯಾಜಿರಾವ್ ರಸ್ತೆಗೆ ಬಂದ್ಬಿಡ್ತಾರೆ!"

"ಹೌದೆ?" ಎಂದಳು ವಿಶಾಲಾಕ್ಷಿ ಸಂತೋಷದಿಂದ.

ಆ ರಸ್ತೆಯ ಎಲ್ಲ ಕಟ್ಟಡಗಳ ಪರಿಚಯವೂ ಇದ್ದ ಗಿರಿಜಾಬಾಯಿ ಕೇಳಿದರು:

"ಯಾವ ಬಿಲ್ಡಿಂಗಿಗೆ?"

"ಯಾವುದೊಂತ ನಾನು ನೋಡಿಲ್ಲ. ಮಾರ್ಕೆಟ್ ಸಾಲಿನಲ್ಲೇ ಇದೆಯಂತೆ. ಮೊನ್ನೆ ಯಾರೋ ಒಬ್ಬರು ಡಾಕ್ಟರು ತೀರಿಕೊಂಡರಂತಲ್ಲ?"

"ಹ್ಞಾ, ಹ್ಞಾ. ಅದೇ? ತಿಳೀತು. [ವಿಶಾಲಾಕ್ಷಿಯ ಕಡೆ ತಿರುಗಿ] ಚಾಮುಂಡೇಶ್ವರಿ ಟಾಕೀಸ್ ಬಸ್‌ಸ್ಟಾಪ್ ಇದ್ಯೆ ನೋಡಿ, ಅದರ ಎದುರಿಗೆ, ಈಚೆಗೆ—"

ವಿಶಾಲಾಕ್ಷಿ ಅಂದಳು:

"ಗೊತ್ತಾಯ್ತು. ಬಹಳ ಒಳ್ಳೇ ಜಾಗ."

"ಈಗ ಪರಿಚಯವಾಗಿರೋ ಈದ್ದಾದ ಜನರಿಗೂ ದೂರವಾಗೋದಿಲ್ಲ; ಎಲ್ಲರಿಗೂ ಅನುಕೂಲ-ಅಂತ ಡಾಕ್ಟರು ಹೇಳ್ತಿದ್ರು."

"ಇಲ್ಲಿಂದ ಹೋಗೋದಕ್ಕೆ ಬರೋದಕ್ಕೆ ಬಸ್ ಸೌಕರ್ಯವೂ ಇದೆ."

[ನರ್ಮದೆಯ ನಾಲಗೆಯ ತುದಿಯವರೆಗೂ ಬಂತು, ತನ್ನ ಗಂಡ ಆದಷ್ಟು ಬೇಗನೆ ಕಾರುಕೊಳ್ಳಲು ತೀರ್ಮಾನಿಸಿರುವನೆಂಬ ವಿಷಯ. ಪ್ರಯಾಸಪಟ್ಟು ಆ ಮಾತನ್ನು ತಡೆ ಹಿಡಿದಳು. ತಾನು ಆಡುವುದು ಅವರಿಬ್ಬರಿಗೂ ಡಾಂಭಿಕ ತನವಾಗಿ ತೋರಬಹುದೆಂದು ಅವಳು ಅಂಜಿದಳು.]

"ಹೌದು" ಎಂಬ ಉತ್ತರ ಸ್ವಲ್ಪ ತಡವಾಗಿ ಬಂತು ಅವಳಿಂದ.

....ಬಳಿಕ ಲೋಕಾಭಿರಾಮ ಮಾತುಕತೆಯಾಯಿತು. ಚಲಚ್ಚಿತ್ರಗಳ ಪ್ರಸ್ತಾಪವೂ ಬಂತು-ಒಂದೇ ಕ್ಷಣದ ಮಟ್ಟಿಗೆ. ನರ್ಮದಾ ಅಂದಳು:

"ಫಿಲ್ಮ್‌ಫೇರ್ ತರಿಸೋದು ಬಿಟ್ಬಿಟ್ಟಿದೀನಮ್ಮ. ಬೇಜಾರು. ಸಿನಿಮಾ ನೋಡೋಕೂ ಮನಸ್ಸಾಗೋದಿಲ್ಲ. ಬ ಹ ಳ ಚೆನ್ನಾಗಿದೇಂತ ಗೊತ್ತಾದರೆ, ಯಾವತ್ತಾದರೊಮ್ಮೆ ಭಾನುವಾರ ಸಾಯಂಕಾಲ ಹೋಗ್ತೇವೆ."

ಅದಕ್ಕೆ ಗಿರಿಜಾಯಿಯೆಂದರು:

"ಮುರಲಿಯೇ ಸಾಕಷ್ಟು ಮನೋರಂಜನೆ ಒದಗಿಸ್ತಾನೆ, ಅಲ್ವಾ?"

ಅದು ನಿಜವೆಂದು ಒಪ್ಪಿಕೊಳ್ಳುವ ನಗೆನಕ್ಕಳು ನರ್ಮದಾ.

....ಸಂಜೆಯಾಗಿತ್ತು. ಬಿಸಿಲು ತಗ್ಗಿ, ತಣ್ಣನೆ ಗಾಳಿ ಸುಳಿಯಲು ಆರಂಭ ವಾಗಿತ್ತು ಆಗಲೇ.

"ಇನ್ನು ಹೋಗೋಣ," ಎಂದು, ಗಿರಿಜಾಬಾಯಿಯ ಕಡೆ ನೋಡಿ ವಿಶಾ ಲಾಕ್ಷಿ ಅಂದಳು....

....'ಹೂವೀಳ್ಯ'ದ ಅರಿಶಿನ ಕುಂಕುಮಕ್ಕೆ ಬಂದವರನ್ನು ಬೀಳ್ಕೊಡ ಲೆಂದು, ಮುರಲಿಯನ್ನೆತ್ತಿಕೊಂಡು ಬಸ್‌ಸ್ಟಾಪಿನವರೆಗೂ ನರ್ಮದೆ ಬಂದಳು.

* * * * *

ಮಾರ್ಕೆಟಿನ ಬಸ್ ನಿಲ್ದಾಣದಲ್ಲಿ ಗಿರಿಜಾಬಾಯಿ ಕೇಳಿದರು;

"ಗಂಗಾಧರ ಹೇಗೆ ಓದ್ತಿದಾರೆ?"

"ಚೆನ್ನಾಗಿ ಓದ್ತಿದಾರಂತೆ."

"ನೀವು ?"

"ನಾನೂ."

ಒಂದುಕ್ಷಣ ತಡೆದು ಗಿರಿಜಾಬಾಯಿ ಅಂದರು:

"ನರ್ಮದೆಗೆ ಗೊತ್ತಿಲ್ಲ, ಅಲ್ವಾ?"

"ಇಲ್ಲ."

"ಗೊತ್ತಾದಾಗ ಅವಳಿಗೆ ಆಶ್ಚರ್ಯವಾಗಬಹುದು, ಸಂತೋಷವಾಗಬಹುದು."

ವಿಶಾಲಾಕ್ಷಿ ನಾಚುತ್ತ ಅಂದಳು:

"ಹೌದು."

೬

ಬಿಡಿಕಾಸಿನ ಖರ್ಚೂ ಇಲ್ಲದೆ, ದೂರದ ಜಪಾನಿನಿಂದ ಭಾರತಕ್ಕೆ ಪ್ರವಾಸ—ಹತ್ತಾರು ದೇಶಗಳನ್ನು ಸುತ್ತಿ, ಈ ಸವಾರಿ, ಮಾನವಪ್ರಾಣಿಗಳ ಶರೀರದಲ್ಲಿ ಅವಿತು ಕುಳಿತು. ಒಂದು ಹಡಗು ಬಂತು, ಸಿಂಗಪುರದಿಂದ ಮದರಾಸಿಗೆ. ಅಲ್ಲಿಂದ ಆ ಪ್ರಯಾಣಿಕ ಹೊರಟುದು ವಿಮಾನಮಾರ್ಗವಾಗಿ—ಹೌದು, ವಿಮಾನ ಮಾರ್ಗವಾಗಿ—ಬೆಂಗಳೂರಿಗೆ. ಆ ಊರಿನಿಂದ, ರೈಲುಗಾಡಿ—ಮೋಟಾರುಗಳಲ್ಲಿ ಕುಳಿತು ಎತ್ತಿನಗಾಡಿ ಹತ್ತಿ, ಕಾಲ್ನಡಿಗೆಯಾಗಿ ಕೂಡಾ, ಬೇರೆ ಹತ್ತೂರುಗಳಿಗೆ.

ಎಷ್ಟೊಂದು ಹುಡುಕಿದರು!

ಕಣ್ಣಿಗೆ ಬಿದ್ದರೆ ತಾನೆ?

ಸೋತು ಸುಣ್ಣವಾಗಿ ಮಂತ್ರಿಗಳು ಮಲಗಿದರು, ಜವಾನರೂ ಮಲಗಿದರು. [ರಾಜರು, ಪ್ರಜೆಗಳು—ಎಲ್ಲರೂ.]

ಹೆಸರು—ಫ್ಲೂ.

ಅಷ್ಟು ಸಾವಿರ ಜನ ಆ ದೇಶದಲ್ಲಿ ಹಾಸಿಗೆ ಹಿಡಿದರು. ಅದೆಷ್ಟೋ ಜನ ಸತ್ತರು. ಅಂಕೆ ಸಂಖ್ಯೆಗಳು ಹೇಳುವ ಕಥೆ ಅದೇನು ಸಾಧಾರಣವೆ?

ಉಸಿರಾಡುವ ಗಾಳಿಯಲ್ಲಿ, ಕುಡಿಯುವ ನೀರಿನಲ್ಲಿ, ಕೊಳ್ಳುವ ತರಕಾರಿಯಲ್ಲಿ—ಎಲ್ಲೆಲ್ಲೂ ಅರೋಗಾಣು. ಅದರ ನಿವಾರಣೆಗೆ ಔಷಧವಿಲ್ಲ. ನಿರೋಧ ಕ್ರಮಗಳೊ?—ಬಗೆಬಗೆಯವು. ಪಂಚಸೂತ್ರಗಳು, ದಶ ಸೂತ್ರಗಳು: ಮೂಗು ಮುಚ್ಚಿಕೊಳ್ಳಿ, ಬಾಯಿ ಮುಚ್ಚಿಕೊಳ್ಳಿ. [ಉಣ್ಣಬೇಡಿ, ತಿನ್ನಬೇಡಿ, ಕುಡಿಯಬೇಡಿ.] ಪಕ್ಕದಲ್ಲಿ ಕೆಮ್ಮಿದ ಮನುಷ್ಯನನ್ನು ಪ್ರತಿಯೊಬ್ಬನೂ ಕಡುವೈರಿಯಂತೆ ಕಂಡನು. ಫ್ಲೂ ಮಾರಣಾಸ್ತ್ರದಿಂದ. ಅಹಿಂಸಾತ್ಮಕವಾಗಿ ಕೊಲ್ಲಬಯಸುವ ಆಜನ್ಮ ಶತ್ರು—ಅಂತಹ ಪ್ರತಿಯೊಬ್ಬನೂ.

ಕೆಲವರೆಂದರು :

ಅಮೆರಿಕದವರೇ ಈ ರೋಗಾಣುಗಳನ್ನು ಏಷ್ಯಾಖಂಡದಲ್ಲಿ ಹರಡಿರಬೇಕು. ಇಲ್ಲಿ ಜನ ಹುಳಗಳ ಹಾಗೆ ಸತ್ತಷ್ಟೂ ಅವರಿಗೆ ಸಂತೋಷ. ಜನಸಂಖ್ಯೆ ಹೆಚ್ಚಾದರೆ ಮಾತ್ರ ಕಮ್ಯೂನಿಸಂ ಬರೋದು!"

ಬೇರೆ ಕೆಲವರೆಂದರು :

"ರಷ್ಯವೇ ಮಾಡಿದ್ದರೂ ಇರಬಹುದು. ಜನ ಬೇಸತ್ತು ಸ ರ ಕಾ ರ ದ ವಿರುದ್ಧ ದಂಗೆ ಏಳಲಿ ಅಂತ. ಹಾಗೆ ಮಾಡಿದರೆ, ಕಮ್ಯೂನಿಸಮಿನ ವಿಜಯ ಸುಲಭವಾಗುತ್ತಲ್ಲ!"

ಮತ್ತೂ ಕೆಲವರು–ವಿಚಾರಿಗಳು–ಹಣೆ ನೆರಿಗೆ ಕಟ್ಟಿ ಯೋಚಿಸಿದರು :

'ಅಣುಬಾಂಬು, ಜಲಜನಕ ಬಾಂಬುಗಳನ್ನು ತಯಾರಿಸಬಲ್ಲ ಮಾನವ, ಇಂಥದೊಂದು ಅಂಟುಜಾಡ್ಯಕ್ಕೆ ಔಷಧ ಕಂಡುಹಿಡಿಯಲು ಅಸಮರ್ಥನೇನು?'

ಒಬ್ಬರಿಂದ ಇನ್ನೊಬ್ಬರಿಗೆ ಸೋಂಕಿತು ಗಾಬರಿ. ಅದರ ಜತೆಯಲ್ಲೇ ಭಯ–ಪ್ರಾಣಭಯ.

ಜನ ಡಾಕ್ಟರುಗಳಲ್ಲಿಗೆ ಓಡಿದರು–ವೈದ್ಯರಲ್ಲಿಗೆ, ಹಕೀಮರಲ್ಲಿಗೆ.

ಇಂಜೆಕ್ಷನಿಂದ ಎಲ್ಲವೂ ಗುಣವಾಗುವುದೆಂಬುದು ಅವರ ನಂಬಿಕೆ. ಎಷ್ಟೋ ಗಿರಾಕಿಗಳು ತಮ್ಮ ಹಳೆಯ ಬಾಕಿ ಸಲ್ಲಿಸಿದರು. ನಗದು ಹಣದೊಡನೆಯೇ ಬಂದರು ಔಷಧಿಗೆ. ಕೋಟು ತೊಟ್ಟು, ಮಫ್ಲರು ಸುತ್ತಿ, ಡಾಕ್ಟರರೆದುರು ಸಾಲುಗಟ್ಟಿದರು.

ಡಾಕ್ಟರುಗಳೆಷ್ಟೋ ಜನ ಹಂಡೆಹಂಡೆಗಳಲ್ಲೇ ಔಷಧಿ ತಯಾರಿಸಿದರು–ಫ್ಲೂ ಮಿಕ್ಸ್ಚರ್. ['ಕೈಗುಣ. ಅಲ್ಲಿಗೇ ಹೋಗಬೇಕು ನಾವು.'] ತುಂಬಿದ ಗೋಣಿಗಳಿಗೆ ದಬ್ಬಣ ಚುಚ್ಚುವ ಹಾಗೆ, ಮನುಷ್ಯದೇಹಗಳಿಗೆ ಸೂಜಿ. ಸರ್ವರೋಗ ನಿವಾರಿಣಿಯಾದ ಪೆನ್ಸಿಲಿನ್. [ಫ್ಲೂಗಂತೂ ಸಿದ್ಧೌಷಧ.] ಚುಚ್ಚಿ ಚುಚ್ಚಿ ಅದೆಷ್ಟೋ ಸೂಜಿಗಳು ಮೊಂಡಾದುವು, ಮುರಿದುವು. ಚುಚ್ಚಿ ಚುಚ್ಚಿ ಡಾಕ್ಟರರ ಕೈಸೋತಿತು. ಹಣ ಎಣಿಸುವ ವ್ಯವಧಾನವೂ ಇಲ್ಲ ಯಾರಿಗೂ. ನೋಟುಗಳೂ ನಾಣ್ಯಗಳೂ ಗುಡ್ಡೆಗುಡ್ಡೆ. ಈ ಡ್ರಾಯರು ತುಂಬ, ಈ ಡ್ರಾಯರು ತುಂಬ. ರೋಗಿಗಳ ಸೇವೆ ಮಾಡಿಮಾಡಿ ಎಷ್ಟೋ ಜನ ಡಾಕ್ಟರುಗಳು ಬಸವಳಿದರು. ತಾವೂ ಮಲಗಿದರು ಖೊಖ್ ಖೊಖ್ ಎಂದು ಕೆಮ್ಮುತ್ತ. ಜನರಿಗಿನ್ನು

ಏನು ಗತಿ ?–ಎಂದು, ಸರಕಾರಿ ಡಾಕ್ಟರೆಷ್ಟೋ ಮಂದಿ ರಜಾ ಪಡೆದು ಮನೆಗಳಲ್ಲಿ ದುಡಿಮೆ ಆರಂಭಿಸಿದರು–'ಪ್ರೈವೆಟ್' ಪ್ರಾಕ್ಟೀಸು.

ಎಂತಹ ಹಾಹಾಕಾರ ನಗರ ನಗರಗಳಲ್ಲಿ! ಹೋಟೆಲುಗಳು ಖಾಲಿ. ಸಿನಿಮಾ ಮಂದಿರಗಳೂ ಅಷ್ಟೇ. ['ಸಾರ್ವಜನಿಕ ಸ್ಥಳಗಳಿಗೆ ಹೋಗಬೇಡಿ' ಎಂಬ ಮಹಾ ಸೂತ್ರವೊಂದು.] ಮಾರ್ಕೆಟಿನಲ್ಲಿ ಕಾಯಿಪಲ್ಲೆಗಳು ರಾಶಿ ಬಿದ್ದು ಬಾಡಿದುವು. ಮಾವಿನಹಣ್ಣುಗಳು ಕಿತ್ತಳೆಹಣ್ಣುಗಳು ಕೊಳೆತುವು. ಕಾರಖಾನೆಗಳಲ್ಲಿ ಕೂಲಿಕಾರರಿಲ್ಲ. ವಾಹನಗಳಲ್ಲಿ ಪ್ರಯಾಣಿಕರಿಲ್ಲ. ಕೊಳ್ಳುವ ಮಾರುವ ಜನರಿಲ್ಲ ಸಂತೆಯಂಗಡಿಗಳಲ್ಲಿ.

ಇದ್ದ ವ್ಯಾಪಾರವೊಂದೇ: ಡಾಕ್ಟರರ ಶಾಪುಗಳಲ್ಲಿ–ಔಷಧದಂಗಡಿಗಳಲ್ಲಿ.

ಎಲ್ಕೋಸಿನ್–ಸಾರಿಡಾನ್–ಆಸ್ಪ್ರೋ....

ಎಲ್ಕೋಸಿನ್‌ಗೇ ಹೆಚ್ಚು ಬೇಡಿಕೆ.

ಒಟ್ಟಿನಲ್ಲಿ ಎಲ್ಲೆಲ್ಲೂ ಅವ್ಯವಸ್ಥೆ....

ಊರು ಹೊಲಸೆದ್ದುಹೋಯಿತು....

* * * * *

ರಜಾಕಾಲವೆಂದು ಸಾರ್ವಜನಿಕ ವಿದ್ಯಾರ್ಥಿನಿಲಯ ಆಗ ಬಹಳಮಟ್ಟಿಗೆ ಬರಿದಾಗಿತ್ತು. ಇದ್ದವರು ನಾಲ್ಕೇಜನ–ಸ್ನಾತಕೋತ್ತರ ವಿದ್ಯಾರ್ಥಿಗಳು.

ಅವರಲ್ಲೊಬ್ಬ ಗಂಗಾಧರ. ಅವನಿಗೆ ಫ್ಲೂ ಸೋಂಕಿರಲಿಲ್ಲ. ತಾನು ಗಟ್ಟಿಮುಟ್ಟಾದ ಮನುಷ್ಯ, ತನಗೇನೂ ಆಗದು, ಎಂಬ ಧೈರ್ಯ–ಮೊಂಡು ಧೈರ್ಯ.

ಆದರೆ, ಬೇರೊಂದು ಜೀವವನ್ನು ನೆನೆದು, ಅದಕ್ಕೆ ಆತ್ಮೀಯರಾದವರ–ಆ ತಾಯಿ ತಮ್ಮಂದಿರ–ನೆನಪಾಗಿ, ಆತ ಸಂಕಟಪಡುತ್ತಿದ್ದ.

ಸಂಕಟಕ್ಕೆ ಕಾರಣ–ಈ ಕೆಲವು ದಿನಗಳಿಂದ ವಿಶಾಲಾಕ್ಷಿಯ ಭೇಟಿ ಆಗದೇ ಇದ್ದುದು. ಅವಳ ಮನೆಗೆ ಆಗಾಗ್ಗೆ ಹೋಗಬಾರದೆಂದು ತನ್ನ ಮೇಲೆಯೇ ಆತ ನಿಯಂತ್ರಣ ಹೇರಿದ್ದ. ಹೀಗಾಗಿ, ಅಭ್ಯಾಸದ ನಡುವೆ ಆಕೆ ವಿಶ್ವವಿದ್ಯಾನಿಲಯದ ಪುಸ್ತಕ ಭಂಡಾರಕ್ಕೆ ಬರುತ್ತಿದ್ದಳು. ಆದರೆ ಈ ಕೆಲವು ದಿನಗಳಿಂದ....

ಯಾರಿಗೆ ಕಾಹಿಲೆಯೊ? ಏನು ತೊಂದರೆಯೊ? ಕಿರಿಯ ತಮ್ಮನೂ ಸುದ್ದಿ ತರಲಿಲ್ಲವೆಂದ ಮೇಲೆ? ಒಂದು ಕಾಗದವಾದರೂ—

ಒಳಗಿನ ಯಾತನೆ ಹೆಚ್ಚಿ, ಇನ್ನು ತಡೆಯಲಾಗದೆ, ಗಂಗಾಧರ ಆ ಸಂಜೆ ವಿಶಾಲಾಕ್ಷಿಯ ಮನೆಯ ಕಡೆಗೆ ಬೇಗಬೇಗನೆ ಹೆಜ್ಜೆ ಇರಿಸಿದ.

ಕಿಟಕಿಗಳನ್ನು ಮುಚ್ಚಿತ್ತು. ಬಾಗಿಲು ತಟ್ಟಿದರೆ ಉತ್ತರವಿಲ್ಲ.

ಕೆಮ್ಮಿದ ಧ್ವನಿ ಕೇಳಿಸಿತು ಒಳಗಿನಿಂದ.

ಗಂಗಾಧರ ಪೂರ್ತಿ ಗಾಬರಿಗೊಂಡು, ಅಸಹನೆಯಿಂದ, ಮತ್ತೆ ತಟ್ಟಿದ.

ಬಹಳ ದೀರ್ಘಕಾಲವೆಂದು ಕಾಣಿಸಿದ ಎರಡು ನಿಮಿಷಗಳ ಅನಂತರ, ಕದ ತೆರೆದುಕೊಂಡಿತು, "ಯಾರು?" ಎಂಬ ಪ್ರಶ್ನೆಯೊಡನೆ.

ನಾಗಮ್ಮ ಹೊರಕ್ಕೆ ತಲೆ ಹಾಕಿದರು. ಗಂಗಾಧರನ ಗುರುತು ಹಿಡಿಯುವುದು ತಡವಾಗಲಿಲ್ಲ. ಕಾತರ ತುಂಬಿದ, ಕಂಪಿಸುವ, ಧ್ವನಿಯಲ್ಲಿ ಅವರೆಂದರು:

"ಬನ್ನೀಪ್ಪಾ."

ಗಂಗಾಧರ ಒಳ ಬಂದ. ದೃಷ್ಟಿ ಹುಚ್ಚುಹುಚ್ಚಾಗಿ, ಆ ಬಾಗಿಲ ಬಳಿಗೆ, ಈ ಬಾಗಿಲ ಬಳಿಗೆ, ಅಲೆಯಿತು.

"ಯಾರೂ ಇಲ್ವೆ ಮನೇಲಿ?"

ನಾಗಮ್ಮ ಅಳತೊಡಗಿದರು:

"ಎಲ್ರೂ ಇದಾರೆ. ಜ್ವರವಪ್ಪ, ಎಲ್ರೂ ಮಲಕೊಂಡಿದಾರೆ...."

"ಹಾ! ಹೌದೆ? ಔಷಧಿ ತಂದಿರಾ?"

"ಇನ್ನೂ ಇಲ್ಲ. ಯಾರಾದರೂ ಡಾಕ್ಟರನ್ನು ಕರಕೊಂಡು ಬನ್ನೀಂತ ಪಕ್ಕದ ಮನೆಯವರಿಗೆ ಹೇಳಿದೀನಿ. ಡಾಕ್ಟರುಗಳು ಈ ಹೊತ್ತಿನಲ್ಲಿ ಬರ್ತ್ತಾರೋ ಇಲ್ವೋ—ಅಂದ್ಕೊಂಡೇ ಅವರು ಹೋದರು."

"ಎಷ್ಟು ದಿವಸವಾಯ್ತು? ಯಾರು, ಯಾರು, ಮಲಗಿದಾರೆ?"

[ವಿಶಾಲಾಕ್ಷಿಯ ಬಗೆಗೆ ಪ್ರತ್ಯೇಕವಾಗಿ ಒಂದು ಮಾತು ಆಡಬಾರದೆ ಅವರು?]

"ಚಂದ್ರ ಮೈಕೈ ನೋವೂಂತ ನಿನ್ನೆ ಬೆಳಗ್ಗೆ ಮಲಕೊಂಡ. ಏನೋ ನೋಡೋಣ ಅನ್ನೋದರೊಳಗೆ ಜಯರಾಮುವೂ ಮಲಕೊಂಡ. ಇಬ್ಬರಿಗೂ ಮೈ ಬಿಸಿಯಾಯ್ತು. ರಾತ್ರೆಯಾಯ್ತಲ್ಲ, ನಾಳೆ ಬೆಳಗ್ಗೆ ಔಷಧಿ ತರ್ತೀನಿ,—ಅಂತ ವಿಶಾಲಿ ನಿನ್ನೆ ಅಂದ್ಲು, ಇವತ್ತು ಬೆಳಗಿನಿಂದ ಅವಳೂ ಎದ್ದಿಲ್ಲ."

"ಛೆ! ಛೆ! ನನಗಾದರೂ ಹೇಳಿ ಕಳಿಸಿದ್ದರೆ—"

[ಅರ್ಥವಿಲ್ಲದ ಮಾತು.]

"ಯಾರಪ್ಪಾ ಇದಾರೆ ಹೇಳಿಕಳಿಸೋಕೆ ?....ವಯಸ್ಸಾದ ನನಗೆ ತಗಲೋ ಬದಲು ಮಕ್ಕಳನ್ನು ಕಾಡ್ಬೇಕೇ ಈ ಜ್ವರ ?"

ಜ್ವರದ ಅಮಲಿನಲ್ಲಿದ್ದ ವಿಶಾಲಾಕ್ಷಿಗೆ, ಹೊರಗಿನ ಸಂಭಾಷಣೆ ಅಸ್ಪಷ್ಟವಾಗಿ ಕೇಳಿಸಿತು. ಡಾಕ್ಟರು ಬಂದರೇನೋ—ಎಂದುಕೊಂಡಳು. ನರ್ಮದೆಯ ಗಂಡನಿಗೆ ಹೇಳಿಕಳಿಸಬೇಕು, ಎನಿಸಿತ್ತು. ಅಷ್ಟು ದೂರದಿಂದ ಅವರು ಬರಬೇಕಲ್ಲ—ಎಂಬ ಅಸಮಾಧಾನ. ಹತ್ತಿರದಿಂದಲೇ ಯಾರನ್ನಾದರೂ ಕರೆತರುವೆನೆಂದರಂತೆ ಪಕ್ಕದ ಮನೆಯವರು. ಬಂದರೇನೋ ?

"ಯಾರಮ್ಮ ಅದು ?"

ಮುಖಪರಿಚಯವಿದ್ದ ನಾಗಮ್ಮನಿಗೆ ಗಂಗಾಧರನ ಹೆಸರು ಒಮ್ಮೆಲೆ ಹೊಳೆಯಲಿಲ್ಲ. ಅವರು ತೊದಲಿದರು :

"ಆ ನಿಮ್ಮ—ಇವರು—ಕಣೇ."

ಅಂತಹ ಪರಿಸ್ಥಿತಿಯಲ್ಲೂ ನಗು ಬರುವಂತಾಯಿತು ಗಂಗಾಧರನಿಗೆ. ಆತ ಒಳಕ್ಕೆ ಕೇಳಿಸುವಂತೆ, ಗಟ್ಟಿಯಾಗಿ ಅಂದ :

"ನಾನು ಕಣ್ರೀ. ಗಂಗಾಧರ."

ಆ ಧ್ವನಿ ಕೇಳಿ ವಿಶಾಲಾಕ್ಷಿಯ ಹೃದಯ ಚಡಪಡಿಸಿತು. ಆತ ಒಳ ಬರಬಾರದೆ,? ತನ್ನ ಬಳಿ ಬರಬಾರದೆ? ಜ್ವರವೆಷ್ಟಿದೆಯೆಂದು ಮುಟ್ಟಿನೋಡ ಬಾರದೆ? ಎಂದು ಹಾತೊರೆಯಿತು. ಉತ್ಕಟ ಭಾವನೆಗಳಿಂದ ಉದ್ವಿಗ್ನಗೊಂಡ ವಿಶಾಲಾಕ್ಷಿ, ಕಣ್ಣುಗಳನ್ನು ಮುಚ್ಚಿ ಮಲಗಿದಲ್ಲಿಯೇ ಇದ್ದಳು.

ದಿಗಿಲು ಹುಟ್ಟಿಸುವಂತಿತ್ತು ಮೌನ.

ಗಂಗಾಧರ ಆ ಕೊಠಡಿಯತ್ತ ನಡೆದ. ಬಾಗಿಲ ಬಳಿ ನಿಂತ.

ಮೂವರೂ ಮಲಗಿದ್ದರು, ಅಲ್ಲೇ.

['ಅಯ್ಯೋ ! ಏನು ಮಾಡಲಿ ನಾನೀಗ ? ಏನು ಮಾಡಲಿ ?']

ಗಂಗಾಧರ ಪುನಃ ಅಂದ :

"ನಾನು ಕಣ್ರೀ."

[ಅವಳಿಗೆ ಗೊತ್ತಿರಲಿಲ್ಲವೆ, ಆತ—ಎಂಬುದು ?]

ಅವನು ಕೇಳಿದ :

"ಡಾಕ್ಟರನ್ನು ಕರಕೊಂಡು ಬರಲೇನು?"

"ಹೂಂ," ಎಂದಳು ವಿಶಾಲಾಕ್ಷಿ, ಮೆಲ್ಲನೆ.

ಕರೆತರುವುದು ಯಾರನ್ನು? ಎಂದು ಆತ ಯೋಚಿಸುತ್ತಿದ್ದಂತೆ, ಗಡಬಡಿಸುವವಳಂತೆ ತಡೆತಡೆದು, ವಿಶಾಲಾಕ್ಷಿ ಅಂದಳು:

"ಡಾಕ್ಟರ್ ಶ್ರೀಕಾಂತ–ಆವತ್ತು ಹೇಳಿದ್ದೆ ನೋಡಿ–ಚಾಮುಂಡೇಶ್ವರಿ ಟಾಕೀಸಿನ ಹತ್ತಿರ....ನರ್ಮದೆ ಗಂಡ....ಅವರಿಗೆ ಹೇಳಿ. ಖಂಡಿತ ಬರ್‍ತಾರೆ.... ನಾನು ಹೇಳಿದೇಂತ—"

ವಿಶಾಲಾಕ್ಷಿಯ ಮಾತನ್ನು ಅಲ್ಲಿಗೇ ತಡೆದು ಗಂಗಾಧರನೆಂದ:

"ಕರಕೊಂಡು ಬರ್‍ತೀನಿ."

ಆಗಲೇ ಕತ್ತಲಾಗಿತ್ತು. ನಾಗಮ್ಮ ನಡುಮನೆಯ ಸ್ವಿಚ್ ಹಾಕಿ, ದೀಪಕ್ಕೆ ನಮಿಸಿದರು.

ಹೊರಟುನಿಂತ ಗಂಗಾಧರ ನಾಗಮ್ಮನವರಿಗೂ ಅಂದ:

"ನೀವೇನೂ ಗಾಬರಿಯಾಗ್ಬೇಡಿ. ['ಗಾಬರಿಯಾಗುವುದೆಲ್ಲಾ ನನ್ನ ಪಾಲಿಗೇ ಇರಲಿ'–ಎಂಬಂತೆ.] ಡಾಕ್ಟರನ್ನು ಕರಕೊಂಡ್ಬರ್‍ತೀನಿ. ಜ್ವರ. ಏನೂ ಹೆದರಬೇಕಾದ್ದಿಲ್ಲ."

ಸ್ವತಃ ಡಾಕ್ಟರೇ ಆಶ್ವಾಸನೆ ಕೊಟ್ಟಷ್ಟು ಸಮಾಧಾನವೆನಿಸಿತು ನಾಗಮ್ಮನಿಗೆ.

ಗಂಗಾಧರ ಹೋದ ಬಳಿಕ ವಿಶಾಲಾಕ್ಷಿ ತಾಯಿಯನ್ನು ಕರೆದು ಅಂದಳು:

"ಇನ್ನು ಭಯವೇನೂ ಇಲ್ಲವಮ್ಮ."

[ಅವರು ಬಂದರಲ್ಲ? ಇನ್ನು ಯಾತರ ಭಯ?]

"ಕಷ್ಟಕಾಲದಲ್ಲಿ ಆ ಪರಮಾತ್ಮನೇ ಕಳಿಸಿಕೊಟ್ಟ. ಯಾವುದೋ ಪುಣ್ಯ ವಿಶೇಷದಿಂದ ಇವರ ಪರಿಚಯವಾಯ್ತು."

—ಹಾಗೆ ಹೇಳಿ ನಾಗಮ್ಮ, ಮತ್ತೊಮ್ಮೆ ಕಣ್ಣೊರೆಸಿಕೊಂಡರು.

ಮಗಳು ಕೇಳಿದಳು:

"ನೀನು ಊಟ ಮಾಡಿದೀಯಾ?"

"ಊಟವಂತೆ. ನಮಗೇನು ಸೇರುತ್ತೆ ಮಣ್ಣು? ನೀವೆಲ್ಲಾ ಏಳೋವರೆಗೆ ನನಗೊಂದೂ ಬೇಡ."

"ಹಾಗಲ್ಲವಮ್ಮ. ನಮ್ಮ ಜತೆ ನೀನೂ ಮಲಗಿಬಿಡೋದಕ್ಕಾಗುತ್ತಾ ? ಏನಾದರೂ ಮಾಡಿ ತಿನ್ನು."

"ಸುಮ್ನೆ ಮಲಕ್ಕೋ ಮಗೂ."

*　　*　　*　　*　　*

ಬೀದಿಯೆಲ್ಲಾ ತನ್ನದೇ, ನಡೆಯುತ್ತಿರುವವನು ತಾನೊಬ್ಬನೇ, ಎನ್ನುವಂತೆ ಗಂಗಾಧರ ಧಾವಿಸಿದ. [ಹನುಮಂತನ ಸಾಹಸ ತನ್ನಿಂದ ಸಾಧ್ಯವಿದ್ದಿದ್ದರೆ, ಹಾರಿಹೋಗಿ, ಡಾ|| ಶ್ರೀಕಾಂತನ ಆಸ್ಪತ್ರೆಯನ್ನೇ ಎತ್ತಿ ತಂದು, ವಿಶಾಲಾಕ್ಷಿಯ ಮನೆಯ ಮುಂದಿಡುತ್ತಿದ್ದ.]

ನಡುವೆ ಒಮ್ಮೆ, ಹಣವಿದೆಯೇ ಏನೆಂದು ಜೇಬು ಮುಟ್ಟಿ ನೋಡಿದ.

ಖಾಲಿಯಾಗಿ ಬರುತ್ತಿದ್ದ ಒಂದು ಟಾಂಗಾವನ್ನು ಹತ್ತಿ, ಹೇಳಿದ:

"ಮಾರ್ಕೆಟಿಗೆ ಹೊಡೆ. ಜಲ್ದಿ !"

ಕುದುರೆಯ ಬೆನ್ನ ಮೇಲ್ಗಡೆಯಿಂದ ಚಬುಕಿನ ಸದ್ದು ಕೇಳಿದ ಬಳಿಕ, ಗಂಗಾಧರನೆಂದ :

"ಬಾಡಿಗೆ ಎಷ್ಟಪ್ಪಾ ?"

"ಎಷ್ಟನಾರಾ ಕೊಡಿ ಬುದ್ದಿ."

"ದೀಪ ಹಚ್ಕೋಳ್ಳೋದಿಲ್ವೇನಯ್ಯ ?"

[ಒಮ್ಮೆ ರಾತ್ರೆಹೊತ್ತು ಟಾಂಗಾದಲ್ಲಿ ದೀಪ ಇರಲಿಲ್ಲವೆಂದು, ಪೋಲೀಸಿನವನು ಅದನ್ನು ನಿಲ್ಲಿಸಿದ್ದ. ಗಂಗಾಧರ ರೈಲುನಿಲ್ದಾಣ ಸೇರುವ ಹೊತ್ತಿಗೆ ಗಾಡಿ ಹೊರಟುಹೋಗಿತ್ತು. ಅಂದಿನಿಂದ ಆ ಭಯ.]

"ಪರವಾಗಿಲ್ಲ. ಬಿಡಿ ಬುದ್ಧಿ. ಇನ್ನೂ ಟೇಮೈತೆ."

"ಹಾ ದೀ ಲಿ ಪೋಲೀಸ್ನೋನು ನಿಲ್ಸಿ ಲೇಟಾಯ್ತೂಂದ್ರೆ–ನೋಡ್ಕೊ ಆಮೇಲೆ !"

[ಮಾರ್ಕೆಟಿನ ಬಳಿ ಬಾಡಿಗೆ ಕೊಡಲು ಚಿಲ್ಲರೆ ದುಡ್ಡಿರಲಿಲ್ಲ ಗಂಗಾಧರನ ಬಳಿ. ಸಾಧಾರಣವಾಗಿ ಟಾಂಗಾದವರ ಕೈಯಲಂತೂ ಚಿಲ್ಲರೆ ಇರುವುದೆಂದೇ ಇಲ್ಲ!]

"ಎಷ್ಟು ಕೊಡ್ಲಿ ?"

"ಕೊಡಿ ಬುದ್ದಿ."

ಎಂಟಾಣೆ ಕೊಡಬೇಕಾಗಿದ್ದ ಕಡೆ ಒಂದು ರೂಪಾಯಿಯ ನೋಟು ಕೊಟ್ಟು, ಡಾ|| ಶ್ರೀಕಾಂತನ ಚಿಕಿತ್ಸಾಲಯದ ಕಡೆಗೆ ಗಂಗಾಧರ ವೇಗವಾಗಿ ನಡೆದ. [ಈತ ಓಡುತ್ತಿರುವನೆಂದೇ ಅನಿಸಿತು, ನೋಡುವವರಿಗೆ.]

ಚಿಕಿತ್ಸಾಲಯ ತಲಪಿ, ಅಲ್ಲಿನ ದೃಶ್ಯ ಕಂಡಾಗ, ಗಂಗಾಧರನ ಅಂಗಾಂಗ ಗಳೆಲ್ಲ ಒಮ್ಮೆಲೆ ತಣ್ಣಗಾದುವು.

ಒಳಗಿನ ಪರೀಕ್ಷಿಸುವ ಕೊಠಡಿಯಿಂದ ಹಿಡಿದು, ಹೊರಗಿನ ಜಗಲಿಯವರೆಗೆ, ಜನತುಂಬಿದ್ದರು. ಕಂಬಳಿ ಹೊದೆದವರು, ಮಫ್ಲರುಗಳಿಂದ ಕಿವಿ ಕಟ್ಟಿ ಮುಚ್ಚಿ ಕೊಂಡವರು, ಜ್ವರ ಬರಲಿದ್ದವರು. ಹೆಂಗಸರು, ಮಕ್ಕಳು, ಮುದುಕರು, ಯುವ ಕರು–ಎಲ್ಲರೂ. ಅವರನ್ನೆಲ್ಲ ದಾಟಿ ಡಾಕ್ಟರ ಬಳಿಗೆ ತಾನು ಹೋಗುವುದಾದರೂ ಹೇಗೆ ?

ಅಸಹಾಯತೆಯೇ ಮೂರ್ತಿವೆತ್ತವನಂತೆ, ಗಂಗಾಧರ ಹೊರಗೇ ನಿಂತ.

ಹುಚ್ಚು ಹಿಡಿದಹಾಗಾಯಿತು ಅವನ ಪರಿಸ್ಥಿತಿ.

ಬಿಳಿಯ ಕೋಟು, ಕತ್ತಿನಲ್ಲಿ ಸ್ಟೆತಾಸ್ಕೋಪು. ಒಂದು ನಿಮಿಷದ ಮಟ್ಟಿಗೆ ಹೊರಗೆ ಆಗಮನ, ಮತ್ತೆ ನಿಷ್ಕ್ರಮಣ.

ಡಾ|| ಶ್ರೀಕಾಂತ ಬರುವುದು ಸಾಧ್ಯವಾಗದು, ಕರೆದರೂ ಅವರು ಬರ ಲಾರರು–ಎನಿಸಿತು ಗಂಗಾಧರನಿಗೆ. ಬೇರೆ ಯಾರನ್ನಾದರೂ ಕರೆದೊಯ್ಯೋಣ ವೆಂದೂ ಯೋಚಿಸಿದ. ಆದರೆ, ಆ ಸಾಲಿನಲ್ಲೂ ಎದುರುಗಡೆಯೂ ಇದ್ದ ಮೂರು ನಾಲ್ಕು ಡಿಸ್ಪೆನ್ಸರಿಗಳ ಮುಂದೆಯೂ ಜನದಟ್ಟಣೆ ಇತ್ತು. ಅಲ್ಲಿಗೇ ಕಾಣಿಸುತ್ತಿತ್ತು ಆ ದೃಶ್ಯ.

ಕೂದಲು ಕಿತ್ತು ತಲೆ ಚಚ್ಚಿಕೊಳ್ಳುವಂತಹ ಪರಿಸ್ಥಿತಿ.

ಇಲ್ಲಿ ನಿಂತರೆ ಮಾರನೆಯ ದಿನದವರೆಗೂ ನಿಲ್ಲಬೇಕಾದೀತು–ಎಂದುಕೊಂಡು, ಗಂಗಾಧರ, ಮೊಣಕೈಗಳಿಂದ ಹಾದಿ ಬಿಡಿಸುತ್ತ, ಒಳಹೋದ. ಅಲ್ಲಿ ಶ್ರೀಕಾಂತನಿದ್ದ, ಕೈಯಲ್ಲಿ ಸಿರಿಂಜ್ ಹಿಡಿದು.

[ಪ್ರಾಥಮಿಕ ಶಾಲೆಯಲ್ಲಿ ತಾನಿದ್ದಾಗ ಅಲ್ಲೊಬ್ಬರು ಸಿಡುಕ ಉಪಾಧ್ಯಾಯ ರಿದ್ದರು. ಕೈಯಲ್ಲಿ ಬೆತ್ತ ಹಿಡಿದು, ಕಾಲುಗಳನ್ನು ಅಗಲಿಸಿ ನಿಲ್ಲುತ್ತಿದ್ದರು ಅವರು. ಮನೆಗೆಲಸ ಮಾಡದ ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಅವರನ್ನು ಹಾದು ಹೋಗ ಬೇಕು–ಅಂಗೈ ಮುಂದಕ್ಕೆ ಚಾಚಿ, 'ರಪ್' ಎಂದು ಚಡಿ ಬೀಳುತ್ತಿತ್ತು.

ಉಪಾಧ್ಯಾಯರೆನ್ನುತ್ತಿದ್ದರು: Next! ಇನ್ನೊಬ್ಬ ವಿದ್ಯಾರ್ಥಿ ಬರುತ್ತಿದ್ದ. ಆ ಅಂಗೈಗೆ 'ರಪ್!'....ಈ ಡಾಕ್ಟರೇನೋ ಸಿಡುಕನಲ್ಲ. ಬೆವರಿಳಿಯುತ್ತಿದ್ದ ಮುಖ ಬಳಲಿಕೆ ಸೂಚಿಸುತ್ತಿತ್ತು, ಅಷ್ಟೆ.]

ಡಾ|| ಶ್ರೀಕಾಂತನೆಂದ:

"Next!"

ಸಹಾಯಕ ಹುಡುಗ ಮತ್ತೊಬ್ಬನನ್ನು ಕರೆದುತಂದ.

ಸಿರಿಂಜಿನ ಸೂಜಿಯ ಮೇಲೆ ಟ್ಯೂಬ್ ತೂಗಾಡಿತು.

ಎಷ್ಟು ಬೇಗನೆ!

ಹುಡುಗ ಹೇಳುತ್ತಿದ್ದ:

"ಎರಡೂವರೆ ರೂಪಾಯಿ. ಮಿಕ್ಸ್ಚರಿನದು ಎಂಟಾಣೆ."

ಶ್ರೀಕಾಂತನ ಧ್ವನಿ:

"Next!"

ಇದಕ್ಕೆ ಕೊನೆ ಇದ್ದಂತೆಯೇ ಕಾಣಲಿಲ್ಲ.

ಗಂಗಾಧರ ಧೈರ್ಯ ತಳೆದು, ನೇರವಾಗಿ ಡಾಕ್ಟರ ಬಳಿಗೇ ಹೋಗಿ ಅಂದ:

"ನಮಸ್ಕಾರ. ಅರ್ಜೆಂಟಾಗಿ ಸ್ವಲ್ಪ ಮಾತಾಡ್ಬೇಕು."

ಪ್ರತಿಯಾಗಿ ವಂದಿಸುವ ಸ್ಥಿತಿಯಲ್ಲೇ ಶ್ರೀಕಾಂತನಿರಲಿಲ್ಲ. ವಿದ್ಯಾವಂತನಾಗಿ ಕಂಡ ಅಪರಿಚಿತ ತರುಣನನ್ನು ನೋಡಿ [ಅಭ್ಯಾಸ ಬಲದಿಂದ ಗಂಗಾಧರ ತೊಟ್ಟಿದ್ದ ಉಣ್ಣೆಯ ಪ್ಯಾಂಟಿನ ಮೇಲೂ ದೃಷ್ಟಿ ಬೀರಿ,] ಶ್ರೀಕಾಂತನೆಂದ:

"ಜ್ವರದ ಕೇಸೆ?"

"ಹೌದು..."

"ಹೂಂ. ಬಂದೆ, ಒಂದ್ನಿಮಿಷ."

ಒಂದೊಂದೇ ನಿಮಿಷ. ಒಟ್ಟು ಕೂಡಿಸಿದಾಗ ಹಲವು ನಿಮಿಷಗಳು.

ವಿಶಾಲಾಕ್ಷಿಯ–ಅವಳ ತಮ್ಮಂದಿರ–ನೆನಪಾಗಿ, ಗಂಗಾಧರ ಉದ್ವಿಗ್ನಗೊಂಡ.

ಮತ್ತೊಮ್ಮೆ ಶ್ರೀಕಾಂತನ ಬಳಿ ಸಾರಿ, ಸ್ವಲ್ಪ ಸ್ವರವೇರಿಸಿ, ಆತನೆಂದ:

"ಕ್ಷಮಿಸಿ! ನಿಮ್ಮ ಹತ್ತಿರ ನಾನು ಮಾತಾಡ್ಲೇಬೇಕು. ನಿಮ್ಮ ಮಿಸೆಸ್—"

ತಗ್ಗಿಸಿದ ತಲೆಯನ್ನು ಶ್ರೀಕಾಂತ ಎತ್ತಿದ. ಕಲ್ಲಿನಲ್ಲಿ ಕೊರೆದಂತಿದ್ದ

ಮುಗುಳುನಗೆ ತುಟಿಗಳ ಮೇಲಿಂದ ಮಾಯವಾಯಿತು. ಕಣ್ಣುಗಳು ಸಜೀವ ವಾದುವು. [ನಿರ್ಲಿಪ್ತ ಡಾಕ್ಟರರೂ ಕಾತರಗೊಳ್ಳಬಲ್ಲರು ಹಾಗಾದರೆ!]

"ಏನು?"

"ನಿಮ್ಮ ಮಿಸೆಸ್ ಅವರ ಸಹಾಧ್ಯಾಯಿನಿ ಒಬ್ಬರು ವಿಶಾಲಾಕ್ಷಿ ಅಂತ–ಲೆಕ್ಚರರ್ ಆಗಿದ್ದವರು–ನಿಮಗೆ ಪರಿಚಯವಂತೆ."

"ಹೌದು."

"ಅವರಿಗೆ ಕಾಹಿಲೆ. ಅವರ ಇಬ್ಬರು ತಮ್ಮಂದಿರೂ ಮಲಗಿದಾರೆ. ಮನೆಯಲ್ಲಿ ಯಾರೂ ಇಲ್ಲ. ನೀವೊಮ್ಮೆ ತಕ್ಷಣ ಬಂದು ನೋಡಬೇಕಂತೆ. ಅವರ ತಾಯಿ ತುಂಬಾ ಗಾಬರಿಯಾಗಿದಾರೆ. ['ನಾನೂ ಕೂಡಾ.']"

ಜ್ವರವೇ?–ಎಂದು ಕೇಳಲು ಹೊರಟಿದ್ದ ಶ್ರೀಕಾಂತ, ಮಾತು ತಡೆದು ಅಂದ:

"ಆಗಲಿ, ಬರ್ತೀನಿ. ಸ್ವಲ್ಪ ತಡವಾಗುತ್ತೆ. ನೀವೇ ನೋಡ್ತಿದೀರಲ್ಲ–ಇವರನ್ನೆಲ್ಲ ಕಳಿಸ್ಬಿಡ್ತೀನಿ. ಜತೇಲೇ ಹೋಗೋಣ....ಅವರಿಗೆ ಟೆಂಪರೇಚರ್ ಜಾಸ್ತಿ ಇದೆಯಾ?"

"ಹೌದು. ತುಂಬಾ ಇದೆ."

"ಬಂದ್ಬಿಟ್ಟೆ. ಹೆಚ್ಚೂಂತಂದರೆ ಇನ್ನು ಅರ್ಧ ಘಂಟೆ.

ಗಂಗಾಧರ, 'ಬದುಕಿದೆ!' ಎಂದು ನೀಳವಾಗಿ ಉಸಿರುಬಿಟ್ಟು ಆ ಸಂದಣಿಯ ಹೊರಗೆ ನಿಂತ.

ಅರ್ಧ ಘಂಟೆ, ಒಂದಾಯಿತು. ಒಂದು, ಒಂದೂವರೆಯಾಯಿತು.

ಮತ್ತೂ ಇದ್ದರು ರೋಗಿಗಳು, ಸಾಕಷ್ಟು ದೊಡ್ಡ ಪ್ರಮಾಣದಲ್ಲಿ.

ಗಂಗಾಧರ, ಪುನಃ ಶ್ರೀಕಾಂತನೆದುರು ಕಾಣಿಸಿಕೊಂಡ.

"ಡಾಕ್ಟರ್!"

ಥಟ್ಟನೆ ಉತ್ತರ ಬಂತು:

"ಆಗ್ಹೋಯ್ತು, ಬಂದ್ಬಿಟ್ಟೆ."

...ಬರಲು ಸಾಧ್ಯವಾದುದು ಒಂಭತ್ತೂವರೆ ಘಂಟೆಗೆ.

ಗಂಗಾಧರ ಟಾಂಗಾ ತರಲು ಹೋದೊಡನೆ, ಹಣವನ್ನೆಲ್ಲ ಶ್ರೀಕಾಂತ

ಅವಸರ ಅವಸರವಾಗಿ ಜೇಬುಗಳಿಗೆ ತುರುಕಿದ. ದೊಡ್ಡದೊಂದು ಶೀಷೆ ತುಂಬಾ ಮಿಕ್ಸ್‌ಚರ್ ತುಂಬಿದ. ಹ್ಯಾಂಡ್‌ಬ್ಯಾಗನ್ನೂ ಎತ್ತಿಕೊಂಡ.

....ವಿಶಾಲಾಕ್ಷಿ, ಮುಂಪರು ಕಳೆದಾಗ ಎರಡು ಮೂರು ಸಾರೆ ಕೇಳಿದಳು: 'ಡಾಕ್ಟರು ಬಂದರೆ? ಅವರು ಬಂದರೆ?' ಎಂದು. ನಾಗಮ್ಮನಿಗಂತೂ ನಿರಾಸೆಯಾಗಿತ್ತು. ದೇವರ ಮುಂದೆ ಹಣತೆ ಇರಿಸಿ, ಗೋಡೆಗೊರಗಿ ಕುಳಿತವರು ಕುಳಿತೇ ಇದ್ದರು.

ಒಂಭತ್ತರ ಹೊತ್ತಿಗೇ ನೆರೆಮನೆಯವನು ಬಂದು ಹೇಳಿದ:

'ಯಾವ ಡಾಕ್ಟರೂ ಷಾಪು ಬಿಟ್ಟು ಬರೋಸ್ಥಿತೀಲಿ ಇಲ್ಲ, ಕಣ್ರಿ....ಬೇಕಿದ್ದರೆ, ನಾಳೆ ಬೆಳಗ್ಗೆ ಔಷಧಿ ತಂದುಕೊಡ್ತೀನಿ.'

ಅದನ್ನು ಕೇಳಿದಮೇಲಂತೂ, ಡಾಕ್ಟರನ್ನು ಗಂಗಾಧರ ಕರೆದುತರಬಹುದೆಂಬ ನಂಬಿಕೆ, ನಾಗಮ್ಮನಿಗೆ ಏನೇನೂ ಉಳಿಯಲಿಲ್ಲ.

ಅಂತಹ ಸ್ಥಿತಿಯಲ್ಲಿ ಟಾಂಗಾ ಬಂದು ನಿಂತಾಗ, ಅವರು ಧಿಗ್ಗನೆದ್ದರು. ಬಾಗಿಲು ತೆರೆದರು.

['ನರ್ಮದೆಯ ಗಂಡ ಈತ.']

ತಮ್ಮ ಕೊರಗನ್ನೆಲ್ಲ ಶ್ರೀಕಾಂತನೆದುರು ತೋಡಿಕೊಳ್ಳಲು ನಾಗಮ್ಮ ಆ ಹೊತ್ತಿನಲ್ಲೂ ಸಿದ್ಧರಾಗಿದ್ದರು. ಆದರೆ, ಮನೆಯಲ್ಲಿ ಹಿರಿಯ ತಾನೇ ಎನ್ನುವಂತೆ, ಗಂಗಾಧರ ಡಾಕ್ಟರನ್ನು ನೇರವಾಗಿ ಕೊಠಡಿಗೆ ಕರೆದೊಯ್ದ.

ಮಲಗಿದ್ದ ಮೂವರ ನಾಡಿ ಬಡಿತಗಳನ್ನು ಶ್ರೀಕಾಂತ ನೋಡಿದ. ನಾಗಮ್ಮನಿಗೆ ಸಮಾಧಾನವಾಗಲೆಂದು, ಜ್ವರದ ಉಷ್ಣವನ್ನೂ ಅಳೆದ. ನಾಲಗೆ-ಗಂಟಲುಗಳನ್ನು ಪರೀಕ್ಷಿಸಿದ.

"ಬರೇಜ್ವರ. ಏನೂ ಭಯವಿಲ್ಲ," ಎಂದ.

ಕಿಟಕಿಯ ಮೇಲಣ ಅರ್ಧಭಾಗವನ್ನು ತೆರೆದು, ನಿರ್ದೇಶವಿತ್ತ:

"ಇದು ಹೀಗೇ ಇರಲಿ. ಸ್ವಲ್ಪ ಗಾಳಿ ಓಡಾಡಲಿ."

ನಡುಮನೆಯಲ್ಲಿ ಡಾಕ್ಟರು ತಾನು ತಂದಿದ್ದ ಮಿಕ್ಸ್‌ಚರಿನ ಶೀಷೆಯನ್ನಷ್ಟೆ ಹೊರತೆಗೆದುದನ್ನು ಕಂಡು, ಗಂಗಾಧರ ಕೇಳಿದ:

"ಇಂಜೆಕ್ಷನು ಬೇಡ್ವೆ ಡಾಕ್ಟರೆ?"

ನಿಧಾನವಾಗಿ ಶ್ರೀಕಾಂತನೆಂದ:

"ಜನರಿಗೆ ಬುದ್ಧಿ ಇಲ್ಲ. ಹಣ ಸುರೀತಾರೆ. ಚು ಚ್ಚಿ ಸಿ ಕೊಂ ಡು ಹೋಗ್ತಾರೆ. ಈ ಜ್ವರಕ್ಕೆ ಯಾವ ಮದ್ದೂ ಬೇಕಾಗಿಲ್ಲ. ಬೆಚ್ಚಗೆ ಹೊದೆದು ಕೊಂಡು ವಿಶ್ರಾಂತಿ ಪಡೆದರೆ ಸಾಕು. ತಾನಾಗಿಯೇ ಜ್ವರ ಇಳಿದುಹೋಗುತ್ತೆ."

ನಾಗಮ್ಮನ ಕಡೆ ತಿರುಗಿ ಅವನೆಂದ:

"ತಗೊಳ್ಳಿ ಔಷಧಿ. ಈಗ ಒಂದೊಂದು ಡೋಸ್ ಕೊಡಿ. ನಾಳೆ ಬೆಳಗ್ಗೆ ಒಂದೊಂದು. ಮಧ್ಯಾಹ್ನ ಒಂದೊಂದು. ಸಾಯಂಕಾಲ ಇವರನ್ನು ಕಳಿಸ್ಕೊಡಿ.

"ಬರ್‍ತೀನಿ, ಬರ್‍ತೀನಿ," ಎಂದ ಗಂಗಾಧರ, ತಾನು ಪರಕೀಯನೆಂದು ಡಾಕ್ಟರಿಗೆ ನಾಗಮ್ಮ ತಿಳಿಸಲು ಅವಕಾಶದೊಡದೆ.

"ಆಹಾರ ಏನು ಕೊಡ್ಲಿ ?" ಎಂದು ಕೇಳಿದರು ನಾಗಮ್ಮ.

"ಅಡುಗೆ ಮಾಡಿದೀರಾ ?"

"ಇಲ್ಲ."

"ಮೊದಲು ಅಡುಗೆ ಮಾಡ್ಕೊಂಡು, ನೀವು ಊಟ ಮಾಡಿ. ಆಮೇಲೆ ಅವರಿಗೆಲ್ಲಾ ಸಬ್ಬಕ್ಕಿ ಗಂಜಿ ಮಾಡ್ಕೊಡಿ.

ಶ್ರೀಕಾಂತ ಹ್ಯಾಂಡ್‌ಬ್ಯಾಗ್ ಎತ್ತಿಕೊಂಡುದನ್ನು ಕಂಡು ನಾಗಮ್ಮ, ಕಸಿವಿಸಿಯಿಂದ ಅಂದರು:

"ನಮ್ಮ ಮನೆಗೆ ಬಂದಿರಿ. ಏನೂ ತಗೊಳ್ದೇ ಹೋಗ್ತಿದೀರಿ."

ಶ್ರೀಕಾಂತ ನಗುತ್ತ ಅಂದ:

"ಎಲ್ಲರದೂ ಜ್ವರ ನಿಂತ್ಮೇಲೆ, ಬರ್‍ತೀನಿ–ಕಾಫಿ ತಿಂಡಿಗೆ."

"ಬರಬೇಕಪ್ಪಾ....ನರ್ಮದಾ, ಮಗು–ಎಲ್ಲಾ ಚೆನ್ನಾಗಿದಾರಾ ?"

[ಒಂದು ರೀತಿಯಲ್ಲಿ ತಮಗೆ ಹತ್ತಿರದವರೇ ಅಲ್ಲವೆ ಡಾಕ್ಟರು ?]

"ಹೂಂ."

"ನರ್ಮದೆಗೂ ನಮ್ಮ ವಿಶಾಲಿಗೂ ಬಹಳ ಬಹಳ...."

"ಹೌದು. ಹೇಳ್ತಿದ್ಳು."

ಶ್ರೀಕಾಂತ ಹೊರಟ. ಫೀಸು ಎಷ್ಟೆಂದು ಡಾಕ್ಟರನ್ನು ಗಂಗಾಧರ ಕೇಳುವಂತೆಯೇ ಇರಲಿಲ್ಲ. ಟಾಂಗಾದವನಿಗೆ, "ಡಾಕ್ಟರರ ಮನೆಗೆ ಹೊಡೀಪ್ಪಾ," ಎಂದು ಹೇಳಿ, ಎರಡು ರೂಪಾಯಿ ಕೊಡಲೆಂದು ಜೇಬಿಗೆ ಕೈಹಾಕಿದ.

ಕತ್ತಲಲ್ಲೂ ಅದನ್ನು ಗಮನಿಸಿದ ಶ್ರೀಕಾಂತನೆಂದ:

"ಡಿಸ್ಪೆನ್ಸರಿಯಿಂದ ನಾನು ಮನೆಗೆ ಹೋಗ್ತಿದೀನಿ. ಟಾಂಗಾದವನಿಗೆ ನಾನು ಕೊಡ್ತೀನಿ. ನೀವು ಸುಮ್ನಿರಿ!"

ಒತ್ತಾಯ ನಿಷ್ಪ್ರಯೋಜಕವೆಂದು ಮನಗಂಡು, ಗಂಗಾಧರ ಮರುಮಾತ ನಾಡಲಿಲ್ಲ.

"ತುಂಬಾ ಥ್ಯಾಂಕ್ಸ್ ಡಾಕ್ಟ್ರೇ....ಗುಡ್‌ನೈಟ್."

ಈತನ ಹೆಸರೂ ಕೂಡಾ ಕೇಳಲಿಲ್ಲ, ವಿಶಾಲಾಕ್ಷಿಯ ಅಣ್ಣನೋ ಏನೋ– ಎಂದು ತನ್ನಷ್ಟಕ್ಕೇ ಶ್ರೀಕಾಂತ ಅದುಕೊಂಡ, "ಗುಡ್‌ನೈಟ್" ಎಂದು ಪ್ರತಿ ವಂದಿಸಿ. 'ವಿಶಾಲಾಕ್ಷಿಯ ಅಣ್ಣ ರಷ್ಯಕ್ಕೆ ಹೋಗಿದಾನೇಂತ ನರ್ಮದಾ ಹೇಳ್ತಿದ್ದ ಳಲ್ಲಾ. ಹಾಗಾದರೆ ಯಾರು ಈತ?' ಎಂದು ಯೋಚನೆ ಮುಂದುವರಿಯಿತು. ಅಷ್ಟಕ್ಕೇ ತಡೆದು, ಮಗುವನ್ನು ಮಲಗಿಸಿ ತಾನೂ ನಿದ್ದೆಹೋಗಿರಬಹುದಾದ ನರ್ಮದೆಯ ಕಡೆಗೆ–ಮನೆಯ ಕಡೆಗೆ–ತನ್ನ ಯೋಚನೆಯನ್ನು ಹರಿಸಿದ.

ಫ್ಲೂ ಪೀಡಿತ ನಗರದ ಬೀದಿಗಳಲ್ಲಿ ಓಡುತ್ತ ಯಾದವ ಗಿರಿಯ ಕಡೆಗೆ ಟಾಂಗಾ ಧಾವಿಸಿತು....

....ಗಂಗಾಧರ ಒಂದು ನಿಮಿಷ ಒಳಗೆ ಬಂದು, ಡಾಕ್ಟರು ಬರಲು ತಡ ವಾದುದಕ್ಕೆ ಕಾರಣ ವಿವರಿಸಿ, "ನಾನಿನ್ನು ಬರ್‍ತೀನಿ," ಎಂದ.

"ಬಹಳ ಹೊತ್ತಾಯ್ತು, ಪಾಪ....ನಿಮ್ಮ ಊಟಕ್ಕೂ ತಡವಾಯ್ತು," ಎಂದರು ನಾಗಮ್ಮ.

"ಏನೂ ಪರವಾಗಿಲ್ಲ. ನಾಳೆ ಪುನಃ ಬಂದು ನೋಡ್ತೀನಿ."

"ಆಗಲಪ್ಪಾ. ದೇವರು ನಿಮಗೆ ಒಳ್ಳೇದು ಮಾಡ್ಲಿ."

ಆ ಆಶೀರ್ವಾದದೊಡನೆ ವಿದ್ಯಾರ್ಥಿನಿಲಯಕ್ಕೆ ಮರಳಿದ ಗಂಗಾಧರ, ಒಂದು ಲೋಟ ನೀರು ಕುಡಿದು, ಬರಿಹೊಟ್ಟೆಯಲ್ಲೇ ಮಲಗಿದ.

## ೭

ಜ್ವರ ಬಂದ ಮೂರನೆಯ ದಿನವೇ ಮೈಬೆವರಿ, ಚಂದ್ರ ಎದ್ದು ಕುಳಿತ. ಅನಂತರ ಜಯರಾಮು. ತಾನೂ ಎದ್ದರೆ ಗಂಗಾಧರನ ಆರೈಕೆ ತಪ್ಪಿಹೋಗುವು ದೆಂದೋ ಏನೋ, ಉಳಿದವರ ಜ್ವರದ ಅವಧಿಗಿಂತಲೂ ಒಂದು ದಿನ ಹೆಚ್ಚು ತಡವಾಗಿ ವಿಶಾಲಾಕ್ಷಿ ಎದ್ದಳು.

ಕನ್ನಡಕವಿಲ್ಲದೆ, ಕೂದಲು ಕೆದರಿ, ಕೃಶವಾಗಿ, ದಿಂಬಿಗೊರಗಿ ಕುಳಿತ ಆ ಜೀವ. ನೋಡಿದ ಗಂಗಾಧರನಿಗೆ ಸಂಕಟವೆನಿಸಿತು.

ಆತ ಶ್ರೀಕಾಂತನಿಗೆ ಸುದ್ದಿ ಮುಟ್ಟಿಸಿದ:

"ಎಲ್ಲರೂ ಎದ್ದಾಯ್ತು, ಡಾಕ್ಟ್ರೇ."

"ಇನ್ನೂ 'Next', 'Next' ಎನ್ನುತ್ತಲೇ ಇದ್ದ ಶ್ರೀಕಾಂತ, ಮುಗುಳುನಕ್ಕ.

"ಆಹಾರ ಏನು ತಗೋಬೇಕು?"

"ಯಾವಾಗಲೂ ತಗೊಳ್ಳುವಂಥಾದ್ದೇ. ಒಂದೆರಡು ದಿನ ಸ್ವಲ್ಪಸ್ವಲ್ಪವೇ ಸಾಕು."

[ವಿಶಾಲಾಕ್ಷಿಯ ಮನೆಗೆ ಫ್ಲೂ ಭೇಟಿ ಇತ್ತ ವಿಷಯ ಶ್ರೀಕಾಂತ ನರ್ಮದೆಗೆ ತಿಳಿಸಿದ್ದ.

'ಸಾದಾ ಜ್ವರ. ನೋಡೋಕೆ ಅಂತ ಹೋಗ್ಬೇಡ,' ಎಂದಿದ್ದ.

ತನ್ನ ಗೆಳತಿಯ ಮನೆಗೆ ಔಷಧಿ ಒಯ್ದು ಕೊಡುತ್ತಿದ್ದವನು ಯಾರೆಂಬುದು ನರ್ಮದೆಗೂ ಗೊತ್ತಾಗಲಿಲ್ಲ.

['ಅಣ್ಣನಂತೂ ಅಲ್ಲ. ಅವನಿನ್ನೂ ವಾಪಸು ಬಂದಿಲ್ಲ,' ಎಂದಿದ್ದಳು.]

ಜ್ವರ ನಿಂತಿದೆಯೆಂದು ತಿಳಿಸಲು ಗಂಗಾಧರ ಬಂದ ಆ ಕೊನೆಯ ದಿನ, ಶ್ರೀಕಾಂತ ಚುಟುಕಾಗಿ ಆತನ ಪೂರ್ವೋತ್ತರ ವಿಚಾರಿಸಿಕೊಂಡ. 'ಬರೇ

ಪರಿಚಿತ. ಆದರೆ ವರ್ತನೆ-ತೋರುತ್ತಿದ್ದ ಉದ್ವೇಗ, ಕಾತರ-ತೀರಾ ಆತ್ಮೀಯರೇನೋ ಎನ್ನುವಂತೆ.' ಆ ಬಗೆಗೆ ಅದಕ್ಕಿಂತ ಹೆಚ್ಚು ಯೋಚಿಸಲು ಬಿಡುವೂ ಇರಲಿಲ್ಲ ಅವನಿಗೆ.

...ಅಕ್ಕನೂ ತಮ್ಮಂದಿರೂ ಚೇತರಿಸಿಕೊಳ್ಳಲು ಮತ್ತೂ ಏಳೆಂಟು ದಿನ ಹಿಡಿಯಿತು. ಗಂಗಾಧರ ದಿನಾಲೂ ಬರುತ್ತಿದ್ದವನು, ಅವರು ಓಡಾಡತೊಡಗಿದ ಬಳಿಕ, ದಿನಬಿಟ್ಟು ದಿನ ಬರತೊಡಗಿದ.

ವಿಶಾಲಾಕ್ಷಿ ಅಂದಳು:

"ಫ್ಲೂ ರಾಣಿಗೆ ನಾನು ಋಣಿ."

ಕಾರಣ ತಿಳಿದಿದ್ದರೂ ಗಂಗಾಧರ ಕೇಳಿದ:

"ಯಾಕೆ?"

"ನಿಮ್ಮ ಆರೈಕೆಯ ಭಾಗ್ಯ ಸಿಗ್ತು."

"ಬೇಗನೆ ಮೊದಲಿನಂತಾಗಿ, ಪರೀಕ್ಷೆಗೆ ತಯಾರಿ ಶುರು ಮಾಡಿ."

"ನೀವೂ ಸ್ವಲ್ಪ ಜತನದಿಂದ ಇರಿ. ಹೊರಗೆ ಜಾಸ್ತಿಯಾಗಿ ಓಡಾಡ್ಬೇಡಿ."

[ಶ್ರೀಕಾಂತ ನಗುತ್ತ ಗಂಗಾಧರನನ್ನು ಕೇಳಿದ್ದ:

'ನೀವು ಯಾವತ್ತು ಬರ್ತೀರಾ?'

'ಯಾವುದಕ್ಕೆ?' ಎಂದು ಮರುಪ್ರಶ್ನೆ ಮಾಡಿದ್ದ ಗಂಗಾಧರ.

'ಔಷಧಿಗೆ, ನಿಮಗೆ!'

'ಬೇಡವಪ್ಪ ಸದ್ಯ!'

'ಹೇಳೋಕಾಗೋದಿಲ್ಲ. ಹುಷಾರಾಗಿರಿ....']

"ಪುರಸೊತ್ತು ಇದ್ದಿದ್ದರೆ ಜ್ವರ ಬರಿಸ್ಕೊಂಡು ಇಲ್ಲಿಗೇ ಬಂದು ಮಲಗ್ತಿದ್ದೆ. ನಿಮ್ಮಿಂದ ಆರೈಕೆಯೂ ಆಗ್ತಿತ್ತು. ಆದರೆ, ಪರೀಕ್ಷೆ ಒಂದಿದೆಯಲ್ಲ."

ಬಳಿಕ ಕೆಲವು ದಿನ ಗಂಗಾಧರ ಬರಲೇ ಇರಲಿಲ್ಲ.

ನಾಗಮ್ಮ ಕೇಳಿದರು:

"ಬಹಳ ದಿವಸವಾಯ್ತಲ್ಲೇ ಅವರು ಬಂದು?"

"ಹೂಂ."

"ಊರಲ್ಲಿಲ್ವಾ?"

"ಗೊತ್ತಿಲ್ಲ."

ಆಪತ್ತಿನ ಸಮಯದಲ್ಲಿ ಓಡಾಡಿದ ಗಂಗಾಧರ, ಜಯರಾಮುಗೆ–ಚಂದ್ರನಿಗೆ ಕೂಡಾ–ಪ್ರಿಯನಾಗಿದ್ದ. ಆತ ಸಂದೇಹ ವ್ಯಕ್ತಪಡಿಸಿದ:

"ಅವರಿಗೂ ಫ್ಲೂ ಬಂದಿದೆಯೋ ಏನೋ."

ವಿಶಾಲಾಕ್ಷಿಯ ಮನಸ್ಸಿನಲ್ಲಿದ್ದುದು, ನಾಗಮ್ಮನ ಬಾಯಿಂದ ಹೊರಬಂತು:

"ಹೋಗಿ ನೋಡ್ಕೊಂಡು ಬಾರೋ. ಪಾಪ, ಒಬ್ಬರೇ ಇದಾರೆ."

ನೋಡಲು ಹೋದ ಜಯರಾಮು, ಗಂಗಾಧರನನ್ನು ಕರಕೊಂಡೇ ಬಂದ.

"ಅಷ್ಟು ಸುಲಭವಾಗಿ ಜ್ವರಕ್ಕೆ ಬಲಿಯಾಗೋ ಮನುಷ್ಯ ನಾನಲ್ಲ," ಎಂದು ಹೇಳಿ ಗಂಗಾಧರ ನಕ್ಕ.

ಆ ಮಧ್ಯಾಹ್ನ ಆತ ಅಲ್ಲಿಯೇ ಊಟಕ್ಕೇಳುವಂತೆ ನಾಗಮ್ಮ ಒತ್ತಾಯಿಸಿದರು.

ಸ್ನಾನದ ಮನೆಯಲ್ಲಿ, ಕೈಕಾಲು ತೊಳೆಯಲೆಂದು ತಂಬಿಗೆ ನೀರನ್ನು ವಿಶಾಲಾಕ್ಷಿಯೇ ಎತ್ತಿಕೊಟ್ಟಳು. ಆತನಿಗಾಗಿ, ಶುಭ್ರವಾಗಿದ್ದ ಟವೆಲನ್ನು ಹಿಡಿದು ತಾನೇ ಹೊರಗೆ ನಿಂತಳು.

"ದೇವರಂಥ ಮನುಷ್ಯ," ಎಂದುಕೊಂಡು ನಾಗಮ್ಮ, ತನ್ನನ್ನು ತಾನೇ ಸಂತೈಸಿದರು.

....ಹಳೆಯಕಾಲದ ಜೀವವಾದ ನಾಗಮ್ಮ ಕಾಹಿಲೆ ಬೀಳಲಿಲ್ಲ. ಮಕ್ಕಳೆಲ್ಲ ಮಲಗಿದಾಗ ಹರಕೆ ಹೊತ್ತಿದ್ದ ಅವರು, ಜಯರಾಮುವನ್ನು ಕರೆದುಕೊಂಡು ಬೆಟ್ಟಕ್ಕೆ ಹೋಗಿಬಂದರು.

ಆ ಅವಧಿಯಲ್ಲಿ ಅರ್ಧಕ್ಕರ್ಧ ಊರೇ ಹರಕೆ ಹೊತ್ತಿತ್ತೇನೋ. ಬೆಟ್ಟದ ಮೇಲೆ ಭಟ್ಟರು ಸಹಸ್ರ ಸಹಸ್ರವಾಗಿ ಕಾಯಿಗಳನ್ನೊಡೆದರು.

ಡಾಕ್ಟರ್ ಶ್ರೀಕಾಂತ ಜ್ವರಕ್ಕೆ ಬಲಿಯಾಗಲಿಲ್ಲ. ಆತನ ತಂದೆ ವೆಂಕಟರಾಮಯ್ಯ ಮಲಗಿದರು, ಎದ್ದರು. ಆ ದಿನಗಳಲ್ಲಿ ಎಲ್ಲಿ ಓಡಾಡುವುದಕ್ಕೂ ಅವಕಾಶಕೊಡದೆ ಮುರಲಿಯನ್ನು ನರ್ಮದಾ ಜೋಪಾನವಾಗಿ ಇರಿಸಿದ ಬಗೆಯೊ!

ಗಿರಿಜಾಬಾಯಿಯ ಮನೆಯಲ್ಲಿ, ಮಕ್ಕಳೆಲ್ಲ ಒಬ್ಬೊಬ್ಬರಾಗಿ ಹಾಸಿಗೆ ಹಿಡಿದು, ಮೆಲ್ಲನೆ ಚೇತರಿಸಿಕೊಂಡರು. ಅಲ್ಲಿಗೂ ಔಷಧಿ ಪೂರೈಕೆ, ಶ್ರೀಕಾಂತನ ಚಿಕಿತ್ಸಾಲಯದಿಂದಲೇ.

ಔಷಧಕ್ಕೆಂದು ಗಿರಿಜಾಬಾಯಿ ಬಂದಿದ್ದಾಗ ಶ್ರೀಕಾಂತನೆಂದಿದ್ದ:

'ವಿಶಾಲಾಕ್ಷಿಯವರ ಮನೇಲಿ, ಅವರು-ಅವರ ತಮ್ಮಂದಿರು ಎಲ್ಲಾ ಮಲಗಿದರು, ಒಟ್ಟಿಗೇ! ಈಗ ವಾಸಿ.'

'ಔಷಧಿ ಒಯ್ಯೋಕೆ ಅವರ ತಾಯಿಯಾನೇ ಬರ್‍ತಿದ್ರೇನು ?'

'ಇಲ್ಲ. ಗಂಗಾಧರ ಅಂತ ಯಾರೋ ಇದಾರಲ್ಲ-ಅವರ ಪರಿಚಿತರು-ಆತ ಬರ್‍ತಿದ್ರು.'

'ಓ!'

ಫ್ಲೂ ಜ್ವರವನ್ನು ಶಪಿಸಲಾಗದೆ, ತಮ್ಮಷ್ಟಕ್ಕೇ ಮುಗುಳುನಗುತ್ತ, ಗಿರಿಜಾಬಾಯಿ ತಮ್ಮ ಮನೆಗೆ ಹೋದರು.

* * * * *

ಆ ವಾರವೇ ರುಗರಾಜನಿಂದೊಂದು ಕಾಗದ ಬಂತು. ಆತ ಬರೆದಿದ್ದ:

'ಫ್ಲೂ ಹಾವಳಿಯ ವಿಷಯ ದಿಲ್ಲಿಯ ವಾರ್ತಾ ಪ್ರಸಾರದಲ್ಲಿ ಕೇಳಿದೆ. ಪರಿಸ್ಥಿತಿ ಹೇಗಿದೆ? ಜ್ವರ ಬಂದ ಶುರುವಿನಲ್ಲೇ ಔಷಧಿ ತಗೊಂಡುಬಿಡಿ. ಅಲಕ್ಷ್ಯ ಮಾಡಬೇಡಿ. ಈಗ ಫ್ಲೂ ಯೂರೋಪಿನ ಕಡೆಗೆ ಸಾಗಿದೆಯಂತೆ. ಇಲ್ಲಿಗೂ ಬರಬಹುದೆಂಬ ನಿರೀಕ್ಷೆ ಇದೆ.'

ವಿಶಾಲಾಕ್ಷಿ ಅಣ್ಣನಿಗೆ ವಿವರವಾಗಿ ಬರೆಯಲು ಕುಳಿತಳು:

ಫ್ಲೂ ವಾರ,<br>
೧೯೫೭ರ ಬೇಸಗೆ<br>
ಮೈಸೂರು.

ಒಲವಿನ ರಾಜೂ,

ನೀನು ಬರೆದುದು ಕೈ ಸೇರಿದೆ. ಹತ್ತು ದಿವಸಗಳಿಗೆ ಹಿಂದೆ ಇಷ್ಟು ಹೊತ್ತಿಗೆ, ಭಯಂಕರ ಎನಿಸುವ ಹಾಗಿತ್ತು ನಮ್ಮ ಮನೆಯ ದೃಶ್ಯ. ಚಂದ್ರು, ಜಯ, ನಾನು-ಮೂವರೂ ಮಲಗಿದ್ದೆವು. ಅಮ್ಮ ಅನ್ನ ನೀರು ಬಿಟ್ಟು ಕುಳಿತಿದ್ದರು. ಊರೆಲ್ಲಾ ಫ್ಲೂ ಎಂದ ಮೇಲೆ, ವೈದ್ಯರು ಎಲ್ಲಿಂದ ಸಿಗಬೇಕು? ಕರಕೊಂಡು ಬರುವುದಕ್ಕಾದರೂ ಯಾರಿದ್ದರು? ಹಿಂದೆಯೊಮ್ಮೆ ಯಾವುದೋ ಕಾಲದಲ್ಲಿ ಇಂಥದೇ ರೋಗ ಬಂದು ಸಹಸ್ರಾರು ಜನ ನಮ್ಮೂರಲ್ಲಿ ಸತ್ತಿದ್ದರಂತೆ. ನಮ್ಮಮ್ಮ ಕಂಗಾಲು.

ಆಗ ಅನಿರೀಕ್ಷಿತವಾಗಿ ಗಂಗಾಧರ ಬಂದರು. ಕವಿವರ್ಯರೇ ಧಾವಿಸಿಹೋಗಿ, ನಡುರಾತ್ರಿಯ ಹೊತ್ತಿಗೆ ['ಅತಿಶಯೋಕ್ತಿ ತಪ್ಪಲ್ಲ.'] ಡಾಕ್ಟರನ್ನು–ನಮ್ಮ ನರ್ಮದೆಯ ಗಂಡನನ್ನು–ಎಳಕೊಂಡು ತಂದರು. ಆಮೇಲೆ ಪ್ರತಿದಿವಸವೂ ಔಷಧಿಗಾಗಿ ಗಂಗಾಧರರದೇ ಓಡಾಟ, ಅಂತೂ ಎದ್ದೆವು ಎನ್ನು. ಗಂಗಾಧರರ ಉಪಕಾರದ ಋಣ ತೀರಿಸೋದು ಈ ಜನ್ಮದಲ್ಲಿ ಸಾಧ್ಯವಿಲ್ಲ–ಎನ್ನುತ್ತಾರೆ ಅಮ್ಮ.

ಇದು ನಮ್ಮ ಮನೆಯ ಮೇಲೆ ಫ್ಲ್ಲೂ ನಡೆಸಿದ ಧಾಳಿಯ ಕಥೆ. ಹೆಚ್ಚು ಕಡಮೆ ಎಲ್ಲಾ ಮನೆಗಳಲ್ಲೂ ಹೀಗೆಯೇ. ಅಮ್ಮನ ಹಾಗೆ ವಯಸ್ಸಾದವರು, ಗಂಗಾಧರರಂತೆ ದೃಢಕಾಯರು,–ಎಲ್ಲೋ ಕೆಲವರು ತಪ್ಪಿಸಿಕೊಂಡಿರಬಹುದು, ಅಷ್ಟೆ. ಸಾವುಗಳು ಕಡಮೆ. ಒಟ್ಟು ಎರಡೋ ಮೂರೋ.

ಈ ಸಂಭ್ರಮದಲ್ಲೂ ಪರೀಕ್ಷೆಯ ಸಿದ್ಧತೆ ನಡೆಸಿದ್ದೇನೆ. ಕಾಲ ಎಷ್ಟೊಂದು ಬೇಗನೆ ಕಳೆದುಹೋಗ್ತಿದೆ! ನೀನು ಹಿಂತಿರುಗಿ ಬರುವ ದಿನವೂ ಹತ್ತಿರ ಬರುತ್ತಿದೆಯೆಂದು ಒಂದು ಬಗೆಯ ಆತುರ. ಎಲ್ಲರೂ ನಿನ್ನ ಹಾದಿ ನೋಡುತ್ತಿದೇವೆ. ಹೊರಡುವುದು ಯಾವ ತಿಂಗಳು, ಯಾವ ದಿನ–ಎಂಬುದನ್ನೆಲ್ಲ ವಿವರವಾಗಿ ಬರೆ.

ಅಮ್ಮ ಆಶೀರ್ವಾದ ತಿಳಿಸಿದ್ದಾರೆ. ನಾವು ಮೂವರೂ ಒಲವು ಕಳಿಸುತ್ತಿದ್ದೇವೆ.

ಇತಿ, ಪ್ರೀತಿಯ,
ವಿಶಾಲಿ.

ಪತ್ರವನ್ನು ಬರೆದು ಮುಗಿಸಿದಾಗ ವಿಶಾಲಾಕ್ಷಿಗೆ ಬಹಳ ಬಳಲಿಕೆ ಎನಿಸಿತು.

'ಎಷ್ಟೊಂದು ತೀವ್ರತರ ಜ್ವರ! ಶಕ್ತಿಯನ್ನೆಲ್ಲ ಹೀರಿ, ನನ್ನನ್ನು ಹಿಪ್ಪೆ ಮಾಡಿದೆಯಲ್ಲ....'

ಬರೆಯುವಾಗ ಗಂಗಾಧರನ ನೆನಪು ಬೇರೆ ಒಂದೇ ಸಮನೆ ಕಾಡಿತ್ತು. ಹತ್ತಿರವೇ ಇರುತ್ತಿತ್ತು ಆ ನಗುಮುಖ. 'ಅಣ್ಣನಿಗಲ್ಲವೆ? ನನ್ನ ವಿಷಯ ಬರೆ, ನನ್ನ ವಿಷಯ ಬರೆ,' ಎನ್ನುತ್ತಿತ್ತು.

ಈಗೀಗ ಹೆಚ್ಚು ಹೆಚ್ಚಾಗಿ ಆ ಸ್ಥಿತಿ. ಅಭ್ಯಾಸಕ್ಕೆಂದು ಪುಸ್ತಕ ತೆರೆದರೆ, ಆ ಪುಟಗಳ ನಡುವೆ ಆತ. ವಿಶ್ರಾಂತಿಗೆಂದು ಕಣ್ಣು ಮುಚ್ಚಿದರೆ, ಅಲ್ಲೇ ಬಳಿಯಲ್ಲಿ ಆತ.

—'ಔಷಧಿ ತಗೊಳ್ರೀ....'

—'ಇವತ್ತು ಕಡಮೆ, ಅಲ್ವಾ?'

—'ಓಡಾಡಿ ಸುಸ್ತು ಮಾಡ್ಕೋಬೇಡಿ.'

—'ಇನ್ನು ಸ್ವಲ್ಪವೇ ಕಾಲ ಈ ಸಂಕಟ.'

ಆ ಎಲ್ಲ ಮಾತುಗಳ ನೆನಪು ವಿಶಾಲಾಕ್ಷಿಗಾಯಿತು.

ಕೊನೆಯಲ್ಲಿ ಆತ ಅಂದುದು, ಕಾಹಿಲೆಗೆ ಸಂಬಂಧಿಸಿಯಲ್ಲ— ತಮ್ಮನ್ನು ಕುರಿತು.

ನಿಜವನ್ನೇ ಆಡಿದ್ದ ಅಲ್ಲವೆ?

'ಇನ್ನು ಸ್ವಲ್ಪವೇ ಕಾಲ ಈ ಸಂಕಟ.'

೮

ವಿಶಾಲಾಕ್ಷಿಯ ಪರೀಕ್ಷೆ ಆರಂಭವಾಗಲಿದ್ದ ಹಿಂದಿನ ದಿನ, ಅವಳ ಮನೆಗೆ ಗಿರಿಜಾಬಾಯಿ ಬಂದರು. ಸಂಜೆಯ ಹೊತ್ತು. ಫ್ಲೂ ಎಂದು ಶಾಲಾ ಕಾಲೇಜು ಗಳನ್ನು ತೆರೆಯುವುದು ಮತ್ತೂ ಮುಂದಕ್ಕೆ ಹೋಗಿತ್ತು. [ಸಂಸ್ಥಾನದ ಸಾರ್ವ ಜನಿಕ ಶಿಕ್ಷಣದ ನಿರ್ದೇಶಕರೂ ಸರಕಾರವೂ ವಿಶ್ವವಿದ್ಯಾನಿಲಯವೂ ತೀರ್ಮಾನ ಕೈಗೊಳ್ಳುವ ಹೊತ್ತಿಗೆ, ಮುಗಿಯುತ್ತ ಬಂದಿತ್ತು ಫ್ಲೂ ಋತು. ಆದರೂ, ರಜಾ ಅಪ್ರಿಯವಾಗುವುದುಂಟೆ?] ಸ್ನಾತಕೋತ್ತರ ಪರೀಕ್ಷೆಗಳು ಮಾತ್ರ, ಅಭ್ಯರ್ಥಿಗಳೇ ಕಡಮೆಯೆಂದು, ಮುಂದೆ ಬಿದ್ದಿರಲಿಲ್ಲ. ವಿಶಾಲಾಕ್ಷಿಗೂ ಗಂಗಾಧರನಿಗೂ ಅದರಿಂದ ಸಂತೋಷವಾಗಿತ್ತು.

ಕೊನೆಯ ದಿನದ ಸಿದ್ಧತೆಯಲ್ಲಿ [ಮಾರನೆಯ ದಿನದ ಮೊದಲ ಪ್ರಶ್ನೆ ಪತ್ರಿಕೆ ಗಾಗಿ] ತಲ್ಲೀನಳಾಗಿದ್ದ ವಿಶಾಲಾಕ್ಷಿ, ಗಿರಿಜಾಬಾಯಿಯನ್ನು ಸ್ವಾಗತಿಸಿದಳು.

ಫ್ಲೂನಿಂದ ಚೇತರಿಸಿಕೊಂಡು ಮತ್ತೆ ಮೈ ಪುಷ್ಟವಾಗುವಷ್ಟರಲ್ಲೇ, ಅಥೆ ಯನದ ಬಳಲಿಕೆ ಆರಂಭವಾಗಿತ್ತು. ಸೊರಗಿದ ಶರೀರ. 'ಅಯ್ಯೋ ಪಾಪ' ಎನಿಸುತಿತ್ತು ನೋಡುವಾಗ.

ಗಿರಿಜಾಬಾಯಿ ಅಂದರು :

"ಒಂದು ನಿಮಿಷ ಇದ್ದು ಹೋಗೋದಕ್ಕೆ ಬಂದೆ. ಶುಭಾಶಯ ತಿಳಿ ಸೋದಕ್ಕೆ."

"ಇರಲಿ, ಇರಲಿ. ಕೂತ್ಕೊಳ್ಳಿ."

ಗಿರಿಜಾಬಾಯಿ ಕುಳಿತರು, ಒಂದೆರಡೇ ನಿಮಿಷಗಳ ಮಟ್ಟಿಗೆ. ಯಾವ ಸತ್ಕಾರವೂ ಅಗತ್ಯವಿಲ್ಲವೆಂದು, ಖಡಾಖಂಡಿತವಾಗಿ, ನಾಗಮ್ಮನೊಡನೆ ಅಂದರು :

"ನನಗೇನೂ ಬೇಡಿ. ವಿಶಾಲಾಕ್ಷಿ ಹೇಗೆ ಓದ್ತಿದಾರೋ ನೋಡಿ ಹೋಗೋಣಾಂತ ಬಂದೆ. ಪರೀಕ್ಷೆ ಮುಗಿದ್ಮೇಲೆ ಬಂದೇ ಬರ್ತೀನಿ...."

"ಅವಳನ್ನು ನೋಡಿದರೆ ಸಂಕಟ ಅನಿಸುತ್ತೆರ್ರಿ. ಈ ಓದೂ ಸಾಕು; ಪರೀಕ್ಷೆಯೂ ಸಾಕು."

"ಇನ್ನು ಕೆಲವು ದಿವಸ ಸಹಿಸ್ಕೊಳ್ಳಿ. ಆಮೇಲೆ ಚೆನ್ನಾಗಿ ಆಗ್ತಾರೆ."

ಹಾಗೆ ಹೇಳಿ ವಿಶಾಲಾಕ್ಷಿಯ ಕಡೆ ಗಿರಿಜಾಬಾಯಿ ನೋಡಿದರು. ಅವಳಿಗೆ ತಿಳಿಯದೆ ಅದರ ಅರ್ಥ? ಆದರೆ, ಪ್ರತಿಕ್ರಿಯೆಯ ಯಾವ ಮಾತನ್ನೂ ಆಡದೆ ಅವಳು ಮುಗುಳು ನಕ್ಕಳು.

ಗಿರಿಜಾಬಾಯಿ ಎದ್ದು, ವಿಶಾಲಾಕ್ಷಿಯ ಭುಜಮುಟ್ಟಿ, ಅಂದರು:

"ಪರೀಕ್ಷೇಲಿ ಚೆನ್ನಾಗಿಮಾಡಿ. ರ್‍ಯಾಂಕ್ ಗಿಟ್ಟಿಸಿ. ಇವತ್ತು ರಾತ್ರಿ ಹಾಯಾಗಿ ನಿದ್ರಿಸಿ. ನಾಳೆ ಬೆಳಗ್ಗೆ ಎದ್ದು ಓದಲೇಬೇಡಿ,...ಬರಲಾ ನಾನು?"

ಆತ್ಮೀಯವಾದ ಆ ನುಡಿಗಳಿಗೆ, 'ಥ್ಯಾಂಕ್ಸ್' ಎನ್ನುವ ಉಪಚಾರದ ಮಾತು ಅಗತ್ಯವಾಗಿ ವಿಶಾಲಾಕ್ಷಿಗೆ ತೋರಲಿಲ್ಲ.

ಗಿರಿಜಾಬಾಯಿಯೊಡನೆ ಗೇಟಿನವರೆಗೂ ಅವಳು ಬಂದಳು.

ಅಲ್ಲಿ, ತಗ್ಗಿದ ಧ್ವನಿಯಲ್ಲಿ, ಅವರೆಂದರು:

"ಗಂಗಾಧರ ನಾಳೆ ಬೆಳಗ್ಗೆ ನಿಮಗೆ ಸಿಕ್ಕಿಯೇ ಸಿಗ್ತಾರೆ_ಅಲ್ವೆ?"

ಸಿಗಬಹುದು ಎಂದಷ್ಟೇ ವಿಶಾಲಾಕ್ಷಿ ಬಲ್ಲಳು. ಆದರೂ, ಸಿಕ್ಕಿಯೇ ಸಿಗುವನೆಂಬ ನಂಬಿಕೆಯಿಂದ ಅವಳೆಂದಳು:

"ಹೌದು."

"ಅವರಿಗೂ ನನ್ನ ಶುಭಾಶಯ ತಿಳಿಸಿ. ಚೆನ್ನಾಗಿ ಮಾಡಬೇಕೂಂತ ಹೇಳಿ."

ಕೃತಜ್ಞತೆಯ ನೋಟ ಬೀರುತ್ತ, ವಿಶಾಲಾಕ್ಷಿ ಅಂದಳು:

"ಹೇಳ್ತೀನಿ."

* * * * *

ಮಾರನೆಯ ಬೆಳಗ್ಗೆ ಪರೀಕ್ಷಾ ಭವನದ ಪ್ರಾಂಗಣದಲ್ಲಿ, ಗಿರಿಜಾಬಾಯಿಯ ಶುಭ ಹಾರೈಕೆಯನ್ನು ವಿಶಾಲಾಕ್ಷಿ ಗಂಗಾಧರನಿಗೆ ತಲಪಿಸಿದಾಗ, ಆತನೆಂದ:

"ಈ ಪರೀಕ್ಷೆಯ ವಿಷಯದಲ್ಲಿ ನಮಗಿಂತಲೂ ಗಿರಿಜಾಬಾಯಿಗೇ ಹೆಚ್ಚು ಕಾತರ!"

"ತುಂಬಾ ಒಳ್ಳೆಯವರು."

"ಅದಕ್ಕೇ ಅಂದೆ. ಉತ್ತೀರ್ಣರಾಗದೆ ಅವರ ಮನಸ್ಸು ನೋಯಿಸೋದು ಸರಿಯಲ್ಲ. ಆದ್ದರಿಂದ, ಚೆನ್ನಾಗಿಯೇ ಮಾಡೋಣ, ಆಗದೆ?"

"ಪ್ರಶ್ನೆ ಪತ್ರಿಕೆ ಕೈಗೆ ಬರೋದಕ್ಕೆ ಇನ್ನು ಕೆಲವೇ ನಿಮಿಷಗಳಿವೆ. ಈಗಲೂ ಪರಿಹಾಸ್ಯ ಮಾಡ್ತೀರಲ್ಲ. ನೀವೊಬ್ಬರು!"

"ಆಮೇಲೆ ಅವಸ್ಥೆ ಪಡೋದು ಇದ್ದೇ ಇದೆ. ಈಗಲೇ ಅಳಬೇಕು–ಅಂತೀರೇನು?"

"ಆಮೇಲೆ–ಅಂದರೆ?"

"ಅದೇ–ಕಟ್ಕೊಂಡ್ಮೇಲೆ!"

ವಿಶಾಲಾಕ್ಷಿ ತುಂಟನಗೆ ಬೀರಿ, ಅಂದಳು:

"ನೆನಪಿಡ್ತೀನಿ. ಹೀಗೆಲ್ಲಾ ಆಡಿದ್ದಕ್ಕೆ ಮುಂದೆ ಶಾಸ್ತಿ ಇದ್ದೇ ಇದೆ."

"ಈಗಲೇ ಸಂದಾಯ ಮಾಡೋ ಸ್ಥಿತೀಲಿ ನೀವಿಲ್ಲ. ಸ್ವೀಕರಿಸೋ ಸ್ಥಿತೀಲಿ ನಾನೂ ಇಲ್ಲ. ಮುಂದೆ ಬಡ್ಡಿ ಸೇರಿಸಿ ಕೊಡುವಿರಂತೆ. ಸಿದ್ಧವಾಗಿರ್ತೀನಿ."

ಪರೀಕ್ಷಾ ಭವನವನ್ನು ಹೋಗುವ ಮುನ್ನ ಅವರು ಆಡಿದ ಲಘು ಮಾತಿನಿಂದ, ಇಬ್ಬರ ಹೃದಯಗಳೂ ಹಗುರವೆನಿಸಿದುವು.

* * * *

'ಪತ್ರಿಕೆಗಳು' ಮುಗಿದುವು. ಬಳಿಕ 'ವೈವಾ–', ಬಾಯಿ ಪರೀಕ್ಷೆ....

ಅವರೆಗೂ ಸಾಕಷ್ಟು ಚೆನ್ನಾಗಿಯೇ ಮಾಡಿದ್ದೆವೆನಿಸಿತ್ತು ಇಬ್ಬರಿಗೂ.

ಬೇರೆ ಬೇರೆ ವಿಷಯಗಳು, ಬೇರೆ ಬೇರೆ ಪ್ರಶ್ನೆಗಳು.

ವಿಶಾಲಾಕ್ಷಿ ಅಂದಳು:

"ನಾನೂ ಕನ್ನಡವನ್ನೇ ತಗೋಬೇಕಾಗಿತ್ತು."

ಗಂಗಾಧರ ಅವಳ ಮುಖವನ್ನೆ ದಿಟ್ಟಿಸಿ ಅಂದ:

"ಆಗ ಏನಾಗ್ತಿತ್ತೋ ಯಾರಿಗೆ ಗೊತ್ತು? ಈಗ ನಮ್ಮೊಳಗೆ ಸ್ಪರ್ಧೆ ಇಲ್ಲ. ಪರಸ್ಪರ ಪೂರಕವಾಗಿದೇವೆ. ಇದೇ ಚೆನ್ನು ಅನಿಸುತ್ತೆ!"

....'ವೈವಾ–'ದಲ್ಲೂ ಸಾಕಷ್ಟು ಚೆನ್ನಾಗಿಯೇ ಮಾಡಿದರು ಇಬ್ಬರೂ.

* * * *

ಅದೆಲ್ಲ ಮುಗಿದ ನಾಲ್ಕು ದಿನಗಳ ಅನಂತರ ರಂಗರಾಜನಿಂದೊಂದು ಕಾಗದ ಬಂತು.

'ತರಬೇತು ಒಂದು ವಾರಕ್ಕೆ ಹಿಂದೆಯೇ ಮುಕ್ತಾಯವಾಯಿತು. ನಮ್ಮ ತಂಡದವರೆಲ್ಲ, ತಮ್ಮ ಬುದ್ಧಿಮತ್ತೆಯಿಂದ–ಒಳ್ಳೆಯ ನಡತೆಯಿಂದ–ದೇಶಕ್ಕೆ ಕೀರ್ತಿ ತಂದಿದಾರೆ. ಬೇರೆ ಕೇಂದ್ರಗಳಲ್ಲಿ ಶಿಕ್ಷಣ ಪಡೆಯುತ್ತಿರುವವರು, ನಮ್ಮ ಜತೆಯಲ್ಲೇ ಬಂದವರು, ಇಲ್ಲಿ ಇನ್ನೂ ಕೆಲ ತಿಂಗಳು ಇಲ್ಲಿ ಇರುತ್ತಾರೆ. ಆದರೆ, ಝೆಫರೋಝ್ಸ್ಯೆಯಲ್ಲಿರುವ ನಾವು ಕೆಲವರು ಇನ್ನು ಕೆಲವು ದಿನಗಳಲ್ಲೇ ಜುಲೈ ಅಂತ್ಯದೊಳಗಾಗಿಯೇ–ಸ್ವದೇಶಕ್ಕೆ ಹೊರಡುತ್ತೇವೆ. ಅದಕ್ಕೆ ಮುಂಚೆ, ನಾವು ನಾಲ್ಕೂರು ಸುತ್ತಿಕೊಂಡು ಬರಲು ಏರ್ಪಾಟಾಗಿದೆ.

'ಇಲ್ಲಿಯ ಜನರ ಸ್ನೇಹಪರತೆಗೆ ನಾವೆಲ್ಲ ಮಾರುಹೋಗಿದ್ದೇವೆ. ನಾನು ಇಲ್ಲಿಗೆ ಬಂದ ಮೇಲೆ ರೂಪಿಸಿರುವ ಒಂದು ಸಿದ್ಧಾಂತವೆಂದರೆ–ಸಾಮಾನ್ಯ ಜನರು ಎಲ್ಲಿದ್ದರೂ ಒಳ್ಳೆಯವರೇ. ಸುಖದ ದುಃಖದ ಅವರ ಸಮಸ್ಯೆಗಳೆಲ್ಲ ಒಂದೇ. ರಾಜನಂತೆ ಪ್ರಜೆಗಳು ಎನ್ನುವ ಪೂರ್ವಿಕರ ಅನುಭವೋಕ್ತಿ, ಈಗ ಸುಳ್ಳಾಗಿದೆ–ಎಂದು ನನ್ನ ಅಭಿಮತ. 'ರಾಜರು' ಎಂಥವರೇ ಇರಲಿ, 'ಪ್ರಜೆಗಳು' ಎಲ್ಲಾ ದೇಶಗಳಲ್ಲೂ ಏಕಭಾವದಿಂದಲೇ ಪ್ರೇರಿತರು. ತಪ್ಪುಮಾರ್ಗ ದರ್ಶನದಿಂದ ಅವರು ಹಾದಿ ತಪ್ಪಬಹುದು. ಆದರೆ, ತಿಳಿವಳಿಕೆ ಮೂಡಿದಾಗ, ಜನರು ಸತ್ಯದ ಆರಾಧಕರೂ ಪ್ರತಿಪಾದಕರೂ ಆಗುವುದು ಖಂಡಿತ.'

'ಇಲ್ಲಿಯ ಜನ, ಇತರ ಎಲ್ಲ ದೇಶಗಳ ಜನರ ಹಾಗೆ ಸ್ವಭಾವತಃ ಶಾಂತಿಪ್ರಿಯರು. ಆದರೆ, ಆಳುವವರು, ಮಾನವಪ್ರೇಮದ ದ್ಯೋತಕವಾಗಿ ಯುದ್ಧವನ್ನು ವಿರೋಧಿಸುತ್ತಿದ್ದಾರೆ–ಎನ್ನಲಾರೆ. ಹಂಗೆರಿಯ ಕ್ರೂರ ಪ್ರಕರಣದ ಪುನರಾವೃತ್ತಿ ಮುಂದೆ ಆಗಲಾರದೆಂದು ನಾನು ನಂಬುವುದೂ ಇಲ್ಲ. ಸದ್ಯಕ್ಕಂತೂ ಅವರಿಗೆ ಶಾಂತಿಬೇಕು. ತಮ್ಮ ಕಲ್ಪನೆಯ ಕಮ್ಯೂನಿಸಮನ್ನು ಇವರು ಇನ್ನೂ ಸಾಧಿಸಿಲ್ಲ. ತಮ್ಮ ರಾಷ್ಟ್ರದ ಸರ್ವತೋಮುಖ ಪ್ರಗತಿಯೇ, ತಮ್ಮ ಬಣದ ಬಲವೇ, ಇವರಿಗೆ ಈಗ ಮುಖ್ಯವಾಗಿದೆ.

'ನನ್ನ ಉದ್ಯೋಗಕ್ಕೆ ಸಂಬಂಧಿಸಿ ಭಾರತ ಬಿಟ್ಟು ಬಂದಾಗ ಇದ್ದುದಕ್ಕಿಂತ ಹೆಚ್ಚು ಬಲ್ಲವನಾಗಿ, ಇಲ್ಲಿಂದ ಹಿಂತಿರುಗುತ್ತಿದ್ದೇನೆ. ಪೂರ್ವಾಗ್ರಹ ದೂಷಿತ ವಿಚಾರಗಳಿಂದ ಬಾಧಿತನಾಗದೆ, ಗುಣಯಾವುದು, ದೋಷಯಾವುದು—ಎಂದು ತಿಳಿಯುವ ಸಾಮರ್ಥ್ಯ ನನ್ನಲ್ಲಿ ಹೆಚ್ಚಿದೆ, ಎಂದು ನನ್ನ ಅಭಿಪ್ರಾಯ.

'ಬಹಳ 'ಭಾರ'ವಾಯಿತೆ ಕಾಗದ? ಓದಿ ಬೇಸರ ಬಂತೋ ಏನೋ!

'ನಾನು ಬರುವುದರೊಳಗೆ ನಿನ್ನ ಪರೀಕ್ಷೆಗಳೆಲ್ಲ ಮುಗಿದು, ಫಲಿತಾಂಶವೂ ಪ್ರಕಟವಾಗಬಹುದು. ಇನ್ನು ಮುಂದಿನ ನಿನ್ನ ವಿಳಾಸ: ಎಸ್. ವಿಶಾಲಾಕ್ಷಿ, ಎಂ.ಎ., ಎಂದು!

'ಕಾರ್ಯಕ್ರಮದಲ್ಲಿ ಕೊನೆಯ ನಿಮಿಷದ ಬದಲಾವಣೆಯಾಗದೇ ಇದ್ದರೆ, ಆಗಸ್ಟ್ ೧ರಂದು ದಿಲ್ಲಿ ಸೇರುತ್ತೇವೆ. ಒಂದುಹೊತ್ತಿನ ಮಟ್ಟಿಗೆ ಭಿಲಾಯಿಗೆ ಹೋಗಿ ಮುಂದೆ ಊರಿಗೆ ಬರುತ್ತೇನೆ.

'ಮಗ ಬರುತ್ತಿದ್ದನೆಂದು ಅಮ್ಮನಿಗೆ ಸಂತೋಷವಾಗಿದೆ ಅಲ್ಲವೆ? ನನಗೂ ಅಷ್ಟೇ. ನಿಮ್ಮನ್ನೆಲ್ಲ ನೋಡಬೇಕೆಂದು ನಾನು ಕಾತರನಾಗಿದ್ದೇನೆ.

ಒಲವಿನೊಂದಿಗೆ
ನಿಮ್ಮೆಲ್ಲರ ರಾಜೂ

* * * * *

....ಕಾಣಲು ಬಂದ ಗಂಗಾಧರನನ್ನು ವಿಶಾಲಾಕ್ಷಿ ಕೇಳಿದಳು:

"ಅಣ್ಣ ಬರುವುದಕ್ಕೆ ಇನ್ನೂ ತಡವಿದೆ. ಅಷ್ಟರೊಳಗೊಮ್ಮೆ ಊರಿಗೆ ಹೋಗಿ ಬರ್ತೀರೇನು?"

ಗಂಗಾಧರನೆಂದ:

"ಏನೂ ಬೇಡ. ಈ ಊರಲ್ಲೇ ಇರ್ತೀನಿ. ಶಿವಮೊಗ್ಗೆಗೆ ಹೋಗಿ, ಮನೆಯಲ್ಲಿ ಮಾಡೋದಾದರೂ ಏನು?"

"ಹಾಗೇ ಆಗಲಿ," ಎಂದಳು ವಿಶಾಲಾಕ್ಷಿ.

ಬಳಿಕ, ಸಣ್ಣನೆ ನಕ್ಕು ಕೇಳಿದಳು:

"ಅಲ್ಲ, ಇಲ್ಲಿಯೇ ಇದ್ದು ನೀವು ಮಾಡೋದಾದರೂ ಏನು ಅಂತ?"

"ಅದೇನೋ ನಿಜವೇ!" ಎಂದು ಗಂಗಾಧರ, ತಾನೂ ನಗುತ್ತಾ.

## ೬

ಮೇಯಿಲುಗಾಡಿಯನ್ನು ಸ್ವಾಗತಿಸಲೆಂದು ರೈಲುನಿಲ್ದಾಣದಲ್ಲಿ ಬಹಳ ಜನ ಸೇರಿದ್ದರು. ಅವರಲ್ಲಿ ಇಬ್ಬರು, ರಂಗರಾಜನನ್ನು ಇದಿರ್ಗೊಳ್ಳಲೆಂದು ಬಂದವರು,—ವಿಶಾಲಾಕ್ಷಿ ಮತ್ತು ಗಂಗಾಧರ.

ಪತ್ರದಲ್ಲಿ ತಿಳಿಸಿದ್ದ ದಿನವೇ ರಂಗರಾಜ ಭಾರತ ಸೇರಿದ್ದ, ಭಿಲಾಯಿಯಿಂದ ಊರಿಗೆ ಹೊರಟುದೂ ಮೊದಲೇ ನಿರ್ಧರಿಸಿದ್ದ ಕಾರ್ಯಕ್ರಮದ ಪ್ರಕಾರ. ಹೀಗೆ ಪ್ರತಿಯೊಂದೂ ಹೊತ್ತಿಗೆ ತಕ್ಕಂತೆ ನಡೆಯುವುದು ಚೆನ್ನಲ್ಲವೆಂದು, ಈ ಗಾಡಿ ಅರ್ಧ ಘಂಟೆ ತಡಮಾಡಿತು.

[ವಿಶಾಲಾಕ್ಷಿ ಮತ್ತು ಗಂಗಾಧರ, ಇನ್ನರ್ಧ ಘಂಟೆ ತಡವಾಗಿದ್ದರೂ ಬೇಸರಗೊಳ್ಳುತ್ತಿರಲಿಲ್ಲ. ಹಾದಿಯಲ್ಲಿ ಅವರಿಬ್ಬರನ್ನೂ ಜತೆಯಾಗಿ ಕಂಡವರೆಷ್ಟೋ ಜನ. ಪಿಸುಮಾತನಾಡಿದವರು ಇನ್ನೆಷ್ಟೋ ಜನ. ಆದೊಂದನ್ನೂ ಲಕ್ಷಿಸದೆ, ತಮ್ಮಷ್ಟಕ್ಕೆ ತಾವಿದ್ದರು ಆ ಇಬ್ಬರೂ.]

ಗಾಡಿ ಆ ಮೂಲೆ ತಿರುಗಿ ಮೂತಿ ತೋರಿದೊಡನೆ, ನಿಲ್ದಾಣದಲ್ಲಿ ಕಲರವಕ್ಕೆ ಆರಂಭ. ನೀಲಿಯಂಗಿಯ ಕೆಂಪು ರುಮಾಲಿನ ಆ ಕೂಲಿಗಳೋ! ಗಾಡಿಯನ್ನು ಕೈಮುಟ್ಟಿ ಮೊದಲು ಸ್ವಾಗತಿಸುವವರೇ ಅವರು.

ಎಂಜಿನು. ಲಗ್ಗೇಜುವ್ಯಾನು. ಥರ್ಡ್ ಕ್ಲಾಸ್ ಡಬ್ಬಿಗಳು ಎರಡು. [ಒಂದರ ಮೇಲೆ ಸ್ತ್ರೀಯ ಚಿತ್ರ.] ಫಸ್ಟ್ ಕ್ಲಾಸ್. ಸೆಕೆಂಡ್—

ಅಗೋ, ಎಂಜಿನಿಯರು! ಬಾಗಿಲು ತೆರೆದು, ಅಲ್ಲೇ. ಕೈಬೀಸುತ್ತಿರುವ ಗಂಗಾಧರ. [ಆತನ ಕೆಳಗೆ ಬಾಗಿಲ ಹಿಡಿ ಕಂಬಿಗೆ ತೂಗಾಡುತ್ತಿರುವ ಹಮಾಲನೊಬ್ಬ.]



೧೮೭

ವಿಶಾಲಾಕ್ಷಿಯೂ ಗಂಗಾಧರನೂ ಎಡವುತ್ತ, ನಿಂತಿದ್ದವರನ್ನು ಬಳಸುತ್ತ, ಗಾಡಿಯ ಜತೆಯಲ್ಲೇ ಮುಂದಕ್ಕೆ ಓಡಿದರು.

ಆ ಡಬ್ಬಿಯಿಂದ ಮೊದಲೇ ಇಳಿದವನು ರಂಗರಾಜ. ಪ್ರವಾಸದ ಫಲವಾಗಿ ಪೋಷಾಕು ಮಲಿನವಾಗಿದ್ದರೂ, ಆರೋಗ್ಯವೇ ಮೈವೆತ್ತ ಹಾಗಿದ್ದ ಆತ. ಉಲ್ಲಸಿತವಾಗಿ ಪ್ರಫುಲ್ಲವಾಗಿತ್ತು ಮುಖ. ಆತ್ಮವಿಶ್ವಾಸವನ್ನು ಹೆಜ್ಜೆಹೆಜ್ಜೆಗೂ ಹೊರಸೂಸುತ್ತಿದ್ದ ಚಲನವಲನ. ರಷ್ಯದಲ್ಲಿ ತೊಟ್ಟಿದ್ದ ಸೂಟುಧರಿಸಿಯೇ ಅಣ್ಣ ಇಳಿಯಬಹುದು—ಎಂದೂ ವಿಶಾಲಾಕ್ಷಿ ಯೋಚಿಸಿದ್ದಳು. ಆ ನಿರೀಕ್ಷೆ ಮಾತ್ರ ಸುಳ್ಳಾಗಿತ್ತು. [ಹಾಗೆಂದು ಬೇಸರವಿಲ್ಲ. ತನ್ನ ಅಣ್ಣನದೂ ಸರಳ ವ್ಯಕ್ತಿತ್ವವೇ—ಎನ್ನುವುದು ದೊಡ್ಡ ಸಮಾಧಾನ. ಗಂ ಗಾ ಧ ರ ನಿ ಗೂ ಅದು ಇಷ್ಟ.....]

ಸಾಮಾನುಗಳನ್ನಿಳಿಸಲು 'ಪೋರ್ಟರಿ'ಗೆ ರಂಗರಾಜ ನಿರ್ದೇಶವೀಯುತ್ತಿದ್ದಂತೆ, ವಿಶಾಲಾಕ್ಷಿ ತೀರಾ ಬಳಿ ಸಾರಿ ಅಣ್ಣನ ಮಗ್ಗುಲಲ್ಲಿ ನಿಂತಳು. ಒಡಹುಟ್ಟಿದವರ ಮುಗುಳುನಗೆಗಳು, ಅರೆಕ್ಷಣದಲ್ಲೇ ಪರಸ್ಪರರಿಗೆ ಎಷ್ಟೊಂದನ್ನು ಹೇಳಿದುವು! ಅದನ್ನು ನೋಡುತ್ತ ನಿಂತಿದ್ದ ಗಂಗಾಧರ, ಕ್ಷಣಕಾಲ ತಡೆದು ಮುಂದೆ ಬಂದು, ಕೈಚಾಚಿದ.

"ನೆನಪಿದೆ, ಅಲ್ಲವೆ?"

"ಓಹೋ!"

ಹೃದಯಸ್ಪರ್ಶಿಯಾದ ಹಸ್ತಲಾಘವ.

[ಜತೆಯಲ್ಲೇ ಇಬ್ಬರೂ ಬಂದಿದ್ದರು ಹಾಗಾದರೆ. ಹೊಸ ನೋಟ. ತನ್ನ ತಂಗಿಯೂ ಎಷ್ಟೊಂದು ದಿಟ್ಟೆಯಾಗಿದ್ದಳು! ರಷ್ಯಾದಲ್ಲಾದರೆ ಗಂಡುಹೆಣ್ಣು ಹೀಗೆ ಜತೆಯಾಗಿ ಓಡಾಡುವುದು ತೀರಾ ಸಾಧಾರಣ....ಇದು ತಪ್ಪೇನೂ ಅಲ್ಲ. ಆದರೂ, ಹೊಸ ದೃಶ್ಯ ಕಣ್ಣಿಗೆ.]

ಹಮಾಲ ಕೆಳಗೆ ಇರಿಸಿದ ಸಾಮಾನುಗಳನ್ನು ಕಂಡು, ಗಂಗಾಧರ ಕೇಳಿದ:

"ಸಾಮಾನು ಇಷ್ಟೇ, ಅಲ್ಲವೆ?"

ದೊಡ್ಡ ಸೂಟ್ ಕೇಸು. ಚಿಕ್ಕದು ಮತ್ತೊಂದು. [ತಮ್ಮಂದಿರಿಗಾಗಿ ಉಡುಗೊರೆಗಳು ಒಳಗೆ.] ಹೋಲ್ಡಾಲು. ಕ್ಯಾಲಿಕೋ ಅರಿವೆಯ ಬ್ಯಾಗು. ಅದರ ಹಿಡಿಗಳ ನಡುವೆ ಸಿಕ್ಕಿಸಿದ್ದ ವೃತ್ತಪತ್ರಿಕೆ.

"ಹೂಂ. ಇಷ್ಟೇ."

ಗಂಗಾಧರ ಹಮಾಲನಿಗೆಂದ:

"ಹೊರಗೆ ತಗೊಂಡುಹೋಗು. ಟ್ಯಾಕ್ಸಿಗೆ."

ರಂಗರಾಜ ನಿರೀಕ್ಷಿಸಿದ್ದುದಕ್ಕಿಂತಲೂ ಸ್ವಲ್ಪ ಹೆಚ್ಚೇ! [ಈಗ ಈ ಕವಿ ಬರಿಯ ಪರಿಚಿತನಲ್ಲ. ಫ್ಲೂ ಸಮಯದಲ್ಲಿ ಆತನಿಂದಾದ ನೆರವು. ತಂಗಿಯ ಕಾಗದದಲ್ಲಿ ಆಗಾಗ್ಗೆ ಅವನ ಪ್ರಸ್ತಾಪ....]

ಅಣ್ಣ-ತಂಗಿ ತನ್ನನ್ನು ನೋಡುತ್ತಿದ್ದಂತೆ ಗಂಗಾಧರನೆಂದ:

"ನಡೀರಿ ಹೋಗೋಣ."

ಟಾಂಗಾ ಸಾಕಾಗಿತ್ತು ಮಿತವ್ಯಯದ ದೃಷ್ಟಿಯಿಂದ. 'ಆದರೆ ಇವತ್ತಿನ ಮಟ್ಟಿಗೆ ಇದೂ ಸರಿಯೆ. ಬೇಗನೆ ಮನೆ ಸೇರಬಹುದು', ಎಂದುಕೊಂಡ ರಂಗ ರಾಜ. ಅಲ್ಲದೆ ಆ ದೇಶದಲ್ಲಂತೂ ವಾಹನಗಳಲ್ಲೇ ಓಡಾಡಿ ಅಭ್ಯಾಸವಾಗಿತ್ತು....

"ನಾನು ಕೊಡ್ತೀನಿ!"

ಕೂಲಿಗೆ ದುಡ್ಡು ಕೊಟ್ಟವನು ಗಂಗಾಧರ. ನಾಲ್ಕಾಣೆ ಹೆಚ್ಚೇ. ತಾನು ಕೊಡುವೆನೆಂದು, ರಂಗರಾಜ ಅಂದುದೇ ಬಂತು.

ಅಣ್ಣನನ್ನೂ ತಂಗಿಯನ್ನೂ ಹಿಂದಿನ ಸೀಟಗೆ ಹತ್ತಿಸಿ, ಗಂಗಾಧರ ತಾನು ಡ್ರೈವರನ ಪಕ್ಕದಲ್ಲೇ ಕುಳಿತ, ಪಥ ನಿರ್ದೇಶ ಮಾಡುತ್ತ.

ರಂಗರಾಜ ಕೇಳುವುದಕ್ಕೆ ಮೊದಲೇ [ಕೇಳಲೋ ಬೇಡವೋ ಎಂದು ಆತ ಶಂಕಿಸಿಯೂ ಇದ್ದ], ವಿಶಾಲಾಕ್ಷಿ ಅಂದಳು:

"ನನಗೆ ಪಾಸಾಯ್ತು ಅಣ್ಣ. ರ್‍ಯಾಂಕ್ ಮಾತ್ರ ನಾಮ!"

[ಗಂಗಾಧರನಿಗೆ ಗೊತ್ತಿತ್ತು: ರ್‍ಯಾಂಕ್ ಬರದಿರಲು ಕಾರಣ ತಾನೇ.]

ರಂಗರಾಜನೆಂದ:

"ಕಂಗ್ರಾಟ್ಸ್. ರ್‍ಯಾಂಕ್‌ನಲ್ಲೇನಿದೆ ಮಹಾ?"

"ಅಂತೂ ಮುಗಿಯಿತಪ್ಪ!"

"ಇನ್ನು ಡಾಕ್ಟರೇಟ್ ಯೋಚನೆಯೊ?"

[ಗಂಗಾಧರ, ಸಂಭಾಷಣೆಯನ್ನು ಕೇಳಿಸಿಕೊಳ್ಳುತ್ತಿದ್ದ.]

"ಇಷ್ಟು ಸಾಕು ನಮ್ಮಮ್ಮ."

ರಂಗರಾಜ ನಕ್ಕು ಸುಮ್ಮನಾದ.

ವೈಸರಾಯ್ ರಸ್ತೆ, ರಾಮಸ್ವಾಮಿ ಸರ್ಕಲ್, ನೂರಡಿ ರಸ್ತೆ, ಮುಂದೆ ಬಲಕ್ಕೆ ನಾರಾಯಣಶಾಸ್ತ್ರಿ ರಸ್ತೆಯ ಮೇಲೆ ಉದ್ದಕ್ಕೆ.

ಹಿಂದೆ ಹೇಗಿತ್ತೋ ಹಾಗೆಯೇ ಇತ್ತು ರಂಗರಾಜನ ಮೈಸೂರು.

ವಿಶಾಲಾಕ್ಷಿ ಅಣ್ಣನೊಡನೆ ಅಂದಳು :

"ಇವರಿಗೂ ಪಾಸಾಗಿದೆ."

[ತನ್ನ ತಂಗಿಯ ಕಂಠವೂ ಮಧುರವಾಗಿ ಕೇಳಿಸಿತಲ್ಲ, 'ಇವರಿಗೂ' ಎಂದಾಗ? ಈ ಗಂಗಾಧರ ಪರೀಕ್ಷೆಗೆ ಕುಳಿತಿದ್ದುದಂತೂ, ರಂಗರಾಜನಿಗೆ ಮರೆತೇ ಹೋಗಿತ್ತು.]

"ಕಂಗ್ರಾಟ್ಸ್, ಕಣ್ರೀ."

ಗಂಗಾಧರ ತಲೆ ಕೊಡವಿ ಹಿಂದಕ್ಕೆ ನೋಡದೆಯೇ ಅಂದ :

"ಏನು ಮಹಾ ಸಾಧನೇಂತ!...."

ಡ್ರೈವರನಿಗೆ ಆತನೆಂದ :

"ಮೂರನೇ ಮನೆ-ಎಡಕ್ಕೆ-ನೀಲಿ ಕರ್ಟನ್ ಇರೋದು. ಕಾಣಿಸ್ತಿದೆಯಲ್ಲ?"

ಇಲ್ಲಿಯೂ ರಂಗರಾಜ ಪರ್ಸನ್ನು ಹೊರತೆಗೆದುದೇ ಬಂತು. ಆತನ ಕೈ ಹಿಡಿದು ತಡೆದು, ಗಂಗಾಧರನೆಂದ :

"ಬೇಡ! ಮಾರ್ಕೆಟನವರೆಗೆ ನಾನು ಟ್ಯಾಕ್ಸೀಲೇ ಹೋಗ್ಬೇಕಾಗಿದೆ. ಅಲ್ಲಿ ಕೊಡ್ತೀನಿ."

[ಹಿಂದೆ ಡಾಕ್ಟರ್ ಶ್ರೀಕಾಂತ ಮಾಡಿದ್ದುದೂ ಹಾಗೆಯೇ.]

"ಛೆ! ಛೆ!"

"ಛೆ-ನೂ ಇಲ್ಲ, ಛು-ನೂ ಇಲ್ಲ."

"ಕೊಡಲಿ-ಬಿಡು, ರಾಜೂ," ಎಂದಳು ವಿಶಾಲಾಕ್ಷಿ.

"ಸರಿಹೋಯ್ತು," ಎಂದುಕೊಂಡು ರಂಗರಾಜ ಗೊಣಗಿದ.

ಗಂಗಾಧರ, ಆಗಲೇ ತಾನು ಹಿಂತಿರುಗುವ ವಿಚಾರ ವಿಶಾಲಾಕ್ಷಿಯೊಡನೆ ಹೇಳಿರಲಿಲ್ಲ. ಆಕೆ ಅಂದಳು :

"ಈಗೆಲ್ಲಿಗೆ? ಮನೆಗೆ ಬನ್ನಿ."

ರಂಗರಾಜನೂ ಅಂದ :

"ಹೌದು, ಬನ್ನಿ."

ಹಿರಿಯ ಮಗನ ಗೃಹಾಭಿ ಗಮನದ ಆ ಆನಂದೋತ್ಸಾಹದಲ್ಲಿ, 'ಪರಕೀಯ'ನಾದ ತಾನು ಅನಗತ್ಯ ಪ್ರೇಕ್ಷಕನಾಗಬಾರದೆಂದು ನಿರ್ಧರಿಸಿದ್ದ ಗಂಗಾಧರ, ಹೇಳಿದ:

"ಕ್ಷಮಿಸಿ. ಇನ್ನೊಂದು ದಿವಸ ಬರ್ತೀನಿ."

ನಾಗಮ್ಮ, ಚಂದ್ರ, ಜಯರಾಮು—ಎಲ್ಲರೂ ಅಷ್ಟರಲ್ಲೇ ಬೀದಿಗಿಳಿದಿದ್ದರು. ನೆರೆಹೊರೆಯವರೂ ಹೊರಗಿಣಿಕಿ ನೋಡುತ್ತಿದ್ದರು. ಡ್ರೈವರ್ ಸಾಮಾನುಗಳನ್ನಾಗಲೇ ಮನೆಯ ಬಾಗಿಲಲ್ಲಿರಿಸಿದ್ದ.

ಗೇಟನ್ನು ಸಮೀಪಿಸಿದ ರಂಗರಾಜ ಕೇಳಿದ:

"ಅಮ್ಮಾ, ಚೆನ್ನಾಗಿದೀಯಾ?"

"ಬಂದಿಯಾ ರಾಜೂ?" ಎಂದರು ನಾಗಮ್ಮ.

ಟ್ಯಾಕ್ಸಿ ಹೊರಟು, ಪಕ್ಕದ ಬೀದಿಗೆ ಹೊರಳಿದಂತೆ, ಅದರತ್ತ—ಗಂಗಾಧರನತ್ತ—ಕೈ ಬೀಸುತ್ತ, ರಂಗರಾಜನೆಂದ:

"ವಿಚಿತ್ರ ಮನುಷ್ಯ—ನಿನ್ನ ಈ ಗಂಗಾಧರ."

"ಅವರು ಯಾವಾಗಲೂ ಹಾಗೆಯೇ," ಎಂದಳು ವಿಶಾಲಾಕ್ಷಿ.

'ಅವರು' ಎಂದಿದ್ದಳು ತಂಗಿ; ಗಂಗಾಧರ ಎಂದಲ್ಲ. ಅಣ್ಣ ವಿಸ್ಮಯಗೊಂಡು ಅವಳತ್ತ ನೋಡಿದ.

ತಾವೆಲ್ಲ ಗುಂಪಾಗಿ ನಿಂತುದನ್ನು ಕಂಡು, ರಂಗರಾಜನೆಂದ:

"ಬೀದೀಲೇ ನಿಂತ್ಬಿಟ್ಟಿದೀವಲ್ಲ! ನಡೀರಿ. ಒಳಕ್ಕೆ ಹೋಗೋಣ."

* * * *

ಟ್ಯಾಕ್ಸಿ ತನ್ನ ನಿಲ್ದಾಣಕ್ಕೇ ಹೋಯಿತು. ಅಲ್ಲಿ ಅದರ ಬಾಡಿಗೆ ಕೊಟ್ಟು, ಇಂದ್ರಕೆಫೆಯತ್ತ ಗಂಗಾಧರ ಸಾಗಿದ.

ಮನಸಿನಲ್ಲೇ ಅಂದುಕೊಂಡ:

'ಇನ್ನು ಆರಂಭ ತಲೆನೋವಿಗೆ!'

ವೇಳೆ ಕಳೆಯುವುದರಲ್ಲಿ ಅರ್ಥವಿರಲಿಲ್ಲ. ಮೊದಲ ಹೆಜ್ಜೆ—ಗಿರಿಜಾಬಾಯಿಯನ್ನು ಭೇಟಿಮಾಡುವುದು.

[ಅವರು ಮನೆಗೆ ಬರುವುದು ಇನ್ನೂ ತಡ. ಸ್ವಲ್ಪ ಹೊತ್ತು ಇಲ್ಲೇ ಎಲ್ಲಾದರೂ ಕಳೆದು, ಸಂಜೆಯ ಬಸ್ಸಿನಲ್ಲಿ ಹೋಗಬೇಕು.]

"ಏನು ಕೊಡ್ಲಿ ?"

"ಕಾಫಿ."

ಆ ಪಾನೀಯ ಬಿಸಿಯಾಗಿತ್ತು. ಬಿಸಿ ಆರಲು, ಸ್ವಲ್ಪ ಹೊತ್ತು. ಮತ್ತೂ ಸ್ವಲ್ಪ ಹೊತ್ತು, ನಿಧಾನವಾಗಿ ಹೀರಲು.

ಮುಗಿದಾಗ ಬಿಲ್ ಬಂತು.

[ಸಿಗರೇಟಿನ ಅಭ್ಯಾಸವಿದ್ದರೆ, ಹೊತ್ತು ಕಳೆಯುವುದು – ಯೋಚಿಸುತ್ತ ಹೊತ್ತು ಕಳೆಯುವುದು–ಎಷ್ಟು ಸುಲಭ! ಆ ಸುಖ ತನಗಿಲ್ಲ. ಎಂದಾದರೊಂದು ದಿನ ಆರಂಭಿಸಬೇಕು ತಾನು.]

"ರೀ, ಇನ್ನೊಂದು ಕಾಫಿ."

[ಚೆನ್ನಾಗಿದೆ. ಕುಡಿಯಬಹುದು.]

ಬಿಸಿ ಕಾಫಿಯ ರುಚಿಯನ್ನೇ ನೋಡಿದನೆಂದು, ಮೈ ಬೆವರಿತು.

ಆ ಬಿಲ್ಲನ್ನು ಹೊಡೆದು, ಅದರ ಹಿಂಬದಿಯಲ್ಲಿ ಇನ್ನೊಂದು. ನೂಕು ನಗ್ಗಲು ಅತಿಯಾಗಿದ್ದ ಹೋಟೆಲು. ಹೊರಗೇ ವಾಸಿ–ಎಂದು ಗಂಗಾಧರ ಎದ್ದ.

ಬೀದಿಯುದ್ದಕ್ಕೂ ನಡೆದು, ಮಹಾತ್ಮಾಗಾಂಧಿ ವೃತ್ತವನ್ನು ಹಾದು, ಪುರಸಭಾ ಭವನದ ಬಯಲನ್ನು ಪ್ರವೇಶಿಸಿದ. ಮರದ ನೆರಳಲ್ಲಿ ಹಸುರು ಹುಲ್ಲಿನ ಮೇಲೆ ಕುಳಿತ. [ಅಲ್ಲಿಯೂ ಹತ್ತಿಪ್ಪತ್ತು ಜನರಿದ್ದರು ಆಗಲೇ.]

ತನ್ನ ಕೈಗಡಿಯಾರಕ್ಕೂ ಗೋಪುರದ ಗಡಿಯಾರಕ್ಕೂ ಎರಡು ನಿಮಿಷಗಳ ವ್ಯತ್ಯಾಸವಿತ್ತು. [ಅಥವಾ, ಈಕಡೆಯಿಂದ ಕುಳಿತಾಗ ದೊಡ್ಡ ಗಡಿಯಾರದ ಮುಳ್ಳು ಕಾಣಿಸುವುದೇ ಹಾಗೆಯೇ ಏನೋ.]

ಅಲ್ಲಿಯೂ ಹೊತ್ತು ಕಳೆದು, ಗಂಗಾಧರ ಬಸ್ ನಿಲ್ದಾಣಕ್ಕೆ ಬಂದ.

* * * *

ಗಿರಿಜಾಬಾಯಿ ಮನೆಯಲ್ಲಿದ್ದರು.

ಗಂಗಾಧರ ಒಬ್ಬನೇ ಬಂದುದನ್ನು ಕಂಡು, ಅವನ ಮುಖಭಾವವನ್ನೂ ಗಮನಿಸಿ, ತಮ್ಮಷ್ಟಕ್ಕೇ ಅವರೆಂದರು :

'ಏನೋ ವಿಶೇಷವಿರಬೇಕು.'

ವಿಶೇಷವಿತ್ತು. ಮಕ್ಕಳೆಲ್ಲ ಒಳಹೋದೊಡನೆಯೇ ಆತ ಆರಂಭಿಸಿದ :

"ರಂಗರಾಜ ಮೇಯಿಲಿಗೆ ಬಂದರು."

ವಿಷಯವೇನೆಂಬುದು ಗಿರಿಜಾಬಾಯಿಗೆ ಸ್ಪಷ್ಟವಾಗಿ ತಿಳಿಯಿತು.

"ಇಷ್ಟರಲ್ಲೇ ಬಂದಿರಬಹುದೂಂತ ನಾನೂ ಇದೇ ಈಗ ಜ್ಞಾಪಿಸ್ಕೊಂಡೆ. ಅಣ್ಣ ಇವತ್ತು ಬರ್ತಾನೇಂತ ವಿಶಾಲಾಕ್ಷಿ ಹೇಳಿದ್ರು."

"ಇಷ್ಟು ದಿವಸ, ಆತ ಬರೋದನ್ನೇ ನಾನು ಕಾಯ್ತಾ ಇದ್ದೆ."

"ಹೂಂ."

"ಇನ್ನು ಹೇಗೆ ಮಾಡ್ಳೋಣ?"

"ನಿಮ್ಮದೇನು ಅಭಿಪ್ರಾಯ?"

"ನನಗೊಂದೂ ತೋಚ್ತಾ ಇಲ್ಲ. ನಮ್ಮ ತಂದೆಗೆ ವಿವರವಾಗಿ ಕಾಗದ ಬರೀತೀನಿ. ಮೊದಲು ಗಲಾಟೆ ಮಾಡಿದರೂ ಆಮೇಲೆ ಒಪ್ಪಬಹುದು ಅನಿಸುತ್ತೆ."

ಅದನ್ನು ಗಿರಿಜಾಬಾಯಿಯೂ ಊಹಿಸಿದ್ದರು. ಸೂಕ್ಷ್ಮವಾಗಿ ಮಾತನಾಡಿ, ನಿಜ ಸಂಗತಿಗಳನ್ನು ಅವರು ತಿಳಿದಿದ್ದರು.

ಭಿನ್ನ ಜಾತಿಗಳು. ಆದರೂ ಮಹಾದೋಷವಲ್ಲ, ಸ್ವಲ್ಪಮಟ್ಟಿಗೆ ಭಿನ್ನ ಜಾತಿಗಳು.

ಹುಡುಗಿ ಚೆನ್ನಾಗಿಲ್ಲ; 'ದೊಡ್ಡ ಮನೆತನ'ವಲ್ಲ—ಎಂಬ ಆಕ್ಷೇಪ ಇದ್ದದ್ದೇ.

ಆದರೆ, ಈಗಿನ ಕಾಲದಲ್ಲಿ ಹಿರಿಯರ ಒಪ್ಪಿಗೆ ಮುಖ್ಯವಲ್ಲ, ಮದುವೆಯಾಗುವ ಗಂಡು ಸಮ್ಮತಿ ಕೊಟ್ಟರಾಯಿತು.

ಗಂಗಾಧರ ತಮ್ಮ ಉತ್ತರದ ನಿರೀಕ್ಷೆಯಲ್ಲೇ ಇರುವನೆಂಬುದರ ಅರಿವಾಗಿ, ಗಿರಿಜಾಬಾಯಿ ಅಂದರು:

"ನಾಳೆ ಬೆಳಗ್ಗೆ ವಿಶಾಲಾಕ್ಷಿಯ ಮನೆಗೆ ಹೋಗಿ ಅವರ ತಾಯಿಯ ಜತೆ ಪ್ರಸ್ತಾಪ ಮಾಡ್ತೀನಿ. ರಂಗರಾಜನಿಗೂ ಹೇಳ್ತೀನಿ.

"ಹೂಂ."

"ಅವರ ಒಪ್ಪಿಗೆ ಪಡೆದು, ನಮ್ಮ ಯಜಮಾನರಿಗೆ ಬರೀತೀನಿ. ರಜಾ ತಗೊಂಡು ಬರ್ತಾರೆ. ಆಮೇಲೆ ರಂಗರಾಜನೂ ಅವರೂ ಶಿವಮೊಗ್ಗೆಗೆ ಹೋಗಿ ಬರಲಿ. ಅಷ್ಟರೊಳಗೆ ನಿಮ್ಮ ತಂದೆಗೆ ನೀವು ಬರೆದದ್ದೂ ತಲಪಿರುತ್ತೆ...."

ಗಂಗಾಧರನ ಮುಖ ಪ್ರಸನ್ನವಾಯಿತು.

ಗಿರಿಜಾಬಾಯಿ ಮಗಳನ್ನು ಕರೆದು ಹೇಳಿದರು:

"ರಮಾ, ಮಾವನಿಗಿಷ್ಟು ಕಾಫಿ ಮಾಡಿ ಕೊಡ್ತೀಯಾ?"

ಎದ್ದು ನಿಲ್ಲುತ್ತ ಗಂಗಾಧರನೆಂದ:

"ದಯವಿಟ್ಟು ಬೇಡಿ. ಈಗ್ತಾನೇ ಆಯ್ತು."

ಗಿರಿಜಾಬಾಯಿಗೆ ನಗುಬಂತು:

"ಯಾಕೆ ಎದ್ದಿರಿ? ಬೇಡದೇ ಇದ್ದರೆ ಒತ್ತಾಯಿಸೋದಿಲ್ಲ."

"ಇಲ್ಲ, ಇನ್ನು ಹೊರಡ್ತೀನಿ."

"ಈಗ ಬಸ್ಸಿಲ್ಲವಲ್ಲ!"

ಗಂಗಾಧರ, ವಕ್ಷಸ್ಥಲ ವಿಸ್ತಾರವಾಗುವಂತೆ ನೀಳವಾಗಿ ಉಸಿರೆಳೆದು ನುಡಿದ:

"ನನ್ನ ಮನಸ್ಸಿಗೆ ತುಂಬಾ ಸಂತೋಷವಾಗಿದೆ. ನಾಲ್ಕೈದು ಮೈಲಾದರೂ ಇವತ್ತು ಕೈಬೀಸಿ ನಡೀಬೇಕು!"

[ಆತ ನಿಂತ ರೀತಿಯನ್ನು ನೋಡಿ, ಆ ಮಾತುಗಳನ್ನು ಕೇಳಿ, ಗಿರಿಜಾಬಾಯಿಗೆ ಅನಿಸಿತು: 'ವಿಶಾಲಾಕ್ಷಿ ನಿಜವಾಗಿಯೂ ಪುಣ್ಯವಂತೆ.']

ಅವರೆಂದರು:

"ಈವರೆಗೆ ನನ್ನ ಆತ್ಮೀಯ ಗೆಳತೀಂತ ಒಬ್ಬರು ಇರ್ತಿದ್ರು. ಇನ್ನು ಅವರನ್ನ ನನ್ನಿಂದ ಕಸಕೊಳ್ತೀರಿ."

ಗಂಗಾಧರ ಅವರನ್ನೇ ದಿಟ್ಟಿಸಿನೋಡಿ ಅಂದ:

"ನಾವು ಇನ್ನೂ ಎಷ್ಟೋ ಸಮಯ ಇದೇ ಊರಲ್ಲೇ ಇರ್ತೀವಿ, ಗಿರಿಜಾಬಾಯಿಯವರೆ. ವಿಶಾಲಾಕ್ಷಿಯನ್ನು ಕರಕೊಂಡು ಹೋಗಿ, ಅವರ ತಾಯಿ ತಮ್ಮಂದಿರನ್ನೆಲ್ಲ ಕಷ್ಟಕ್ಕೆ ಗುರಿಮಾಡ್ತೀನಿ ಅಂದ್ಕೊಂಡ್ರಾ? ರಂಗರಾಜ ಯಾವುದಾದರೂ ನಿರ್ಧಾರ ಮಾಡೋವರೆಗೂ....ಬೇಡ, ಈಗ್ಲೇ ಯಾಕೆ ಹೇಳ್ಲಿ ಅದನ್ನ?"

ಗಿರಿಜಾಬಾಯಿ ಅವಾಕ್ಕಾದರು.

"ವಿಶಾಲಿ ಜತೆ ಇದನ್ನೆಲ್ಲಾ ಆಗ್ಲೇ ಚರ್ಚಿಸಿದೀರೇನು?"

"ಇಲ್ಲವಪ್ಪ! ಚರ್ಚೆ ಆಗಿರೋದೆಲ್ಲಾ ನನ್ನೊಳಗೇ–ಮನಸ್ಸಿನ ಜತೆ."

ಗಿರಿಜಾಬಾಯಿ ಎದ್ದರು.

"ಆಗಲಿ. ಎಲ್ಲಾ ಸುಗಮವಾಗಿ ನೆರವೇರಬೇಕು–ಅನ್ನೋದೊಂದೇ ನನ್ನ ಆಸೆ. ದೇವರಲ್ಲೂ ಅದೇ ನನ್ನ ಪ್ರಾರ್ಥನೆ."

ನಿಧಾನವಾಗಿ ಗಂಗಾಧರನೆಂದ:

"ನಿಮ್ಮ ಒತ್ತಾಯದಿಂದ ವಿಶಾಲಾಕ್ಷಿ ಲೇಖನ ಬರೆದ್ರು. ಆ ಲೇಖನ ಓದಿ ನಾನು ಮರುಳಾದೆ. ಇವತ್ತು ಪರಿಸ್ಥಿತಿ ಹೀಗಾಗಿರೋದಕ್ಕೆ, ಮೂಲಕಾರಣ ನೀವು! ನಿಮ್ಮ ಜವಾಬ್ದಾರೀನೇ ಹೆಚ್ಚಿನದ್ದು. ನೀವು ತಪ್ಪಿಸಿಕೊಳ್ಳೋ ಹಾಗೇ ಇಲ್ಲ!"

ಏನು ಹೇಳುವುದಕ್ಕೂ ತೋಚದೆ, ಗಿರಿಜಾಬಾಯಿ ಗಟ್ಟಿಯಾಗಿ ನಕ್ಕರು.

## ೧೦

"ಎಂಥ ಒಳ್ಳೆಯ ವಿಷಯ ಪ್ರಸ್ತಾಪ ಮಾಡಿದಿರಿ. ನಿಮ್ಮ ಬಾಯಿಗೆ ಸಕ್ಕರೆ ಬೀಳಲಿ," ಎಂದರು ನಾಗಮ್ಮ, ಗಿರಿಜಾಬಾಯಿ ಬಂದು ತನ್ನೊಡನೆ ಮಾತನಾಡಿದಾಗ.

"ಹುಡುಗ ನಿಮಗೆ ಒಪ್ಪಿಗೆ, ಅಲ್ವೆ ?"

"ನಮ್ಮ ವಿಶಾಲಿಗೆ ಅಷ್ಟು ಒಳ್ಳೆಯ ಗಂಡ ಸಿಗೋದು, ಹಿರಿಯರು ಸಂಪಾದಿಸಿದ ಪುಣ್ಯದ ಬಲದಿಂದಲೇ ಇರಬೇಕು."

"ಆದರೆ, ಒಂದು ತೊಂದರೆ ಇದೆ—"

ಉಸಿರು ಬಿಗಿಹಿಡಿದು, ಅವರ ಮಾತಿಗೆ ನಾಗಮ್ಮ ಕಿವಿಗೊಟ್ಟರು. ಬಳಿಕ ಮೌನವಾಗಿ ಅತ್ತರು. ಅದಾದ ಮೇಲೆ ಕಣ್ಣೊರಸಿಕೊಂಡು, ನೆಲ ನೋಡುತ್ತ, ಮೂಕಿಯಾಗಿ ಕುಳಿತರು.

ತಮ್ಮ ಯಜಮಾನರ ಕೊಠಡಿಯಲ್ಲೆ ನಡೆದಿತ್ತು ಆ ಮಾಕುಕತೆ· ಆ ಜೀವಕ್ಕೆ ಇಷ್ಟವೆ ಇದು? ಪರಮಾತ್ಮನ ಇಚ್ಛೆಯೆ ಹೀಗಾಗಬೇಕೆಂಬುದು?

ಒಂದೊಂದು ಪದವನ್ನೂ ತೂಗಿ ನೋಡುತ್ತ ಗಿರಿಜಾಬಾಯಿ ಅಂದರು:

"ವಿಶಾಲಾಕ್ಷಿಯ ಸುಖ ಅಲ್ಲವೆ, ಮುಖ್ಯ? ಈ ಸಂಬಂಧ ಬೇಡ, ಅಂದರೆ—"

ಮಾತು ನಿಲ್ಲಿಸಲು ಸನ್ನೆಮಾಡಿ, ಗೊಗ್ಗರ ಧ್ವನಿಯಲ್ಲಿ ನಾಗಮ್ಮ ನುಡಿದರು:

"ಎಲ್ಲಾ ನಿಮಗೇ ಬಿಟ್ಟಿದೀನಿ. ದೇವರಿಚ್ಛೆ ಹೇಗಿದೆಯೋ ಹಾಗಾಗುತ್ತೆ."

ಗಿರಿಜಾಬಾಯಿ ಸಮಾಧಾನದ ನಿಟ್ಟುಸಿರು ಬಿಡುತ್ತಿದ್ದಂತೆ, ನಾಗಮ್ಮ ಮಗನನ್ನು ಕರೆದರು:

"ರಾಜೂ, ಇಲ್ಲಿಗೆ ಬಾ,"

ರಂಗರಾಜ ಬಂದವನು ವಿಷಯ ತಿಳಿದೊಡನೆ ಅಂದ :

"ಸಂತೋಷ! ಹೀಗಿರಬಹುದೂಂತ ನಾನು ಆಗಲೇ ಊಹಿಸ್ಕೊಂಡಿದ್ದೆ."

"ಹೇಗೆ?" ಎಂದು ಕೇಳಿದರು ಗಿರಿಜಾಬಾಯಿ.

"ನಮ್ಮ ದೇವರ ಸತ್ಯ ನಮಗೆ ತಿಳೀದೆ? ವಿಶಾಲಾಕ್ಷೀನ ನೋಡಿದರೆ ಗೊತ್ತಾಗೊಲ್ವೇನು?"

"ಆದರೆ, ಒಂದು ತೊಂದರೆ—"

ಅದೇನೆಂದು ತಿಳಿದ ರಂಗರಾಜ, ಸ್ಪಷ್ಟವಾಗಿ ಅಂದ:

"ಹೀಗೆಲ್ಲಾ ನೂರು ಜಾತಿ–ಸಾವಿರ ಪಂಗಡ ಆಗಿರೋದರಿಂದಲೇ ನಮ್ಮ ದೇಶ ಇನ್ನೂ ಈ ಸ್ಥಿತೀಲಿರೋದು."

[ವಿದೇಶಯಾತ್ರೆ ಮಾಡಿಬಂದವನಲ್ಲವೆ ಆತ?]

"ನಮ್ಮ ಯಜಮಾನರು ಬರ್ತಾರೆ. ಅವರ ಜತೆ ನೀವು ಶಿವಮೊಗ್ಗೆಗೆ ಹೋಗಿರಬೇಕು."

"ಯಾವತ್ತು ಹೇಳ್ತೀರೋ ಆವತ್ತು. ಸಿದ್ಧನಾಗೇ ಇದೀನಿ."

* * * *

ಗಂಡ ರಾಮಚಂದ್ರಯ್ಯ ಬೆಂಗಳೂರಿನಿಂದ ಬಂದೊಡನೆ, ಗಿರಿಜಾಬಾಯಿ ಅವರಿಗೆ ಅಂದರು :

"ನಾಳೆ ರಮಾಗೆ ಗಂಡು ಹುಡುಕೋದು ಇದ್ದೇ ಇದೆಯಲ್ಲ. ಈಗಿನಿಂದಲೇ ಅಭ್ಯಾಸವಾಗಲಿ. ಅವರಿಗೆ ಯಾರೂ ದಿಕ್ಕಿಲ್ಲ. ಹೋಗಿ ಬನ್ನಿ."

ಮೊದಲು, ತಾನು ಕಾಗದವನ್ನಷ್ಟೇ ಬರೆದರೆ ಸಾಕು–ಎಂದುಕೊಂಡಿದ್ದ ಗಂಗಾಧರ. ಅದನ್ನು ಬರೆದೂ ಇದ್ದ. ಬಳಿಕ, ಇವರಿಬ್ಬರ ಜತೆ ತಾನೂ ಹೋಗುವುದು ಮೇಲು ಎನಿಸಿತು.

ಶಿವಮೊಗ್ಗೆಯಲ್ಲಿ ಗಂಗಾಧರನ ತಂದೆ ಕಿಡಿಕಾರುತ್ತ ಅವರನ್ನು ಸ್ವಾಗತಿಸಿದರು.

"ನೀನೂ ಬಂದ್ಬಿಟ್ಟೆಯೋ ಜತೆಗೆ?" ಎಂದು ಮಗನನ್ನು ನೋಡಿ ಮೂದಲಿಸಿದರು.

"ಮೈಸೂರು ಶಹರ ಏನೋಂತಿದ್ದೆ. ಪರವಾಗಿಲ್ಲ! ಸಂಭಾವಿತನದ ಸೋಗು ಹಾಕ್ಕೊಂಡೇ ಬಲೆ ಬೀಸ್ತೀರಿ!"

"ಅಪ್ಪ, ನಿಲ್ಸು!" ಎಂದು ಗಂಗಾಧರ ಕೂಗಾಡಿದ, ಅಂಗಾಂಗ ಕಂಪಿಸುತ್ತ.

ಅವರು ನಿಲ್ಲಿಸಲಿಲ್ಲ. ಮುಂದುವರಿಸುತ್ತ, ಧ್ವನಿ ಏರಿಸಿ, ಅಂದರು:

"ಈ ಮದುವೆ ಹೇಗಾಗುತ್ತೋ ನೋಡ್ತೀನಿ. ನಮ್ಮ ಹುಡುಗನಿಗೆ ತಲೆ ಕೆಟ್ಟಿದೆ ಅಂತ, ಇವನನ್ನು ಹಿಡಿದು ಕಟ್ಟಿ, ಆಸ್ಪತ್ರೆಗೆ ಸೇರಿಸ್ತೀನಿ!"

ಸಿಟ್ಟಿನ ಮಧ್ಯೆಯೂ ಗಂಗಾಧರನಿಗೆ ನಗುಬಂತು.

"ಒಳ್ಳೇ ಹುಚ್ಚಪ್ಪ ನೀನು! ಆಗಲಿ ನೋಡೋಣ!" ಎಂದ.

ರಾಮಚಂದ್ರಯ್ಯನನ್ನೂ ರಂಗರಾಜನನ್ನೂ ಕರೆದುಕೊಂಡು ಗಂಗಾಧರ, 'ನ್ಯಾಷನಲ್ ಲಾಡ್ಜಿ'ಗೆ ಬಂದ. ತಾನೂ ಅವರ ಜತೆ ಅಲ್ಲಿಯೇ ಉಳಿದ.

"ರೂಂ ತಗೋಳೋದು ಯಾತಕ್ಕೆ? ಇವತ್ತು ಸಂಜೆಯೇ ಹೊರಟು ಬಿಡೋಣ, ಆಗದೆ?" ಎಂದು ರಂಗರಾಜ ಬೇಸರದಿಂದ ಕೇಳಿದ.

ರಾಮಚಂದ್ರಯ್ಯನಿಗಂತೂ, ತಾನು ಬಂದ, ಏನೂ ಪ್ರಯೋಜನವೂ ಆಗಲಿಲ್ಲವಲ್ಲಾ ಎಂದು, ವ್ಯಥೆಯಾಗಿತ್ತು.

ನಿಯೋಗದ ಹಿರಿತನವನ್ನು ಗಂಗಾಧರನೇ ವಹಿಸಿ, ತನ್ನ ನಿರ್ಧಾರವನ್ನು ತಿಳಿಸಿದ:

"ಹೀಗೆ ರೇಗಾಡೋದು ನಮ್ಮಪ್ಪನ ಗುಣ. ನಾಳೆ ಬೆಳಗ್ಗೆ ಆತನೋ ನಮ್ಮಣ್ಣನೋ ಇಲ್ಲಿಗೆ ಬರಬಹುದು. ಅವರಿಗೆ ಅಷ್ಟು ಅವಕಾಶ ಕೊಡೋಣ. ಬರದೇ ಇದ್ದರೆ ಬೇಡ. ರೈಲಿಗೆ ಹೊರಟುಬಿಡೋಣ. ನಮ್ಮ ದೇಶದಲ್ಲಿ ಪುರೋಹಿತರಿರುವವರೆಗೂ ಮದುವೆಗಳು ನಿಲ್ಲೋದಿಲ್ಲ! ಎಲ್ಲ ಏರ್ಪಾಟೂ ಮಾಡೋಣ...."

"ಆಗಲಿ," ಎಂದರು ರಾಮಚಂದ್ರಯ್ಯ.

ರಂಗರಾಜನೆಡೆ ತಿರುಗಿ ಗಂಗಾಧರನೆಂದ:

"ಭಾವಯ್ಯ! ನೀವಂತೂ ರಷ್ಯಕ್ಕೆ ಹೋಗಿ ಬಂದವರು. ಗಟ್ಟಿಯಾಗಿದೀರಿ–ಅಲ್ವೆ?"

ಆತನ ಮಾತು ಕೇಳಿ ಆ ಅಸಹಾಯ ಪರಿಸ್ಥಿತಿಯಲ್ಲೂ ರಂಗರಾಜನಿಗೆ ನಗು ಬಂತು....

....ಗಂಗಾಧರನ ನಿರೀಕ್ಷೆ ಅಕ್ಷರಶಃ ನಿಜವಾಯಿತು. ಅವನ ತಂದೆಯಲ್ಲ–ಅಣ್ಣ, ಮಾರನೆಯ ಬೆಳಗ್ಗೆ ನಸುಕಿನಲ್ಲಿ ಹೋಟೆಲಿಗೆ ಬಂದ.

"ಅಪ್ಪ ಮದುವೆಗೆ ಒಪ್ಪಿದಾರೆ" ಎಂದ ತಮ್ಮನೊಡನೆ.

ಉಳಿದಿಬ್ಬರ ಕಡೆ ತಿರುಗಿ ಆತ ಹೇಳಿದ:

"ನಿನ್ನೆ ಅವಮಾನವಾಯಿತು. ಕ್ಷಮಿಸಬೇಕು."

ಅಷ್ಟರಲ್ಲೆ ಇಡ್ಲಿ ಕಾಫಿ ಅರ್ಡರ್ದು ಕೊಠಡಿಗೆ ಬಂತು. ಗಂಗಾಧರ ಇನ್ನೊಂದು ಪ್ಲೇಟು ತರಿಸಿದ, ಅಣ್ಣನಿಗೋಸ್ಕರ.

"ನಾವು ಈಗ ಹೊರಡ್ತೀವಿ. ನೀನು ಹೋಗ್ತಾ, ಹೋಟೆಲಿನ ಬಿಲ್ಲು-ಊಟದ ವಸತಿ ಎರಡರಡೂ-ಕೊಟ್ಟುಹೋಗು," ಎಂದ ಅಣ್ಣನೊಡನೆ.

"ಬೇಡಿ, ಬೇಡಿ," ಎಂದರು ರಾಮಚಂದ್ರಯ್ಯ.

"ಬೇಡೋದು ನಿನ್ನೆಗೇ ಮುಗೀತು," ಎಂದುಬಿಟ್ಟ ಗಂಗಾಧರ.

ಆತನ ಅಣ್ಣ ಸ್ವರತಗ್ಗಿಸಿ ಕೇಳಿದ:

"ಮನೆಗೆ ಬಂದು ಹೋಗ್ತೀಯಾ?"

ರಹಸ್ಯವೇನುಬಂತು ಅದರಲ್ಲಿ? ಯಾವ ಕಾರಣದಿಂದಲೂ ತನ್ನ ಸ್ವರತಗ್ಗಿಸಲು ಗಂಗಾಧರ ಸಿದ್ಧನಿರಲಿಲ್ಲ.

"ನಮ್ಮ ಹುಚ್ಚಪ್ಪನಿಗೆ ಹೇಳು-ಆಮಂತ್ರಣ ಪತ್ರಿಕೆ ಬಂದರೆ ಬಂತು ಇಲ್ಲದಿದ್ದರಿಲ್ಲ. ಒಂದು ಟೆಲಿಗ್ರಾಂ ಕೊಡ್ತೀನಿ. ಅದರಲ್ಲಿ ಹೇಳಿದ ಜಾಗಕ್ಕೆ ಹೇಳಿದ ದಿವಸ ನೀವೆಲ್ಲಾ ಬಂದ್ಬಿಡಬೇಕು. ನಿನ್ನ ಕಿರಿಮಗನಿಗೆ ಆಸ್ತಿಯಲ್ಲಿ ಒಂದು ಬಿಡುಗಾಸೂ ಬೇಡವಂತೆ, ಮುಂದೆ ಅವನು ಮೈಸೂರಿನಲ್ಲೇ ಇರ್ತಾನಂತೆ-ಅಂತಲೂ ಹೇಳು."

ಗಂಗಾಧರನ ಮಾತಿನ ವೈಖರಿ ಕಂಡು, ರಾಮಚಂದ್ರಯ್ಯನ ಮುಖ ಗೆಲುವಾಯಿತು; ರಂಗರಾಜ ಉಬ್ಬಿಹೋದ.

—ನಿಯೋಗ ಮೈಸೂರಿಗೆ ಮರಳಿತು.

....ತಮ್ಮ ಗಂಡನ ಮುಖವೇ ಸಾರುತ್ತಿತ್ತು, ಉದ್ದೇಶ ಸಫಲವಾಗಿತ್ತೆಂಬುದನ್ನು. ಆದರೂ ಗಿರಿಜಾಬಾಯಿ ಕೇಳಿದರು.

"ಅವರನ್ನು ಒಲಿಸೋದು ಬಹಳ ಕಷ್ಟವಾಯ್ತೇನು?"

"ಮೊದಲು ಒಂದು ಲೋಟ ನೀರು ಕೊಡು," ಎಂದರು ರಾಮಚಂದ್ರಯ್ಯ.

ಅದನ್ನು ಕುಡಿದ ಬಳಿಕ ಅವರು, 'ಶಿವಮೊಗ್ಗಾ ವಿಜಯ'ದ ಕಥನ ಆರಂಭಿಸಿದರು.

ನಕ್ಕು ನಕ್ಕು, ಗಿರಿಜಾಬಾಯಿಯ ಹೊಟ್ಟೆ ಹುಣ್ಣಾಗಿ ಹೋಯಿತು.

ರಾತ್ರೆ ದೀಪ ಆರಿಸಿ ಗಂಡನ ಮಗ್ಗುಲಲ್ಲಿ ಮಲಗಿಕೊಂಡ ಮೇಲೂ, ಗಿರಿಜಾಬಾಯಿಗೆ ಒಮ್ಮಿಂದೊಮ್ಮೆಲೆ ಆ ವಿವರ–ಅದರಲ್ಲೂ, ಗಂಗಾಧರ ಅಣ್ಣನ ಕೈಯಲ್ಲಿ ಬಿಲ್ ಸಂದಾಯ ಮಾಡಿಸಿದುದು–ನೆನಪಾಗಿ, ಒಮ್ಮೆಲೆ ಅವರು ನಗತೊಡಗಿದರು.

“ಏನಾಯ್ತು?” ಎಂದು ಕೇಳಿದರು ರಾಮಚಂದ್ರಯ್ಯ.

[ಸಾಕಷ್ಟು ದೂರವೇ ತಾನು ಮಲಗಿದ್ದೆನೆಂದ ಮೇಲೂ—]

“ನಿಮ್ಮ ಶಿವಮೊಗ್ಗಾ ವಿಜಯದ ಕಥೆ ನೆನಪಾಯ್ತು.”

ನೆನಪು ಮಿಂಚಿ, ನಗೆಯ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ, ರಾಮಚಂದ್ರಯ್ಯನೂ ಖೋ ಖೋ ಖೋ ಎಂದರು.

ಒಳಗೆ ತಂಗಿಯರ ಜತೆ ಮಲಗಿದ್ದ ರಮಾಗೆ ನಿದ್ದೆ ಬಂದಿರಲಿಲ್ಲ. ಹೆತ್ತವರ ನಗೆಯ ಅಲೆ ಗೋಡೆಗೆ ಅಪ್ಪಳಿಸಿ ತನ್ನ ಕೊಠಡಿಯಲ್ಲೂ ಪ್ರತಿಧ್ವನಿಸಿದಾಗ, ಅವಳಿಗೆ ನಾಚಿಕೆಯಾಯಿತು.

## ೧೧

ಗಿರಿಜಾಬಾಯಿ ಸಂತಸ ಹೇಳತೀರದು. ['ಹೇಗೇ ಆಗಲಿ,-ಮದುವೆ ಯಾಗುತ್ತಲ್ಲ!'] ಆ ಸಾಮಾನು ಬೇಕು, ಈ ಸಾಮಾನು ಬೇಕು-ಎಂದು ದಿನ ವೆಲ್ಲ ನೆನಪು ಮಾಡಿಕೊಳ್ಳುತ್ತ, ಜಯರಾಮುವಿನ ಕೈಯಲ್ಲಿ ಅವರು ಪಟ್ಟಿ ಬರೆಸಿ ದರು. ಆ ಪಟ್ಟಿಗೆಂದೇ, ಪರೀಕ್ಷೆಯಲ್ಲಿ ಉತ್ತರ ಬರೆಯುವ ಹಲಗೆಯ ಮೇಲೆ, ಫೂಲ್ಸ್‌ಕ್ಯಾಪ್ ಹಾಳೆಯನ್ನೇ ಆತ ಹಚ್ಚಿದ. ರಂಗರಾಜ, ಚಂದ್ರ,-ಎಲ್ಲರಿಗೂ ಒಂದಲ್ಲ ಒಂದು ಕೆಲಸ.

ವಿಶಾಲಾಕ್ಷಿಯೊಬ್ಬಳೇ ಸುಮ್ಮನಿರುವುದು ಹೇಗೆ ಸಾಧ್ಯ? ತನ್ನ ಕೊಠಡಿ ಯಲ್ಲಿ ಕುಳಿತು, ಆಮಂತ್ರಣ ಕಳುಹಬೇಕಾದವರ ಹೆಸರು ವಿಳಾಸಗಳನ್ನು ಬರೆಯ ತೊಡಗಿದಳು.

ಮದುವೆ ಪಶ್ಚಿಮವಾಹಿನಿಯಲ್ಲಿ ಎಂದು ಗೊತ್ತಾಗಿತ್ತು. ವಿವಾಹ ಸಮಾ ರಂಭಕ್ಕೋಸ್ಕರ ಹೆಚ್ಚಿನ ಖರ್ಚು ಆಗಲೇಬಾರದು-ಎಂದು ಗಂಗಾಧರ ಹಟ ತೊಟ್ಟ.

"ಮದುವೆಗೆ ನಾವು ಮಾಡುವಷ್ಟು ಖರ್ಚು, ಅಮೆರಿಕ-ಇಂಗ್ಲೆಂಡ್-ರಷ್ಯ ಎಲ್ಲಿಯೂ ಆಗೋದಿಲ್ಲ. ಭಾವಯ್ಯನನ್ನು ಕೇಳಿ ಬೇಕಾದರೆ!"

ವಿಶಾಲಾಕ್ಷಿಯ ಕೈಯಲ್ಲಿದ್ದ ವಿಳಾಸಗಳ ಪಟ್ಟಿ ನೋಡಿ ಆತನೆಂದ:

"ಇನ್ನೂ ಬಂದಷ್ಟು ಸೇರಿಸಬಹುದು, ನನ್ನದೂ ದೊಡ್ಡ ಪಟ್ಟಿ ಕೊಡ್ತೀನಿ. ಊಟಕ್ಕೆ ಅಷ್ಟು ದೂರ ಯಾರೂ ಬರೋದಿಲ್ಲ ಅನ್ನೋದು ಖಾತ್ರಿಯಾದ್ಮೇಲೆ ಆ ಮಂತ್ರಿಸೋದಕ್ಕೇನು? ಈ ಮದುವೇಲಿ ಆಮಂತ್ರಣ ಪತ್ರಿಕೆ ಕಳಿಸೋದೇ ಖರ್ಚಿನ ದೊಡ್ಡ ಬಾಬಾಗಬೇಕು!"

'ಅಳಿಯನ ಸೂಟು'-ಗಂಗಾಧರ ತನ್ನ ವೆಚ್ಚದಿಂದ ತಾನೇ ಹೊಲಿಸಿದ.

ವಿಶಾಲಾಕ್ಷಿಯಾಗಲೇ ಕೆಲಸಕ್ಕೆ ಸೇರಿಕೊಳ್ಳಬೇಕಾಗಿತ್ತು. ಪ್ರಿನ್ಸಿಪಾಲರನ್ನು ಕಂಡು ಅವಳು ಮತ್ತೂ ಒಂದು ತಿಂಗಳ ರಜಾ ಪಡೆದಳು.

ಪ್ರಿನ್ಸಿಪಾಲರು ಕೇಳಿದರು:

"ಮದುವೆ ಆದ್ಮೇಲೆ ಗಂಡನ ಊರಿಗೆ ಹೋಗ್ತೀರೇನೊ ?"

ವಿಶಾಲಾಕ್ಷಿ ಅಂದಳು ;

"ಗಂಡ ಇರೋದೂ ಇಲ್ಲೇ. ಈ ಊರಲ್ಲೇ ಲೆಕ್ಚರರ್ ಆಗ್ತಾರೆ."

"ಹಾಗಾದರೆ ಸಂತೋಷ."

ವಿಶಾಲಾಕ್ಷಿಗೆ ಒಡವೆವಸ್ತು, 'ಮದುವೆಯ ಜವಳಿ' ದೊಡ್ಡ ಅಂಚಿನ ಸೊಗಸಾದ ಜರತಾರಿ ಸೀರೆ, ತಿಳಿ ಹಸುರುಬಣ್ಣದ್ದು. ಕಿವಿಗೆ ಮುತ್ತಿನ ಬೆಂಡೋಲೆ. ಕೊರಳಿಗೆ 'ತಾಳಿ'–ಎರಡೆಳೆಯ ಬಂಗಾರದ ಸರ. ಕೈಗಳಿಗೆ ಚಿನ್ನದ ಬಳೆ–ಎರಡೆರಡು.

ವರದಕ್ಷಿಣೆಯನ್ನೂ ಮುಟ್ಟದ ಗಂಡ. ಅಷ್ಟಾದರೂ ಬೇಡವೆ ಮಗಳಿಗೆ?

ಒಂದು ದಿನ ಗಂಗಾಧರ ಮನೆಗೆ ಬಂದು, ನಾಗಮ್ಮನವರೊಡನೆ ಅಂದ:

"ಅತ್ತೆ, ಇಷ್ಟೆಲ್ಲಾ ಮಾಡಿಸಿದಿರಿ. ನಿಮ್ಮ ಮಗಳಿಗೆ ಇನ್ನೊಂದು ಒಡವೆ ಕೊಡಿಸಬೇಕಾಗಿದೆ."

ಅಳಿಯ ಕೇಳುತ್ತಿದ್ದಾನೆ ; ಎಷ್ಟೇ ಖರ್ಚಾಗಲಿ, ಕೊಡಿಸಲೇಬೇಕು–ಎಂದುಕೊಂಡು ನಾಗಮ್ಮ ಉತ್ತರವಿತ್ತರು:

"ಯಾವುದಪ್ಪಾ?"

"ಕನ್ನಡಕದ ಚೌಕಟ್ಟು. ಈಗಿರೋದು ಚೆನ್ನಾಗಿಲ್ಲ."

"ಬಂಗಾರದ್ದು ಬೇಕೆ ?"

"ಅಲ್ಲ. ಒಂದು ಥರಾ ಚೆಪ್ಪಿಂದು."

"ಎಷ್ಟಾಗುತ್ತೆ ?"

"ಹದಿಮೂರು–ಹದಿನಾಲ್ಕು ರೂಪಾಯಿ."

"ಹೋಗಪ್ಪ ನೀನು !" ಎಂದು ಗಿರಿಜಾಬಾಯಿ, ಸಿಟ್ಟಾದವರಂತೆ ನಟಿಸಿ.

ಅಷ್ಟು ಹಣ ಅತ್ತೆ ಕೊಡಲಿಲ್ಲವೆಂದು, ಗಂಗಾಧರ ಸ್ವತಃ ತಾನೇ ವಿಶಾಲಾಕ್ಷಿಯನ್ನು ಕರೆದೊಯ್ದು, ರಿಮ್‌ಲೆಸ್‌ಫ್ರೇಮಿಗಿಂತಲೂ ಹೆಚ್ಚು ಆಧುನಿಕವಾದ ಷೆಲ್‌ಫ್ರೇಂ ತೆಗೆಸಿಕೊಟ್ಟ.

ಮದುವೆಗೆ ಆರೇ ದಿನಗಳು ಉಳಿದುವು. ಗಿರಿಜಾಬಾಯಿಯೂ ರಜಾ ಪಡೆದರು. ಬೆಂಗಳೂರಿನಿಂದ ಗಂಡ ಪುನಃ ಬರುವಂತಿರಲಿಲ್ಲ. ಮಕ್ಕಳನ್ನೆಲ್ಲ ಕರಕೊಂಡು ಮದುವೆಗೆ ತಾನು ಹೋದ ರಾ ಯಿ ತು – ಎಂದು ಅವರು ಯೋಚಿಸಿದರು.

ತಂಗಿಯ ಲಗ್ನವೆಂದು ರಂಗರಾಜ ಸಂತಸದಿಂದ ಓಡಾಡುತ್ತಿದ್ದರೂ, ಭಿಲಾಯಿಯ ನೆನಪೂ ದಿನಕ್ಕೆ ನಾಲ್ಕಾರುಬಾರಿ ಆತನಿಗೆ ಆಗುತ್ತಿತ್ತು. ಅಪೇಕ್ಷಿಸಿದ್ದಷ್ಟು ರಜಾ ದೊರೆತಿರಲಿಲ್ಲ. ಮದುವೆ ಮುಗಿದೊಡನೆ ತಾನು ಹೊರಟುಬಿಡಬೇಕು–ಎಂದುಕೊಂಡ.

ಅದನ್ನು ತಿಳಿದ ನಾಗಮ್ಮ ಕೇಳಿದರು :

"ಹೊರಡ್ಲೇ ಬೇಕೇನೊ ?"

"ಹೂನಮ್ಮ."

ಗಂಗಾಧರ ಮಧ್ಯೆ ಪ್ರವೇಶಿಸಿ ಮಾತನಾಡಿದ :

"ಅತ್ತೆ, ಭಾವಯ್ಯನಿಗೋಸ್ಕರ ಒಳ್ಳೆಯ ಹೆಣ್ಣು ಹುಡುಕ್ಕೋಣ. ಇವನ ಮದುವೆಯಾಗೋವರೆಗೂ ನಾನು ಮನೆಯಳಿಯನಾಗಿ, ಇಲ್ಲಿಯೇ ಇರ್ತೀನಿ."

ತುಸು ವಿಚಿತ್ರವಾಗಿಯೇ ನಡೆಯುತ್ತಿದ್ದ ಈ ಮದುವೆಯ ಬಗೆಗೆ ಜನ ಏನೆನ್ನುವರೋ ಎಂಬ ಚಿಂತೆ, ಕೆಲ ದಿನಗಳೇನೋ ನಾಗಮ್ಮನನ್ನು ಕಾಡಿತು. ಕ್ರಮೇಣ ಆ ಚಿಂತೆಯನ್ನು ಮೂಲೆಗೊತ್ತಿ ಹಸನ್ಮುಖಿಯಾಗಿರಲು ಅವರು ಸಮರ್ಥರಾದರು.

ಗಂಗಾಧರ ತಂದೆಗೆ ಕಾಗದವನ್ನೂ ಬರೆದ; ತಂತಿಯನ್ನೂ ಕೊಟ್ಟ....

ಮದುವೆಯ ಹಿಂದಿನ ರಾತ್ರೆ ಕೆಲವೇ ಜನರ ಈ ತಂಡ ಪಶ್ಚಿಮವಾಹಿನಿಯಲ್ಲಿ ಬೀಡುಬಿಟ್ಟಿತು. ಸಮೀಪದಲ್ಲೇ ವರ್ಷಕಾಲದ ಕಾವೇರಿ ಮೈತುಂಬಿ ಹರಿಯುತ್ತಿದ್ದಳು. ಕಣ್ಣಿಗೆ ಹಬ್ಬವಾಗಿತ್ತು ಹಸುರು. ಅನತಿ ದೂರದಲ್ಲೇ ಶ್ರೀರಂಗಪಟ್ಟಣ, ಟೀಪುವಿನ ಮಹಾದುರ್ಗದ ಭಗ್ನಾವಶೇಷಗಳು....

ಮದುವೆಯ ದಿನ ಬೆಳಗ್ಗೆ, ತುಮಕೂರಿನಿಂದ ನಾಗಮ್ಮನ ತಂಗಿಯೂ ಆಕೆಯ ಗಂಡನೂ ಮಕ್ಕಳೊಡನೆ ಬಂದರು; ಶಿವಮೊಗ್ಗೆಯಿಂದ ಗಂಗಾಧರನ ತಂದೆಯೂ ಅಣ್ಣ ಮತ್ತು ಅತ್ತಿಗೆಯೂ ಬಂದಿಳಿದರು.

[‘ಅಯ್ಯೋ! ಏನೋಂತಿದ್ದೆ. ಅಂತೂ ಇಂಥಾ ಹುಡುಗೀನೇನಾ ನಮ್ಮ ಮೈದುನ ಕಟ್ಕೊಂಡಿದ್ದು! ಥೂ!’ ಎಂದುಬಿಟ್ಟಳು ಗಂಗಾಧರನ ಅತ್ತಿಗೆ, ಏಕಾಂತ ದಲ್ಲಿ, ತನ್ನಷ್ಟಕ್ಕೇ.]

ನರ್ಮದೆ ಬರಲಿಲ್ಲವೆಂದು ವಿಶಾಲಾಕ್ಷಿಗೆ ಬೇಸರವೆನಿಸಿತು. ಅವಳು ಕಾಗದ ಬರೆದು ಕಳುಹಿದ್ದಳು–ಕನ್ನಡದಲ್ಲಿ.

ಮುದ್ದು ವಿಶಾಲಿ,

ಮದುವೆಯ ದಿನವೆಲ್ಲ ದೇಹ ಇಲ್ಲಿದ್ದರೂ ನನ್ನ ಆತ್ಮ ಅಲ್ಲಿಯೇ, ನಿನ್ನ ಹತ್ತಿರವೇ ಇರುತ್ತದೆ. ಡಾಕ್ಟರಿಗೆ ಏನೇನೂ ಪುರಸೊತ್ತಿಲ್ಲ. ಇಲ್ಲ ದಿದ್ದರೆ ಖಂಡಿತ ಬರುತ್ತಿದ್ದೆವು. ಮದುವೆ ಮುಗಿಸಿದ ಮಾರನೆಯ ದಿನವೇ ಇಲ್ಲಿಗೆ ವಾಪಸಾಗುತ್ತೀರಲ್ಲವೆ? ಆರತಿ ಅಕ್ಷತೆ ಸಮಾರಂಭ ಸಾರ್ವಜನಿಕ ವಾಗಿ ಇಲ್ಲವೆಂದು ಕೇಳಿದೆ. ಬೇಸರವಾಯ್ತು ಕಣೇ. ಏನೇ ಇರಲಿ, ಬಹಳ ಕಾಲದಿಂದ ನಾವು ನಿರೀಕ್ಷಿಸಿದ್ದು ಈಗ ನೆರವೇರುತ್ತಿದೆಯಲ್ಲಾ–ಅಂತ ಸಂತೋಷ.

ನನ್ನದೊಂದು ವಿನಂತಿ ಇದೆ. ನೀನು ಮಾನ್ಯ ಮಾಡಲೇಬೇಕು. ಇಲ್ಲಿಗೆ ವಾಪಸಾದ ದಿನವೇ ಮಧ್ಯಾಹ್ನ ಮೂರು ಗಂಟೆಗೆ ನೂತನ ವಧೂ ವರರಿಬ್ಬರೂ ನಮ್ಮಲ್ಲಿಗೆ ಬಂದು, ಅಲ್ಪೋಪಹಾರ ಸ್ವೀಕರಿಸಬೇಕು. ಎಷ್ಟೇ ತೊಂದರೆಯಾದರೂ ಚಿಂತಿಲ್ಲ, ಬರಲೇಬೇಕು. ನಿಮ್ಮನ್ನು ಆದಷ್ಟು ಬೇಗನೆ ಕಳಿಸಿಕೊಡುವ, ಮನೆ ಮುಟ್ಟಿಸುವ ಜವಾಬ್ದಾರಿ ನನ್ನದು....

ಎಲ್ಲವೂ ಸಾಂಗವಾಗಿ ಜರಗಲೆಂಬುದೇ ನಮ್ಮಿಬ್ಬರ ಹಾರೈಕೆ.

ಅನಂತ ಶುಭಾಶಯಗಳು,

ಪ್ರೀತಿಪೂರ್ವಕ,

ನರ್ಮದಾ.

ನರ್ಮದೆಯ ಪತ್ರವನ್ನೋದಿದಾಗ ವಿಶಾಲಾಕ್ಷಿಗೆ, ತನ್ನ ಗೆಳತಿಯರೆಲ್ಲರ ನೆನಪೂ ಆಗಿ, ಕಣ್ಣುಗಳ ಅಂಚಿನಲ್ಲಿ ನೀರು ತುಳುಕಿತು.

ಆಭರಣ ವಸ್ತ್ರಾಲಂಕಾರ ಶೋಭಿತೆಯಾದಾಗ ವಿಶಾಲಾಕ್ಷಿ ನಿಜವಾಗಿಯೂ ಎಷ್ಟೊಂದು ಸುಂದರಿಯಾಗಿ ಕಂಡಳು! ಒಂದುಕ್ಷಣ ಅಲ್ಲಿಯೇ ಗೋಡೆಗೊರಗಿ ನಿಂತು, ಗೆಳತಿಯನ್ನು ಗಿರಿಜಾಬಾಯಿ ಕಣ್ಣುತುಂಬ ನೋಡಿದರು. ವಿಶಾಲಾಕ್ಷಿಯ

ಬದುಕಿನ ಆ ಅಮೃತ ಘಳಿಗೆಯಲ್ಲಿ, ತಾನು ಧನ್ಯೆ—ತಾನು ಧನ್ಯೆ—ಎಂದು ಅವಂಗೆ ಅನಿಸಿತು. ಅವಳನ್ನು ನೋಡನೋಡುತ್ತ ಅವರ ಕಣ್ಣುಗಳು ಮಂಜಾದುವು.

ನಾಗಮ್ಮ ಎದುರು ಬರಲಾಗದೆ ಮರೆಯಲ್ಲಿ ನಿಂತು, ಕಂಬನಿಯಿಂದ ಕಪೋಲಗಳನ್ನು ತೊಯಿಸಿಕೊಳ್ಳುತ್ತ, ಮಗಳನ್ನೂ ಅಳಿಯನನ್ನೂ ಮನದಣಿಯೆ ನೋಡಿದರು.

ನಾಗಸ್ವರ ಮೊಳಗಿತು. ಸುಮುಹೂರ್ತ ಸನ್ನಿಹಿತವಾಯಿತು. ಪುರೋಹಿತರು, ಪ್ರಕೃತಿಯಲ್ಲಿ ಪ್ರತಿಧ್ವನಿತವಾಗುವಂತೆ ಮಂತ್ರಪಠನ ಮಾಡಿದರು.

ಅಕ್ಕಿಕಾಳು ಬಿತ್ತು, ವಧೂವರರ ತಲೆಯ ಮೇಲೆ.

## ೧೨

ವಿಶಾಲಾಕ್ಷಿಗೆ ಮದುವೆಯಂತೆ–ಎಂಬ ಸುದ್ದಿ ಮೊದಲು ತಿಳಿದಾಗ, ನರ್ಮದೆ ನಂಬಿರಲಿಲ್ಲ.

ಅದೇ ಆಗ ಶ್ರೀಕಾಂತ ಕಾರು ಕೊಂಡುದರಿಂದ ವಿಶಾಲಾಕ್ಷಿಯ ಮನೆಗೆ ಸ್ವತಃ ಹೋಗುವುದು, ವಿಚಾರಿಸುವುದು, ಸಾಧ್ಯವಾದೀತೆಂದು ನರ್ಮದಾ ಭಾವಿಸಿದ್ದಳು. [ಹೊಸದೇ ಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಇದು ಹಳೆಯದಾದರೂ ಪರವಾಗಿರಲಿಲ್ಲ. ಮಾರಿಸ್ ಮೈನರು–ನಾಲ್ವತೆಂಟರ ಮಾದರಿ. ಸೊಗಸಾಗಿತ್ತು.] ಡ್ರೈವರೂ ಒಬ್ಬ ಇರುವನೆಂದು ಬಣ್ಣಿಸಿದ್ದಳು ನರ್ಮದಾ, ಖಾಸಗಿವೃತ್ತಿ ಆರಂಭಿಸಿದಂದಿನಿಂದ ಅರ್ಥಶಾಸ್ತ್ರದಲ್ಲಿ ನಿಪುಣನಾಗಿದ್ದ ಶ್ರೀಕಾಂತ, ಲೆಕ್ಕಾಚಾರಹಾಕಿ ತೋರಿಸಿದ್ದ: ಸಂಬಳಕೊಟ್ಟು ಡ್ರೈವರನನ್ನು ಇರಿಸಿಕೊಳ್ಳುವುದು ತಮ್ಮ ಕೈಲಾಗದೆಂದು. ಲೈಸೆನ್ಸ್ ಬರುವವರೆಗೂ ಒಬ್ಬನಿದ್ದ. ಮುಂದೆ ಶ್ರೀಕಾಂತನೇ ಡ್ರೈವರು, ಶ್ರೀಕಾಂತನೇ ಕಂಡಕ್ಟರು. [ಕಾರಿಗಾಗಿ ಷೆಡ್ಡಿರಲಿಲ್ಲ. ಮನೆಯ ಮಗ್ಗುಲಲ್ಲೆ ತಾತ್ಕಾಲಿಕ ಆಸರೆಯೊಂದು ಸಿದ್ಧವಾಯಿತು.] ಹೀಗಾಗಿ, ಗೆಳತಿಯರ ಮನೆಗೆಲ್ಲ ನರ್ಮದಾ ಹೋಗಿಬರುವುದು, ಈಡೇರದ ಆಸೆಯಾಗಿಯೇ ಉಳಿಯಿತು.

ಆದರೂ, ವಿಶಾಲಾಕ್ಷಿಗೆ ಗಂಡು ಗೊತ್ತಾದ ವಿಶೇಷ ರೀತಿಯನ್ನು ಕುರಿತ ಕಥೆ, ಅವಳಿಗೆ ತಿಳಿಯದೇ ಹೋಗಲಿಲ್ಲ. ಆ ವಿವರವನ್ನು ಅರಿತಾಗ, ಆಕೆ ಮತ್ತಷ್ಟು ಆಶ್ಚರ್ಯಪಟ್ಟಳು. ಈ ರಹಸ್ಯವನ್ನು ವಿಶಾಲಾಕ್ಷಿ ತನ್ನೊಡನೆ ಹೇಳಿಯೇ ಇರಲಿಲ್ಲವೆಂದು ಸಿಟ್ಟುಬಂತು. ಗಿರಿಜಾಬಾಯಿಗೆ ಇದೆಲ್ಲ ಗೊತ್ತಿರಬಹುದೆಂಬ ಶಂಕೆ ತಲೆದೋರಿ, ಅಸೂಯೆ ಎನಿಸಿತು.

'ನೋಡ್ರಿ. ವಿಶಾಲಿ ಎಂಥಾ ಘಾಟೀಂತ!'

ನರ್ಮದೆ ಹೀಗೆ ನುಡಿದಾಗ ಶ್ರೀಕಾಂತ ಕೇಳಿದ್ದ:

'ಏನಾಯ್ತು ?'

'ಅವಳಿಗೆ ಮದುವೇನಂತೆ. ಪ್ರೇಮ ವಿವಾಹ!'

'ಓ! ಯಾರು ಗಂಡು ?'

'ಫ್ಲ್ಯೂ ಬಂದಿದ್ದಾಗ ಒಬ್ಬ ಒಯ್ತಿದ್ದಾಂತ ನೀವು ಹೇಳ್ತಿರ್ಲಿಲ್ವೆ?'

'ಆಹಾ! ಭೇಷ್! ಒಳ್ಳೆಯವನು. ನೋಡೋಕೂ ಚೆನ್ನಾಗಿದಾನೆ.'

[ತಾನು ಕಂಡೇ ಇಲ್ಲ ಅವನನ್ನು.]

'ನನಗೆ ಹೇಳೇ ಇರ್ಲಿಲ್ಲ.'

'ದೊಡ್ಡ ವಿಷಯವಲ್ಲ. ಹೇಳೋಕೆ ನಾಚಿಕೆ ಅನಿಸಿರ್ಬೇಕು. ಹೀಗಾಗಿದೇಂತ ನಾವು ಸಂತೋಷಪಡ್ಬೇಕೇ ಹೊರತು....ಅಲ್ವಾ?'

'ಹೌದು ಅನ್ನಿ', ಎಂದಳು ನರ್ಮದಾ.

'ನಾಚಿಕೆ' ಬಿಟ್ಟು ಹಿಂದೆ ತಾನು ಆಡಿದ್ದುದೋ, ಮಾಡಿದ್ದುದೋ....ಈಗ ಯಾಕೆ?–ಎಂದು, ಆ ನೆನಪನ್ನು ನರ್ಮದಾ ಬದಿಗೆ ತಳ್ಳಿದಳು.

ಎಂದೋ ಒಮ್ಮೆ ಒಬ್ಬ ಕವಿಯ ವಿಷಯ ವಿಶಾಲಾಕ್ಷಿ ಹೇಳಲು ಹೊರಟದ್ದಳಲ್ಲ? 'ಯುವಕನೇನೆ?' ಎಂದು ಕೇಳಿದಾಗ, 'ಹಣ್ಣು ಮುದಕ' ಎಂದಿದ್ದಳು! ಓ, ಸರಿ! ಆತನೇ ಇರಬೇಕು....

ವಿಶಾಲಾಕ್ಷಿ ತನಗೆ ತಿಳಿಸಿಯೇ ಇಲ್ಲವೆನ್ನುವುದು ಸರಿಯಲ್ಲ–ಎಂದು, ನರ್ಮದಾ ಸಮಾಧಾನಪಟ್ಟುಕೊಂಡಳು.

ಮುಂದೆ, ಆಹ್ವಾನಪತ್ರಿಕೆ ಬಂತು. ಆರತಿ ಅಕ್ಷತೆಯೂ ಇಲ್ಲ ಎಂದು ತಿಳಿದಾಗ, ಬಹಳ ಕೆಡುಕೆನಿಸಿತು. 'ಕಡಮೆ ಖರ್ಚಿನಲ್ಲಿ ಆಗಲೆಂದೇ ಈ ವ್ಯವಸ್ಥೆ ಮಾಡಿರಬೇಕು. ಬಡತನ ಕೆಟ್ಟದ್ದು–' ಎಂದುಕೊಂಡಳು, ಪ್ರಾಮಾಣಿಕವಾದ ಸಹಾನುಭೂತಿಯಿಂದ.

ಗಂಡನೊಡನೆ ಸಮಾಲೋಚನೆ ನಡೆಸಿದ ನರ್ಮದಾ, ದಂಪತಿಗಳನ್ನು ಉಪಾಹಾರಕ್ಕೆ ಕರೆಯಬೇಕು, ಉಡುಗೊರೆ ಕೊಡಬೇಕು–ಎಂದು ತೀರ್ಮಾನಿಸಿದಳು.

'ವಿಶಾಲಿ ಯಾವಾಗಲೂ ಸಂಕೋಚ ಸ್ವಭಾವದವಳು. ನಾವು ಕರೆದರೆ ಅವರಿಬ್ಬರಿಗೂ ಸಂತೋಷವಾಗುತ್ತೆ,' ಎಂದಳು.

'ಒಪ್ಪಿಗೆ,' ಎಂದ ಶ್ರೀಕಾಂತ.

* * * *

ಮೂರು ಘಂಟೆ ಹೊಡೆಯಿತು. ಹೊರಗೆ ಸದ್ದಾಯಿತು.

ನಿದ್ದೆ ಆ ದಿನ ಬೇಡವೆಂದು ನಿರ್ಧರಿಸಿದ್ದ ಶ್ರೀಕಾಂತನೆಂದ:

"ಸಮಯಕ್ಕೆ ಸರಿಯಾಗಿ ಕಾರು ಕೂಡಾ ಹೀಗೆ ಬರಲಾರದು!"

ಗಂಗಾಧರನ ಜತೆ, ಕುಲುಕುಲು ನಗುತ್ತಲೇ ವಿಶಾಲಾಕ್ಷಿ ಇಳಿದು, ಒಳ ಬಂದಳು.

ನರ್ಮದೆಯೂ ಶ್ರೀಕಾಂತನೂ ಬಾಗಿಲಲ್ಲೇ ಅವರನ್ನು ಬರಮಾಡಿಕೊಂಡರು.

ಆ ಜೋಡಿಯನ್ನು ನೋಡಿದ ನರ್ಮದಾ, ತನ್ನ ಕಣ್ಣುಗಳನ್ನೇ ತಾನು ನಂಬಲಿಲ್ಲ. ಎಷ್ಟೊಂದು ಸುಖಿಗಳಾಗಿದ್ದರು ಅವರಿಬ್ಬರೂ! 'ಈ ವಿಶಾಲಾಕ್ಷಿಯಂತೂ ಹಳೆಯವಳು ಅಲ್ಲವೇ ಅಲ್ಲ'–ಎನ್ನುವಂತಿದ್ದಳು ಆಕೆ. ಕನ್ನಡಕದಿಂದ ಹಿಡಿದು ಪಾದರಕ್ಷೆಗಳವರೆಗೆ. ಆ ಸೀರೆ, ರವಕೆ, ತುರುಬು; ಆಭರಣಗಳು.... ಎಲ, ಎಲಾ!

ನರ್ಮದೆಗೆ ಅನಿಸಿತು:

'ನನ್ನ ಹಿಂದಿನ ಗೆಳತಿ ಇನ್ನಿಲ್ಲ. ಇವತ್ತಿನಿಂದ ವಿಶಾಲಾಕ್ಷಿ ಬೇರೆಯೇ ವ್ಯಕ್ತಿ.'

[ಹೌದು, ಬೇರೆಯೇ ವ್ಯಕ್ತಿ. ಮಿಸೆಸ್ ಗಂಗಾಧರ.]

"ಕುಳಿತ್ಕೊಳ್ಳಿ" ಎಂದಳು ನರ್ಮದಾ.

ವಿಶಾಲಾಕ್ಷಿ ತನ್ನ ಗಂಡನ ಪರಿಚಯಮಾಡಿಕೊಟ್ಟಳು.

"ಇವರು ಗೊತ್ತು ತಾನೆ?"

ಶ್ರೀಕಾಂತನೆಂದ:

"ಓಹೋ, ಬಹಳ ಚೆನ್ನಾಗಿ ಗೊತ್ತು!"

ನರ್ಮದೆಯೊಬ್ಬಳಿಗೇ ಆತ ಅಪರಿಚಿತ. ಆ ಜೋರಾದ ಆಸಾಮಿಯನ್ನು ನೋಡುತ್ತ, ಔಪಚಾರಿಕವಾಗಿ ಅವಳು ಮತ್ತೊಮ್ಮೆ ವಂದಿಸಿದಳು:

"ನಮಸ್ತೇ!"

ಗಂಗಾಧರ ಪ್ರತಿವಂದನೆ ಮಾಡಿದ.

"ಬಹಳ ಆಯಾಸವಾಗಿರ್ಬೇಕೂಂತ ಕಾಣುತ್ತೆ," ಎಂದ ಶ್ರೀಕಾಂತ.

ತನ್ನ ಮದುವೆಯ ನೆನಪಿನ್ನೂ ಹೊಸದಾಗಿಯೇ ಇತ್ತು ಅವನಿಗೆ.

"ನಿಮ್ಮನ್ನು ಮೊದಲಸಾರಿ ನಾನು ನೋಡಿದಾಗ ನಿಮಗೆಷ್ಟು ಆಯಾಸ ವಾಗಿತ್ತೋ, ಅದಕ್ಕಿಂತ ಕಡಮೆ!" ಎಂದ ಗಂಗಾಧರ.

ಶ್ರೀಕಾಂತನಿಗೆ ನಗುಬಂತು. ಸಂದರ್ಭ ಗ್ರಹಿಸಿ ನರ್ಮದೆಯೂ ನಕ್ಕಳು.

ಸುತ್ತಲೂ ಒಮ್ಮೆ ನೋಡಿ ಗಂಗಾಧರನೆಂದ:

"ದಂಪತಿಗಳು ಸೋಫಾದ ಮೇಲೆ ಕೂತಿದ್ದಾಯಿತು. ಒಂದು ರೀತೀಲಿ ಇದು ರಿಸೆಪ್ಷನ್ನೇ!"

ಆತ ಹಾಗೆ ಹೇಳುವಷ್ಟರಲ್ಲೇ ವೆಂಕಟರಾಮಯ್ಯನೂ ಭಾಗೀರಥಮ್ಮನೂ ಬಾಗಿಲ ಬಳಿ ಕಾಣಿಸಿಕೊಂಡರು. ವಿಶಾಲಾಕ್ಷಿ ಲಗುಬಗೆಯಿಂದ ಎದ್ದಳು. ಗಂಗಾಧರ ಅವಳನ್ನು ಹಿಂಬಾಲಿಸಿದ. ಇಬ್ಬರೂ ಹಿರಿಯರಿಗೆ ನಮಿಸಿದರು. ವೃದ್ಧ ದಂಪತಿಗಳು ಎಳೆಯರನ್ನು ಆಶೀರ್ವದಿಸಿದರು. ತಮ್ಮೆದುರಲ್ಲಿ ಇವರು ಸಂಕೋಚ ಪಡದಿರಲೆಂದು, "ಸಂತೋಷ-ಸಂತೋಷ!" ಎನ್ನುತ್ತ ವೆಂಕಟರಾಮಯ್ಯ ಒಳ ಹೋದರು. ಹೆಂಡತಿಯನ್ನೂ ಜತೆಯಲ್ಲಿ ಕರೆದೊಯ್ದರು.

ನಿದ್ದೆ ಹೋಗಿದ್ದ ಮುರಲಿ ಎದ್ದುಬಂದ. ಎದ್ದವನು ಎರಡು ನಿಮಿಷ ಅಳ ಬೇಕು. ಆದರೆ, ಅಪರಿಚಿತರನ್ನು ಕಂಡಂತಾಗಿ, ಆ ಯೋಚನೆಯನ್ನು ಬಿಟ್ಟು ಕೊಟ್ಟ. ಮತ್ತೆ ನೋಡಿದರೆ, ಒಬ್ಬಾಕೆ ಅವನ ಅತ್ತೆ. 'ಇವಳಿಗೇನಾಗಿದೆ? ಹೀಗೆ ಯಾಕಿದ್ದಾಳೆ?' ಎಂದು ಆಶ್ಚರ್ಯವಾಯಿತು ಮುರಲಿಗೆ.

ಉಪಾಹಾರ. ಲಘುವಲ್ಲ, ಭಾರವಾದದ್ದೇ.

ಉಡುಗೊರೆಗಳು ಬಳಿಕ.

ವಿಶಾಲಾಕ್ಷಿಗೆ 'ಕನ್ನಡ ಸಾಹಿತ್ಯ ಚರಿತ್ರೆ'; ಗಂಗಾಧರನಿಗೆ ಇಂಗ್ಲಿಷ್ ಕವಿತೆಗಳ 'ಗೋಲ್ಡನ್ ಟ್ರೆಷರಿ.'

"ತಪ್ಪಿ ಬರೆದಿಲ್ಲ ಮತ್ತೆ! ಕನ್ನಡದ್ದು ಇಂಗ್ಲಿಷಿನವರಿಗೆ; ಇಂಗ್ಲಿಷಿನ್ದು ಕನ್ನಡದವರಿಗೆ", ಎಂದಳು ನರ್ಮದಾ.

"ಇನ್ನೂ ಸ್ವಲ್ಪ ಕೆಲಸವಿದೆ. ನಮಗೆ ಅಪ್ಪಣೆ ಕೊಡಬೇಕು;" ಎಂದ ಗಂಗಾಧರ.

ಫಲತಾಂಬೂಲ ಬಂತು ವಿಶಾಲಿಗೋಸ್ಕರ. ಅರಿಶಿಣ-ಕುಂಕುಮ, ಜತೆಯಲ್ಲೇ.

"ಗೌರೀ ಹೂವೀಳ್ಯದ ಬಾಕಿ ಇವತ್ತು ಸಂದಾಯವಾಯ್ತು!" ಎಂದಳು ವಿಶಾಲಾಕ್ಷಿ.

"ಕಾರ್ನಲ್ಲಿ ನಿಮ್ಮನ್ನು ಬಿಟ್ಟು ಬರ್ತೀನಿ," ಎಂದ ಶ್ರೀಕಾಂತ.

ಗಂಗಾಧರ ಕೇಳಿದ:

"ಕಾರು ನಡೆಸೋದಕ್ಕೆ ಕಲಿತು ಎಷ್ಟುದಿನವಾಯ್ತು ಡಾಕ್ಟ್ರೆ ?"

ಹೆದರಬೇಡಿ! ಸುರಕ್ಷಿತವಾಗಿ ತಲಪಸ್ತೀನಿ!"

ಇದ್ದಕ್ಕಿದ್ದಂತೆ ಸಿದ್ಧತೆಯಿಲ್ಲದೆ ಹೊರಡುವುದು ನರ್ಮದೆಯಿಂದ ಆಗದೆಂದು, ಮುರಲಿಯೊಬ್ಬನನ್ನೇ ಕರೆದುಕೊಂಡು, ಶ್ರೀಕಾಂತ ಕಾರಿನ ಕಡೆಗೆ ನಡೆದ....

ಅವರ ಮನೆಯ ಮುಂದೆ ದಂಪತಿಗಳನ್ನು ಇಳಿಸಿ, ಕಾರು ಯಾದವಗಿರಿಗೆ ಹಿಂತಿರುಗಿತು. "ಡಾಕ್ಟರ ಕಾರು!" ಎಂದು, ಮನೆಯವರಲ್ಲೇ ಬಾಗಿಲಿಗೆ ಬಂದು ನೋಡುವವರೇ!

ವಿಶಾಲಾಕ್ಷಿಗೆ ತಕ್ಷಣ ನೆನಪಾಯಿತು.

"ನೋಡಿದಿರಾ! ಅದಷ್ಟು ಬೇಗನೆ ಕಳಿಸಿಕೊಡುವ, ಮನೆಮುಟ್ಟಿಸುವ, ಜವಾಬ್ದಾರಿ ತನ್ನದೂಂತ ನರ್ಮದಾ ಕಾಗದದಲ್ಲೇ ಬರೆದಿದ್ದು. ಕಾರ್‌ನಲ್ಲಿ ಕಳಿಸ್ತೀನೀಂತ ಅರ್ಥ. ನನಗೆ ಹೇಗೆ ಹೊಳೀಬೇಕು? ಇವರು ಕಾರು ಕೊಂಡದ್ದು ನನಗೆಲ್ಲಿ ಗೊತ್ತಿತ್ತು ?"

"ಅಂತೂ ನೀನು ಸಾಧಾರಣಳಲ್ಲ. ಕಾರು ಇರೋ ಸ್ನೇಹಿತೆಯರೂ ನಿನಗಿದಾರೆ! ಹೂಂ. ಇನ್ನು, ಆ ನಿಮ್ಮ ಇನ್ನೊಬ್ಬಳಿಗೆ–ಏನೋ ಹೆಸರು ಹೇಳಿದ್ದೆ ಯಲ್ಲ, ಮೈನಾ ಹಕ್ಕಿ ಅವಳಿಗೆ – ಈ ನರ್ಮದಾ ಎಲ್ಲಾ ತಿಳಿಸಿ ಕಾಗದ ಬರೀತಾಳೆ."

"ಹೌದು, ಹೌದು."

"ನಮಗೆ ಗೊತ್ತಿಲ್ಲದೆಯೇ ನಮ್ಮ ಸುತ್ತುಮುತ್ತ ಹತ್ತಾರು ಜನ ನಮ್ಮ ವಿಷಯ ಮಾತಾಡ್ತಿರ್‍ತಾರೆ. ಎಂಥ ಹೆಗ್ಗಳಿಕೆ!"

"ಥೂ! ಹೋಗ್ರಿ!"

* * * *

ಗಂಗಾಧರ ಸರಿಯಾಗಿಯೇ ಊಹಿಸಿದ್ದ. ನೂತನ ದಂಪತಿಗಳನ್ನು ಬಿಟ್ಟು ಬಂದು, ಡಾಕ್ಟರ್ ಶ್ರೀಕಾಂತ ಸಂಜೆಯ ಹೊತ್ತು ಡಿಸ್ಪೆನ್ಸರಿಗೆ ಹೊರಟುಹೋದ ಮೇಲೆ, ನರ್ಮದಾ ಮೈನಾವತಿಗೆ ಕಾಗದ ಬರೆಯಲು ಕುಳಿತಳು.

ಮೈಸೂರು
೧೩ ಆಗಸ್ಟ್, ೧೯೫೭.

ನನ್ನ ಪ್ರೀತಿಯ ಮೈನಾ,

ಇದ್ದಕ್ಕಿದ್ದಂತೆ ನಿನಗೆ ಬರೆಯಬೇಕೆನಿಸಿದೆ. ಪ್ರೇರಣೆ ಏನೂಂತ ಗೊತ್ತಾದಾಗ ದಂಗಾಗಿ ಹೋಗ್ತೀಯಾ ನೀನು.

ನಮ್ಮ ವಿಶಾಲಿಯ ಮದುವೆಯ ಆಮಂತ್ರಣ ಪತ್ರಿಕೆ ನಿನಗೂ ತಲಪಿರಬೇಕು. ಆದರೆ, ಅದು ಅಸಾಧಾರಣ ವಿವಾಹ–ಎನ್ನುವುದು ನಿನಗೆ ಗೊತ್ತಿರಲಾರದು. ನಮ್ಮ ವಿಶಾಲಿ ಪ್ರೇಮ ವಿವಾಹ ಮಾಡಿ ಕೊಂಡಳು! ಸಾಮಾನ್ಯ ವಿಷಯ ಅಲ್ಲವಲ್ಲ! ಆ ಹಿಂದಿನ ದಿನಗಳಲ್ಲಿ ಮೈನಾವತಿಗೋ ನರ್ಮದೆಗೋ [ಕ್ಷಮಿಸು] ಹೀಗೇನಾದರೂ ಆಗಿದ್ದರೆ, ಆಶ್ಚರ್ಯ ಪಡುವಂಥದೇನೂ ಇರಲಿಲ್ಲ. ಆದರೆ, ವಿಶಾಲಿಗೆ! ಅದೆಂಥವನು ಸಿಕ್ಕಿದನೋ–ಅಂದುಕೊಂಡಿದ್ದೆ. ಆತನನ್ನು ಕಂಡಾಗ ಮಾತ್ರ, ನನ್ನ ಉಸಿರೇ ಕಟ್ಟಿಹೋಯಿತು. ಪ್ರೇಮಕ್ಕೆ ಕಣ್ಣಿಲ್ಲ ಅನ್ನೋದು ನೂರು ಬಾರಿಗೂ ಸತ್ಯ. ಅವನೂ ಲೆಕ್ಚರರ್–ಕನ್ನಡ ಎಂ.ಎ.; ಕವಿ ಬೇರೆ, 'ಪ್ರಬುದ್ಧ ಕರ್ಣಾಟಕ' ದಲ್ಲಿ ಲೇಖನ ಬರೆದು, ವಿಶಾಲಿ ಲೇಖಿಕೆಯೂ ಆಗಿದ್ದಾಳೆ, ನೋಡು. ಅಂತೂ ಒಳ್ಳೇ ಜೋಡಿ.

ಮದುವೆ ಆದದ್ದು ನಿನ್ನೆ–ಪಶ್ಚಿಮವಾಹಿನಿಯಲ್ಲಿ. ಹೋಗಬೇಕೆಂದಿದ್ದೆ ವಾದರೂ–ಅಷ್ಟರಲ್ಲೇ ಕಾರೂ ಕೊಂಡಿದ್ದೆವು–ಡಾಕ್ಟರಿಗೆ ಬಿಡುವಾಗಲಿಲ್ಲ. ಇಲ್ಲಿ ರಿಸೆಪ್ಷನ್ನೂ ಇರಲಿಲ್ಲ. ದುಡ್ಡು ಉಳಿಸೋದಕ್ಕೆ ಹಾಗೆ ಮಾಡಿದರೇನೋ, ಎಂದಿದ್ದೆ. ಆದರೆ ಅವರಿಬ್ಬರನ್ನೂ ನೋಡಿದಮೇಲೆ, ಅಭಿಪ್ರಾಯ ಬದಲಾಯಿಸಿದೇನೆ. ವಿಶಾಲಿಯ ರಸಿಕಗಂಡ–ಕವಿ, ಸಾರ್ವಜನಿಕ ಪ್ರದರ್ಶನ ಬೇಡ ಅಂದಿರಬೇಕು. ಇವತ್ತು ದಂಪತಿಗಳು ನಮ್ಮ ಆಹ್ವಾನ ಮನ್ನಿಸಿ ಮನೆಗೆ ಬಂದಿದ್ದರು. ವಿಶಾಲಾಕ್ಷಿ ಸುಂದರಿಯಾಗಿ ಕಂಡಳು! ನಿಜವಾಗಿಯೂ!

ನಮ್ಮ ವಿದ್ಯಾರ್ಥಿ ಜೀವನವೆಲ್ಲ ಈಗ ನೆನಪಿಗೆ ಬರುತ್ತಿದೆ. ನಮ್ಮಲ್ಲೆಲ್ಲ ದೊಡ್ಡತನವಿತ್ತು. ಸಣ್ಣತನಕ್ಕೂ ಕೊರತೆ ಇರಲಿಲ್ಲ! ಏನೇ ಇದ್ದರೂ ಆ ದಿನಗಳ ನೆನಪು ಎಷ್ಟು ಮಧುರ!

ಮುರಲಿ ಈಗಾಗಲೇ ಅಸಾಧ್ಯ ತುಂಟನಾಗಿದಾನೆ. ನಿನ್ನ ಹೆಂಡತಿ ಯಾರೋ ?_ಎಂದರೆ, 'ರೂಪಾ' ಎನ್ನುತ್ತಾನೆ. ನಿನಗೆ ಏನು ಬೇಕೋ ?– ಎಂದರೆ, 'ರೂಪಾಯಿ' ಅಂತ ಹೇಳುತ್ತಾನೆ. ಯಾರು ಕೊಡ್ತಾರೋ ?– ಎಂದರೆ,–ಮೈನಾ ಮಾಮಿ," ಅಂತೆ!....ನಾನೇ ಜಗತ್ತು, ಈ ಜಗತ್ತು ಇರುವುದೇ ನನಗೋಸ್ಕರ'_ಎಂದು, ಹಿಂದೆ ನಿನ್ನ ಈ ನರ್ಮದಾ ತಿಳಿದಿದ್ದ ಳಲ್ಲವೆ ? ಈಗ, 'ಈ ತಂದೆ ಮಗ ಇಬ್ಬರೇ ನನ್ನ ಜಗತ್ತು, ನಾನು ಇರುವುದೇ ಇವರಿಗೋಸ್ಕರ' ಎಂದು ನರ್ಮದಾ ನಂಬಿದಾಳೆ. ಆ ನಂಬಿಕೆಯಂತೆ ನಡೆಯುತ್ತಿದ್ದಾಳೆ.

ಊರಿಗೊಮ್ಮೆ ಬಾ ಮೈನಾ. ನಾವೆಲ್ಲರೂ ಸ್ವಲ್ಪದಿನ ಜತೆಯಾಗಿ ಕಾಲ ಕಳೆಯಬೇಕು.

ಉತ್ತರದ ಹಾದಿ ನೋಡುತ್ತಿದ್ದೇನೆ. ಇಗೋ ನಿನಗೂ ನಿನ್ನ ಪುಟಾಣಿಗಳಿಗೂ–ನೀನು ಆಕ್ಷೇಪಿಸುವುದಿಲ್ಲವಾದರೆ [ಇಲ್ಲ ಎಂದು ಬಲ್ಲೆ] ನಿನ್ನ ಮೇಜರ್ ಸಾಹೇಬರಿಗೂ–ನಮ್ಮಿಬ್ಬರ ಒಲವು.

ಇತಿ, ನರ್ಮದಾ.

ಕಾಗದ ಮುಗಿಸಿದ ನರ್ಮದೆಗೆ, ಹತ್ತು ಕಡೆಗಳಿಂದಲೂ ಒಲವಿನ ತೊರೆಗಳೇ ತನ್ನೆಡೆಗೆ ಹರಿದು ಬಂದಂತೆ ಭಾಸವಾಯಿತು.

ಮುರಲಿಯನ್ನೆತ್ತಿಕೊಂಡು ಮುದ್ದಿಡುತ್ತ, ಮನೆಯ ಮುಂದಿನ ಹೂದೋಟ ದಲ್ಲಿ ಅವಳು ಅಡ್ಡಾಡಿದಳು.

ಮುಚ್ಚಂಜೆಯಾಗುವ ಹೊತ್ತಿಗೆ, ಕರಿಮೋಡಗಳು ದಟ್ಟನೆ ಕವಿದುವು. ಮಳೆಯ ಸೂಚನೆಯಲ್ಲಿ, ಕತ್ತಲಾಗುತ್ತಿರಬೇಕು–ಎಂದು ನರ್ಮದಾ ಭಾವಿಸಿದಳು. ಆದರೆ, ಕೆಲನಿಮಿಷಗಳಲ್ಲೇ ಹನಿ ಬೀಳತೊಡಗಿತು.

ಶ್ರೀಕಾಂತ, ಧೋಧೋ ಎಂದು ಸುರಿಯುತ್ತಿದ್ದ ಮಳೆಯಲ್ಲೆ, ನಿಧಾನವಾಗಿ ಕಾರು ನಡೆಸಿಕೊಂಡು, ಮನೆಗೆ ಬಂದ.

ತುತ್ತು ಬಿಸಿಲೂಟ, ಹಾಸಿಗೆಯಮೇಲೆ ಬೆಚ್ಚನೆಯ ಹೊದಿಕೆಯೊಳಗೆ ಶಯನ–ಅತ್ಯಂತ ಸುಖಕರವಾಗಿ ಅವನಿಗೆ ಕಂಡವು. ಆತ ಮಲಗಿದ್ದಕಡೆಗೇ ನರ್ಮದಾ, ಮೈನಾವತಿಗೆ ತಾನು ಬರೆದಿದ್ದ ಕಾಗದವನ್ನು ತಂದು ತೋರಿಸಿದಳು.

ಶ್ರೀಕಾಂತ ಅದನ್ನೋದಿ, ಮುಗುಳುನಕ್ಕು, ಹಿಂದಿರುಗಿಸಿದ.

ಅವನಿಗೆ ಬೇಗನೆ ನಿದ್ದೆ ಬಂತು. ಮುರಲಿಯಾಗಲೇ ಕನಸಿನ ಲೋಕದಲ್ಲಿದ್ದ. ನರ್ಮದಾ, ಹಳೆಯ ನೆನಪುಗಳ ಸಿಹಿಬುತ್ತಿಗಳನ್ನು ಬರಿದುಗೊಳಿಸಿದ್ದ ಳಲ್ಲವೆ? ಆ ಕಾರಣದಿಂದ, ಜೋಂಪುಹತ್ತುವುದು ತಡವಾಯಿತು.

ಈ ಹೊತ್ತಿನಲ್ಲಿ, ಹೊರಗೆ ಹೀಗೆ ಮಳೆ ಸುರಿಯುತ್ತಿರುವಾಗ, ವಿಶಾಲಾಕ್ಷಿಯೂ ಗಂಗಾಧರನೂ ಏನು ಮಾಡುತ್ತಿರಬಹುದು?–ಎಂದು, ನರ್ಮದಾ ಕಲ್ಪಿಸಿಕೊಳ್ಳ ತೊಡಗಿದಳು. 'ಅವಸರದ ಮದುವೆ. ಇವತ್ತೇ ಇರಬೇಕು ಪ್ರಸ್ತ.'....

ಮತ್ತೇರಿಸುವಂತಿತ್ತು ಕಲ್ಪನೆ.

ನರ್ಮದಾ, 'ತನ್ನ ಕೆಟ್ಟ ಬುದ್ಧಿ'ಗೆ ತಾನೇ 'ಥೂ!' ಎಂದುಕೊಂಡು, ಮಗ್ಗುಲು ಹೊರಳಿದಳು.

## ೧೩

ಹಿಂದಿನ ರಾತ್ರೆ ಸುರಿದ ಮಳೆಗೆ, ಮನೆಯ ಮುಂದಿನ ಕಾಸ್ಮೊಸ್ ಗಿಡಗಳು ಅಸ್ತವ್ಯಸ್ತವಾಗಿದ್ದುವು. ಬಾಗಿದ್ದುವು ಕೆಲವು. ಅಡಿಕಿತ್ತು ಬಿದ್ದಿದ್ದುವು ಬೇರೆ ಕೆಲವು. ಗೇಟಿನ ಎರಡೂಕಡೆಗಳಿಂದ ಬಲು ಎತ್ತರಕ್ಕೆ ಅಡರಿ, ಬಿದಿರಿನ ಸಲಿಕೆಯ ಕಮಾನುಗಳನ್ನು ಅಪ್ಪಿದ್ದ ಮಲ್ಲಿಗೆ ಬಳ್ಳಿಗಳೂ ಆಸರೆ ತಪ್ಪಿ ಕೆಳಕ್ಕೆ ತೂಗಾಡುತ್ತಿದ್ದುವು. ಹೂವಿನ ಗಿಡಗಳ ಮಧ್ಯೆ ಹಸುರು ಕಳೆಯೂ ತುಂಬಿತ್ತು ಬಹಳ.

ಕಿಟಿಕಿಯಬಳಿ ನಿಂತು ಅದನ್ನೆಲ್ಲ ನೋಡುತ್ತಿದ್ದ ಗಂಗಾಧರ, ಮೆಲ್ಲನೆ ಕರೆದ :

"ಕ್ಷೀ...."

ಉತ್ತರ ಬರಲಿಲ್ಲ.

"ಆಕ್ಷ್ಮೀ...."

ಹುಸಿಮುನಿಸಿನ ಝೇಂಕಾರದ ಧ್ವನಿ :

"ನನಗೆ ಹೆಸರಿಲ್ಲವೇನು ?"

"ಓಹೋ! ಆಗಲಿ....ಹುಂ....ವಿಶಾಲಾಕ್ಷಮ್ಮನವರೇ...."

ನಿರುತ್ತರ.

"ಎಸ್. ವೀ...."

ಕಬಳಿಸುವ ಪ್ರೀತಿಯ ನೋಟದಿಂದ, ತನ್ನ ಗಂಡನನ್ನ ವಿಶಾಲಾಕ್ಷಿ ದಿಟ್ಟಿಸಿದಳು.

ಗಂಗಾಧರ ಸ್ವಲ್ಪ ಸ್ವರವೇರಿಸಿದ.

"ಏ ವಿಶಾಲೀ!"